
ಸಾಹಿತ್ಯ ದಾಸೋಹ – 234

ಸಂಚಿಕೆ 58 – ಮಾರ್ಚ್ 2025 08.02.2025ರ ದಾಸೋಹದ ಬರಹಗಳ ಸಂಕಲನ



ಎಚ್ಚೆಸ್ಕೆ ಬೆಳಕು– 10

'ಬ್ಯಾಂಕನ್ನಡದ ಜೀವನದಿ'

ಪಾ. ರಾಜಗೋಪಾಲ ಅಭಿನಂದನಾ ಸಮಾರಂಭ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

234ನೆಯ ಸಾಹಿತ್ಯ ದಾಸೋಹದ ಸಂಚಿಕೆ ಇಲ್ಲಿದೆ. 08, ಫೆಬ್ರವರಿ 2025ರಂದು ನಡೆದ ಈ ದಾಸೋಹದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಜಿ.ವಿ.ಅರುಣ ಅವರು, ದಾಸೋಹದಲ್ಲಿ ಪ್ರಸ್ತುತಪಡಿಸಿದ ಪ್ರತಿಯೊಂದು ಬರಹದ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲಿಸಿರುವುದರ ಜೊತೆಗೇ, ಕೆಲವು ಬರಹಗಳಲ್ಲಿರುವ ತಪ್ಪುಒಪ್ಪುಗಳು, ವ್ಯಾಕರಣ ದೋಷ ಮುಂತಾದುವುಗಳನ್ನೂ ವಿಶ್ಲೇಷಿಸಿ ಸೂಕ್ತ ಸಲಹೆ ನೀಡಿದ್ದಾರೆ. ವೇದಿಕೆಯ ಲೇಖಕರೆಲ್ಲರೂ ಅವರ ಅಭಿಪ್ರಾಯಗಳನ್ನು ಮನನ ಮಾಡಿಕೊಂಡು, ತಮ್ಮ ಬರಹಗಳಲ್ಲಿ ಅಳವಡಿಸಿಕೊಳ್ಳುವುದು ತೀರಾ ಅಗತ್ಯವಾಗಿದೆ.

02.03.2025ರಂದು ನಡೆದ ಈ ಬಾರಿಯ 'ಎಚ್ಚೆಸ್ಕೆ ಬೆಳಕು' 10ನೆಯ ಆವೃತ್ತಿಯಲ್ಲಿ, ಬ್ಯಾಂಕುಗಳಲ್ಲಿ ಕನ್ನಡ ಬಳಕೆಯ ಬಗ್ಗೆ ಅಗತ್ಯವಾದ ಜಾಗೃತಿ ಮೂಡಿಸಿ, ಅದಕ್ಕಾಗಿ ಸೂಕ್ತ ತಳಹದಿಯನ್ನು ನಿರ್ಮಿಸಿದ ಶ್ರೀ ಪಾ. ರಾಜಗೋಪಾಲರನ್ನು ಗೌರವಿಸಿ, 'ಬ್ಯಾಂಕನ್ನಡದ ಜೀವನದಿ ಪಾ.ರಾಜಗೋಪಾಲ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಯಿತು. ಅಲ್ಲದೆ, ಪಾ.ರಾಜಗೋಪಾಲರ ಸಂಪಾದಕತ್ವದಲ್ಲಿ ರಚಿತವಾದ 'ಷೇರುಪೇಟೆ ಪದಕೋಶ' ಹಾಗೂ ವೇದಿಕೆಯ ಹಿರಿಯ ಸದಸ್ಯರೂ, ಹಾಸ್ಯ ಬರಹಗಾರರೂ ಆದ ಶ್ರೀ ಎಂ.ಎಸ್.ನರಸಿಂಹ ಮೂರ್ತಿಯವರಿಗೆ 75 ವರ್ಷಗಳು ತುಂಬಿದ ಸಂದರ್ಭದಲ್ಲಿ ವೇದಿಕೆಯ ಸದಸ್ಯರು ಅವರಿಗೆ ಅರ್ಪಿಸಿದ ಬರಹಗಳನ್ನೊಳಗೊಂಡ 'ಎಂಎಸ್ಸೆನ್ ನಗೆಹಾರ' ಪಿಡಿಎಫ್ ಸಂಚಿಕೆಯ ಮುದ್ರಿತ ಪುಸ್ತಕವೂ ಬಿಡುಗಡೆಗೊಂಡವು. ರಾಜಗೋಪಾಲರ ಜೀವನದ ಹಲವು ಮುಖಗಳನ್ನು ಅನಾವರಣ ಗೊಳಿಸಿದ 'ಛಲದಂಕಮಲ್ಲ ಪಾ.ರಾಜಗೋಪಾಲ' ಎಂಬ ನಾಟಕವನ್ನೂ ಪ್ರದರ್ಶಿಸಲಾಯಿತು. ಈ ಕಾರ್ಯಕ್ರಮದ ಸಂಪೂರ್ಣ ವರದಿ ಹಾಗೂ ಚಿತ್ರಗಳು ಈ ಸಂಚಿಕೆಯಲ್ಲಿವೆ.

ತಿಂಗಳ ಬೆಳಕು-12ನೆಯ ಕಾರ್ಯಕ್ರಮದಲ್ಲಿ ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿ ಶ್ರೀ ಡಿ.ವಿ. ಗುರುಪ್ರಸಾದ್ ಅವರು ಸೈಬರ್ ವಂಚನೆಯ ಬಗೆಗೆ ನೀಡಿದ ಉಪನ್ಯಾಸದ ವರದಿ ಮತ್ತು ಕವಿಮನದ ಅಂಕಣದ ಕವನಗಳೂ ಇದರಲ್ಲಿವೆ.

ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀ ಜಿ.ವಿ.ಅರುಣ ಅವರಿಗೂ, ದಾಸೋಹದಲ್ಲಿ ತಮ್ಮ ಬರಹಗಳನ್ನು ವಾಚಿಸಿದ ಎಲ್ಲ ಬರಹಗಾರರಿಗೂ ಮತ್ತು ತಾಂತ್ರಿಕ ಸಹಕಾರ ನೀಡಿದ ಎಲ್ಲರಿಗೂ ವಂದನೆಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ 22.03.2025

ದಾಸೋಹದ ಪುಟಗಳಲ್ಲಿ...

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 234


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

೨೦೨೫ರ ಫೆಬ್ರುವರಿ ತಿಂಗಳ ಹಾಗೂ ೨೩೪ನೆಯ ಸಾಹಿತ್ಯ ದಾಸೋಹವು ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರ್ಜಾಲ ಮುಖೇನ ೦೮.೦೨.೨೦೨೫ರಂದು ಇಳಿ ಮಧ್ಯಾಹ್ನ ೩.೩೪ಕ್ಕೆ ಸರಿಯಾಗಿ ಆರಂಭವಾಯಿತು. ಶ್ರೀ ಜಿ.ವಿ. ಅರುಣ ಅವರು ದಾಸೋಹದ ಅಧ್ಯಕ್ಷತೆ ವಹಿಸಿದ್ದರು.

ದಾಸೋಹದ ಸಾರಥಿ ಶ್ರೀ ಕೆ.ಎನ್.ಮಹಾಬಲ ಅವರು ಔಪಚಾರಿಕವಾಗಿ ಎಲ್ಲರನ್ನೂ ಸ್ವಾಗತಿಸುವ ಮೂಲಕ ದಾಸೋಹಕ್ಕೆ ಚಾಲನೆ ನೀಡಿದರು. ಶ್ರೀ ಭ.ರಾ.ವಿಜಯಕುಮಾರ್ ಅವರು ಸಭೆಯ ಆಧ್ಯಕ್ಷರು, ಪ್ರಸ್ತುತಿಕಾರರು ಹಾಗೂ ವೀಕ್ಷಕರನ್ನು ಸ್ವಾಗತಿಸಿ, ದಾಸೋಹದ ಅಧ್ಯಕ್ಷರಾದ ಶ್ರೀ ಜಿ.ವಿ.ಅರುಣ ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ೦೨.೦೩.೨೦೨೫ರಂದು 'ಎಚ್ಚೆಸ್ಕೆ ಬೆಳಕು-೧೦' ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿರುವ ಶ್ರೀ ಪಾ.ರಾಜಗೋಪಾಲರ ಅಭಿನಂದನಾ ಕಾರ್ಯಕ್ರಮದ ಬಗ್ಗೆ ತಿಳಿಸಿದರು. ಅಲ್ಲದೆ, ವೇದಿಕೆಯ ಸದಸ್ಯೆ ಶ್ರೀಮತಿ ಎಲ್.ಗಿರಿಜಾ ರಾಜ್ ಅವರು ತಮ್ಮ 'ನಗೆ ದೀವಿಗೆ' ಎಂಬ ಹಾಸ್ಯ ಬರಹಗಳ ಸಂಕಲನವನ್ನು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಎಲ್ಲ ಹಿರಿಯ ಹಾಗೂ ಕಿರಿಯ ಬರಹಗಾರರಿಗೆ ಅರ್ಪಿಸಿರುವುದಕ್ಕಾಗಿ ಸಂತಸ ವ್ಯಕ್ತಪಡಿಸಿ ಗಿರಿಜಾರಾಜ್ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿದರು.

ಶ್ರೀ ರವೀಂದ್ರ ಅವರು ಮುಂದುವರಿದು, ಮೂರು ವರ್ಷಗಳ ಹಿಂದೆ ಶ್ರೀ ಕೆ.ಎನ್.ಮಹಾಬಲ ಅವರು ತಮ್ಮ ತಂದೆ ಶ್ರೀ ಕೆ.ಎಸ್.ನರಸಿಂಹಸ್ವಾಮಿಯವರನ್ನು ಕುರಿತಂತೆ 'ಕವಿ ನೆನಪು' ಎಂಬ ಶೀರ್ಷಿಕೆಯಡಿಯಲ್ಲಿ ಐವತ್ತಕ್ಕೂ ಹೆಚ್ಚು ಸರಣಿ ಲೇಖನಗಳನ್ನು ಬರೆದು ನಮ್ಮ ವೇದಿಕೆಯಲ್ಲಿ ಪ್ರಕಟಿಸಿದ್ದರು. ಈಗ ಈ ಎಲ್ಲ ಲೇಖನಗಳನ್ನೊಳಗೊಂಡ 'ನನ್ನ ಅಪ್ಪ ಕೆ.ಎಸ್.ನ' ಎಂಬ ಸಂಕಲನವನ್ನು ಬಹುರೂಪಿ ಪ್ರಕಾಶನ ಸಂಸ್ಥೆಯು ಪ್ರಕಟಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು. ವೇದಿಕೆಯ ಸದಸ್ಯರಾದ ಶ್ರೀ ಜಿ.ವಿ. ಅರುಣ ಅವರು ಸಹ ತಮ್ಮ ತಂದೆ ಹಾಗೂ ನಿಘಂಟುತಜ್ಞ ಜಿ.ವೆಂಕಟಸುಬ್ಬಯ್ಯನವರನ್ನು ಕುರಿತು ಇಂತಹುದೇ ಒಂದು ಪುಸ್ತಕವನ್ನು ಪ್ರಕಟಿಸುವತ್ತ ಗಮನ ಹರಿಸಬೇಕೆಂದು ಸೂಚಿಸಿದರು.



ನಂತರ ಒಟ್ಟು ೨೩ ಬರಹಗಾರರು ದಾಸೋಹದಲ್ಲಿ ತಮ್ಮ ಸ್ವರಚಿತ ಕತೆ, ಕವನ, ಪ್ರಬಂಧ, ಲೇಖನಗಳನ್ನು ವಾಚಿಸಿದರು.

ಎಲ್ಲರ ಪ್ರಸ್ತುತಿಗಳು ಮುಗಿದ ನಂತರ ೨೩ಳನೆಯ ದಾಸೋಹದ ಅಧ್ಯಕ್ಷರಾದ ಶ್ರೀ ಜಿ.ವಿ.ಅರುಣ ಅವರು ಈ ಪ್ರಸ್ತುತಿಗಳ ಕುರಿತು ತಮ್ಮ ವಿಶ್ಲೇಷಣೆಯನ್ನು ಮಂಡಿಸಿದರು. ''ದಾಸೋಹದ ದಿನಾಂಕ ಪ್ರಕಟಿಸಿದ ನಂತರ, ದಾಸೋಹದಲ್ಲಿ ಭಾಗವಹಿಸಲು ನೋಂದಾಯಿಸಿದ ಸದಸ್ಯರು ತಮ್ಮ ಲೇಖನಗಳನ್ನು ನನಗೆ ಕಳುಹಿಸಿದರು. ನಾನು ಅವುಗಳನ್ನು ಓದಿ, ಸುಮಾರು ಶೇಕಡ ೫೦ರಷ್ಟು ಲೇಖಕರನ್ನು ವೈಯಕ್ತಿಕವಾಗಿ ಸಂಪರ್ಕಿಸಿ, ಅವರ ಲೇಖನಗಳನ್ನು ಪರಿಷ್ಕರಿಸಿ ಉತ್ತಮಪಡಿಸಲು ಸೂಚಿಸಿದ್ದೆ. ಇದಕ್ಕೆ ಒಬ್ಬರನ್ನು ಹೊರತುಪಡಿಸಿ ಉಳಿದ ಎಲ್ಲರೂ ಸ್ಪಂದಿಸಿ, ಪರಿಷ್ಕರಿಸಿದ ಲೇಖನಗಳನ್ನು ಮತ್ತೊಮ್ಮೆ ನನಗೆ ಕಳುಹಿಸಿರುವುದು ಅತ್ಯಂತ ಸಂತೋಷದ ವಿಷಯ. ಪ್ರತೀ ಸಾಹಿತ್ಯ ದಾಸೋಹದ ಮಾಸಿಕ ಸಂಚಿಕೆಯಲ್ಲಿ ಬರಹಗಳನ್ನು ಅಳವಡಿಸುವಾಗ ಶ್ರೀ ಶೃಂಗೇಶ್ವರ ಶರ್ಮರಿಗಿರುವ ಕಷ್ಟಗಳನ್ನು ನಾನು ಬಲ್ಲೆ. ಲೇಖನವನ್ನು ವ್ಯಾಕರಣ ದೋಷವಿಲ್ಲದೆ ಸರಿಯಾಗಿ ಬರೆದು ಕಳುಹಿಸುವುದು ಎಲ್ಲರ ಕರ್ತವ್ಯವಾಗಬೇಕು'' ಎಂದು ತಿಳಿಸಿದರಲ್ಲದೆ, ಲೇಖನಗಳನ್ನು ಮುದ್ರಣಕ್ಕೆ ಅಳವಡಿಸುವ ಗುಣಮಟ್ಟಕ್ಕೆ ಸರಿಯಾಗಿ ರಚಿಸಲು ಸೂಕ್ತ ಮಾರ್ಗದರ್ಶನ ನೀಡುವ ಅರ್ಧ ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವುದರ ಬಗ್ಗೆ ವೇದಿಕೆಯು ಗಮನಹರಿಸುವುದು ಅಗತ್ಯ ಎಂದೂ ಅರುಣ ಅವರು ಸೂಚಿಸಿದರು.

ಈ ಬಾರಿಯ ದಾಸೋಹದಲ್ಲಿ ಪ್ರಸ್ತುತಿಕರ್ತರು ಕಳುಹಿಸಿದ ಬರಹಗಳು ಒಟ್ಟು ಹದಿನಾರು ಸಾವಿರ ಪದಗಳನ್ನುಳ್ಳ ಬೃಹತ್ ಸಂಗ್ರಹವಾಗಿದೆ ಎಂದು ತಿಳಿಸಿದ ಅರುಣ ಅವರು, ಪ್ರತಿಯೊಂದು ಬರಹವನ್ನೂ ತಮ್ಮ ಮೌಲಿಕ ವಿಶ್ಲೇಷಣೆಗೆ ಒಳಪಡಿಸಿ, ಆದರ ಸಾಹಿತ್ಯಕ ಮೌಲ್ಯಗಳ ಬಗ್ಗೆ ಗಮನ ಸೆಳೆದು, ಬರಹವನ್ನು ಇನ್ನಷ್ಟು ಉತ್ತಮಗೊಳಿಸುವ ದೃಷ್ಟಿಯಿಂದ ಅದರಲ್ಲಿ ಮಾಡಬೇಕಾದ ಬದಲಾವಣೆಗಳ ಬಗ್ಗೆ ಹಾಗೂ ವಿಷಯಗಳ ಆಯ್ಕೆಯ ಬಗ್ಗೆ ಸಲಹೆ ನೀಡಿದರಲ್ಲದೆ, ವಿಷಯಗಳ ಮಂಡನೆಯಲ್ಲಿರಬೇಕಾದ ನಿಖರತೆಯ ಬಗ್ಗೆಯೂ ವಿವರಿಸಿ ಅಧ್ಯಕ್ಷ ಸ್ಥಾನದ ಮೌಲ್ಯವನ್ನು ಇನ್ನಷ್ಟು ಎತ್ತರಕ್ಕೆ ಏರಿಸಿದರು.

ಶ್ರೀ ಕೆ.ಎನ್. ಮಹಾಬಲ ಅವರ ವಂದನಾರ್ಪಣೆಯೊಂದಿಗೆ ಫೆಬ್ರುವರಿ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಂಪನ್ನವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ ಹಾಗೂ ವಿಡಿಯೋ ಸಂಸ್ಕರಣೆ : ಶ್ರೀಮತಿ ರೇಣುಕಾ ದೇಸಾಯಿ
ಸಾಹಿತ್ಯ ದಾಸೋಹ–೨೩೪ ಪಿಡಿಎಫ್ ಸಂಚಿಕೆ ತಯಾರಕರು : ಶ್ರೀ ಶೃಂಗೇಶ್ವರ ಶರ್ಮ

***

ತಿಂಗಳ ಬೆಳಕು - 12

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಸೈಬರ್ ಅಪರಾಧಗಳನ್ನು ತಡೆಯುವುದು ಹೇಗೆ?"

ಉಪನ್ಯಾಸಕರು: ಶ್ರೀ ಡಿ.ವಿ. ಗುರುಪ್ರಸಾದ್

ಕಾರ್ಯಕ್ರಮ ವರದಿ: ಹ.ವಾ. ಶ್ರೀಪ್ರಕಾಶ್

ದಿನಾಂಕ 22.02.2025ರಂದು ಶನಿವಾರ ಸಂಜೆ 5.30ಕ್ಕೆ 'ಸೈಬರ್ ಅಪರಾಧಗಳನ್ನು ತಡೆಯುವುದು ಹೇಗೆ?' ಎಂಬ ಬಗ್ಗೆ ನಿವೃತ್ತ ಪೋಲೀಸ್ ಮಹಾನಿರ್ದೇಶಕರಾದ ಡಾ. ಡಿ.ವಿ.ಗುರುಪ್ರಸಾದ್ ಅವರಿಂದ ಉಪನ್ಯಾಸ ಏರ್ಪಡಿಸಲಾಗಿತ್ತು.

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ಅಂತರ್ಜಾಲದ ಗೂಗಲ್ ಮೀಟ್ ಮೂಲಕ ನಡೆದ ಈ ಕಾರ್ಯಕ್ರಮದ ಆರಂಭದಲ್ಲಿ 'ತಿಂಗಳ ಬೆಳಕು' ಸಂಚಾಲಕರಾದ ಶ್ರೀ ರವಿ ಕುಸಬಿ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ, ಉಪನ್ಯಾಸಕರಾದ ಡಾ. ಡಿ.ವಿ. ಗುರುಪ್ರಸಾದ್ ಅವರನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರು. 1950ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಶ್ರೀ ಡಿ.ವಿ. ಗುರುಪ್ರಸಾದ್ ಅವರು, ಬೆಂಗಳೂರಿನ ನ್ಯಾಷನಲ್ ಕಾಲೇಜಿನಿಂದ ವಿಜ್ಞಾನ ಪದವಿಯನ್ನೂ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದಾರೆ. 1976ರಲ್ಲಿ ಭಾರತೀಯ ಪೋಲೀಸ್ ಸೇವೆಯಲ್ಲಿ (ಐಪಿಎಸ್) ಕರ್ನಾಟಕ ಕೇಡರ್‌ಗೆ ಆಯ್ಕೆಯಾದ ಇವರು, ಪೋಲೀಸ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ, 2011ರಲ್ಲಿ ಗೃಹರಕ್ಷಕ ದಳ, ಅಗ್ನಿಶಾಮಕ ಪಡೆ ಮತ್ತು ನಾಗರಿಕ ರಕ್ಷಣಾ ಇಲಾಖೆಯ ಡಿಜಿಪಿಯಾಗಿ ನಿವೃತ್ತರಾದರು. ಇವರು ತಮ್ಮ ಸೇವಾವಧಿಯಲ್ಲಿ ರಾಜ್ಯ ಗುಪ್ತಚರ ಇಲಾಖೆ, ರಾಜ್ಯ ಮಾಹಿತಿ ಇಲಾಖೆ, ಪೋಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದರಲ್ಲದೆ, ಕರ್ನಾಟಕ ಅಪರಾಧ ತನಿಖಾ ಇಲಾಖೆಯ ಮಹಾ ನಿರ್ದೇಶಕ ರಾಗಿಯೂ ಕಾರ್ಯನಿರ್ವಹಿಸಿ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಸೇವೆ ಸಲ್ಲಿಸಿ ಸಾರಿಗೆ ನಿಗಮದ ವಿಭಜನೆಯೂ ಸೇರಿದಂತೆ ಹಲವು ಬಗೆಯ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ. ಓರ್ವ ಅಂಕಣಕಾರರಾಗಿಯೂ ಗುರುತಿಸಲ್ಪಟ್ಟಿರುವ ಇವರು, ಭಾರತೀಯ ಪೋಲೀಸ್ ವ್ಯವಸ್ಥೆಯ ಬಗೆಗೆ ಹಾಗೂ ವಿವಿಧ ಬಗೆಯ ಅಪರಾಧಗಳಿಗೆ ಸಂಬಂಧಿಸಿದಂತೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವಂತಹ ಹಲವು ಪುಸ್ತಕಗಳನ್ನು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪ್ರಕಟಿಸಿದ್ದಾರೆಂದು ಶ್ರೀ ಗುರುಪ್ರಸಾದ್ ಅವರನ್ನು ಪರಿಚಯಿಸಿದರು.



ಸೈಬರ್ ಅಪರಾಧಗಳನ್ನು ಕುರಿತಂತೆ ಹಿರಿಯ ನಾಗರೀಕರನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿದ ಶ್ರೀ ಡಿ.ವಿ.ಗುರುಪ್ರಸಾದ್ ಅವರು ತಾವು ಹೇಳುವ ಘಟನೆಗಳು ಸತ್ಯ ಘಟನೆಗಳಾಗಿದ್ದು ಹೆಸರುಗಳನ್ನು ಮಾತ್ರ ಬದಲಾಯಿಸಿದ್ದೇನೆ ಎಂದು ತಮ್ಮ ಉಪನ್ಯಾಸವನ್ನು ಆರಂಭಿಸಿದರು. ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಅವರು ನೀಡಿದ ಉಪಯುಕ್ತ ಮಾಹಿತಿಗಳು ಮತ್ತು ಕೆಲವು ಉದಾಹರಣೆಗಳು ಹೀಗಿವೆ:

- ಸ್ವತ್ತಿನ ಅಪರಾಧದಲ್ಲಿ ಮುಖಾಮುಖಿಯಾದಾಗ ಅಪರಾಧಿ ಯಾರು ಎಂದು ತಿಳಿಯುತ್ತದೆ. ಈಗ ಅಪರಾಧಿಗಳು ಸಾವಿರಾರು ಕಿಲೋಮೀಟರ್ ದೂರದಲ್ಲಿದ್ದು ಕ್ಷಣಮಾತ್ರದಲ್ಲಿ ಹಣ ಲಪಟಾಯಿಸುತ್ತಾರೆ. ಹಣ ಎಲ್ಲಿ, ಹೇಗೆ ಹೋಯಿತು ಎಂಬುದು ಗೊತ್ತಾಗುವುದಿಲ್ಲ. ಹಿಂದೆ ಕಳ್ಳತನವಾದರೆ ಹಣ ವಾಪಸ್ ಬರಬಹುದೆಂಬ ನಿರೀಕ್ಷೆ ಇರುತ್ತಿತ್ತು. ಆದರೆ ಈಗ ಸೈಬರ್ ಅಪರಾಧಗಳಲ್ಲಿ ಒಂದು ಪೈಸೆ ವಾಪಸ್ ಬರುವುದೂ ಕಷ್ಟ. ಸಾವಿರಾರು ಪ್ರಕರಣಗಳಲ್ಲಿ ಎಲ್ಲೋ ಒಂದೆರಡು ಪ್ರಸಂಗಗಳಲ್ಲಿ ಕೂಡಲೇ ಎಚ್ಚೆತ್ತುಕೊಂಡ ಪರಿಣಾಮವಾಗಿ ಹಣ ಅಲ್ಪಸ್ವಲ್ಪ ಸಿಕ್ಕಿರಬಹುದು ಅಷ್ಟೇ. ಕ್ರೆಡಿಟ್ ಕಾರ್ಡ್ಗಳಿಗೆ ಸಂಬಂಧಿಸಿದ ಅಪರಾಧಗಳು, ಎಟಿಎಂನಲ್ಲಿ ಕ್ಲೋನಿಂಗ್ ಮಾಡಿ ಹಣ ಕದಿಯುವುದು ಮುಂತಾದ ಅಪರಾಧಗಳೆಲ್ಲ ಈಗ ಹಳೆಯದಾದುವು. ಈಗ ಹೆಚ್ಚಾಗಿ ಆಗುತ್ತಿರುವುದು ಹೆದರಿಕೆ ಹುಟ್ಟಿಸುತ್ತಿರುವ ಅಪರಾಧಗಳು. ವ್ಯಕ್ತಿಯನ್ನು ಯಾವುದೋ ಅಪರಾಧಿಯಂತೆ ಪ್ರಕರಣದಲ್ಲಿ ಸಿಲುಕಿಸಿದಂತೆ ಮಾಡಿ ಹೆದರಿಸಿ ಹಣ ಕೀಳುವ ಪ್ರಕರಣಗಳೇ ಹೆಚ್ಚು.

- ತಂತ್ರಜ್ಞಾನ ಸುಧಾರಿಸಿದಂತೆಲ್ಲ ಸೈಬರ್ ಅಪರಾಧದ ಸ್ವರೂಪ ಬದಲಾಗಿದೆ. ಇದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಭಾರತದ ಮೊಟ್ಟಮೊದಲ ಸೈಬರ್ ಕ್ರೈಂ ಪೋಲೀಸ್ ಸ್ಟೇಶನ್ ಬೆಂಗಳೂರಿನಲ್ಲಿ ಆರಂಭವಾಯಿತು. ಈಗ ಅನೇಕ ಕಡೆಗಳಲ್ಲಿವೆ. ಅದರೂ ಸೈಬರ್ ಅಪರಾಧ ದಿನೇದಿನೇ ಹೆಚ್ಚುತ್ತಿದೆ.

- ಹುಬ್ಬಳ್ಳಿಯ ಹಿರಿಯ ವೈದ್ಯರಿಗೆ ಕೆಲವು ತಿಂಗಳ ಹಿಂದೆ ಒಂದು ಇಮೇಲ್ ಬಂದಿತ್ತು. ಕೋರ್ಟಿಗೆ ಹಾಜರಾಗುವಂತೆ ಸೂಚಿಸಿದ ವಾರಂಟ್ ಅದಾಗಿತ್ತು. 'ನೀವು ಚೈಲ್ಡ್ ಪೋರ್ನೋಗ್ರಫಿ ಮಾಡುತ್ತಿದ್ದೀರಿ. ನಿಮ್ಮ ಮನೆಗೆ ಬಂದು ಕಂಪ್ಯೂಟರ್ ವಶಪಡಿಸಿಕೊಂಡು ನಿಮ್ಮನ್ನು ಬಂಧಿಸುತ್ತೇವೆ' ಎಂದು ಅವರಿಗೆ ಕರೆ ಬಂತು. ಇವರು ಭಯಪಟ್ಟರು. ಪೋಲೀಸ್ ಅಧಿಕಾರಿಯಂತೆ ವೇಷ ತೊಟ್ಟವನೊಬ್ಬ ಇವರನ್ನು ಮತ್ತೆ ಹೆದರಿಸಿ ನಿಮ್ಮ ನರ್ಸಿಂಗ್ ಹೋಂ ಕ್ಲೋಸ್ ಮಾಡಲಾಗುತ್ತದೆ. ಎರಡು ಕೋಟಿ ರೂ. ಹಣ ಕೊಟ್ಟರೆ ಪ್ರಕರಣ ಮುಚ್ಚಿಹಾಕಲಾಗುವುದು ಎಂದ. ಮರುದಿನ ಇವರು ಅಷ್ಟು ಹಣ ಸಾಧ್ಯವಿಲ್ಲವೆಂದಾಗ ಒಂದೂವರೆ ಕೋಟಿಗೆ ಇಳಿಸಿ, ಕೊನೆಗೆ ಐವತ್ತು ಲಕ್ಷಕ್ಕೆ ಒಪ್ಪಿಕೊಳ್ಳುತ್ತಾನೆ. ಇವರು ಇಪ್ಪತ್ತೈದು ಲಕ್ಷ ಕೊಡುತ್ತಾರೆ. ನಂತರ ಏನೋ ಅನುಮಾನ ಬಂದು, ಅವರು ನನಗೆ ಫೋನ್ ಮಾಡಿದಾಗ ಮೋಸ ಹೋಗಿರುವುದನ್ನು ತಿಳಿಸಿ, ಕೂಡಲೇ ಪೊಲೀಸರಲ್ಲಿ ದೂರು ದಾಖಲಿಸಲು ಹೇಳಿದೆ. ಇಂತಹ ಇಮೇಲ್ಗಳು ಎಲ್ಲರಿಗೂ ಬರುವುದು ಸಾಮಾನ್ಯ. ಅಂತಹ ಸಂದೇಶಗಳಿಗೆ ಪ್ರತಿಕ್ರಿಯಿಸದೆ ಅನ್ನು ಕೂಡಲೇ ಡಿಲೀಟ್ ಮಾಡಬೇಕು.

- ನಾವು ಮುಂಬೈ ಸೈಬರ್ ಪೊಲೀಸಿನವರು. ನೀವು ಕಳಿಸಿದ ಪಾರ್ಸೆಲ್‌ನಲ್ಲಿ ಮಾದಕ ಪದಾರ್ಥ ಇದೆ. ಎಂದು ಹೇಳಿಕೊಂಡು ಡಿಜಿಟಲ್ ಅರೆಸ್ಟ್ ಮಾಡುತ್ತಾರೆ. ಡಿಜಿಟಲ್ ಎಂಬುದೇ ಇಲ್ಲ. ಈಗಿರುವ ನಿಯಮಗಳ ಪ್ರಕಾರ ಅರೆಸ್ಟ್ ಆಗಬೇಕಾದರೆ ಪೊಲೀಸ್ ಅಧಿಕಾರಿ ಖುದ್ದಾಗಿ ಬಂದು ಕಾರಣ ತಿಳಿಸಿ ಬಂಧಿಸಬೇಕು. ಆದರೆ ಇವರು ಫೋನಿನಲ್ಲಿ ಡಿಜಿಟಲ್ ಅರೆಸ್ಟ್ ಎಂದು ಹೆದರಿಸಿ ಮನೆಯಿಂದ ಹೊರಹೋಗದಂತೆ ಮಾಡುತ್ತಾರೆ. ಅನೇಕ ಹೆಣ್ಣುಮಕ್ಕಳು ಕೂಡಾ ಇಂತಹ ಸುಳಿಗೆ ಸಿಲುಕಿ ಹಣ ಕಳೆದುಕೊಂಡಿದ್ದಾರೆ. ಕೆಲವರು ಕ್ಷಣಮಾತ್ರದಲ್ಲಿ ಬಹಳ ಹೆದರಿಬಿಡುತ್ತಾರೆ. ಯಾವುದೇ ಸಂದರ್ಭದಲ್ಲೂ ಎದೆಗುಂದಬಾರದು.

- ಇನ್ನೊಂದು ಪ್ರಕರಣದಲ್ಲಿ, ಓರ್ವರ ಪತ್ನಿ ಅಮೆರಿಕಾಗೆ ಮಗಳ ಮನೆಗೆ ಹೋದ ಸಂದರ್ಭ. ನಿಮಗೆ ಹೆಣ್ಣಿನ ಅವಶ್ಯಕತೆ ಇದೆಯೇ? ನಿಮಗೆ ಬೇಕಾದವರೊಂದಿಗೆ ಸಂಭಾಷಿಸಬಹುದು ಎಂದು ಇಪ್ಪತ್ತೈದು ಯುವತಿಯರ ಫೋಟೋ ಕಳಿಸಿದ್ದಾರೆ. ಈ ವ್ಯಕ್ತಿ ಮಾತನಾಡುವ ಚಪಲದಿಂದ ಅವರು ಹೇಳಿದ ಕ್ಲಬ್ಬಿನ ಸದಸ್ಯರಾಗುತ್ತಾರೆ. ಯಾರೋ ಒಬ್ಬಳೊಂದಿಗೆ ಸಂಭಾಷಣೆ ಮಾಡುತ್ತಾ ಕೊನೆಗೆ ಪ್ರೀಮಿಯಂ ಮೆಂಬರ್ ಆಗುತ್ತಾರೆ. ಈ ಮಧ್ಯೆ ಅವರು ಸುಮಾರು ಮೂರು ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿರುತ್ತಾರೆ.

- ವಾಟ್ಸಾಪ್ ಕಾಲ್ಗಳಲ್ಲಿ, ವಿಡಿಯೋ ಕಾಲ್‌ಗಳಲ್ಲಿ ನಿಮ್ಮೊಂದಿಗೆ ಮಾತಾಡುತ್ತಾ, ಅರೆನಗ್ನರಾಗಿ ನೀವು ನೋಡುವುದನ್ನು ರೆಕಾರ್ಡ್ ಮಾಡಿ ಕೊನೆಗೆ ನಿಮ್ಮನ್ನೇ ಹೆದರಿಸಿ ಹಣ ದೋಚುತ್ತಾರೆ.

- ಹನಿ ಟ್ರ್ಯಾಪ್ ಕೂಡ ಈಗ ಹೆಚ್ಚಾಗಿ ಆಗುತ್ತಿದೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬಂದು ಬೇರೆಯವರ ಅಥವಾ ನಿಮ್ಮ ಪರಿಚಿತರ ಧ್ವನಿಯಲ್ಲಿ ಕರೆ ಮಾಡಿ ಮೋಸ ಮಾಡಲಾಗುವುದು ಹೆಚ್ಚುತ್ತಿದೆ.

- ನೀವು ಕಳಿಸಿದ ಕೊರಿಯರ್‌ನಲ್ಲಿ ಗಾಂಜಾ ಅಫೀಮು ಇದೆ. ನೀವು ಅಪರಾಧಿಯಾಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಹೊರಿಸುವ ಮೇಲ್ ಬಂದರೆ ಪ್ರತಿಕ್ರಿಯಿಸದೆ ಅದನ್ನು ಡಿಲೀಟ್ ಮಾಡಿ. ಅಪರಿಚಿತ ಕರೆಗಳಿಗೆ ಸ್ಪಂದಿಸಬೇಡಿ.

- ಎಷ್ಟೋ ಪ್ರಕರಣಗಳಲ್ಲಿ ಮೋಸ ಮಾಡುವವರು ಎಸ್ ಎಸ್ ಎಲ್ ಸಿ ಕೂಡ ಪಾಸ್ ಆಗದ ಯುವಕರು. ಸೈಬರ್ ಕ್ರೈಂ ವಂಚಕರು ಅನೇಕರನ್ನು ಒತ್ತೆಯಾಳುಗಳಾಗಿಸಿ ಇಂತಹ ವ್ಯವಹಾರದಲ್ಲಿ ಸಿಲುಕಿಸುತ್ತಾರೆ.

ಹೀಗೆ ಹಲವು ಬಗೆಯ ಅಪರಾಧಗಳನ್ನು ಉದಾಹರಣೆಗಳ ಸಹಿತ ವಿವರಿಸಿದ ಶ್ರೀ ಗುರುಪ್ರಸಾದ್ ಅವರು ಪ್ರೇಕ್ಷಕರ ಪ್ರಶ್ನೆಗಳು, ಸಂದೇಹಗಳಿಗೂ ಸಮರ್ಪಕವಾಗಿ ಉತ್ತರಿಸಿದರಲ್ಲದೆ, ಯಾರೇ ಆಗಲಿ, ಸೈಬರ್ ಕ್ರೈಂಗಳಿಗೆ ಬಲಿಯಾಗದಂತೆ ಮುನ್ನೆಚ್ಚರಿಕೆಯಿಂದ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕೆಲವು ಸಲಹೆಗಳನ್ನು ನೀಡಿದರು. ಅವುಗಳು ಹೀಗಿವೆ:

~ ವಂಚನೆಗೊಳಗಾದ ಕೂಡಲೇ ನಂಬರ್ 1932ಕ್ಕೆ ಕರೆ ಅಥವಾ ಸೈಬರ್ ಕ್ರೈಂಗೆ ಇಮೇಲ್ ಮಾಡಬೇಕು. ಆಗ ಸ್ವಲ್ಪವಾದರೂ ಹಣ ವಾಪಸು ಬರುವ ಸಾಧ್ಯತೆ ಇರುತ್ತದೆ.

~ ಅಕೌಂಟ್ ಅಪ್ಡೇಟ್ ಮಾಡಬೇಕು ಎಂಬ ಲಿಂಕ್‌ಗಳಿಗೆ ಒತ್ತುವುದಾಗಲಿ, ಓಟಿಪಿ ಕೊಡುವುದಾಗಲಿ ಮಾಡಬಾರದು. ಕೆಲವೊಮ್ಮೆ ಒತ್ತಡ ಹಾಕಿ ಹೆದರಿಸಿ ಓಟಿಪಿ ಪಡೆಯುತ್ತಾರೆ. ಎಷ್ಟೇ ಒತ್ತಡ ಹಾಕಿದರೂ ಓಟಿಪಿ ಮಾತ್ರ ಕೊಡಲೇಬಾರದು. ಈಗ ಡಬಲ್ ವೆರಿಫಿಕೇಶನ್ ಬಂದಿದೆ,

~ ಅಪರಿಚಿತ ಕಾಲ್ ತೆಗೆದುಕೊಳ್ಳಬಾರದು. ಹೆದರದೆ ಮೆಸೇಜುಗಳನ್ನು ಡಿಲೀಟ್ ಮಾಡಬೇಕು. ಅಕೌಂಟ್ ಬಂದ್ ಆಗುತ್ತದೆ ಎಂದು ಹೆದರಿಸಿದರೆ ಎದೆಗುಂದಬಾರದು. ಒಂದುವೇಳೆ ಅಕೌಂಟ್ ಬಂದ್ ಆದರೆ ಬ್ಯಾಂಕಿಗೆ ಹೋಗಿ ಸರಿಪಡಿಸಬಹುದು. ಅಂತಹ ಸಂದೇಶಕ್ಕೆ ಉತ್ತರಿಸುವುದಾಗಲೀ ಯಾವುದೇ ಲಿಂಕ್ ಒತ್ತುವುದಾಗಲೀ ಮಾಡಬಾರದು.

~ ವಾಟ್ಸಾಪ್ ಗುಂಪುಗಳಲ್ಲಿ ನಿಮ್ಮನ್ನು ಪ್ರೇರೇಪಿಸಿ, ಉಡುಗೊರೆಯ ಆಮಿಷ ತೋರಿಸುವ ಯಾವುದೇ ಸಂದೇಶಗಳಿಗೂ ಉತ್ತರಿಸಬೇಡಿ. ನೀವು ದುರಾಸೆಯಿಂದ ಲಿಂಕ್ ಒತ್ತಿದರೆ ಅವರು ಹಣ ದೋಚುತ್ತಾರೆ. ಆದುದರಿಂದ ಗೊತ್ತಿರದ ಯಾವುದೇ ವಾಟ್ಸಾಪ್, ಫೇಸ್‌ಬುಕ್ ಗುಂಪುಗಳಿಗೆ ಸೇರಿಕೊಳ್ಳಬೇಡಿ. ನಮ್ಮ ಹಣವನ್ನು ನಾವೇ ರಕ್ಷಿಸಿಕೊಳ್ಳಬೇಕು ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು.

~ ಆಗಾಗ ಪಿನ್ ಹಾಗೂ ಪಾಸ್ವರ್ಡ್ ಬದಲಾಯಿಸುತ್ತಿರಿ. ಅಪರಿಚಿತರ ದೂರವಾಣಿ ಕರೆಗೆ ಉತ್ತರಿಸಬೇಡಿ.

~ ಭಾರತ ಸರಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಸಾರ್ವಜನಿಕರಿಗೆ ಆಗಿಂದಾಗ್ಗೆ ಅನೇಕ ಎಚ್ಚರಿಕೆಗಳನ್ನು ನೀಡುತ್ತ ಬಂದಿವೆ. ದಯವಿಟ್ಟು ಇವುಗಳನ್ನು ಗಮನಿಸಿ.

~ ನಿಮ್ಮ ಫೋನ್ ನೆಟ್‌ವರ್ಕ್‌ನವರು ಸಹ ಕೆಲವು ಕರೆ ಬಂದಾಗ 'ಈ ನಂಬರ್ ಸ್ಪಾಮ್' ಎಂದು ಕೆಂಪು ಬಣ್ಣದಿಂದ ಎಚ್ಚರಿಸುತ್ತಾರೆ. ಅಂತಹ ಕರೆಗಳಿಗೆ ಉತ್ತರಿಸಬೇಡಿ.


~ ಸೈಬರ್ ಅಪರಾಧದ ಮೂಲಕ ಒಂದು ಖಾತೆಗೆ ಹಣ ಹೋದ ನಂತರ ಅದು ತಕ್ಷಣವೇ ಹಲವಾರು ಖಾತೆಗಳಿಗೆ ವರ್ಗಾವಣೆ ಆಗುತ್ತದೆ. ಹೀಗಾಗಿ ಹಣ ಎಲ್ಲಿ ಹೋಯಿತು ಎಂಬುದನ್ನು ಪತ್ತೆ ಮಾಡುವುದು ಅಷ್ಟು ಸುಲಭವಲ್ಲ.

~ ಪೊಲೀಸರಿಗೆ ತಾಂತ್ರಿಕ ಜ್ಞಾನ ಕಡಿಮೆ ಇರುವುದರಿಂದ ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚುವುದು ಬಹಳ ಕಷ್ಟವಾಗಿದೆ. ಹೊರಗುತ್ತಿಗೆಯವರ ಸೇವೆ ಪಡೆದುಕೊಂಡು ಅಪರಾಧಗಳನ್ನು ಪತ್ತೆಹಚ್ಚುವ ಕಾರ್ಯ ನಡೆಸಬೇಕಾಗಿದೆ.

ಹೀಗೆ ಸೈಬರ್ ಅಪರಾಧದ ವಿವಿಧ ಮುಖಗಳನ್ನು ವಿವರಿಸಿ, ವಿಶ್ಲೇಷಿಸಿದ ಶ್ರೀ ಗುರುಪ್ರಸಾದ್ ಅವರು, 'ಸೈಬರ್ ಕ್ರೈಂ ನಿಲ್ಲುವುದಿಲ್ಲ. ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕು' ಎಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿದರು.

ಶ್ರೀಮತಿ ರೇಣುಕಾ ದೇಸಾಯಿಯವರ ವಂದನಾರ್ಪಣೆಯೊಂದಿಗೆ 12ನೇ 'ತಿಂಗಳ ಬೆಳಕು' ಕಾರ್ಯಕ್ರಮ ಮುಕ್ತಾಯವಾಯಿತು.

***



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಎಚ್ಚೆಸ್ಕೆ ಬೆಳಕು – 10
ಪಾ.ರಾಜಗೋಪಾಲ ಅಭಿನಂದನಾ ಕಾರ್ಯಕ್ರಮ

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮದ 10ನೇ ಆವೃತ್ತಿಯ ಅಂಗವಾಗಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವು 02.03.2025ರಂದು ಭಾನುವಾರ ಬೆಳಿಗ್ಗೆ 10.15ಕ್ಕೆ ಬ್ಯಾಂಕನ್ನಡದ ಜೀವನದಿ ಶ್ರೀ ಪಾ.ರಾಜಗೋಪಾಲ ಅವರಿಗೆ ಸನ್ಮಾನ ಸಮಾರಂಭವನ್ನು ಏರ್ಪಡಿಸಿತ್ತು. ಬೆಂಗಳೂರಿನ ಸಂತ ಮಾರ್ಕರ ರಸ್ತೆಯಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬೆಂ.ಶ್ರೀ. ರವೀಂದ್ರರವರು ವಹಿಸಿದ್ದು, ಹಿರಿಯ ಸಾಹಿತಿ ಡಾ. ಪ್ರಧಾನ ಗುರುದತ್ತ ಮತ್ತು ಖ್ಯಾತ ಹಾಸ್ಯ ಸಾಹಿತಿ ಶ್ರೀ ಎಂ.ಎಸ್.ನರಸಿಂಹಮೂರ್ತಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಶ್ರೀ ಎಚ್.ಆರ್.ಕೆ. ಪ್ರಸಾದ್ ಅವರು ನಾಡಗೀತೆ ಹಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಮೊದಲಿಗೆ ಶ್ರೀ ಧೀರೇಂದ್ರ ಹಾಗೂ ಶ್ರೀ ರಂಗರಾಜನ್‌ರವರು ರಚಿಸಿ, ಶ್ರೀ ಧೀರೇಂದ್ರರವರು ನಿರ್ದೇಶಿಸಿದ 'ಛಲದಂಕಮಲ್ಲ ಪಾ.ರಾ.' ಎಂಬ ನಾಟಕವನ್ನು ಪ್ರದರ್ಶಿಸಲಾಯಿತು. ಈ ನಾಟಕವು ಪಾ.ರಾಜಗೋಪಾಲರು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉದ್ಯೋಗಿಯಾಗಿ ಸೇರಿದಂದಿನಿಂದ ಇಲ್ಲಿಯವರೆಗೂ ಸುಮಾರು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಅನುಷ್ಠಾನಕ್ಕಾಗಿ ಕಂಕಣಬದ್ಧರಾಗಿ ದುಡಿದ ಸಾಹಸಗಾಥೆಯನ್ನು ಬಿಂಬಿಸುವಲ್ಲಿ ಯಶಸ್ವಿಯಾಯಿತು.

ಶ್ರೀ ಪಾ.ರಾಜಗೋಪಾಲರನ್ನು ಕುರಿತು ಬೆಂ.ಶ್ರೀ.ರವೀಂದ್ರರವರು ರಚಿಸಿದ್ದ ಗೀತೆಯನ್ನು ಶ್ರೀಮತಿ ವಿಜಯಲಕ್ಷ್ಮಿ, ಕುಮಾರಿ ಅನುಷಾ ಹಾಗೂ ಶ್ರೀ ಶ್ರೀಧರ್ ರವರು ಸ್ವಾಗತ ಗೀತೆಯಾಗಿ ಹಾಡಿದರು.

ಸ್ವಾಗತ ಭಾಷಣ ಮಾಡಿದ ಶ್ರೀ ರವಿ ಕುಸಬಿಯವರು ಕನ್ನಡ ಎಂದರೆ ಒಂದು ಶಕ್ತಿ ಎಂದು ಹಲವು ಕವಿವಾಣಿಗಳನ್ನು ಉದಾಹರಿಸಿ, ಪಾ.ರಾಜಗೋಪಾಲರ ಸನ್ಮಾನದ ದಿನ ನಮಗೆಲ್ಲ ಸಂಭ್ರಮದ ದಿನ, ಅವರ ಬ್ಯಾಂಕನ್ನಡ ಕೈಂಕರ್ಯ ನಮಗೆಲ್ಲ ಮಾದರಿ ಎಂದು ಹೇಳಿ ಎಲ್ಲರನ್ನೂ ಸ್ವಾಗತಿಸಿದರು.







ಅತಿಥಿಗಳು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಂತರ ಶ್ರೀ ಬೆಂ.ಶ್ರೀ. ರವೀಂದ್ರ ಮಾತನಾಡಿ, "ಮಿತ್ರ ರಾಜಗೋಪಾಲರಿಗೆ ಸನ್ಮಾನ ಮಾಡುವ ಬಗ್ಗೆ ಕಳೆದ ಡಿಸೆಂಬರಿನಲ್ಲಿ ನಿರ್ಧರಿಸಿ, ಅಂದೇ ರಾತ್ರಿ ನಮ್ಮ ವಾಟ್ಸಾಪ್ ವೇದಿಕೆಯಲ್ಲಿ ಸಂದೇಶ ಹಾಕಿದಾಗ ಮರುದಿನ ಬೆಳಗಾಗುವುದರೊಳಗೇ ಸುಮಾರು ಒಂದು ಲಕ್ಷ ರೂಪಾಯಿ ಸಂಗ್ರಹ ವಾಗಿತ್ತು. ಇದು ರಾಜಗೋಪಾಲರ ನಿಸ್ಪೃಹ ಸೇವೆಗೆ ಸಹೋದ್ಯೋಗಿಗಳಿಂದ ದೊರೆತ ತಕ್ಷಣದ ಪ್ರತಿಕ್ರಿಯೆ. ಇವರ ಸನ್ಮಾನಕ್ಕೆ ನಮ್ಮ ನಿರೀಕ್ಷೆಯನ್ನೂ ಮೀರಿ 217 ಜನ ಧಾರಾಳವಾಗಿ ನೆರವು ನೀಡಿದ್ದಾರೆ. ಜನರ ಮನಸ್ಸಿನಲ್ಲಿ ಆಗಲೇ ರಾಜಗೋಪಾಲ್ ಸನ್ಮಾನಿತರಾಗಿದ್ದಾರೆಂದೇ ಇದರ ಅರ್ಥ. ಸ್ಟೇಟ್ ಬ್ಯಾಂಕಿನ ಸಾಮಾನ್ಯ ಸಿಬ್ಬಂದಿಯೊಬ್ಬರು ತನ್ನ ಕನ್ನಡಪರ ಕೆಲಸಗಳಿಂದಾಗಿ ಅಪ್ರತಿಮ ಜನಾನುರಾಗಿಯಾಗಿರುವುದು ಸಂತಸದ ಸಂಗತಿ" ಎಂದು ಹೇಳಿದರು.

"ಪಾ ರಾಜಗೋಪಾಲರು ಬೆಂಗಳೂರಿನಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕಿನ ನಗರ ಶಾಖೆಯಲ್ಲಿ ಮೊದಲು ಕನ್ನಡ ಸಂಘವನ್ನು ಸ್ಥಾಪಿಸಿ, ನಂತರ ಬೇರೆ ಬೇರೆ ಶಾಖೆಗಳಲ್ಲೂ ಕನ್ನಡ ಸಂಘಗಳನ್ನು ಆರಂಭಿಸಲು ಪ್ರೇರಣೆ ನೀಡಿದರಲ್ಲದೆ, 1978ರಿಂದ 2007ರವರೆಗೂ ಸುಮಾರು 30 ವರ್ಷಗಳ ಕಾಲ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ನಿಸ್ಪೃಹ ಸೇವೆ ಸಲ್ಲಿಸಿದರು. ರಾಜಗೋಪಾಲ ಎಂಬ ಜೀವನದಿಗೆ ಅನೇಕ ಉಪನದಿಗಳು ಸೇರಿದಂತೆ ಇವರೊಂದಿಗೆ ಹಲವರು ಕನ್ನಡದ ಕೆಲಸಗಳಿಗೆ ಕೈ ಜೋಡಿಸಿದ್ದಾರೆ.

"ಜೂನ್ 1980ರಲ್ಲಿ 'ಬ್ಯಾಂಕಿಂಗ್ ಪ್ರಪಂಚ' ಪತ್ರಿಕೆಯ ಮೊದಲ ಸಂಚಿಕೆ ಬಂದಿತು. 2006ರಲ್ಲಿ ಕೊನೆಯ ಸಂಚಿಕೆ ಬಂತು. ಹಣಕಾಸು ಮತ್ತು ವಾಣಿಜ್ಯ ವಿಷಯಗಳ ಬಗ್ಗೆ ಮೀಸಲಾದ ಇಂತಹ ವಿಶಿಷ್ಟ ಪತ್ರಿಕೆ ಇದುವರೆಗೆ ಬೇರೆ ಯಾವುದೇ ಭಾಷೆಯಲ್ಲಿ ಬಂದಿಲ್ಲ. "ಹೋಗಿ ಬರ್ತೀನಿ ಅಮ್ಮ, ನೀವು ಇದುವರೆಗೆ ಇದ್ದದ್ದೇ ಗೊತ್ತಾಗಲಿಲ್ಲ" ಎಂದು ಸಂಪಾದಕ ರಾಶಿಯವರು 'ಕೊರವಂಜಿ' ಪತ್ರಿಕೆಯ ಕೊನೆಯ ಸಂಚಿಕೆಯಲ್ಲಿ ಬರೆದಿರುವುದನ್ನು 'ಬ್ಯಾಂಕಿಂಗ್ ಪ್ರಪಂಚ'ದ ಕೊನೆಯ ಸಂಚಿಕೆಯ ಸಂಪಾದಕೀಯದಲ್ಲಿ ಸ್ಮರಿಸಿರುವುದು ವಿಪರ್ಯಾಸ" ಎಂದ ಶ್ರೀ ರವೀಂದ್ರರು, 'ಬ್ಯಾಂಕಿಂಗ್ ಪ್ರಪಂಚ'ವನ್ನು ನಡೆಸುವಲ್ಲಿ ರಾಜಗೋಪಾಲರ ಪರಿಶ್ರಮವನ್ನು ಉದಾಹರಣೆ ಸಹಿತ ವಿವರಿಸಿದರು.



"ಕನ್ನಡದಲ್ಲಿ ಬ್ಯಾಂಕಿಂಗ್ ಮತ್ತು ವಾಣಿಜ್ಯ ವಿಷಯಗಳನ್ನು ಬಗ್ಗೆ ಬರಹಗಾರರ ಪಡೆಯನ್ನು ಸಜ್ಜುಗೊಳಿಸಬೇಕೆಂಬ ಉದ್ದೇಶ ದಿಂದ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ಸೊಲ್ಲಾಪುರ ಮತ್ತು ಕಾಸರಗೋಡು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಒಟ್ಟು 27 ಬ್ಯಾಂಕಿಂಗ್ ಕಮ್ಮಟಗಳು ನಡೆದವು. ನಮ್ಮ ಗುರುಗಳಾದ ಪ್ರಾ.ಎಚ್ಚೆಸ್ಕೆಯವರು ಪ್ರತಿ ಕಮ್ಮಟದಲ್ಲಿಯೂ ಆರೇಳು ದಿನಗಳು ನಮ್ಮೊಡನೆಯೇ ಇದ್ದು ಮಾರ್ಗದರ್ಶನ ನೀಡುತ್ತಿದ್ದರು. ಕಮ್ಮಟಗಳನ್ನು ಸಂಘಟಿಸುವಲ್ಲಿ ಪಾ. ರಾಜಗೋಪಾಲರ ಪಾತ್ರ ಹಿರಿದಾದುದು. ಅಲ್ಲದೆ, ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ

ಸಾವಿರಾರು ಪದಗಳನ್ನು ಸಂಗ್ರಹಿಸಿ 'ಇಂಗ್ಲಿಷ್–ಕನ್ನಡ ಬ್ಯಾಂಕಿಂಗ್ ನಿಘಂಟು' ರಚಿಸಲಾಯಿತು. ಇದನ್ನು 1985ರಲ್ಲಿ ರಾಜ್ಯದ ಅಂದಿನ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಬಿಡುಗಡೆ ಮಾಡಿದರು. ಕಳೆದ ನಲವತ್ತು ವರ್ಷಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳಾಗಿ ಹಲವು ಹೊಸ ಪದಗಳು ಸೇರಿಕೊಂಡಿವೆ. ಆದುದರಿಂದ ಬ್ಯಾಂಕಿಂಗ್ ನಿಘಂಟಿನ ಪರಿಷ್ಕರಣೆ ಆಗಬೇಕಾಗಿದೆ ಎಂಬುದು ರಾಜಗೋಪಾಲರ ಕನಸು. ಅವರ ಕನಸನ್ನು ಸಾಕಾರಗೊಳಿಸುವಲ್ಲಿ ನಾವೆಲ್ಲರೂ ಶ್ರಮಿಸಬೇಕಾಗಿದೆ" ಎಂದು ಹೇಳಿದರು.

"ಭಾರತೀಯ ಸ್ಟೇಟ್ ಬ್ಯಾಂಕಿನ ಕರ್ನಾಟಕ ವೃತ್ತ ಸ್ಥಾಪನೆ, ಕರ್ನಾಟಕಕ್ಕೇ ಪ್ರತ್ಯೇಕ ನೇಮಕಾತಿ ಮಂಡಳಿ ರಚನೆ, ಕರ್ನಾಟಕದ ಬ್ಯಾಂಕುಗಳಲ್ಲಿ ಕನ್ನಡಿಗರ ನೇಮಕಾತಿಗಾಗಿ ಹಕ್ಕೊತ್ತಾಯ, ಇಂತಹ ಹೋರಾಟಗಳಿಗಾಗಿ ಅಖಿಲ ಕರ್ನಾಟಕ ಬ್ಯಾಂಕ್ ಕನ್ನಡ ಸಂಘಗಳ ಪರಿಷತ್ತಿನ ಸ್ಥಾಪನೆ ಮತ್ತು ಅವುಗಳಲ್ಲಿ ದೊರೆತ ಯಶಸ್ಸನ್ನು ಸ್ಮರಿಸಿದ ರವೀಂದ್ರರು, "ಈ ಎಲ್ಲದರಲ್ಲಿಯೂ ರಾಜಗೋಪಾಲ ಹಾಗೂ ಅನೇಕ ಬ್ಯಾಂಕ್ ಉದ್ಯೋಗಿಗಳ ಶ್ರಮವಿದೆ. ಈಗ ಮತ್ತೆ ಬ್ಯಾಂಕುಗಳಲ್ಲಿ ಕನ್ನಡ ವಾತಾವರಣ ಮರೆಯಾಗುತ್ತಿದೆ. ಕೇವಲ ನವೆಂಬರ್ ತಿಂಗಳಿನಲ್ಲಿ ರಾಜ್ಯೋತ್ಸವ ಆಚರಿಸುವುದರಿಂದ ಯಾವುದೂ ಬದಲಾಗುವುದಿಲ್ಲ. ಅಂತರ್ಭೂಮಿಕೆಯಲ್ಲಿ ಬದಲಾವಣೆ ಗಟ್ಟಿಯಾಗಿ ಆಗಬೇಕು, ಆಗಲೇ ಬದಲಾವಣೆ ಸಾಧ್ಯ" ಎಂದು ಹೇಳಿ, ಬ್ಯಾಂಕಿಂಗ್ ವಲಯದಲ್ಲಿ ಕನ್ನಡ ದೋಣಿಯ ಚುಕ್ಕಾಣಿ ಹಿಡಿದ ರಾಜಗೋಪಾಲರನ್ನು ಕನ್ನಡ ಸಂಘಗಳ ಸಮನ್ವಯ ಸಮಿತಿ ಸನ್ಮಾನಿಸುತ್ತಿರುವುದು ಬಹಳ ಔಚಿತ್ಯಪೂರ್ಣ. ಅವರ ಸನ್ಮಾನದ ಈ ದಿನ ಅವರ ಅನೇಕ ಸಹೋದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ನಂತರ ಶ್ರೀ ಮುತ್ತುಸ್ವಾಮಿ ಅವರು ಮಾತನಾಡಿ, "ನನ್ನ ಹಾಗೂ ಪಾ ರಾಜಗೋಪಾಲರ ಸ್ನೇಹ 53 ವರ್ಷ ದಾಟಿದೆ. ಲಗಾವ್ ಎಂಬ ಸ್ಲೋಗನ್ ಅವರದು. ಅದಕ್ಕಾಗಿ ಅವರನ್ನು ಲಗಾವ್ ರಾಜಗೋಪಾಲ್ ಎಂದು ಕರೆಯುತ್ತಿದ್ದರು. ಸರಳ, ನಿಸ್ವಾರ್ಥಿ, ಸ್ನೇಹಮಯಿ ವ್ಯಕ್ತಿ. ಅವರು ಕೋಪ ಮಾಡಿಕೊಂಡಿದ್ದನ್ನು ನಾನು ನೋಡಿಲ್ಲ. ರಾಜಗೋಪಾಲ್ ಅವರನ್ನು ನದಿ ಎನ್ನಲಾಗಿದೆ. ನದಿಯ ಬದಲು ನದಿಯ ಉಗಮ ಸ್ಥಾನ ಎನ್ನುವುದು ಹೆಚ್ಚು ಸೂಕ್ತ. ಅಂದು ಕನ್ನಡದಲ್ಲಿ ಎಂ.ಎ. ಮಾಡಿದ್ದ ರಾಜಗೋಪಾಲ ಅವರು ಕಾಲೇಜೊಂದರಲ್ಲಿ ಪ್ರಾಧ್ಯಾಪಕರಾಗದೆ ಬ್ಯಾಂಕಿನಲ್ಲಿ ಗುಮಾಸ್ತರಾಗಿ ಸೇರಿದ್ದು ನನಗೆ ಅಚ್ಚರಿ ತಂದಿತ್ತು. ಅತ್ಯಂತ ವಿಷಮ ಪರಿಸ್ಥಿತಿ ಇದ್ದಾಗ ಬ್ಯಾಂಕಿನಲ್ಲಿ ಕನ್ನಡ ಸಂಘ ಸ್ಥಾಪಿಸುವ ಧೈರ್ಯ ತೋರಿದರು. ಈಗ ಈ ಸಂಘ ಹೆಮ್ಮರವಾಗಿ ಬೆಳೆದಿದೆ" ಎಂದು ಹೇಳಿ, ಈಗ ಮತ್ತೆ ಬ್ಯಾಂಕುಗಳಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆಯಾಗಿ, ಹಿಂದಿನ ವಿಷಮ ಪರಿಸ್ಥಿತಿ ಮರುಸ್ಥಾಪನೆಯಾಗಿದ್ದು, ಬ್ಯಾಂಕುಗಳಲ್ಲಿ ಕನ್ನಡ ವಾತಾವರಣವನ್ನು ನಿರ್ಮಿಸುವ ದಿಸೆಯಲ್ಲಿ ಮತ್ತೆ ಎಲ್ಲರೂ ಗಮನ ಹರಿಸಬೇಕಾಗಿದೆ ಎಂದರು.

ನಂತರ ಪಾ ರಾಜಗೋಪಾಲರವರನ್ನು ಸನ್ಮಾನಿಸಿ ನಿಧಿ ಅರ್ಪಿಸಲಾಯಿತು. ಶ್ರೀ ಟಿ.ಕೆ. ರಂಗನಾಥ ಅವರು ಅಭಿನಂದನಾ ಪತ್ರವನ್ನು ಓದಿದರು.







ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವು ಪ್ರಕಟಿಸಿದ ರಾಜಗೋಪಾಲರ ಅಭಿನಂದನಾ ಗ್ರಂಥ 'ಬ್ಯಾಂಕನ್ನಡದ ಜೀವನದಿ ಪಾ. ರಾಜಗೋಪಾಲ' ಕೃತಿಯನ್ನು ಡಾ. ಪ್ರಧಾನ ಗುರುದತ್ತರು ಹಾಗೂ ಪಾ.ರಾಜಗೋಪಾಲರ ಪ್ರಧಾನ ಸಂಪಾದಕತ್ವದಲ್ಲಿ ರಚಿಸಿದ 'ಷೇರುಪೇಟೆ ಪದಕೋಶ'ವನ್ನು ಶ್ರೀ ಎಂ.ಎಸ್. ನರಸಿಂಹಮೂರ್ತಿಯವರು ಹಾಗೂ ವಿಕ್ರಮ ಪ್ರಕಾಶನ ಪ್ರಕಟಿಸಿದ 'ಎಂಎಸ್ಸೆನ್ ನಗೆಹಾರ' ಪುಸ್ತಕವನ್ನು ಶ್ರೀ ಬೆಂ.ಶ್ರೀ.ರವೀಂದ್ರ ಅವರು ಲೋಕಾರ್ಪಣೆಗೊಳಿಸಿದರು.







ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ಸಾಹಿತಿ ಡಾ. ಪ್ರಧಾನ ಗುರುದತ್ತ ಅವರು ಮಾತನಾಡಿ, "ಸಮಾಜ ಸೇವಕನೊಬ್ಬ ನಿಸ್ವಾರ್ಥ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಆತನನ್ನು ಗೌರವಿಸಬೇಕೆಂದಾಗ ರೂ.3,67,000 ಹಣ ಸಂಗ್ರಹವಾಗಿದೆ ಎಂಬುದು ನನಗೆ ರಘುವಂಶವನ್ನು ನೆನಪಿಗೆ ತಂದಿತು. ರಘು ಮಹಾರಾಜ ಒಂದು ಯಜ್ಞವನ್ನು ಆಚರಿಸಿ ಖಜಾನೆ ಯಲ್ಲಿದ್ದ ಕೊನೆಯ ನಾಣ್ಯದವರಿಗೆ ಎಲ್ಲವನ್ನೂ ದಾನ ಮಾಡಿದ. ಆಗ ಒಬ್ಬ ಬಂದು ಗುರು ಕಾಣಿಕೆ ಸಲ್ಲಿಸಬೇಕಾಗಿದೆ ಎಂದು ಯಾಚಿಸಿದ. ಆತನನ್ನು ಬರಿಗೈಯಲ್ಲಿ ಕಳಿಸಲಾಗದೆ ದೇವೇಂದ್ರನ ಜೊತೆ ಯುದ್ಧಕ್ಕೆ ಹೋಗುವ ಸಂಕಲ್ಪ ಮಾಡಿದಾಗ ದೇವೇಂದ್ರ ಸುವರ್ಣರಾಶಿಯ ಮಳೆಗರೆದನಂತೆ! ಹೀಗೆ ರಾಜಗೋಪಾಲರನ್ನು ಸತ್ಕರಿಸಲು ತೀರ್ಮಾನಿಸಿದಾಗ ಹಣ ಸುರಿದಿದೆ. ಆಧುನಿಕ ಯುಗದಲ್ಲಿ ನಡೆದ ಪವಾಡಗಳಲ್ಲಿ ಇದೂ ಒಂದು ಎನ್ನಬಹುದು. ಇಂತಹ ಪವಾಡಗಳಾಗಬೇಕಾದರೆ ಅದಕ್ಕೆ ಕಾರಣರಾದಂತಹ ವ್ಯಕ್ತಿ ಬಹಳ ಮುಖ್ಯವಾಗಿ ಪರಿಗಣಿಸಲ್ಪಡುತ್ತಾರೆ. ಅವರನ್ನು ಜೀವನದಿ ಎಂದು ಕರೆದು ರವೀಂದ್ರ ಅವರು ಸುಂದರವಾದ ಕವನ ಬರೆದಿದ್ದಾರೆ. ನಾನು ರಾಜಗೋಪಾಲರ ಅಭಿನಂದನಾ ಗ್ರಂಥವನ್ನು ಸಂಪೂರ್ಣವಾಗಿ ಓದಿದೆ. ಅವರ ಸಾಧನೆ ಅಚ್ಚರಿ ತಂದಿತು. ಅವರ ಮಾತೃಭಾಷೆ ತೆಲುಗು. ಕನ್ನಡ ಸಾಹಿತ್ಯವನ್ನು ಪೋಷಿಸಿದವರಲ್ಲಿ ಬೇರೆ ಭಾಷಿಕರೂ ಬಹಳಷ್ಟು ಇದ್ದಾರೆ. ಅಭಿನಂದನಾ ಗ್ರಂಥದಲ್ಲಿ ಕನ್ನಡಕ್ಕೆ ಒಬ್ಬನೇ ಕೈಲಾಸಂ ಎಂಬಂತೆ ಸಮಾಜಕ್ಕೊಬ್ಬನೇ ರಾಜಗೋಪಾಲ, ಆತ ವ್ಯಕ್ತಿಯಲ್ಲ ಶಕ್ತಿ, ಕನ್ನಡದ ಕಲಿ,








ಸದ್ದಿಲ್ಲದ ಹೋರಾಟಗಾರ, ಕನ್ನಡದ ಕಟ್ಟಾಳು ಎಂಬೆಲ್ಲ ವರ್ಣನೆ ಇದೆ. ಇದರಿಂದ ಇವರು ಮಾಡಿರುವುದು ಎಂತಹ ಮಹತ್ವಪೂರ್ಣ ಸೇವೆ ಎಂದು ಕಂಡುಕೊಳ್ಳಬಹುದು. ಅದರಲ್ಲೂ ಅವರು ಬ್ಯಾಂಕಿಂಗ್ ಪ್ರಪಂಚಕ್ಕೆ ಪ್ರಬಂಧ ಕಳಿಸಲು ಪೀಡಿಸಿದ್ದರಿಂದ 'ಪ್ರಬಂಧ ಪೀಡಕ' ಎಂಬ ಬಿರುದು ಅವರಿಗೆ ಬಂದದ್ದು ಬಹುಶಃ ಅತ್ಯಂತ ಉತ್ತಮ ಪ್ರಶಸ್ತಿಯಾಗಿದೆ”.

“ನನಗೆ ಗುರು ಸಮಾನರಾದ ಪ್ರಾಚಾರ್ಯ ಎಚ್ಚೆಸ್ಕೆ ಅವರ ಬಗ್ಗೆ ಪುಸ್ತಕ ಬರೆಯೋ ಅವಕಾಶ ನನಗೆ ಸಮನ್ವಯ ಸಮಿತಿಯಿಂದ ದೊರಕಿತು. ಬೇರೆ ಕನ್ನಡ ಸಂಘಗಳು ಮಾಡದೇ ಇರುವಂತಹ ಮಹತ್ತರವಾದ ಕೆಲಸವನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘ ಮಾಡಿದೆ. ಹಲವು ಪುಸ್ತಕಗಳನ್ನು ಪ್ರಕಟಿಸಿದೆ. 'ಬ್ಯಾಂಕನ್ನಡದ ಜೀವನದಿ ಪಾ. ರಾಜಗೋಪಾಲ' ಅಭಿನಂದನಾ ಗ್ರಂಥದಲ್ಲಿ ಹಲವು ಆತ್ಮೀಯ ಲೇಖನಗಳು, ಕವಿತೆಗಳು, ಸಹೋದ್ಯೋಗಿಗಳು ಮಾಡಿದ ಸಂದರ್ಶನವಿದೆ. ಇಡೀ ಕೃತಿಯಲ್ಲಿ ಒಬ್ಬ ವ್ಯಕ್ತಿಯ ಸಾಧನೆ ಮತ್ತು ಆತನನ್ನು ಜನ ಪ್ರೀತಿಯಿಂದ ಸ್ವೀಕರಿಸಿದ ರೀತಿ ವ್ಯಕ್ತವಾಗಿದೆ” ಎಂದು. ಮಹತ್ಕಾರ್ಯಕ್ಕೆ ಸಾವಿಲ್ಲ ಎಂಬ ಸಂಸ್ಕೃತ ಶ್ಲೋಕವನ್ನು ಪ್ರಧಾನ ಗುರುದತ್ ಉದಾಹರಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀ ಎಂ.ಎಸ್. ನರಸಿಂಹಮೂರ್ತಿಯವರು ಮಾತನಾಡಿ, “1985ರಲ್ಲಿ 'ಬ್ಯಾಂಕಿಂಗ್ ನಿಘಂಟು' ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಿಡುಗಡೆಯಾದಾಗ ಪ್ರಾ. ಎಚ್ಚೆಸ್ಕೆಯವರನ್ನು ಸನ್ಮಾನ ಮಾಡಿದ್ದೆವು. ಇಂದು ಅವರ







ಶಿಷ್ಯರಾದ ರಾಜಗೋಪಾಲರನ್ನು ಸನ್ಮಾನಿಸುವಾಗಲೂ ಅಷ್ಟೇ ಸಂತೋಷವಾಗುತ್ತಿದೆ. 'ದಾರಿ ಇಲ್ಲ ಅಂತ ನಡೆಯುವುದನ್ನು ನಿಲ್ಲಿಸಬಾರದು, ನಡೆಯುತ್ತಿದ್ದರೆ ಅದೇ ದಾರಿಯಾಗುತ್ತದೆ' ಎಂದು ಎಚ್ಚೆಸ್ಕೆ ಹೇಳುತ್ತಿದ್ದರು. ಇದನ್ನು ಅನುಸರಿಸಿದ ರಾಜಗೋಪಾಲರು ಬ್ಯಾಂಕಿಂಗ್ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ಅನೇಕ ಹೊಸ ಪದಗಳನ್ನು ಟಂಕಿಸಿದ್ದಾರೆ. ಮೈಸೂರು ಬ್ಯಾಂಕಿನಲ್ಲಿ ನಾವು 'ಸಣ್ಣ ವ್ಯಾಪಾರ ಹಣಕಾಸು' ಎಂಬ ಮುನ್ನೂರು ಪುಟದ ಕೃತಿ ಅನುವಾದಿಸುವಾಗ ಅವರ ಸಹಾಯ ಪಡೆದಿದ್ದೆವು. ಅನೇಕ ಪದಗಳನ್ನು ಸೇರಿಸಿ ಪದಕೋಶವಾಗಿ ಪ್ರಕಟಿಸಿದ್ದೆವು'' ಎಂದರಲ್ಲದೆ, ವಿವಿಧ ಸ್ಥಳಗಳಲ್ಲಿ ನಡೆದ ಕಮ್ಮಟಗಳ ನೆನಪುಗಳನ್ನು ಹಂಚಿಕೊಂಡರು. ಕಮ್ಮಟಗಳಲ್ಲಿ ರಾಜಗೋಪಾಲ್ ಲುಂಗಿಧಾರಿಯಾಗಿ ಭಾಗವಹಿಸುತ್ತಿದ್ದನ್ನು ಹಾಸ್ಯಮಯವಾಗಿ ಹೇಳಿದ ಅವರು, 'ಅಹೋರಾತ್ರಿ ಲುಂಗಿಧಾರಿ' ಎಂಬ ಬಿರುದು ನೀಡಿದ್ದನ್ನು ಸ್ಮರಿಸಿದರು.


''ಇತ್ತೀಚೆಗೆ ತಾವು 75 ವರ್ಷ ಪೂರೈಸಿದ ಸಂದರ್ಭದಲ್ಲಿ, ರವೀಂದ್ರರು ಸಮನ್ವಯ ಸಮಿತಿ ವಾಟ್ಸಾಪ್ ವೇದಿಕೆಯಲ್ಲಿ ಎರಡು ದಿನಗಳ ಕಾಲ ನಗೆ ಬರಹಗಳನ್ನು ಮಾತ್ರ ಬರೆಯಲು ಸದಸ್ಯರಿಗೆ ಕರೆಯಿತ್ತರು. ಅದೇ ಸಮಯ ನನಗೆ ರಾಜ್ಯೋತ್ಸವ ಪ್ರಶಸ್ತಿಯೂ ಬಂತು. ಅನೇಕರು ವೇದಿಕೆಯಲ್ಲಿ ಹಲವು ವಿಶೇಷ ಲೇಖನಗಳನ್ನು ಬರೆದರು. ನಂತರ ಅವೆಲ್ಲವನ್ನೂ ಒಂದೆಡೆ ಸೇರಿಸಿ 'ಎಂಎಸ್ಎನ್ ನಗೆಹಾರ' ಎಂಬ ಪಿಡಿಎಫ್ ಸಂಚಿಕೆಯೊಂದನ್ನು ನನಗೆ ಅರ್ಪಿಸಿದುದು ಮರೆಯಲಾಗದ ಘಟನೆ. ನಾನೀಗ ಈ ಸಂಚಿಕೆಯ ಎಲ್ಲ ಲೇಖನಗಳನ್ನು ಮತ್ತು ಆ ಸಮಯದಲ್ಲಿ ಬಂದಿದ್ದ ಪತ್ರಿಕಾ ಬರಹಗಳನ್ನು ಸೇರಿಸಿ, 'ಎಂಎಸ್ಎನ್ ನಗೆಹಾರ' ಎಂಬ ಹೆಸರಿನಲ್ಲೇ ಪುಸ್ತಕ ರೂಪದಲ್ಲಿ ಶಾಶ್ವತವಾಗಿರಿಸುವ ಪ್ರಯತ್ನ ಮಾಡಿದ್ದೇನೆ. ಈ ಕೃತಿಯನ್ನು ವಿಕ್ರಮ ಪ್ರಕಾಶನದವರು ಪ್ರಕಟಿಸಿದ್ದಾರೆ'' ಎಂದು ಎಂಎಸ್ಸೆನ್ ಹೇಳಿದರು.

ಸನ್ಮಾನಿತರಾದ ಶ್ರೀ ಪಾ.ರಾಜಗೋಪಾಲ ಅವರು ಮಾತನಾಡಿ, ''ನನ್ನನ್ನು 'ಬ್ಯಾಂಕ್ ಕನ್ನಡದ ಜೀವನದಿ' ಎಂದಿದ್ದಾರೆ. ಜೀವನದಿ ಎಂದರೆ ಅನೇಕ ನಾಲೆ, ತೊರೆ, ಉಪನದಿಗಳು ಸೇರಿಕೊಳ್ಳಬೇಕು. ಎಲ್ಲ ಸೇರಿಕೊಂಡ ಕಾರಣ ಮೈತುಂಬಿ ಹರಿಯುತ್ತದೆ. ಅನೇಕರು ಕನ್ನಡದ ಮೇಲೆ ಅಭಿಮಾನವಿಟ್ಟು ಕೈಜೋಡಿಸಿದ್ದರಿಂದ ಕನ್ನಡದ ಕೆಲಸಗಳು ಆಗಿವೆ. ಅವು ಮುಂದುವರಿಯಬೇಕು.









ಕನ್ನಡದಲ್ಲಿ ಬ್ಯಾಂಕಿಂಗ್, ಬ್ಯಾಂಕಿಂಗ್‌ನಲ್ಲಿ ಕನ್ನಡ ಇದು ನಮ್ಮ ಧ್ಯೇಯವಾಕ್ಯ. ಸಹಕಾರಿ ಬ್ಯಾಂಕುಗಳ ವ್ಯಾಪ್ತಿ ಚಿಕ್ಕದಾಗಿರುವುದರಿಂದ ಅಲ್ಲಿ ಕನ್ನಡ ಬಳಕೆ ಸಾಧ್ಯ. ಆದರೆ ವಾಣಿಜ್ಯ ಬ್ಯಾಂಕುಗಳು ಅನೇಕ ರಾಜ್ಯಗಳಲ್ಲಿ ಕೆಲಸ ನಿರ್ವಹಿಸುತ್ತವೆ. ಅಧಿಕೃತ ಭಾಷಾ ಅಧಿನಿಯಮ 'ಸಿ' ವರ್ಗದ ಪ್ರಕಾರ ಕರ್ನಾಟಕದಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಬಳಸಬೇಕು. ಆದರೆ ಫೋರ್ಸ್ ಇಲ್ಲದೆ ಯಾವುದೂ ಎನ್ಫೋರ್ಸ್ ಆಗುವುದಿಲ್ಲ. ಹಿಂದೆ ಸುಲ್ತಾನನು ಫರ್ಮಾನು ಹೊರಡಿಸಿದ್ದರಿಂದ ಪಹಣಿ, ಜಮಾಬಂದಿ ಮೊದಲಾದ ಪದಗಳು ಬಳಕೆಗೆ ಬಂದವು. ಜಾರಿ ಮಾಡುವ ಧೈರ್ಯವಿರಬೇಕು'' ಎಂದರು.

"75 ವರ್ಷಗಳ ಹಿಂದೆ ಅಂದರೆ ಸುಮಾರು 1950ರಲ್ಲಿ ಬಿಂದುರಾವ್ ಗೋವಿಂದರಾವ್ ಕೆಂಭಾವಿ ಎಂಬುವರು ಡಿಸ್ಕೌಂಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿ ಯಾಗಿದ್ದರು. ಅವರು ತರಬೇತಿಗಾಗಿ ಲಂಡನಿನ ನ್ಯಾಷನಲ್ ವೆಸ್ಟ್ ಮಿನಿಸ್ಟರ್ ಬ್ಯಾಂಕಿಗೆ ಹೋದಾಗ ಅಲ್ಲಿ ಅನೇಕ ಬ್ಯಾಂಕಿಂಗ್ ಕೈಪಿಡಿಗಳನ್ನು ನೋಡಿ ಕನ್ನಡದಲ್ಲಿಯೂ ಅಂತಹ ಒಂದು ಕೈಪಿಡಿ ಇರಬೇಕೆಂದು 'ಬ್ಯಾಂಕ್ ವ್ಯವಸಾಯದ ಕೈಪಿಡಿ' ಪ್ರಕಟಿಸಿದರು. ಇದೇ ಮೊಟ್ಟಮೊದಲ ಕನ್ನಡದ ಬ್ಯಾಂಕಿಂಗ್ ಕೈಪಿಡಿ. ಇದು ಆಗಿನ ಕಾಲದ ಬ್ಯಾಂಕಿಂಗ್ ವ್ಯವಸ್ಥೆಯನ್ನು ಪರಿಚಯಿಸುತ್ತದೆ'' ಎಂದ ರಾಜಗೋಪಾಲ್, "1980ರಲ್ಲಿ 'ಬ್ಯಾಂಕಿಂಗ್ ಪ್ರಪಂಚ' ಆರಂಭಿಸಿದ ಮೇಲೆ ಅನೇಕರಿಗೆ ಬ್ಯಾಂಕಿಂಗ್ ವಿಷಯದಲ್ಲಿ ಬರೆಯಲು ಪ್ರೋತ್ಸಾಹ ಸಿಕ್ಕಿತು. ಎಚ್ಚೆಸ್ಕೆಯವರ ಮಾರ್ಗದರ್ಶನವೂ ದೊರೆಯಿತು.









ವಿವಿಧ ಬ್ಯಾಂಕುಗಳಲ್ಲಿ ಉದ್ಯೋಗದಲ್ಲಿದ್ದ ಸುಮಾರು 150 ಜನ ವಿವಿಧ ಲೇಖನಗಳನ್ನು ಬರೆಯುತ್ತಿದ್ದರು. ಅಷ್ಟೊಂದು ಉತ್ತೇಜನವನ್ನು ಬ್ಯಾಂಕಿಂಗ್ ಪ್ರಪಂಚ ಕೊಟ್ಟಿದೆ. ನಿಘಂಟಿನ ಕೊರತೆ ಕಾಣಿಸಿದ್ದರಿಂದ ನಾವೇ ಇಂಗ್ಲಿಷ್-ಕನ್ನಡ ಬ್ಯಾಂಕಿಂಗ್ ನಿಘಂಟು ಸೃಷ್ಟಿ ಮಾಡಿದೆವು. ಈ ಎಲ್ಲ ಕೆಲಸಗಳ ಬಗ್ಗೆ ನಾನು ಅನೇಕರಿಗೆ ತೊಂದರೆ ಕೊಟ್ಟಿದ್ದೇನೆ. ಆದರೆ ಇದನ್ನು ಯಾರೂ ಅಪಾರ್ಥ ಮಾಡಿಕೊಳ್ಳುತ್ತಿರಲಿಲ್ಲ ಬ್ಯಾಂಕಿಂಗ್ ನಿಘಂಟು ಬಂದು ಸುಮಾರು 40 ವರ್ಷ ಗಳಾದುವು. ಈ ಅವಧಿಯಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಾಕಷ್ಟು ನೀರು ಹರಿದಿದೆ. ಅನೇಕ ಹೊಸ ಶಬ್ದಗಳನ್ನು ಕನ್ನಡಕ್ಕೆ ತರಬೇಕಾಗಿದೆ. ಅದಕ್ಕೇ ಬ್ಯಾಂಕಿಂಗ್ ನಿಘಂಟಿನ ಪರಿಷ್ಕೃತ ಆವೃತ್ತಿ ಹೊರತರಲು ಸಿದ್ಧತೆ ನಡೆಸಿದ್ದೇನೆ. ಪರಿಷ್ಕರಿಸಿ ಪ್ರಕಟಿಸಿದರೆ ಉತ್ತಮ ಕೊಡುಗೆ ಆಗುತ್ತದೆ.

"ಕನ್ನಡ ಜೀವಂತಿಕೆ ಕಳೆದುಕೊಳ್ಳುತ್ತಿರುವ ಭಾಷೆ ಎಂದು ಹೇಳಲಾಗುತ್ತಿದೆ. ಕನ್ನಡವನ್ನು ಜೀವಂತವಾಗಿ ಉಳಿಸುವುದು ಅಗತ್ಯ. ಇಂದು ಕಥೆ ಕಾದಂಬರಿಗಳನ್ನೇ ಓದುವವರಿಲ್ಲ, ಇನ್ನು ಬ್ಯಾಂಕಿಂಗ್ ಸಾಹಿತ್ಯ ಓದುವವರು ಯಾರು ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ ಕನ್ನಡದಲ್ಲಿ ಎಲ್ಲವೂ ಲಭ್ಯವಿರಬೇಕು. ಅದಕ್ಕಾಗಿ ಪ್ರಯತ್ನ ಸದಾ ನಡೆಯುತ್ತಿರಬೇಕು. ಬ್ಯಾಂಕಿಂಗ್‌ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆಯೂ ಬರೆಯಬಹುದು. ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಪ್ರಶಸ್ತಿಗಳಿವೆ ಮಾನವಿಕಗಳಿಗೆ ಪ್ರಶಸ್ತಿಗಳು ಕಡಿಮೆ. 2025ರೊಳಗೆ ಬ್ಯಾಂಕಿಂಗ್ ಕೃತಿಗಳಿಗೂ ಪ್ರಶಸ್ತಿ ಕೊಡುವ ಪರಿಪಾಠ ಬರುವಂತಾಗಬೇಕು" ಎಂದು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಬಳಕೆಗೆ ಸಂಬಂಧಿಸಿದಂತೆ ಅಗತ್ಯವಾಗಿ ಆಗಲೇಬೇಕಾದ ಕೆಲಸಗಳನ್ನು ವಿವರಿಸಿದ ರಾಜಗೋಪಾಲ್, "ಕನ್ನಡದ ಕೆಲಸ ಮಾಡಲು ನನಗೆ ಇನ್ನಷ್ಟು ಆಯಸ್ಸು ಕೊಡು ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ" ಎಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿದರು.

ಕೊನೆಯಲ್ಲಿ ಶ್ರೀ ರವಿ ಬಾಳಿಹಳ್ಳಿಯವರು ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು. ಸಂಪೂರ್ಣ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಶುಭಶ್ರೀಪ್ರಸಾದ್ ಅವರು ಸೊಗಸಾಗಿ ನಿರ್ವಹಿಸಿದರು.

(ಇಡೀ ಕಾರ್ಯಕ್ರಮದ ಚಿತ್ರಣವು ವೇದಿಕೆಯ ಯುಟ್ಯೂಬ್ ಮತ್ತು ಜಾಲತಾಣದಲ್ಲಿ ಲಭ್ಯವಿದೆ)

***

ಪಾ. ರಾಜಗೋಪಾಲರ ಜೀವನ ಸಾಧನೆ ಬಿಂಬಿಸುವ
'ಭಲದಂಕಮಲ್ಲ ಪಾ.ರಾ. ನಾಟಕದ ದೃಶ್ಯಗಳು (ನಿರ್ದೇಶನ: ಧೀರೇಂದ್ರ)







ಪಾ. ರಾಜಗೋಪಾಲರ ಜೀವನ ಸಾಧನೆ ಬಿಂಬಿಸುವ
'ಛಲದಂಕಮಲ್ಲ ಪಾ.ರಾ. ನಾಟಕದ ದೃಶ್ಯಗಳು (ನಿರ್ದೇಶನ: ಧೀರೇಂದ್ರ)







ಶ್ರೀ ಪಾ.ರಾಜಗೋಪಾಲರ ಬಗ್ಗೆ ಪತ್ರಿಕಾ ಲೇಖನಗಳು

02.03.2025ರ 'ವಿಶ್ವವಾಣಿ' – ಲೇಖಕರು: ಶ್ರೀ ಜಿ.ಎನ್. ನರಸಿಂಹಮೂರ್ತಿ

ವಿಶ್ವವಾಣಿ

ಕಳೆದ ಐದು ದಶಕಗಳಿಂದ, ಕನ್ನಡದ ಕುರಿತು ಇವರು ಚಿಂತಿಸುತ್ತಿದ್ದಾರೆ. ತಾವು ಕೆಲಸ ಮಾಡುತ್ತಿದ್ದ ಬ್ಯಾಂಕಿನಲ್ಲಿದ್ದುಕೊಂಡು, ಬ್ಯಾಂಕಿಂಗ್ ಕನ್ನಡದ ಕುರಿತು ಹಲವು ಅಪರೂಪದ ಕೆಲಸಗಳನ್ನು ಮಾಡಿದ್ದಾರೆ. ಬ್ಯಾಂಕಿಂಗ್ ನಿಘಂಟುವಿನಂತಹ ಪುಸ್ತಕಗಳನ್ನು ಸಿದ್ಧಪಡಿಸುವಲ್ಲಿ ತೊಡಗಿಕೊಂಡಿದ್ದಾರೆ. ಬ್ಯಾಂಕಿನಲ್ಲಿ ಕ್ರಮೇಣ ಕನ್ನಡ ಮರೆಯಾಗುತ್ತಿರುವ ಇಂದಿನ ಕಾಲಮಾನದಲ್ಲಿ, ಈ ಹಿರಿಯರು ತಮ್ಮ ಅಪರೂಪದ ಕೆಲಸದಿಂದಾಗಿ ಎದ್ದುಕಾಣಿಸುತ್ತಿದ್ದಾರೆ.

» ಜಿ.ಎನ್. ನರಸಿಂಹಮೂರ್ತಿ


ಬ್ಯಾಂಕಿಂಗ್ ಕನ್ನಡಕ್ಕಾಗಿ ಹೋರಾಡುತ್ತಿರುವವರು !



ನಮ್ಮ ದೇಶದ ಬ್ಯಾಂಕುಗಳು 1960ರ ದಶಕದಲ್ಲಿ ಸಾರ್ವಜನಿಕರಿಗೆ ಅಷ್ಟೇನು ಪರಿಚಿತವಾಗಿರಲಿಲ್ಲ. 1969ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಬ್ಯಾಂಕುಗಳು ಸಾರ್ವಜನಿಕರಿಗೆ ಮುಕ್ತವಾಗಿ ತೆರೆದುಕೊಂಡವು. ಪ್ರಾದೇಶಿಕ ಬ್ಯಾಂಕುಗಳಲ್ಲಿ ಗ್ರಾಹಕರ ಜೊತೆಗೆ ನಡೆಯುವ ವ್ಯವಹಾರಗಳು ಸಹಜವಾಗಿ ಆಯಾ ಪ್ರದೇಶದ ಭಾಷೆಯಲ್ಲಿಯೇ ನಡೆಯಬೇಕಿತ್ತು. ಆದರೆ ಒಂದು ದಶಕದೊಳಗೆ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಭಾಷೆಯನ್ನು ಹಿಂದಿ ಮತ್ತು ಇಂಗ್ಲಿಷಿಗೆ ಬದಲಾಯಿಸಿಕೊಂಡುಬಿಟ್ಟವು. ಬ್ಯಾಂಕುಗಳು ಹಳ್ಳಿ ಹಳ್ಳಿಗಳನ್ನು ಪ್ರವೇಶಿಸಿದವು; ಆದರೆ ಆ ಸಮಯದಲ್ಲಿ ಕನ್ನಡಕ್ಕೆ ಯಾವ ಆದ್ಯತೆಯೂ ಇರಲಿಲ್ಲ. ಪಾ. ರಾಜಗೋಪಾಲ ಆ ಆದ್ಯತೆಯನ್ನು ತಂದುಕೊಡಲು ಶಕ್ತಿಮೀರಿ ಪ್ರಯತ್ನಿಸಿದರು.

ಭಾರತೀಯ ಸ್ಟೇಟ್ ಬ್ಯಾಂಕಿನ ನಗರ ಶಾಖೆಯಲ್ಲಿ ಸೇರಿಕೊಂಡ ರಾಜಗೋಪಾಲ್ ಅವರದು ಸ್ವಲ್ಪ ಎತ್ತರವಾದ ಶರೀರ, ತೆಳುವಾದ ಮೈಕಟ್ಟು, ಅಗಲವಾದ ಹೊಳೆಯುವ ಕಣ್ಣುಗಳು. ನಿರ್ಭಿಡೆಯ ಮಾತು. ಕನ್ನಡಕ್ಕೆ ಸಂಬಂಧಿಸಿದಂತೆ ನಿಷ್ಠುರವಾದ ನಿಲವು, ಯಾರ ಅಂಕೆಗೂ ಒಳಗಾಗದ ಸ್ವಭಾವ, ಅಷ್ಟೇ ಪ್ರಾಮಾಣಿಕತೆ. ರಾಜಗೋಪಾಲ್ ಅವರ ನೇತೃತ್ವದಲ್ಲಿ 1972ರ ನವೆಂಬರಿನಲ್ಲಿ ಶಾಖೆಯಲ್ಲಿ ಒಂದು ಕನ್ನಡ ಸಂಘ ಸ್ಥಾಪನೆಯಾಯಿತು. 1973ರಲ್ಲಿ ಬ್ಯಾಂಕಿಗೆ ಸೇರ್ಪಡೆಗೊಂಡವರಲ್ಲಿ ಕನ್ನಡದವರೇ ಹೆಚ್ಚಾಗಿದ್ದರು. ಇವರೆಲ್ಲ ಜತೆಯಾಗಿ ದೊರಕಿದ್ದು ಕನ್ನಡದ ಕೆಲಸಗಳನ್ನು ಮುಂದುವರಿಸಲು ರಾಜಗೋಪಾಲ್ ಅವರಿಗೆ ಹೊಸ ಹುರುಪನ್ನು ನೀಡಿತು. 1973 ನವೆಂಬರ್ ತಿಂಗಳಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ನಗರ ಶಾಖೆಯ ಕನ್ನಡ ಸಂಘ ಮೊಟ್ಟ ಮೊದಲ ರಾಜ್ಯೋತ್ಸವವನ್ನು ಆಚರಿಸಿತು. ಅತಿಥಿಯಾಗಿ ಕನ್ನಡದ ಖ್ಯಾತ ಕವಿ ಹಾಗೂ ಸಾಹಿತಿ ಪಿ.ಟಿ. ಅವರು ಬಂದಿದ್ದರು.

ಕ್ರಮೇಣ ಪಾ.ರಾಜಗೋಪಾಲ್, ಅನೇಕರನ್ನು ಕನ್ನಡ ಸಂಘದ ಕೆಲಸಗಳತ್ತ ಸೆಳೆದುಕೊಂಡರು. ಅವರ ಮಾತು ಅಧಿಕಾರಯುತವಾಗಿರುತ್ತಿತ್ತು. ಆದರೆ ಅದರಲ್ಲಿ ಅಹಂಕಾರ ಇರಲಿಲ್ಲ, ಬದಲಿಗೆ ಕನ್ನಡದ ಮೇಲಣ ಕಳಕಳಿ ಇತ್ತು. ಅದು ಅವರು ಹೇಳಿದ್ದನ್ನು ಎಲ್ಲರೂ ಸುಮ್ಮನೆ ಪಾಲಿಸುವ ಹಾಗೆ ಮಾಡುತ್ತಿತ್ತು.



ಬ್ಯಾಂಕಿನ ಆಡಳಿತ ವರ್ಗ ಒಂದು ಕೋಣೆಯನ್ನು ಕನ್ನಡ ಸಂಘದ ಚಟುವಟಿಕೆಗಳಿಗಾಗಿ ಬಿಟ್ಟುಕೊಟ್ಟಿತು. ಆ ಕೊಠಡಿಯಲ್ಲಿ ಒಂದು ಸಣ್ಣ ಕನ್ನಡದ ಗ್ರಂಥಾಲಯ ಪ್ರಾರಂಭವಾಯಿತು. ರಾಜಗೋಪಾಲರು ಗೆಳೆಯರೊಡನೆ ಅರಳೇಪೇಟೆಯಲ್ಲಿದ್ದ ಪುಸ್ತಕದ ಮಳಿಗೆಯಿಂದ ಕನ್ನಡದ ಕೃತಿಗಳನ್ನು ಖರೀದಿಸಿ ಗ್ರಂಥಾಲಯಕ್ಕೆ ಸೇರಿಸುತ್ತಿದ್ದರು. ಈ ವೇಳೆಗಾಗಲೇ ಕನ್ನಡದ ಉತ್ಸಾಹಿಗಳಾದ ಬೆಂ ಶ್ರೀ ರವೀಂದ್ರ, ಕೆ ಎನ್ ಜಯರಾಮ್, ಮೇ.ಕೃ. ಅನಂತಸ್ವಾಮಿ ಮುಂತಾದವರು ಬ್ಯಾಂಕಿಗೆ ಸೇರಿದ್ದರು. 1973ರ ರಾಜ್ಯೋತ್ಸವದ ವೇಳೆಗೆ 'ಮಂದಾರ' ಎಂಬ ಸಂಚಿಕೆಯನ್ನು ಕೈಬರಹದಲ್ಲಿ, ನಂತರ ಮುದ್ರಿತ ರೂಪದಲ್ಲಿ ಹೊರತರಲಾಯಿತು.

ಪಾ. ರಾಜಗೋಪಾಲರು ಕನ್ನಡದ ಕುರಿತು ಬೇರೆ ಚಿಂತನೆ ಮಾಡತೊಡಗಿದರು. ಬ್ಯಾಂಕಿನ ಬೇರೆ ಶಾಖೆಗಳಲ್ಲಿ ಕನ್ನಡ ಸಂಘಗಳನ್ನು ಸ್ಥಾಪಿಸುವುದು, ಬೇರೆ ಬ್ಯಾಂಕುಗಳಲ್ಲಿ ಕನ್ನಡ ಸಂಘಗಳನ್ನು ಸ್ಥಾಪಿಸಲು ಅಲ್ಲಿಯ ಸಿಬ್ಬಂದಿಗಳನ್ನು ಪ್ರೇರಿಸುವುದು ಮುಂತಾದವುಗಳ ಕಡೆ ಅವರ ಮನಸ್ಸು ಹೊರಳಿತು. 'ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು' ಎಂಬ ಸಂಸ್ಥೆಯ ಕಲ್ಪನೆಯನ್ನು ರಾಜಗೋಪಾಲ್ ಅವರು ಎಲ್ಲರ ಮುಂದಿಟ್ಟು ಅನುಮೋದನೆ ಪಡೆದುಕೊಂಡರು. ಪ್ರಾಚಾರ್ಯ ಎಚ್ಚೆಸ್ಕೆಯವರನ್ನು ಸಂಪರ್ಕಿಸಿ ಬ್ಯಾಂಕಿಂಗಿನಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸಲು ಅನುವಾಗುವಂತೆ ಲೇಖನಗಳನ್ನು ಬರೆಸಿ ಒಂದು ಒಳ್ಳೆಯ ಗುಣಮಟ್ಟದ ಪತ್ರಿಕೆಯನ್ನು ತರಬೇಕೆಂಬ ತನ್ನ ಆಸೆಯನ್ನು ಎಚ್ಚೆಸ್ಕೆ ಅವರಲ್ಲಿ ತೋಡಿಕೊಂಡರು. ಅವರು ಅದಕ್ಕೆ ಒಪ್ಪಿಕೊಂಡರು. ಸಮನ್ವಯ ಸಮಿತಿಯ ವತಿಯಿಂದ 'ಬ್ಯಾಂಕಿಂಗ್ ಪ್ರಪಂಚ' ಎಂಬ ತ್ರೈಮಾಸಿಕ ಪತ್ರಿಕೆಯ ಪ್ರಕಟಣೆ ಪ್ರಾರಂಭವಾಯಿತು.

ಎಚ್ಚೆಸ್ಕೆ ಅವರು ರಾಜಗೋಪಾಲರಿಗೆ ಒಮ್ಮೆ 'ಬ್ಯಾಂಕಿಂಗ್ ಪ್ರಪಂಚಕ್ಕೆ ಬರುತ್ತಿರುವ ಲೇಖನಗಳ ಗುಣಮಟ್ಟ ಅಷ್ಟೇನೂ ಆಶಾದಾಯಕವಾಗಿಲ್ಲ. ಜೊತೆಯಲ್ಲಿ ಅವು ಸಮಯಕ್ಕೆ ಸರಿಯಾಗಿ ದೊರಕುತ್ತಿಲ್ಲ. ನೀವುಗಳೇ ಲೇಖನಗಳನ್ನು ಬರೆದು ಕೊಡಬೇಕು' ಎಂದರು.

ಅದಕ್ಕೆ ರಾಜಗೋಪಾಲ್ 'ನಮ್ಮಲ್ಲಿ ಅನೇಕ ಬರಹಗಾರರಿದ್ದಾರೆ. ಅವರಿಗೆ ಬ್ಯಾಂಕಿಂಗಿನ ಕುರಿತು ಬರೆಯಲು ಸಾಧ್ಯವಾಗುವುದೋ ಇಲ್ಲವೋ' ಎಂದು ಹೇಳಿದರು. ಅವರು 'ಕಮ್ಮಟಗಳನ್ನು ನಡೆಸಿ ಅವರಿಗೆ ಆ ಶಕ್ತಿಯನ್ನು ತುಂಬೋಣ' ಎಂದರು. ಅನಂತರ 'ಬ್ಯಾಂಕಿಂಗ್ ಕಮ್ಮಟ'ಗಳು ಪ್ರಾರಂಭವಾದವು. ಒಂದು ದಿನದ ಕಮ್ಮಟ; ಇಲ್ಲಿ ಕನ್ನಡದಲ್ಲೇ ಬ್ಯಾಂಕಿಂಗ್ ಚಿಂತನೆ; ಎಚ್ಚೆಸ್ಕೆ ಅವರ ನಾಯಕತ್ವ. ಬೆಳಗ್ಗೆ ಬ್ಯಾಂಕಿಂಗಿನ ವಿಷಯಗಳ ಕುರಿತ ಕನ್ನಡ ಪ್ರಬಂಧಗಳ ಮಂಡನೆ ಮಧ್ಯಾಹ್ನ ಬ್ಯಾಂಕಿಂಗ್ ಕುರಿತ ಒಂದು ಒಳ್ಳೆಯ ಇಂಗ್ಲಿಷ್ ಲೇಖನದ ಅನುವಾದ ಎಂಬ ರೀತಿಯಲ್ಲಿ ಕಮ್ಮಟದ ಸ್ವರೂಪ ನಿಷ್ಕರ್ಷೆಯಾಯಿತು. ಕಮ್ಮಟದಲ್ಲಿ ಕನ್ನಡದ ಪದಗಳು ಟಂಕಿಸಲ್ಪಟ್ಟವು; ಬ್ಯಾಂಕಿಂಗ್ ಮತ್ತು ಆರ್ಥಿಕ ವಿಷಯಗಳ ಕುರಿತು ಲೇಖನಗಳು ತಯಾರಾದವು. ಸುಮಾರು 20 ವರ್ಷ 'ಬ್ಯಾಂಕಿಂಗ್ ಪ್ರಪಂಚ'ದ ಸಂಚಿಕೆಗಳು ನಿಯತವಾಗಿ ಪ್ರಕಟವಾದವು.

'ಬ್ಯಾಂಕಿಂಗ್ ಪ್ರಪಂಚ' ಪತ್ರಿಕೆಯಲ್ಲಿ ಬ್ಯಾಂಕಿಂಗಿನ ಕುರಿತ ಕೆಲವು ಇಂಗ್ಲಿಷ್ - ಕನ್ನಡ ಶಬ್ದಾರ್ಥಗಳು ಪ್ರಕಟವಾಗುತ್ತಿದ್ದವು. ರಾಜಗೋಪಾಲ್ ಅವರು ಇದನ್ನು ಸಮಗ್ರವಾಗಿ ಒಂದು ನಿಘಂಟಿನ ರೂಪದಲ್ಲಿ ಹೊರತರಬೇಕೆಂಬ ಸಲಹೆಯನ್ನು ಮುಂದಿಟ್ಟು, ಸ್ನೇಹಿತರ ಜತೆಗೂಡಿ ನಿಘಂಟಿನ ಕರಡನ್ನು ಸಿದ್ಧಪಡಿಸಿದರು. ಎಚ್ಚೆಸ್ಕೆಯವರು ಕರಡನ್ನು ತಿದ್ದಿದರು. ಅದು 'ಬ್ಯಾಂಕಿಂಗ್ ನಿಘಂಟು' ಎಂಬ ಹೆಸರಿನಲ್ಲಿ 1982ರಲ್ಲಿ ಬಿಡುಗಡೆಯಾಯಿತು. ಈ ರೀತಿಯ ಕನ್ನಡದ ಮೊತ್ತಮೊದಲ ನಿಘಂಟು ಅದು.

ಎಚ್ಚೆಸ್ಕೆಯವರ ಸಲಹೆ ಮತ್ತು ರಾಜಗೋಪಾಲ್ ಅವರ ಚಿಂತನೆಯಂತೆ ಬ್ಯಾಂಕಿಂಗಿನ ಕುರಿತು ಕನ್ನಡದಲ್ಲಿ ಸಂಶೋಧನೆ ನಡೆಸಲು ಮತ್ತು ಅಂತಹ ಕೃತಿಗಳ ಪ್ರಕಟಣೆಗಾಗಿ ಕನ್ನಡ ಬ್ಯಾಂಕಿಂಗ್ ಪ್ರತಿಷ್ಠಾನ ಎಂಬ ಸಂಸ್ಥೆ ರೂಪುಗೊಂಡಿತು. ಹಲವಾರು ಮೌಲಿಕ ಕೃತಿಗಳು ಕನ್ನಡ ಬ್ಯಾಂಕಿಂಗ್ ಪ್ರತಿಷ್ಠಾನದಿಂದ ಬಿಡುಗಡೆಯಾದವು. ಅದು ಹಾಗೆಯೇ ಮುಂದುವರೆದು ಪ್ರತಿಷ್ಠಾನ ಇಡೀ ನಾಡಿಗೆ ಒಂದು ಮಾದರಿ ಸಂಶೋಧನ ಸಂಸ್ಥೆಯಾಗಬೇಕು ಎನ್ನುವುದು ರಾಜಗೋಪಾಲ್ ಅವರ ಆಶಯವಾಗಿತ್ತು. ಆದರೆ ಅದು ಹಾಗಾಗದೆ ಅದರ ಚಟುವಟಿಕೆಗಳು ಕ್ರಮೇಣ ಸ್ಥಗಿತವಾದವು. ಆದರೆ ರಾಜಗೋಪಾಲ್ ಅವರ ಮನಸ್ಸು ಇಂದಿಗೂ ಇನ್ನೂ ಅಷ್ಟೇ ಉತ್ಸಾಹದಿಂದಿದೆ. ಅವರ ಹಾಗೆ ಬ್ಯಾಂಕಿಂಗು ಮತ್ತು ಕನ್ನಡಕ್ಕೆ ಇಡೀ ಬದುಕನ್ನು ಮೀಸಲಿಟ್ಟವರು ಮತ್ತೊಬ್ಬರಿಲ್ಲ.

ನಿವೃತ್ತಿಯ ಅನಂತರದಲ್ಲಿಯೂ ರಾಜಗೋಪಾಲ್ ಅವರಿಗೆ ಬ್ಯಾಂಕಿಂಗ್ ಸಾಹಿತ್ಯ ನಿರ್ಮಾಣವೇ ಮುಖ್ಯವೆನಿಸಿ 'ಪರಸ್ಪರ ನಿಧಿ ನಿಘಂಟು' ಎಂಬ ಕೃತಿಯನ್ನು ಹೊರತಂದರು. ಇದು ಮ್ಯೂಚುವಲ್‌ಫಂಡ್ ಕುರಿತಾದದ್ದು. ಈಗ 'ಷೇರುಪೇಟೆ ಶಬ್ದಕೋಶ'ವನ್ನು ಸಿದ್ಧಪಡಿಸಿದ್ದಾರೆ. ಈ ಪುಸ್ತಕವು 02-03-2025ರಂದು ಬಿಡುಗಡೆಯಾಗುತ್ತಿದೆ. ಇದೇ ದಿನ, ಕನ್ನಡದ ಸಮಾನಾಸಕ್ತ ಗೆಳೆಯರು ಪಾ.ರಾಜಗೋಪಾಲ ಅವರನ್ನು ಸನ್ಮಾನಿಸುತ್ತಿದ್ದಾರೆ.

ಪಾ. ರಾಜಗೋಪಾಲ ಅವರ 'ಸಮಗ್ರ ಬ್ಯಾಂಕಿಂಗ್ ನಿಘಂಟು'ನ ಕನಸೇನೂ ಕಣ್ಣ ಮುಂದಿನಿಂದ ಮರೆಯಾಗಿಲ್ಲ, ಅವರಿಗೆ ಇದರಲ್ಲಿ ಎಲ್ಲ ಯಶಸ್ಸು ಸಿಗಲಿ ಎಂದು ನಾವೆಲ್ಲ ಹಾರೈಸಬೇಕಾಗಿದೆ. ರಾಜಗೋಪಾಲರ ಕೆಲಸಗಳನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ತರುಣ ಪೀಳಿಗೆ ಇಂದಿನ ತುರ್ತು ಅಗತ್ಯವಾಗಿದೆ. ಆದರೆ, ಅಂತಹ ತರುಣ ಪೀಳಿಗೆಯನ್ನು ಎಲ್ಲಿಂದ ತರುವುದು, ಹೇಗೆ ಸಿದ್ಧಪಡಿಸುವುದು ಎನ್ನುವುದೇ ಪ್ರಶ್ನೆಯಾಗಿದೆ - ಅನೇಕ ಕನ್ನಡದ ಸಮಸ್ಯೆಗಳಿಗಿದ್ದ ಹಾಗೆ!

02.03.2025ರ 'ವಿಜಯ ಕರ್ನಾಟಕ ' – ಲೇಖಕರು: ಡಾ. ಜೆ.ಎನ್. ಜಗನ್ನಾಥ್


ಸಮನ್ವಯ ಸಮಿತಿ–ಎಚ್ಚೆಸ್ಕೆ: ಬ್ಯಾಂಕಿಂಗ್ ಜತೆ ಕನ್ನಡ ಬೆಸೆದ ಶಕ್ತಿ–ವ್ಯಕ್ತಿಗಳ ಸಂಸ್ಮರಣೆ ಇಂದು

ಬ್ಯಾಂಕಿಂಗ್‌ನಲ್ಲಿ ಅರಳಿದ ಕನ್ನಡ ಪ್ರಪಂಚ


■ ಡಾ ಜೆ.ಎನ್. ಜಗನ್ನಾಥ್

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಬ್ಯಾಂಕಿಂಗ್ ವಹಿವಾಟು ಕೇವಲ ಆಂಗ್ಲಭಾಷೆಯಲ್ಲಿ ಚಾಲ್ತಿಯಲ್ಲಿತ್ತು. 1955ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರಾಷ್ಟ್ರೀಕೃತವಾಯಿತು. 1958ರಲ್ಲಿ ಕೆಲವು ಖಾಸಗಿ ಬ್ಯಾಂಕುಗಳನ್ನು, 1969 ಮತ್ತು 1980ರಲ್ಲಿ ಪ್ರಮುಖ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು. ಜನಸಾಮಾನ್ಯನಿಗೆ ಬ್ಯಾಂಕಿಂಗ್ ಸೌಲಭ್ಯ ದೊರೆಯುವಂತಾಯಿತು. ಸಂವಿಧಾನದ ಆಶಯದಂತೆ ಎಲ್ಲ ಗ್ರಾಹಕರಿಗೂ ತಮ್ಮ ಭಾಷೆಯನ್ನು ಉಪಯೋಗಿಸುವ ಮತ್ತು ಸಮಾನತೆಗೆ ಅವಕಾಶ ಒದಗಿಸುವ ಬ್ಯಾಂಕಿಂಗ್ ವ್ಯವಸ್ಥೆ ನಿರ್ಮಾಣವಾಗ ಬೇಕಾಯಿತು. ಕನ್ನಡಿಗರಿಗೆ ಕನ್ನಡದಲ್ಲೇ ಬ್ಯಾಂಕಿಂಗ್ ಸೇವೆ ಒದಗಿಸುವ ಪ್ರಯತ್ನಗಳು ಆರಂಭವಾದವು. ಆ ಸಂದರ್ಭದಲ್ಲಿ ಬ್ಯಾಂಕಿನಲ್ಲಿ ವ್ಯವಹರಿಸಲು ಕನ್ನಡದಲ್ಲಿ ಪಾರಿಭಾಷಿಕ ಪದಗಳ ಸೃಷ್ಟಿ ಅನಿವಾರ್ಯವಾಯಿತು. ಆ ಹೊತ್ತಿನಲ್ಲಿ 'ಬ್ಯಾಂಕಿಂಗ್ ಪ್ರಪಂಚ' ತ್ರೈಮಾಸಿಕದ ಕೊಡುಗೆ ದೊಡ್ಡದು.

ಕನ್ನಡದಲ್ಲಿ ಬ್ಯಾಂಕಿಂಗ್ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಒಳಗೊಂಡು ಪ್ರಕಟವಾಗುತ್ತಿದ್ದ ಏಕೈಕ ನಿಯತಕಾಲಿಕ ಎಂಬ ಹೆಗ್ಗಳಿಕೆಯನ್ನು 'ಬ್ಯಾಂಕಿಂಗ್ ಪ್ರಪಂಚ' ಪಡೆಯಿತು. ಬ್ಯಾಂಕಿಂಗ್ ವಲಯದಲ್ಲಿ ಸೂಕ್ತ ಪಾರಿಭಾಷಿಕ ಪದಪ್ರಯೋಗ, ವಿಚಾರಧಾರೆ, ಲೇಖನಗಳು, ಚಿಂತನೆಗಳನ್ನು ಕನ್ನಡದಲ್ಲಿ ಉಳಿಸಲು, ಬೆಳೆಸಲು, ಒದಗಿಸಲು ಈ ತ್ರೈಮಾಸಿಕ ವೇದಿಕೆಯಾಯಿತು. 1980ರಿಂದ 2003ರವರೆಗೆ ತ್ರೈಮಾಸಿಕವಾಗಿ ಪ್ರಕಟವಾಗುತ್ತಿದ್ದ 'ಬ್ಯಾಂಕಿಂಗ್ ಪ್ರಪಂಚ'ದ ಪ್ರಕಾಶಕರು 'ಸಮನ್ವಯ ಸಮಿತಿ' (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು). ಇದನ್ನು ಮುನ್ನಡೆಸಿದ ಕೀರ್ತಿ 'ಎಚ್ಚೆಸ್ಕೆ' ಎಂದೇ ಪ್ರಸಿದ್ಧರಾದ ಆರ್ಥಿಕ/ವಾಣಿಜ್ಯ ಅಂಕಣಕಾರರಾಗಿದ್ದ ಡಾ.ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರಿಗೆ ಸಲ್ಲುತ್ತದೆ.



ಎಚ್ಚೆಸ್ಕೆ



ಪಾ ರಾಜಗೋಪಾಲ

'ಸಮನ್ವಯ ಸಮಿತಿ' ಫಲಶ್ರುತಿಗಳು

- 1983ರ ಆ.14ರಂದು ಭಾರತೀಯ ಸ್ಟೇಟ್ ಬ್ಯಾಂಕಿನ ಸ್ಥಳೀಯ ಪ್ರಧಾನ ಕಚೇರಿ ಉದ್ಘಾಟನೆ
- 1983ರ ಆಗಸ್ಟ್‌ನಲ್ಲಿ ಸ್ಟೇಟ್ ಬ್ಯಾಂಕ್ ಸಮೂಹದ ಬ್ಯಾಂಕುಗಳ ನೇಮಕಾತಿ ಪ್ರಕ್ರಿಯೆ ಬೆಂಗಳೂರಿನಲ್ಲಿಯೂ ಪ್ರಾರಂಭ

ಹಣ, ಬ್ಯಾಂಕಿಂಗ್ ಮತ್ತು ತತ್ಸಂಬಂಧಿ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಆಲೋಚಿಸಬಲ್ಲ, ಬರೆಯಬಲ್ಲ, ಮಾತನಾಡಬಲ್ಲ ತರುಣರ ತಂಡವನ್ನು ನಿರ್ಮಿಸಬೇಕೆಂಬ ಆಶಯದಿಂದ ಬ್ಯಾಂಕಿಂಗ್ ಕಮ್ಮಟಗಳನ್ನು 'ಸಮನ್ವಯ ಸಮಿತಿ' ಆರಂಭಿಸಿತು. 1996ವರೆಗೆ ಒಟ್ಟು 27 ಕಮ್ಮಟಗಳು ನಡೆದಿವೆ. ಭಾರತೀಯ ಸ್ಟೇಟ್ ಬ್ಯಾಂಕ್, ಮೈಸೂರು ಬ್ಯಾಂಕ್, ಕೆನರಾ ಬ್ಯಾಂಕ್, ರಿಸರ್ವ್ ಬ್ಯಾಂಕ್ ಹಾಗೂ ಇತರ ಬ್ಯಾಂಕ್ ಸಿಬ್ಬಂದಿ ಭಾಗವಹಿಸುತ್ತಿದ್ದರು.

ಬ್ಯಾಂಕಿಂಗ್ ಕಮ್ಮಟ ಅನ್ನುವುದು ಸಿಬ್ಬಂದಿಯನ್ನು ಗ್ರಾಹಕಸ್ನೇಹಿಯಾಗಿ, ಕನ್ನಡಪರವಾಗಿ ರೂಪಾಂತರಿಸಿದ ನಿಜವಾದ ಕುಲುಮೆಯೇ ಆಗಿತ್ತು. 1985ರಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಮಾನವಿಕ ವಿಭಾಗದಲ್ಲಿ ಪ್ರಕಟವಾದ ಎರಡು ಕೃತಿಗಳಲ್ಲಿ ಮೊದಲ ಮಹತ್ವದ ಕೃತಿ 'ಬ್ಯಾಂಕಿಂಗ್ ನಿಘಂಟು' ಎಂದು ಗುರುತಿಸಲಾಗಿತ್ತು. ಪ್ರಾಚಾರ್ಯರು ಮತ್ತು 8 ಸದಸ್ಯರು 'ಆಕ್ಸ್‌ಫರ್ಡ್ ಡಿಕ್ಷನರಿ ಆಫ್ ಬ್ಯಾಂಕಿಂಗ್ ಅಂಡ್ ಫೈನಾನ್ಸ್' ಅನ್ನು ಮಾದರಿಯಾಗಿ ಸ್ವೀಕರಿಸಿ, ಕನ್ನಡದ ಜಾಯಮಾನಕ್ಕೆ ತಕ್ಕನಾಗಿ ನಿಘಂಟನ್ನು ರೂಪಿಸಲಾಯಿತು.

ಕನ್ನಡದಲ್ಲಿ ಬ್ಯಾಂಕಿಂಗ್ ಬಳಕೆಗೆ ಪೂರಕವಾಗಿ ಬ್ಯಾಂಕಿಂಗ್ ವಿಚಾರ ಸಂಕಿರಣಗಳನ್ನು ರಾಜ್ಯದೆಲ್ಲೆಡೆ ನಡೆಸಲಾಯಿತು. ಬ್ಯಾಂಕಿಂಗ್ ವಿಚಾರವಾಗಿ ಸಂಪೂರ್ಣ ಮಾಹಿತಿಯುಳ್ಳ ಪುಸ್ತಕಗಳ ಪ್ರಕಟಣೆಯ ಅವಶ್ಯಕತೆ ಕಂಡು ಬಂದಾಗ ಬ್ಯಾಂಕಿಂಗ್ ಪ್ರತಿಷ್ಠಾನ ಸ್ಥಾಪಿತವಾಯಿತು. ಡಾ. ನವೀನ ಚಂದ್ರ ಕೆ ತಿಂಗಳಾಯ ಅವರ 'ಕರ್ನಾಟಕದ ಬ್ಯಾಂಕುಗಳು' ಎಂಬ ಪುಸ್ತಕ ಪ್ರಕಟವಾಯಿತು. ಎಚ್ಚೆಸ್ಕೆಯ 'ಬ್ಯಾಂಕಿಂಗ್ ಹೆಜ್ಜೆ ಗುರುತುಗಳು', 'ಬ್ಯಾಂಕ್ ಮತ್ತು ಭಾಷೆ' ಹಾಗೂ ಡಾ. ಮಲ್ಲಿಕಾರ್ಜುನ ವಗ್ಗ ಅವರ 'ಕರ್ನಾಟಕದಲ್ಲಿ ಸಹಕಾರಿ ಬ್ಯಾಂಕುಗಳು' ಮತ್ತು ಬಿ.ಎಸ್. ಚಂದ್ರಶೇಖರ್‌ರವರ 'ಭಾರತೀಯ ಬ್ಯಾಂಕಿಂಗ್- ಕೆಲವು ಚಿಂತನೆಗಳು' ಕೃತಿಗಳನ್ನು ಪ್ರಕಟಿಸಲಾಯಿತು.

ಸಮನ್ವಯ ಸಮಿತಿ ಮತ್ತು ಎಚ್ಚೆಸ್ಕೆ - ಈ ಎರಡು ಶಕ್ತಿ ಮತ್ತು ವ್ಯಕ್ತಿಗಳ ನಡುವಿನ ಭಾವದ ಬೆಸುಗೆ, ಈ ನಾಡಿನ ಬ್ಯಾಂಕಿಂಗ್ ಮತ್ತು ಕನ್ನಡ ಭಾಷೆಯ ನಡುವೆ ಒಂದು ದೊಡ್ಡ ಬಾಂಧವ್ಯ ಬೆಸೆದಿದೆ. ಅರ್ಥಶಾಸ್ತ್ರ ವಾಣಿಜ್ಯ, ವಿಶೇಷವಾಗಿ ಬ್ಯಾಂಕಿಂಗ್ ವಲಯದಲ್ಲಿನ ಅನೇಕ ಅವಶ್ಯಕತೆಗಳನ್ನು ಅನಾವರಣಗೊಳಿಸಿದೆ. ಈಗ ಸಮಿತಿಯ ಪ್ರಧಾನ ಸಂಚಾಲಕರಾದ ರವೀಂದ್ರ ಮತ್ತು ಮಹಾಬಲರವರ ನೇತೃತ್ವದಲ್ಲಿ ಚಟುವಟಿಕೆಗಳು ಮುಂದುವರಿದಿವೆ.

ಸಮನ್ವಯ ಸಮಿತಿಗೆ 1978ರಿಂದ 2007ರವರೆಗೆ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಪಾ ರಾಜಗೋಪಾಲ ಅವರಿಗೆ ಬೆಂಗಳೂರಿನ ಭಾರತೀಯ ಸ್ಟೇಟ್ ಬ್ಯಾಂಕ್ ಸಭಾಂಗಣದಲ್ಲಿ ಇಂದು(ಮಾ.2) ಅಭಿನಂದನಾ ಕಾರ್ಯಕ್ರಮ. ಬ್ಯಾಂಕಿನಲ್ಲಿ ಕನ್ನಡದ ಇತಿಹಾಸ ನೆನಪಿಸಿಕೊಳ್ಳುವ ಸಂದರ್ಭ ಇದಾಗಿದೆ.

ಕವಿಮನ

ಪ್ರಶ್ನೆಗಳು

ತಮದ ಒಳಗಿಂದಲೇ ಬೆಳಕು ಮೂಡುವುದೇಕೊ?
ಮೌನಗರ್ಭವನೊಡೆದು ಶಬ್ದ ಬಹುದೊ?
ಬೆಳಕಿನಾಕಾರವೆ ಪ್ರಕಾಶವಹುದೊ?
ಶಬ್ದದಾಕೃತಿಯು ಅಕ್ಷರವೆ ಅಹುದೊ?

ಎತ್ತರೆತ್ತರೆತ್ತರಕೇರೆ ದೃಷ್ಟಿ ವಿಶಾಲವೋ?
ಬಟ್ಟಬಯಲಲಿ ನಿಲ್ಲೆ ನೋಟ ವಿಸ್ತಾರವೊ?
ಕಾಲ ಕಳೆದಂತೆಲ್ಲ ವಯಸು ಮೂಡುವುದೊ?
ವಯಸು ಮಾಗಿದ ಹಾಗೆ ಕಾಲಕಳೆಯುವುದೊ?

ಇದೆಯೆಂಬ ಕಾರಣಕೆ ನಮ್ಮ ಬಯಕೆಗಳೊ?
ಬಯಕೆಗೆಂದೇ ಬಳಸುವಾಶಯವೆ ಮೊದಲೊ?
ಎಲ್ಲವನು ಬಿಟ್ಟೊಗೆದು ಬದುಕುವುದೆ ಮುಕ್ತಿಯೊ?
ನನ್ನಂತೆ ಇತರರೊ? ಅವರಂತೆ ನಾನೊ?

ದಿಕ್ಕು ತೋರುವುದೇನು ಪ್ರಶ್ನೆಗಳ ಗೊಂದಲ?
ಹೊಕ್ಕು ಬಂದರು ಒಳಗೆ ಮತ್ತದೇ ಹಂಬಲ!

– ಭ ರಾ ವಿಜಯಕುಮಾರ
05.02.2025

ನೆನಪುಗಳೇ ಹಾಗೆ

ನೆನಪುಗಳೇ ಹಾಗೆ
ಹೊತ್ತು ಗೊತ್ತಿಲ್ಲದೇ ನುಗ್ಗಿ ಬರುವುವು
ಬೀದಿ ಗೋಡೆಗಳ ಮೇಲಿನ ಭಿತ್ತಿ ಚಿತ್ರಗಳ ಹಾಗೆ

ಯಾರು ಕಿತ್ತು, ಕತ್ತರಿಸಿ ಹಾಕಿದರು
ಉಳಿದೇ ಬಿಡುವುದು ಚಿಕ್ಕ ಚಿಕ್ಕ ಚೂರುಗಳು
ಹೊಸ ಚಿತ್ರಗಳ ಹೊದಿಕೆಯೊಳಗೆ
ಋತುಮಾನಗಳು ಚಲಿಸಿದಂತೆ
ಮನಸ್ಸಿನಾಳದಲಿ ಅಂಟಿಕೊಂಡ
ಚಿತ್ರಗಳೆಷ್ಟೋ ಕಳಚಿ ಬೀಳುವುವು
ಮರೆತೆನೆಂದರೂ ಮರೆಯಲಾಗದ
ಗಾಯದ ಗುರುತುಗಳಂತೆ ಅಷ್ಟಿಷ್ಟು ಅಲ್ಲಲ್ಲಿ
ಬಚ್ಚಿಟ್ಟುಕೊಂಡೇ ಬಿಡುವುದು

ಮರೆತುಬಿಡು ಮನಸ್ಸಿನಾಳದ ನೋವುಗಳ
ತೆರೆದಿಡು ಹೊಸ ಬದುಕಿನ ಹೊಸ ರಾಗದ ಹಾದಿಯ
ಹರಿವ ನದಿಗೊಮ್ಮೆಯಾದರೂ ಬಾರದೆ ಪ್ರವಾಹ
ಕೊಚ್ಚಿಕೊಂಡು ಹೋಗುವುದಾಗ ಕಸಕಡ್ಡಿಗಳನೆಲ್ಲ
ಭೂಮಿಯೊಳಗುಳಿದ ಬೇರು ಮತ್ತೆ ಚಿಗುರಿದಂತೆ
ಹಸಿರು ಹೊದ್ದ ಮುಸುಕಿನೊಳಗೆ
ಹೊಸ ಹೂವು ಅರಳುವಂತೆ.

– ನಾಗರತ್ನ ಚಂದ್ರಶೇಖರ
12.02.2025

ಕವಿಮನ

ಕಣ್ಣಾ ಮುಚ್ಚೆ ಕಾಡೇಗೂಡೆ

ಹುಟ್ಟಿನಲ್ಲಿ ಸಾವ ಮೊಳಕೆ
ಸಾವಿನಲ್ಲು ಬದುಕ ಬಯಕೆ
ಹುಟ್ಟಿದಾಗ ಬತ್ತಲೆ
ಸಾವಿನಾಚೆ ಕತ್ತಲೆ
ಕಣ್ಣಾಮುಚ್ಚೆ ಕಾಡೇ ಗೂಡೆ

ನಾನೊ ಕನಸಿನಲ್ಲಿ ಚಿಟ್ಟೆ
ಚಿಟ್ಟೆ ಕನಸಿನಲ್ಲಿ ನಾನೊ?
ಚಿಟ್ಟೆಯಾಗಿ ಹಾರಲೇ?
ಎಚ್ಚರಾಗಿ ನೋಡಲೇ?
ಕಣ್ಣಾಮುಚ್ಚೆ ಕಾಡೇ ಗೂಡೆ.

ಅನ್ನಕೋಶ ಗಾಳಿ ತಿತ್ತಿ
ರಕ್ತ ಮಾಂಸ ಚರ್ಮ ಭಿತ್ತಿ
ಎಲ್ಲ ಬರಿಯ ಮಣ್ಣೇ
ನರನರದಲು ಕಣ್ಣೇ!
ಕಣ್ಣಾಮುಚ್ಚೆ ಕಾಡೇ ಗೂಡೆ.

ಹಗಲಿನಲ್ಲಿ ಬೆಳಕ ಹಿಂದೆ
ಇರುಳಿನಲ್ಲಿ ನಿದ್ರೆಯುಂಡೆ
ಬೆಳಕಿಗಿಷ್ಟೆ ನೋಟ
ಇರುಳಿಗೆಂಥ ಮಾಟ!?
ಕಣ್ಣಾಮುಚ್ಚೆ ಕಾಡೇ ಗೂಡೆ.

ಒಂದು ಎರಡು ಎಂಬ ಬುದ್ಧಿ
ಎಲ್ಲ ಒಂದೆ ಎನುವ ಭಾವ
ಭಾವವೇನೊ ಭ್ರಮಿತ
ಬುದ್ಧಿ ಬಹಳ ಹರಿತ!
ಕಣ್ಣಾಮುಚ್ಚೆ ಕಾಡೇ ಗೂಡೆ.

ಕಣ್ಣಾಮುಚ್ಚೆ ಕಾಡೇ ಗೂಡೆ
ಉದ್ದು ಮೂಟೆ ಉರುಳಲಿಲ್ಲ
ಅನ್ನವಿಲ್ಲ ಮಣ್ಣು ಇಲ್ಲ
ಗಾಳಿ ನೀರು ಬೆಂಕಿಯಿಲ್ಲ
ನಿಮ್ಮ ನಮ್ಮ ಹಕ್ಕಿಯೆಲ್ಲ
ಇರುವುದೆ ಆಕಾಶ ... ...
... .

ಉದ್ದು ಮೂಟೆ ಉರುಳಿ ಹೋಯ್ತು
ನಮ್ಮ ಹಕ್ಕಿ ಬಿಟ್ಟೇ ಬಿಟ್ಟೇ
ನಿಮ್ಮ ಹಕ್ಕಿ ಬೇಗ ಬೇಗ ಅಡಗಿಸಿಕೊಳ್ಳಿ.
... ... ಕಣ್ಣಾ ಮುಚ್ಚೆ ಕಾಡೇಗೂಡೆ

– ಬಿ ಎಸ್ ಚಂದ್ರಶೇಖರ
19.02.2025

ಧೀಮತಿ

ಸೊಬಗಿನಲಿ ನಡೆವಳು ಒಬ್ಬೊಂಟಿಯಾಗಿ
ಕಾಣದ ಅರಿವಿರದ ಕುಶಲತೆಯ ಕುಸುರಿ
ಧೀರತೆಯ ಹೃದಯ, ಉತ್ಸಾಹದ ಚಿಲುಮೆ
ಮೌನವಿದ್ದರೂ ಶಾಂತತೆಯ ಮೂರ್ತಿಯು

ಸ್ಪಂದಿಸುವ ಮಿಡಿಯುವ ನಯನಗಳ ನೋಟ
ನಿಶೆಯ ನೀರವದಿ ಗುಟ್ಟನುಸುರವ ದನಿಯು
ಹೇಳುವ ಕಥೆಗಳಲಿ ಮಾಂತ್ರಿಕನ ಜಾಲವು
ಗುಂಪಿನಲಿ ಕರಗಿರುವಳು ಸುಂದರತೆಯ ಗಣಿ

ಅನ್ಯರು ಕಡೆಗಣಿಸಿದರೂ ತನ್ನಾತ್ಮದಿಂದಲ್ಲ
ರಚನಾತ್ಮಕ ಗುರಿಯಲ್ಲಿ ಪಡೆವಳು ಶಾಂತಿಯ
ಒಂದೊಂದು ಹೆಜ್ಜೆಯಲೂ ದಾರಿಯ ಮಾಡಿ
ಅನುಮಾನಗಳ ನೆರಳಲಿ ಹೊಳೆಯುತಿಹಳು

ನೋಡುವ ಕಂಗಳಲಿ ಆತ್ಮಾಭಿಮಾನವಿಲ್ಲ
ಹೃದಯದಲಿ ಉರಿಯುವ ಬೆಂಕಿಯಲಿಹುದು
ಮುಕುಟವ ಮೇಲೆತ್ತಿ ಕರ್ತವ್ಯದಿ ನಡೆವಳು
ಹೊಳೆವ ಕಂಗಳಲಿ ಕಲಾಯೋಧೆಯವಳು

ಮಂದಿಯ ಕರತಾಡನ ಬೇಕಿಲ್ಲ ಅವಳಿಗೆ
ಮೌಲ್ಯ-ಸುಂದರತೆಯವಳ ಸಾಬೀತಿಗೀಗಿ
ಕಲೆಯ ಪೂಜೆಗೆ ಅವಳ ಸಪ್ರೇಮ ಹೃದಯವು
ಕದಗಳ ತೆರೆದು ಬಿಡುಗಡೆಯ ಮಾಡುವುದು

ಮುನ್ನಡೆಯುತಿರಲಾಕೆ ಶಿರಬಾಗದಂತೆ
ಗಗನವನು ಮುಟ್ಟುವ ಹೊಳೆವ ತಾರೆಯಾಗಿ
ಹೃದಯದಲಾಕೆಯ ಜ್ವಾಲೆ ಬೆಳೆಗುತಿರಲು
ನಿಶೆಯಂಧಕಾರದಲೂ ದಾರಿ ತೋರುತ

– ಎಸ್ ಮಂಜುನಾಥ್ (ಹಿಮನಾಥ)
26.02.2025

ಊಟ–ಪ್ರಸಾದ

– ಸ್ನೇಹ ಶಶಿಧರ

ಹಬ್ಬ ಎಂದಾಕ್ಷಣ ನಮ್ಮ ಮನಸ್ಸಿಗೆ ಬರುವುದು ಬಗೆಬಗೆಯ ವ್ಯಂಜನಗಳಿರುವ ಹಬ್ಬದೂಟ. ಒಂದು ಬಾಳೆ ಎಲೆಯ ಮೇಲೆ ಬಡಿಸಿರುವ ಪಲ್ಯಗಳು, ಕೋಸಂಬರಿಗಳು, ಹುಳಿ, ಸಾರು, ಹಪ್ಪಳ, ಸಂಡಿಗೆ, ಬಜ್ಜಿ ಬೋಂಡಗಳು, ಆಹಾ ಸಾಕು ಬಿಡಮ್ಮ ಅಂತೀರಾ. ಆಯಿತು ಬಿಡಿ ವಿಷಯಕ್ಕೆ ಬರೋಣ. ಎಲ್ಲ ಹಬ್ಬಗಳಲ್ಲೂ ಒಂದೇ ರೀತಿ ಅಡುಗೆ ಮಾಡುತ್ತೇವಾ ಅನ್ನೋ ಪ್ರಶ್ನೆಗೆ ಖಂಡಿತ ಇಲ್ಲ ಅಂತ ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಹಬ್ಬಗಳಿಗೆ ಸಿದ್ಧವಾಗುವ ಪ್ರತ್ಯೇಕ ವ್ಯಂಜನಗಳಿಗೆ ವೈಜ್ಞಾನಿಕ ಅರ್ಥಗಳಿದೆ ಎಂದರೆ ನಂಬುತ್ತೀರಾ? ಒಂದೊಂದೇ ವಿಶ್ಲೇಶಿಸೋಣ.

ಕ್ಯಾಲೆಂಡರಿನ ಮೊದಲ ಹಬ್ಬ ಸಂಕ್ರಾಂತಿ. ಸುಗ್ಗಿ ಹಬ್ಬ ಆದ್ದರಿಂದ ಹೊಸದಾಗಿ ಬೆಳೆದ ಅಕ್ಕಿ, ಬೇಳೆಯನ್ನು ಉಪಯೋಗಿಸಿ ಮಾಡುವ ಹುಗ್ಗಿ (ಪೊಂಗಲ್) ಎಲ್ಲರಿಗೂ ತಿಳಿದೇ ಇದೆ. ಇನ್ನು ಎಳ್ಳು ಬೆಲ್ಲಕ್ಕೆ ಏನು ಅರ್ಥ? ಸಂಕ್ರಾಂತಿ ಬರುವುದು ಚಳಿಗಾಲದಲ್ಲಿ. ನಿಸರ್ಗದಲ್ಲಿ ಮರ ಗಿಡಗಳಲ್ಲೂ ಎಲೆಗಳು ಉದುರಿರುತ್ತವೆ. ನಮ್ಮ ಚರ್ಮವು ಒಡೆದುಕೊಂಡಿರುತ್ತದೆ. ನಮ್ಮ ಮೈಗೆ ಜಿಡ್ಡಿನ ಅವಶ್ಯಕತೆ ಇರುವುದರಿಂದ ಕಡಲೆಬೀಜ, ಕೊಬ್ಬರಿ, ಎಳ್ಳು ತಿನ್ನುತ್ತೇವೆ. ಹಾಗೆ ತಿನ್ನಲು ರುಚಿಸೋಲ್ಲ ಅಂತ ಬೆಲ್ಲವನ್ನು ಜೊತೆಗೆ ಬೆರೆಸಿ ತಿನ್ನುತ್ತೇವೆ. ರಥ ಸಪ್ತಮಿಯವರೆಗೂ ಎಳ್ಳು ಬೀರುವುದು ಸಂಪ್ರದಾಯ. ಅಂದರೆ ರಥ ಸಪ್ತಮಿ ಹೊತ್ತಿಗೆ ಪ್ರಕೃತಿ ಬದಲಾಗಿ, ಇನ್ನು ಅದರ ಅವಶ್ಯಕತೆ ಕಡಿಮೆಯಾಗುತ್ತದೆ. ಮೈಗೆ ಎಳ್ಳು ಬೆಲ್ಲ, ಅವರೆಕಾಳು ಎಲ್ಲ ಸೇರಿ ಅಜೀರ್ಣವಾಗಬಹುದು. ಎಕ್ಕದ ಎಲೆ ಅಜೀರ್ಣ ನಿವಾರಣೆಗೆ ಉಪಯೋಗಿಸುವುದು ಗಮನೀಯ.

ವರ್ಷಾವಧಿ ಹಬ್ಬ ಉಗಾದಿಯಲ್ಲಿ ಬೇವು ಬೆಲ್ಲ. ಎಲ್ಲರಿಗೂ ತಿಳಿದ ಹಾಗೆ ಬೇಸಿಗೆ ಶುರುವಾಗುವ ಸಮಯ. ಸಾಂಕ್ರಾಮಿಕ ರೋಗಗಳನ್ನು ದೂರವಿಡುವ ಉದ್ದೇಶದಿಂದ ಬೇವು ತಿನ್ನುತ್ತೇವೆ. ಹಾಗೆ ತಿನ್ನಲು ರುಚಿಸೋಲ್ಲ ಅಂತ ಬೆಲ್ಲವನ್ನು ಜೊತೆಗೆ ಬೆರೆಸಿ ತಿನ್ನುತ್ತೇವೆ.

ಮುಂದಿನ ಹಬ್ಬವೇ ರಾಮ ನವಮಿ. ಕೋಸಂಬರಿ, ಪಾನಕ, ನೀರುಮಜ್ಜಿಗೆ. ಸುಡುಬಿಸಿಲು. ಬೇರೇನೂ ತಿನ್ನಲು ಆಗುವುದೇ ಇಲ್ಲ. ಯಾವಾಗಲೂ ನೀರು ಕುಡಿಯೋಣ ಅನ್ನಿಸುವಷ್ಟು ಬಿಸಿಲು. ಮೈಗೆ ಹಿತ ಎನ್ನಿಸಲು ನಾವು ಕೇವಲ ಪಾನಕ ಕೋಸಂಬರಿ ತಿನ್ನುತ್ತೇವೆ. ಬಿಸಿಲಬೇಗೆಯಿಂದ ದಾರಿಹೋಕರಿಗೂ ತಣಿಸಲು ಬೀದಿಬೀದಿಯಲ್ಲಿ ಪಾನಕ, ಮಜ್ಜಿಗೆ ಹಂಚುವುದು ವಿಶೇಷ.

ಗೋಕುಲಾಷ್ಟಮಿ, ಗಣೇಶ ಚತುರ್ಥಿ ಎರಡೂ ಬರುವುದು ಮಳೆಗಾಲದಲ್ಲಿ. ಗರಿಗರಿಯಾದ ಎಣ್ಣೆಯಲ್ಲಿ ಕರಿದ ಪದಾರ್ಥ ತಿನ್ನಲು ಮನಸ್ಸು ಹಾತೊರೆಯುತ್ತದೆ. ದೇವರ ಹೆಸರು ಹೇಳಿ ಡಬ್ಬಿ ಭರ್ತಿ ಚಕ್ಕುಲಿ, ಕೋಡುಬಳೆ ಮಾಡಿಟ್ಟುಕೊಂಡು ತಿನ್ನುತ್ತೇವೆ. ಅನಂತ ಚತುರ್ದಶಿಗೆ ದೋಸೆ, ಹುಯಿಕಡಬು ಇತ್ಯಾದಿ ಮಾಡುತ್ತೇವೆ. ಅನಂತ ಮುದುಕ ದೇವರಂತೆ. ನನ್ನ ಅನಿಸಿಕೆ– ಹಬೆಯಲ್ಲಿ ಬೆಂದ ಅಡುಗೆ ತಿಂದು ಹೊಟ್ಟೆ ರೆಡೀ ಮಾಡ್ಕೊಳ್ಳಿ ಅಂತ. ಯಾಕಂದರೆ ಮಾರನೆಯ ದಿನದಿಂದ ಪಕ್ಷಮಾಸ ಶುರು. ವಡೆ ಪಾಯಸದ ಹಾವಳಿಗೆ ಹೊಟ್ಟೆಯನ್ನು ಒಂದು ಹದಕ್ಕೆ ತರುವುದಕ್ಕಾಗಿ.

ಹಾಗೇ ತಿನ್ನಿ ಅಂದರೆ ಬೇಡ ಅಂತೀವಿ, ಪ್ರಸಾದದ ಹೆಸರು ಹೇಳಿದರೆ ತಿನ್ನುತ್ತೇವೆ ಅನ್ನೋ ಲೆಕ್ಕಾಚಾರ ಇರಬಹುದೇನೋ ನಮ್ಮ ಪೂರ್ವಜರದ್ದು. ಪ್ರಸಾದ ಅಥವಾ ಅನ್ನ ದಾಸೋಹ ನಮ್ಮ ಸನಾತನ ಧರ್ಮದ ಅವಿಭಾಜ್ಯ ಅಂಗ. ನಮ್ಮ ದೇವಸ್ಥಾನಗಳು ಉಚಿತವಾಗಿ ಪ್ರಸಾದ ಹಂಚುವುದರಿಂದ ಎಷ್ಟೋ ಕೋಟಿ ಜನ ಹೊಟ್ಟೆ ತುಂಬಿಸಿಕೊಂಡಿದ್ದಾರೆ, ತುಂಬಿಸಿಕೊಳ್ಳುತ್ತಿದ್ದಾರೆ, ಮುಂದೆಯೂ ತುಂಬಿಸಿಕೊಳ್ಳುತ್ತಾರೆ.

ಇದಕ್ಕೆ ನಮ್ಮ ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಉಡುಪಿ, ಶೃಂಗೇರಿ, ಹೊರನಾಡು ಇನ್ನು ಅನೇಕ ದೇವಸ್ಥಾನಗಳೇ ಸಾಕ್ಷಿ. ಆದರೆ, ನೂತನ ದೃಷ್ಟಿಕೋನದ ಒಂದು ಉದಾಹರಣೆಯನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ನಮ್ಮ ಮೈಸೂರಿನ ಕುವೆಂಪುನಗರದ ಕಾಂಪ್ಲೆಕ್ಸ್ ಬಳಿ ದಿನಾ ಬೆಳಿಗ್ಗೆ ಎಂಭತ್ತರಿಂದ ನೂರು ಜನ ಸೇರಿರುತ್ತಾರೆ. ಯಾಕೆ ಇಷ್ಟು ಜನ, ಎಲ್ಲಿಂದ ಬರುತ್ತಾರೆ ಎಂದು ಸ್ವಲ್ಪ ಕುತೂಹಲ ಹೆಚ್ಚಾಗಿ, ಒಂದು ಐದಾರು ಜನರನ್ನು ಮಾತನಾಡಿಸಿದೆ. ಅವರೆಲ್ಲರೂ ಕೂಲಿ ಕೆಲಸದವರು. ಬೇರೆಬೇರೆ ಹಳ್ಳಿಗಳಿಂದ ದಿನಗೂಲಿಗಾಗಿ ಮೈಸೂರಿಗೆ ಬರುವವರು. ಚಾಮರಾಜನಗರ-ಮೈಸೂರು ಮಾರ್ಗದ ರೈಲಿನಲ್ಲಿ ಬಂದು ಚಾಮರಾಜಪುರಂ ಸ್ಟೇಷನ್ನಿನಲ್ಲಿ ಇಳಿದುಕೊಳ್ಳುತ್ತಾರೆ. ಅಲ್ಲಿಂದ ಕುವೆಂಪುನಗರ ಕಾಂಪ್ಲೆಕ್ಸ್ ಒಂದೇ ರಸ್ತೆ. ನಡೆದು ಬರುವ ದಾರಿಯಲ್ಲಿ ಎಲ್ಲರೂ ತಮ್ಮ ಜಾತಿ, ಮತ, ಧರ್ಮ ಎಲ್ಲ ಮರೆತು, ಇಸ್ಕಾನ್ ಕೃಷ್ಣ ದೇವಸ್ಥಾನದಲ್ಲಿ ಲಘು ಉಪಹಾರ ಸ್ವೀಕರಿಸಿ ಬರುತ್ತಾರೆ.

ಎಲ್ಲೋ ದೂರದಿಂದ ಹಸಿದ ಕೂಲಿಯವರಿಗೆ ದೇವಸ್ಥಾನದ ಪ್ರಸಾದ ಸಾರ್ಥಕ ಸೇವೆ ನೀಡುತ್ತಿದೆ. ಇದೇ ಇಸ್ಕಾನ್ ದೇಗುಲವು ಅಕ್ಷಯಪಾತ್ರ ಯೋಜನೆಯಡಿ ಹಲವು ಶಾಲೆಗಳಲ್ಲಿ ಮಧ್ಯಾಹ್ನದ ಊಟ ಹಂಚುತ್ತಿರುವುದು ಗಮನಾರ್ಹ. ಒಬ್ಬ ವ್ಯಕ್ತಿಯನ್ನು 'ಸಾಕು' ಅನ್ನಿಸಲಿಕ್ಕಾಗುವುದು ಊಟದಿಂದ ಮಾತ್ರ ಸಾಧ್ಯವೆಂದು ಎಲ್ಲೋ ಓದಿದ್ದೆ. ಹಸಿವು ನೀಗಿಸುವ ಪ್ರಯತ್ನದಲ್ಲಿ ನಮ್ಮ ಆಚರಣೆಗಳು ಗೆದ್ದಿದೆ.


***

ಗುಜರಾತಿನ ವಿಶ್ವ ಪಾರಂಪರಿಕ ತಾಣಗಳು
ಪಾಟನ್ ಮತ್ತು ಮೊಧೇರಾ

– ಜಿ.ವಿ.ನಿರ್ಮಲ

'ನೂರು ರೂಪಾಯಿ ನೋಟನ್ನು ನೋಡಿದ್ದೀರಾ?' ಎಂದು ಯಾರಾದರೂ ಕೇಳಿದರೆ 'ಅದನ್ನು ನೋಡಿಲ್ದೆ ಏನು? ಈಗಂತೂ ಮನೆಯಿಂದ ಹೊರಗೆ ಹೊರಟರೆ ನೂರು ರೂಪಾಯಿಗಳನ್ನು ಹಿಡಿದೇ ಹೊರಡುವ ಕಾಲ' ಅಂತ ನಿಮಗೆ ಕೋಪ ಬಂದರೂ ಆಶ್ಚರ್ಯವಿಲ್ಲ. ನಿಜವೇ. ಆದರೆ ಅದರ ಎರಡು ಬದಿಗಳಲ್ಲಿ ಕಾಣುವ ಚಿತ್ರಗಳು ಯಾವವು ಎಂದಾಗ ಕೆಲವರಿಗೆ ಗಲಿಬಿಲಿಯಾಗಬಹುದಲ್ಲವೇ? (ಇಲ್ಲಿರುವ ಹಲವಾರು ಬ್ಯಾಂಕ್ ಉದ್ಯೋಗಿಗಳಿಗೆ ಗಲಿಬಿಲಿ ಆಗದಿರಲೂಬಹುದು) ಕೆಲವರು ಅವುಗಳನ್ನೂ ಕಂಡಿರಬಹುದು. ನಿಮ್ಮನ್ನು ಗಲಿಬಿಲಿಗೆ ತಳ್ಳುವ ಯಾವ ಉದ್ದೇಶವೂ ನನಗಿಲ್ಲ. ನಾನೇ ಹೇಳಿಬಿಡುತ್ತೇನೆ. ನೋಟಿನ ಒಂದು ಬದಿಯಲ್ಲಿ ಮಹಾತ್ಮ ಗಾಂಧಿಯವರ ಚಿತ್ರ, ಮತ್ತೊಂದು ಕಡೆ ಗುಜರಾತಿನ ಪ್ರಸಿದ್ಧ ಮೆಟ್ಟಿಲುಬಾವಿ 'ರಾಣಿ ಕೀ ವಾವ್' ಚಿತ್ರವನ್ನು ಕಾಣಬಹುದು. ತಾವೆಲ್ಲಾ ಮತ್ತೊಮ್ಮೆ ಗಮನಿಸಲೆಂದು ಚಿತ್ರವನ್ನೂ ಕೊಟ್ಟಿದ್ದೇನೆ.





ಗುಜರಾತಿನ ಪಾಟನ್ ಪಟ್ಟಣದಲ್ಲಿರುವ ಈ ಮೆಟ್ಟಿಲುಬಾವಿಯನ್ನು 2014ರಲ್ಲಿ ವಿಶ್ವ ಪಾರಂಪರಿಕ ತಾಣವೆಂದು ಗುರುತಿಸಿದ ನಂತರ 2018ರಿಂದ 'ರಾಣಿ ಕಿ ವಾವ್' ಚಿತ್ರ ನಮ್ಮ 100 ರೂಪಾಯಿಯ ನೋಟಿನಲ್ಲಿ ವಿಜೃಂಭಿಸುತ್ತಿದೆ. ನೋಟಿನಲ್ಲಿ ಕಾಣುವ ಮೆಟ್ಟಿಲುಬಾವಿಯ ಚಿತ್ರ ನೋಡಿದ ನಂತರ ಮತ್ತು ಅದರ ಅದ್ಭುತ ಸೌಂದರ್ಯದ ಬಗ್ಗೆ ಕೇಳಿದ ಸಮಯದಿಂದ ನನಗೆ ಅದನ್ನು ನೋಡುವ ಬಯಕೆಯಾಗಿತ್ತು. ನನ್ನ ಒತ್ತಾಯದಿಂದ ಹೊರಟ ನನ್ನ ಪತಿ ಮತ್ತು ಮಗ ಇತ್ತೀಚೆಗೆ ಅಹಮದಾಬಾದಿಗೆ ವಿಮಾನದಲ್ಲಿ, ಅಲ್ಲಿಂದ ಸುಮಾರು 130 ಕಿಮೀ ದೂರವಿರುವ ಮೊಧೇರಾಗೆ ಕಾರಿನಲ್ಲಿ ಪಯಣಿಸಿದೆವು. ಜನವರಿ 12ರಂದು ಬೆಳಗ್ಗೆ ಅಲ್ಲಿಂದ ಮುಂದೆ ಕಾರಿನಲ್ಲಿ 50 ಕಿಮೀ ಪಯಣಿಸಿ 'ರಾಣಿ ಕಿ ವಾವ್' ಕಂಡ ಕ್ಷಣದಲ್ಲಿ ನನ್ನ ಬಯಕೆ ಫಲಿಸಿತು.

ನಮ್ಮ ಮಾರ್ಗದರ್ಶಿ ಹೇಳಿದಂತೆ 'ರಾಣಿ ಕಿ ವಾವ್' ಸಾವಿರ ವರ್ಷಗಳ ಹಿಂದೆ ಸರಸ್ವತಿ ನದಿಯ ತಟದಲ್ಲಿತ್ತಂತೆ. ಈಗ ಸರಸ್ವತಿ ನದಿ ಗುಪ್ತಗಾಮಿನಿಯಾಗಿದ್ದಾಳೆ. ಈ ಮೆಟ್ಟಿಲುಬಾವಿಯನ್ನು ಚಾಲುಕ್ಯ ವಂಶದ ರಾಣಿ ಉದಯಮತಿ ತನ್ನ ಪತಿ ಭೀಮ–1 ನೆನಪಿನಲ್ಲಿ ಹನ್ನೊಂದನೆಯ ಶತಮಾನದಲ್ಲಿ ಕಟ್ಟಿಸಿದಳಂತೆ. ಚಾಲುಕ್ಯರ ಆಳ್ವಿಕೆ ಕೊನೆಗೊಂಡ ನಂತರ ಕಲಾತ್ಮಕವಾದ ಈ ಬಾವಿ ಅನಾಥವಾಗಿ, ಯಾರ ಕಣ್ಣಿಗೂ ಕಾಣಿಸದಷ್ಟು ಸಂಪೂರ್ಣವಾಗಿ ಭೂಮಿಯ ಒಳಗೆ ಹೂತುಹೋಯಿತಂತೆ. ಭಾರತದ ಪುರಾತತ್ವ ಇಲಾಖೆಯ ಶ್ರಮಭರಿತ ಉತ್ಖನನದಿಂದ ಅದು ಮತ್ತೊಮ್ಮೆ ಜಗತ್ತಿನ ಬೆಳಕು ಕಂಡಿದ್ದು ಸುಮಾರು 1980ರ ವೇಳೆಗೆ. ಆ ಸ್ಥಳದ ಸುತ್ತಮುತ್ತವಿರುವ ಮಣ್ಣು, ಮರಳುಗಳನ್ನು ಬಹಳ ಜತನದಿಂದ ತೆರವುಗೊಳಿಸಿ ಹೂತುಹೋಗಿದ್ದ ಮೆಟ್ಟಿಲುಬಾವಿಯ ಸೊಬಗನ್ನು ಕಲಾರಸಿಕರಿಗೆ, ಇತಿಹಾಸಕಾರರಿಗೆ ತೆರೆದು ತೋರಿಸಲು ಪುರಾತತ್ವ ಇಲಾಖೆಯವರು ಸುಮಾರು 1940ರಿಂದ 1980 ರವರೆಗೆ ಶ್ರಮಿಸಿದ್ದಾರೆ. ಇಂದು ಜನ ಇದರ ಸೌಂದರ್ಯವನ್ನು ಕಣ್ತುಂಬಿಕೊಂಡು ಬೆರಗಾಗುತ್ತಿದ್ದಾರೆ; ಮೂಕರಾಗುತ್ತಿದ್ದಾರೆ.



ರಾಣಿ ಕಿ ವಾವ್ ಚಿತ್ರ

ಏಳು ಮಜಲುಗಳುಳ್ಳ ಬಾವಿಯನ್ನು ಕಟ್ಟಿಸಿದಾಗ ಆ ಕಾಲದ ಅವಶ್ಯಕತೆಗೆ ತಕ್ಕಂತೆ ಕೆಳಗಿನ ಮಜಲಿನ ಬಾವಿಯಲ್ಲಿ ನೀರನ್ನು ಶೇಖರಿಸಲಾಗುತ್ತಿತ್ತು. ಈಗ ಪ್ರವಾಸಿಗರು ನೀರನ್ನು ನೋಡಲಾಗದಿದ್ದರೂ, ನೆಲಮಟ್ಟದಿಂದ 95 ಮೆಟ್ಟಿಲುಗಳ ಕೆಳಗೆ ಮಂದಿರದಂತಿರುವ ಬಾವಿಯ ಅದ್ಭುತ ಸೌಂದರ್ಯವನ್ನು ಆಸ್ವಾದಿಸಲು ಅಡ್ಡಿ ಇಲ್ಲ. ಮೆಟ್ಟಿಲುಗಳ ಅಕ್ಕಪಕ್ಕದ ಗೋಡೆಗಳಲ್ಲಿ ಮನೋಜ್ಞವಾಗಿ, ಸಾಲುಸಾಲಾಗಿ ಕೆತ್ತಿರುವ ಕಲಾತ್ಮಕ ಶಿಲ್ಪಗಳನ್ನು ನೋಡುತ್ತಿದ್ದರೆ ನೆತ್ತಿಯನ್ನು ಸುಡುವ ಬಿಸಿಲಿನ ಬೇಗೆ, ಸರಿಯುತ್ತಿರುವ ಕಾಲದ ಅರಿವು ಎರಡೂ ನೆನಪೇ ಆಗುವುದಿಲ್ಲ. ಕಣ್ಮುಂದೆ ರಾರಾಜಿಸುವ ದೇವಾನುದೇವತೆಗಳು, ಎದ್ದು ಬರುವಂತಿರುವ ಅಪ್ಸರೆಯರು, ವಿವಿಧ ಭಂಗಿಯ ಶಿಲಾಬಾಲಿಕೆಯರನ್ನು ಕಂಡಾಗ ನೋಡುಗರ ಮನ ಅವುಗಳೊಳಗೆ ತಲ್ಲೀನವಾಗುವುದು ಖಂಡಿತ. ನನಗೆ ಕರ್ನಾಟಕದ ಬೇಲೂರಿನ ಶಿಲಾಬಾಲಕಿಯರು ನೆನಪಾದರು. ಬೇಲೂರಿನಲ್ಲಿ ಬಳಪದ ಕಲ್ಲು (Soap stone) ಬಳಕೆಯಾಗಿದೆ. ಇಲ್ಲಿ ಸಂಚಿತ ಕಲ್ಲನ್ನು (Sedimentary rock) ಬಳಸಲಾಗಿದೆ. ಸುಮಾರು ಸಾವಿರ ವರ್ಷಗಳಷ್ಟು ಹಳೆಯದಾದರೂ ಅದು ಇಂದಿಗೂ ಭವ್ಯತೆಯ ಸಾಕಾರವೇ. ಈ ಸ್ಥಳವನ್ನು ಬೆಳಕಿರುವ ಹೊತ್ತಿನಲ್ಲಿ, ಬಿಸಿಲು ಜಾಸ್ತಿಯಾಗುವ ಮುನ್ನ ವೀಕ್ಷಿಸುವುದು ಒಳ್ಳೆಯದು.

ಮುಂದಿನ ನಮ್ಮ ಪಯಣ ಪಾಟನ್ ಪಟ್ಟಣದಿಂದ 50 ಕಿಮೀ ದೂರದಲ್ಲಿ ಮೆಹ್ಸಾನಾ ಜಿಲ್ಲೆಯಲ್ಲಿರುವ ಮೊಧೇರಾದ ಸೂರ್ಯದೇವಾಲಯದತ್ತ ಸಾಗಿತು. ಪುರಾತತ್ವ ಇಲಾಖೆಯವರ ಸುಪರ್ದಿನಲ್ಲಿರುವ ಈ ಸ್ಮಾರಕವನ್ನೂ ವಿಶ್ವ ಪಾರಂಪರಿಕ ತಾಣವೆಂದು ಗುರುತಿಸಲಾಗಿದೆ. ಇದನ್ನು ಒಂದನೇ ಭೀಮನ ಆಳ್ವಿಕೆಯ ಕಾಲದ ನಂತರ ಸುಮಾರು ಸಾವಿರ ವರ್ಷಗಳ ಹಿಂದೆ ಕಟ್ಟಿಸಿದ್ದೆಂದು (ಸುಮಾರು 1026–27ರಲ್ಲಿ) ಅಂದಾಜಿಸಲಾಗಿದೆ. ಸೊಗಸಾದ ಸೂರ್ಯ ದೇವಾಲಯದ ಗರ್ಭಗುಡಿ ಈಗ ಬರಿದಾಗಿರುವುದು ವಿಷಾದನೀಯ. ಅಲ್ಲಾವುದೀನ್ ಖಿಲ್ಜಿಯ ದಾಳಿಯ ಸಮಯದಲ್ಲಿ ಗರ್ಭಗುಡಿಯಲ್ಲಿದ್ದ ಸೂರ್ಯದೇವರ ಮೂರ್ತಿ ಕಾಣೆಯಾಗಿರಬಹುದೆಂದು ದಾಖಲಾಗಿದೆ. ದೇವಾಲಯದ ಇಷ್ಟು ಭಾಗ ಉಳಿದಿರುವುದೇ ಭಾರತೀಯರ ಸೌಭಾಗ್ಯ.



ನಾವು ಸೂರ್ಯಾಸ್ತಮಕ್ಕಿಂತ ಸಾಕಷ್ಟು ಮುಂಚಿತವಾಗಿಯೇ ದೇವಾಲಯವನ್ನು ತಲುಪಿದೆವು. ದೇವಾಲಯವು ಬಹಳ ವಿಸ್ತಾರವಾದ ಪ್ರದೇಶದಲ್ಲಿದೆ. ಮುಂಭಾಗದಲ್ಲಿ ಗಮನ ಸೆಳೆಯುವ ಸೂರ್ಯಕುಂಡದ ಸುತ್ತಲಿದ್ದ ಚಿಕ್ಕ, ಚಿಕ್ಕ ಸುಂದರವಾದ 108 ದೇವಾಲಯಗಳಲ್ಲಿ ಕೇವಲ ಮೂರು ಮಾತ್ರ ಉಳಿದುಕೊಂಡಿವೆ.

ಅದಕ್ಕೆ ಕೂಡಿಕೊಂಡಿರುವಂತಹ ಸಭಾಂಗಣದ ಕಂಭಗಳ ಮೇಲಿರುವ ಸೂಕ್ಷ್ಮ ಕೆತ್ತನೆಗಳು ಮನಸೆಳೆಯುತ್ತವೆ. ಮಹಾಭಾರತ, ಭಾಗವತ, ರಾಮಾಯಣದ ಕಥಾವಸ್ತುಗಳನ್ನು ಕೇವಲ ಒಂದು ಕೆತ್ತನೆಯಲ್ಲಿ ಹಿಡಿದಿಟ್ಟಿರುವ ಪರಿ ನೋಡುಗರ ಕಣ್ಣಿಗೆ ಹಬ್ಬವೇ. ಇದಕ್ಕೆ ಸೇರಿದಂತೆಯೇ ಮತ್ತೊಂದು ಭಾಗದಲ್ಲಿರುವ ಗರ್ಭಗುಡಿ ಬರಿದಾಗಿದ್ದರೂ ಇಂದಿಗೂ ವಿಷುವತ್ ಸಂಕ್ರಾಂತಿಯ ದಿನಗಳಲ್ಲಿ (Equinoxes) ಸೂರ್ಯೋದಯ ವಾಗುತ್ತಿದ್ದಂತೆ ಸೂರ್ಯಕಿರಣಗಳು ಗರ್ಭಗುಡಿಯನ್ನು ಬೆಳಗುತ್ತವೆ. ದೇವಾಲಯದ ಸುತ್ತಲೂ ಇರುವ ಸೂರ್ಯ ಮತ್ತು ಅಷ್ಟದಿಕ್ಪಾಲಕರ ಮೂರ್ತಿಗಳು ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನೂ ಒಳಗೊಂಡಿವೆ. ಜನಜೀವನಕ್ಕೆ ಸಂಬಂಧಿಸಿದ ಹಲವಾರು ಕೆತ್ತನೆಗಳಲ್ಲಿ ಹೆಣ್ಣೊಬ್ಬಳು ಮಗುವಿಗೆ ಜನ್ಮ ನೀಡುವ ದೃಶ್ಯವನ್ನೂ ಕೆತ್ತಿರುವುದನ್ನು ನೋಡಿ ಬೆರಗಾದೆ.

ಹೀಗೆ ದೇವಾಲಯದ ಸೊಬಗನ್ನು ನೋಡುತ್ತಿದ್ದಂತೆ ಕತ್ತಲಾವರಿಸಿತು. ಒಳಭಾಗಕ್ಕೆ ವಿದ್ಯುದ್ದೀಪಗಳಿಲ್ಲದಿದ್ದರೂ ದೇವಾಲಯದ ಹೊರಭಾಗಕ್ಕೆ ಅಳವಡಿಸಿರುವ ದೀಪಗಳು ಮನಮೋಹಕವಾಗಿವೆ.

ಈ ದೇವಾಲಯದ ಸೌಂದರ್ಯವನ್ನು ಮತ್ತಷ್ಟು ಸೂರೆಗೊಳ್ಳಲು ನಮಗಾಗಿ ಕಾದಿತ್ತು 'ಶಬ್ದ ಮತ್ತು ಬೆಳಕು' ಪ್ರದರ್ಶನ. ಇದಕ್ಕಾಗಿ ಪ್ರತ್ಯೇಕ ಟಿಕೆಟ್ ಪಡೆಯಬೇಕು. ಸೂರ್ಯಕುಂಡದ ಬಳಿಯೇ ಆಸನಗಳಿದ್ದವು. ಏಳು ಗಂಟೆಗೆ ಪ್ರಾರಂಭವಾದ ಇಪ್ಪತ್ತು ನಿಮಿಷಗಳ ಪ್ರದರ್ಶನವನ್ನು ಕಾಣಲು ಸುಮಾರು 200 ಜನ ಸೇರಿದ್ದರು. ಜನವರಿಯ ಹವಾಮಾನ ಹಿತವಾಗಿರುವುದರಿಂದ ಅನೇಕ ಶಾಲಾ ಮಕ್ಕಳು ಬಂದಿದ್ದರು. 2022ರ ಅಕ್ಟೋಬರಿನಲ್ಲಿ ಮೋದಿಯವರು ಉದ್ಘಾಟಿಸಿದ ಈ 3–ಡಿ ಪ್ರದರ್ಶನಕ್ಕೆ ಸೌರಶಕ್ತಿಯಿಂದಲೇ ವಿದ್ಯುಚ್ಛಕ್ತಿ ಸರಬರಾಜಾಗುತ್ತಿರುವುದು ವಿಶೇಷ. ಇಂತಹ ಹಲವು ಪ್ರದರ್ಶನಗಳನ್ನು ಭಾರತದ ವಿವಿಧೆಡೆಗಳಲ್ಲಿ ನೋಡಿದ್ದರೂ ಇದರ ಸೌಂದರ್ಯ ಮನದುಂಬಿತು. ಜೊತೆಗೆ ಮತ್ತಷ್ಟು ಇತಿಹಾಸವೂ ತಿಳಿಯಿತು. (ಕಿವಿ ಮಾತು: 'ಶಬ್ದ ಮತ್ತು ಬೆಳಕು' ಪ್ರದರ್ಶನವನ್ನು ಕಾಣುವ ಉದ್ದೇಶವಿದ್ದಲ್ಲಿ ಮೊಧೇರಾಕ್ಕೆ ಸಂಜೆ ಭೇಟಿ ನೀಡುವುದು ಸೂಕ್ತ)



ಗುಜರಾತಿನ ಎರಡು ಮಹತ್ತರ, ಸುಂದರ ವಿಶ್ವ ಪಾರಂಪರಿಕ ತಾಣಗಳನ್ನು ಕಂಡ ಸಂತೋಷದಿಂದ ಬೆಂಗಳೂರಿಗೆ ವಾಪಸ್ಸಾದೆವು, ಇಂದಿಗೂ ಕಣ್ಣಮುಂದೆ ಕಾಣುತ್ತಿರುವ, ಕಾಡುತ್ತಿರುವ ದೃಶ್ಯಗಳನ್ನು ನಮ್ಮ ಇಷ್ಟ ಜನರ ಜೊತೆ ಹಂಚಿಕೊಂಡು ಆಸ್ವಾದಿಸುತ್ತಿದ್ದೇವೆ.

***

ರಗಳೆ

– ಗಣಪತಿ ಹೆಗಡೆ

ಪದ್ಯ ರಚನೆಯ ನಿಯಮವನ್ನು ತಿಳಿಸುವ ಶಾಸ್ತ್ರವೇ ಛಂದಶ್ಶಾಸ್ತ್ರ. ಅಕ್ಷರಗಳು ನಿಯಮಿತವಾದ ಬಂಧದಲ್ಲಿ ಇರುವಾಗ ರಾಗದ ಗೇಯತೆ ಉಂಟಾಗುತ್ತದೆ. ಈ ಅಕ್ಷರಗಳ ಬಂಧ ಅಕ್ಷರ ಗಣ, ಅಂಶ ಗಣ ಹಾಗೂ ಮಾತ್ರಾ ಗಣಗಳೆಂದು ಮೂರು ರೀತಿಯಿಂದ ಗುರುತಿಸಲ್ಪಡುತ್ತವೆ.

'ರಗಳೆ'ಯು ಮಾತ್ರಾಗಣದ ಗುಂಪಿಗೆ ಸೇರಿದ ಕಾವ್ಯ ಪ್ರಭೇದ.

ಜಯಕೀರ್ತಿ ಹೇಳುವ ರಗಳೆಯ ಲಕ್ಷಣಗಳೆಂದರೆ–

ಸ್ವಚ್ಛಂದ ಸಂಜ್ಞಾ ರಘಟಾ ಮಾತ್ರಾಕ್ಷರ ಸಮೋದಿತ
ಪಾದದ್ವಂದ್ವ ಸಮಾಕೀರ್ಣಾ ಸುಶ್ರಾವ್ಯ ಸೈವ ಪದ್ದತಿಃ

(ಮಾತ್ರಾಕ್ಷರಗಳಿಂದ ಕೂಡಿ, ದ್ವಂದ್ವ ಪಾದಗಳಿಂದ ಕೂಡಿ, ಸ್ವಚ್ಛಂದವಾಗಿ ಇಂಪಾಗಿ ಹೇಳುವ ಶೈಲಿಯೇ ರಘಟಾ)

ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ರಗಳೆಯ ಸೂತ್ರವನ್ನು ಈ ಕೆಳಗಿನಂತೆ ತಿಳಿಸಿದ್ದಾನೆ.

ಗಣನಿಯಮ ವಿಪರ್ಯಾಸದೊ।
ಳೆಣೆವಡೆದೊಳ್ಪಸೆಯೆ ಮಾತ್ರೆ ಸಮನಾಗೆ ಗುಣಾ॥
ಗ್ರಣಿಯ ಮತದಿಂದ ತಾಳದ।
ಗಣನೆಗೊಡಂಬಟ್ಟೊಡದುವೆ ರಘಟಾ ಬಂಧಂ॥

(ಪ್ರಾಕೃತ–ಸಂಸ್ಕೃತ–ದಲ್ಲಿಯ ರಘಟಾ ಎನ್ನುವದರ ತದ್ಭವ ರೂಪವೇ ರಗಳೆ.)

(೧. ಚರಣಗಳಲ್ಲಿ ಮಾತ್ರೆಗಳು ಗಣನಿಯಮ ವಿಪರ್ಯಾಸದಿಂದಿರುವುದು.
೨. ಎಣೆಪಡೆದಿರುವುದು ಎಂದರೆ ಪಾದದ್ವಂದ್ವಗಳು ಜೊತೆಗೂಡಿಬರುವುದು.
೩. ಪ್ರತಿಸಾಲಿನಲ್ಲಿ ಮಾತ್ರೆಗಳು ಸಮನಾಗಿರುತ್ತವೆ.
೪. ರಗಳೆಯ ಲಯದಲ್ಲಿ ಒಳ್ಪು ಕಾಣುತ್ತದೆ.
೫. ರಗಳೆಯು ತಾಳದ ಗಣನೆಗೆ ಒಳಪಡುತ್ತದೆ.)

ಇದನ್ನು ಹೀಗೂ ಹೇಳಬಹುದು:

ಪ್ರತಿಪಾದದಲ್ಲೂ ಮಾತ್ರೆಗಳು ಸಮನಾಗಿರಬೇಕು.
ಪಾದಗಳು ಇಂತಿಷ್ಟೇ ಇರಬೇಕೆಂಬ ನಿಯಮವಿಲ್ಲ.
ಗಣಗಳ ಯೋಜನೆಯಲ್ಲಿ ಲಯಕ್ಕೆ ಹೊಂದುವ ವೈವಿಧ್ಯ ಇರಬೇಕು. ಎರಡೆರಡು ಪಾದಗಳ ಆದಿಯಲ್ಲಿ ಹಾಗೂ ಅಂತ್ಯದಲ್ಲಿ ಪ್ರಾಸವಿರಬೇಕು. ಸುಶ್ರಾವ್ಯವಾಗಿ, ತಾಳಬದ್ಧವಾಗಿರಬೇಕು.

ನಾಗವರ್ಮನು ಈ ರಗಳೆಯನ್ನು ಮೂರು ಬಗೆಯಾಗಿ ವಿಂಗಡಿಸಿದ್ದಾನೆ.

ಮಂದಾನಿಲ ಲಲಿತೋತ್ಸವ।
ವೆಂದೇ ರಗಳೆಗಳ ನಾಮಮಕ್ಕುಂ ಕ್ರಮದಿಂ॥
ದೊಂದಕೆ ಪದಿನಾಱಿರ್ಪ।

ತ್ತೊಂದಕಿರ್ಪತ್ತು ನಾಲ್ಕು ಮಾತ್ರೆಗಳಬಲೆ॥

೧. ಮಂದಾನಿಲ, ಲಲಿತ, ಉತ್ಸವ (ಉತ್ಸಾಹ) ಇವು ರಗಳೆಗಳ ಹೆಸರುಗಳು.

೨. ಪ್ರತಿಯೊಂದು ಪಾದಕ್ಕೆ ಕ್ರಮವಾಗಿ ೧೬, ೨೦, ೨೪ ಮಾತ್ರೆಗಳು.

(ಮೊದಲಲ್ಲಿ ಉತ್ಸವ ರಗಳೆಗೆ ೨೪ ಮಾತ್ರೆಗಳಿದ್ದರೂ ಇದು ಎರಡೆರಡು ಸಾಲುಗಳನ್ನು ಕೂಡಿಸಿರಬೇಕು ಹಾಗೂ ಆಮೇಲೆ ಪ್ರತಿ ಸಾಲಿಗೆ ೧೨ ಮಾತ್ರೆಗಳಿಗೆ ಮಿತವಾಗಿರಬೇಕು ಎನ್ನುತ್ತಾರೆ. ಉತ್ಸಾಹ ರಗಳೆಯ ಎರಡನೆ ಕ್ರಮದಲ್ಲಿ ಪ್ರತಿ ಸಾಲಿಗೆ ೧೧ ಮಾತ್ರೆಗಳನ್ನು ಮಾತ್ರ ಕಾಣಬಹುದು.)

೧. ಉತ್ಸಾಹ ರಗಳೆ:

ಪ್ರತಿ ಸಾಲಿನಲ್ಲಿ ತ್ರಿಮಾತ್ರೆಯ ನಾಲ್ಕು ಗಣಗಳು ಅಥವಾ ತ್ರಿಮಾತ್ರೆಯ ಮೂರು ಗಣಗಳು ಹಾಗೂ ಒಂದು ಗುರು.

ಒಂದನೇ ರೀತಿ: (ತ್ರಿಮಾತ್ರೆಯ ನಾಲ್ಕು ಗಣಗಳು. ಒಟ್ಟೂ ಪ್ರತಿ ಸಾಲಿಗೆ ೧೨ ಮಾತ್ರೆಗಳು)

೩ ೩ ೩ ೩

ಕುಳಿರ್ವ। ಪೂಗೊ।ಳಂಗ।ಳಲ್ಲಿ।

೩ ೩ ೩ ೩

ತಳಿರ। ಕಾವ।ಣಂಗ।ಳಲ್ಲಿ।

೩ ೩ ೩ ೩

ತುಂಬಿ।ವಿಂಡಿ।ನಂತೆ ।ಪಾಡಿ।

೩ ೩ ೩ ೩

ಜಕ್ಕ।ವಕ್ಕಿ।ಯಂತೆ ।ಕೂಡಿ।

(ಕಬ್ಬಿಗರ ಕಾವ)

ಎರಡನೇ ರೀತಿ : (ತ್ರಿಮಾತ್ರೆಯ ಮೂರು ಗಣಗಳು ಹಾಗೂ ಒಂದು ಗುರು. ಒಟ್ಟೂ ಪ್ರತಿಸಾಲಿಗೆ ೧೧ ಮಾತ್ರೆಗಳು)

೩ ೩ ೩ ೨

ಮಾವಿ।ನಡಿಯೊ।ಳಾಡು।ತುಂ।

೩ ೩ ೩ ೨

ಪಾಡ।ನೆಯ್ದಿ। ಕೇಳು।ತಂ।

೩ ೩ ೩ ೨

ಪೂಟ್ಟಿ।ನಿಂತು। ಕಳೆಯು।ತುಂ।

೩ ೩ ೩ ೨

ತೊಲಗ।ದಿರ್ದ।ರೆಸೆಯಿ।ತುಂ।

(ಕಬ್ಬಿಗರ ಕಾವ)

೨. ಮಂದಾನಿಲ ರಗಳೆ:

ಪ್ರತಿ ಸಾಲಿನಲ್ಲಿ ಚತುರ್ಮಾತ್ರೆಯ ನಾಲ್ಕು ಗಣಗಳು ಅಥವಾ ಮೂರು ಮಾತ್ರೆಯ ಗಣದ ಮುಂದೆ ಐದು ಮಾತ್ರೆಯ ಒಂದು ಗಣಗಳ ಎರಡು ಗುಂಪು.

ಒಂದನೆಯ ರೀತಿ: (ಚತುರ್ಮಾತ್ರೆಯ ನಾಲ್ಕು ಗಣಗಳು. ಒಟ್ಟೂ ಪ್ರತಿಸಾಲಿಗೆ ೧೬ ಮಾತ್ರೆಗಳು)

ಳ ಳ ಳ ಳ

ಆ ವೇಳೆಯೊಳತಿ।ಸಂಭ್ರಮ।ವೆಸೆದಿರೆ।

ಳ ಳ ಳ ಳ

ಪೂವಲಿ। ಪುರವೀ।ಧಿಗಳೊಳ್। ನೆರೆದಿರೆ।

ಳ ಳ ಳ ಳ

ಪವಳದ। ರನ್ನದ। ಗುದಿಗಳ್। ಗುಡಿಗಳ್।

ಳ ಳ ಳ ಳ

ನವಮೌ।ಕ್ತಿಕರಂ।ಗದ ದಾಂ।ಗುಡಿಗಳ್।

ಳ ಳ ಳ ಳ

ಮೆಱೆದುವು। ಮಿಱುಗುವ। ಮಿಸುನಿಯ। ತೋರಣ।

ಳ ಳ ಳ ಳ

ಮಱಕೆಯ। ಪುರಜನ।ದುತ್ಸವ।ದೋರಣ।

(ರಾಜಶೇಖರ ವಿಲಾಸ)

ಎರಡನೆಯ ರೀತಿ: (ಮೂರು ಮಾತ್ರೆಯ ಗಣದ ಮುಂದೆ ಐದು ಮಾತ್ರೆಯ ಒಂದು ಗಣಗಳ ಎರಡು ಗುಂಪು. ಒಟ್ಟೂ ಪ್ರತಿಸಾಲಿಗೆ ೧೬ ಮಾತ್ರೆಗಳು)

ಐ ೫ ಐ ೫

ನಂದ।ನಂಗಳೊಳ್ ।ಸುಱಿವ। ಬಿರಯಿಯಿಂ।

ಐ ೫ ಐ ೫

ಕಂಪು। ಕಣ್ಮಲೆಯೆ। ಪೂತ ।ಸುರಯಿಯಿಂ।

ಐ ೫ ಐ ೫

ಸುತ್ತ।ಲುಂ ಪರಿವ। ಜರಿವೊ।ನಲ್ಗಳಿಂ।

ಐ ೫ ಐ ೫

ಎತ್ತ।ಲುಂ ನಲಿವ। ಪೊಸನ।ವಿಲ್ಗಳಿಂ।

(ಪಂಪ ಭಾರತ)

ಐ. ಲಲಿತ ರಗಳೆ: (ವಾರ್ಧಕ ಷಟ್ಪದಿಯ ಮೊದಲ ಪಾದದಂತೆ ಲಲಿತ ರಗಳೆಯ ಎಲ್ಲಾ ಸಾಲುಗಳಿರುತ್ತವೆ. ಅಂದರೆ ಪ್ರತಿ ಪಾದದಲ್ಲಿ ಐದು ಮಾತ್ರೆಯ ನಾಲ್ಕು ಗಣಗಳಿರುತ್ತವೆ. ಒಟ್ಟೂ ಪ್ರತಿಸಾಲಿಗೆ ೨೦ ಮಾತ್ರೆಗಳು)

೫ ೫ ೫ ೫

ವಿಷಯವಿಷ।ವಲ್ಲಿಯಂ। ಪೆರ್ಚಿಸುವ। ಜಲಧಾರೆ।

೫ ೫ ೫ ೫

ಸಾಧುತ್ವ।ಮಂ ಕಿಡಿಸಿ। ನಡೆಸುವ ದು।ರಾಚಾರೆ।

೫ ೫ ೫ ೫

ಕಪಟನಾ।ಟಕತತಿಗೆ। ತಾನೆ ನೆಲೆ।ಯೆನಿಸುವಳ್।

೫ ೫ ೫ ೫

ಕೋಪಗ್ರ।ಹಾವೇಶ। ಜನ್ಮನಿಧಿ।ಯೆನಿಸುವಳ್।

(ಕಾದಂಬರಿ)

ಌ ಌ ಌ ಌ
ಇಂತು ಮಣಿ।ಮಂದ ಪು।ತ್ತೂರ್ಗೆ ನಡೆ।ವುತ್ತಮಿರೆ।
ಌ ಌ ಌ ಌ
ಮುಂತೊರ್ವ।ನೆಯ್ತಂದು। ಬಿನ್ನಪವೆ।ನುತ್ತಮಿರೆ।
ಌ ಌ ಌ ಌ
ದೇವ ಲ।ಗ್ನದ ಮುಹೂ।ರ್ತಂ ಬರಂ। ಬನದೊಳಗೆ।
ಌ ಌ ಌ ಌ
ದೇವ ಸುಖ।ದಿಂದಿರ್ಪು।ದೀವೂರ। ಬನದೊಳಗೆ।

(ಹರಿಹರ ಕವಿಯ ನಂಬಿಯಣ್ಣನ ರಗಳೆ)

ಇವೆಲ್ಲಾ ಹಳ/ನಡುಗನ್ನಡದ ಕಾವ್ಯವಾದರೆ, ರಾಷ್ಟ್ರಕವಿ ಕುವೆಂಪುರವರು ಬರೆದ ರಾಮಾಯಣ ದರ್ಶನಂ ಲಲಿತ ರಗಳೆಯ ಇತ್ತೀಚಿನ ಉದಾಹರಣೆ. ಲಲಿತ ರಗಳೆಯ ಬಂಧದಲ್ಲಿ ಆದಿ ಹಾಗೂ ಅಂತ್ಯ ಪ್ರಾಸವನ್ನು ತ್ಯಜಿಸಿ ಸರಳ ರಗಳೆಯಾಗಿ ಪರಿವರ್ತಿಸಿ ಮಹಾಛಂದಸ್ಸನ್ನು ಕವಿ ನಿರ್ಮಿಸಿಕೊಂಡಿದ್ದಾರೆ.

(ಪ್ರತಿಪಾದದಲ್ಲಿ ಐದು ಮಾತ್ರೆಯ ನಾಲ್ಕುಗಣ– ವಾರ್ಧಕದ ಮೊದಲಿನ ಸಾಲಿನ ಹಾಗೆ)
ಌ ಌ ಌ ಌ
ಇದೊ ಮುಗಿಸಿ। ತಂದಿಹೆನ್। ಈ ಬೃಹದ್। ಗಾನಮಂ।
ಌ ಌ ಌ ಌ
ನಿಮ್ಮ ಸಿರಿ।ಯಡಿಗೊಪ್ಪಿ।ಸಲ್ಕೆ ಓ। ಪ್ರಿಯ ಗುರುವೆ।
ಌ ಌ ಌ ಌ
ಕರುಣಿಸಿಂ। ನಿಮ್ಮ ಹರ।ಕೆಯ ಬಲದ। ಶಿಷ್ಯನಂ।
ಌ ಌ ಌ ಌ
ಕಾವ್ಯಮಂ। ಕೇಳ್ದೊಂದು ।ಕೃಪೆಗೆ ಕೃತ।ಕೃತ್ಯನಂ।
ಌ ಌ ಌ ಌ
ಧನ್ಯನಂ। ಮಾಡಿ ನೀ।ಮುದಯರವಿ।ಗೈತಂದು।
ಌ ಌ ಌ ಌ
ಕೇಳಲೆಳ।ಸಿದಿರಂದು। ಕಿರುಗವನ।ಗಳನೋದಿ।

(ರಾಮಾಯಣ ದರ್ಶನದಲ್ಲಿ, ಕೆಲವು ಸಾಲುಗಳಲ್ಲಿ ೨೦ ಮಾತ್ರೆಗಳಿಗೂ ಹೆಚ್ಚಿನ ಮಾತ್ರೆಗಳನ್ನು ಕಾಣಬಹುದು)

ರಗಳೆಯನ್ನು ಸ್ಥೂಲವಾಗಿ ಈ ಕೆಳಗಿನಂತೆ ವ್ಯಾಖ್ಯಾನಿಸಬಹುದು.

೧. ಪಾದಗಳು ತ್ರಿಪದಿ, ಚೌಪದಿ, ಷಟ್ಪದಿಗಳ ಹಾಗೆ ಮಿತವಾಗಿರುವದಿಲ್ಲ. ಅಮಿತವಾಗಿರುತ್ತವೆ. (ನೂರಾರು ಅಥವಾ ಸಾವಿರಾರು ಪಾದಗಳಾಗಿರಬಹುದು)
೨. ಎರಡೆರಡು ಪಾದಗಳು ಒಂದು ಗುಂಪಾಗಿದ್ದು ಆದಿಪ್ರಾಸ ಹಾಗೂ ಅಂತ್ಯಪ್ರಾಸಗಳು ಈ ಎರಡು ಪಾದಗಳಿಗೆ ಮಾತ್ರ ಸೀಮಿತವಾಗಿರುತ್ತವೆ.
೩. ಹಳ/ನಡುಗನ್ನಡ ಕಾವ್ಯಗಳಲ್ಲಿ ಆದಿಪ್ರಾಸ ಕಂಡು ಬರದೇ ಇದ್ದರೂ ಅಂತ್ಯ ಪ್ರಾಸವನ್ನು ಕಾಣಬಹುದು.

೪. ರಾಮಾಯಣ ದರ್ಶನವು ರಗಳೆಯ ಗುಂಪಿಗೆ ಸೇರಿದರೂ ಆದಿ ಅಥವಾ ಅಂತ್ಯ ಪ್ರಾಸವಿಲ್ಲ. ಆದರೂ ಮಾತ್ರಾಗಣಗಳ ಸಂಯೋಜನೆಯಿಂದ ಲಲಿತ ರಗಳೆ ಅಂತ ಗುರುತಿಸಲ್ಪಟ್ಟಿದೆ.
೫. ರಗಳೆಯಲ್ಲಿ ಉತ್ಸಾಹ, ಮಂದಾನಿಲ ಹಾಗೂ ಲಲಿತ ಹೀಗೆ ಮೂರು ಪ್ರಕಾರಗಳು.
೬. ಪ್ರತಿಪಾದದಲ್ಲಿಯೂ ಮಾತ್ರೆಗಳು ಸಮನಾಗಿರಬೇಕು.
೭. ಸುಶ್ರಾವ್ಯವಾಗಿ, ತಾಳಬದ್ಧವಾಗಿರಬೇಕು.
೮. ಉಳಿದ ಕಾವ್ಯಪ್ರಕಾರಗಳ ಹಾಗೆ ಅಲ್ಪ ವಿರಾಮ ಹಾಗೂ ಪೂರ್ಣ ವಿರಾಮಗಳನ್ನು ಅನುಭವದಿಂದಲೇ ತಿಳಿಯಬೇಕು.
೯. ಸಾಮಾನ್ಯ ನಿಯಮದಂತೆ ಯಾವ ಗಣವೂ ಮೊದಲಲ್ಲಿ ಲಘು ಹಾಗೂ ಅನಂತರ ಗುರು ಇರುವ (U_) ವಿನ್ಯಾಸ ಹೊಂದಿರುವುದಿಲ್ಲ.

(ಇತ್ತೀಚಿನ ರಗಳೆಗಳನ್ನು, ಯಾವುದೇ ಪ್ರಾಸದ ಕಟ್ಟಳೆಗೆ ಒಳಪಡದೇ ಪಾದಗಳನ್ನು ಅನುಲಕ್ಷಿಸಿ ಬರೆದವು ಗಳಾದುದರಿಂದ, ಸರಳ ರಗಳೆ ಎಂದೂ ಕರೆಯುತ್ತಾರೆ.)

ಹರಿಹರನು ತನ್ನ ಕಾವ್ಯಗಳಲ್ಲಿ 'ರಗಳೆ' ಯನ್ನು ವ್ಯಾಪಕವಾಗಿ ಬಳಸಿದ್ದಾನೆ. ಆದುದರಿಂದಲೇ ಇವನನ್ನು 'ರಗಳೆಯ' ಕವಿ ಎನ್ನುತ್ತಾರೆ.

***

ನೆರಳಿನಾಟ

– ಭ.ರಾ. ವಿಜಯಕುಮಾರ್

ನೆರಳಿನಾಟವ ನೋಡು ಬೆರಳಿನಾಟವ ನೋಡು
ಬೆರಳಲಿಲ್ಲದ ಚಿತ್ರ ನೆರಳಿನಲಿ ಬಹುದು!
ಅತ್ತಿತ್ತ ಮಾಡುತಿರೆ ಚಳಕದಲಿ ಬೆರಳುಗಳ
ವಿವಿಧಾಕೃತಿಯ ನೆರಳು ನಮ್ಮ ಸೆಳೆಯುವುದು

ಬೆಳಕ ಮೂಲದ ಕೋನ ನೆರಳು ಬೀಳುವ ತಾಣ
ಎರಡರಾ ನಡುವಿನಲಿ ಆಟದಾ ಅಂಕಣ
ಆಟಕೊಂದಿರಲು ಕಥೆ, ಜತೆಗಷ್ಟು ಪಾತ್ರಗಳು
ಹಿನ್ನೆಲೆಗೆ ಧ್ವನಿ ಕೂಡಿ ಸೊಗಸುವೀ ಪಯಣ

ಗಣಪನೂ ಬಹನಿಲ್ಲಿ ಖಗಮೃಗವು ನಲಿಯುವವು
ಪುಣ್ಯಕೋಟಿಯ ತ್ಯಾಗವಿಲ್ಲಿ ಮೆರೆಯುವುದು
ಬೆರಳನೆತ್ತಲು ಕೋಡು ಮತ್ತೆ ಚಾಚಲು ಬಾಲ
ಚಣಚಣಕೆ ಒಂದೆ ಹಲವಾಗುವುದು ಕಾಲ!

ಒಂದು ಜ್ಞಾನದ ಬೆಳಕು ನಡುವಿನಲಿ ಕರಯುಗವು
ತೋರುವೀ ನೆರಳಿನಲು ಜ್ಞಾನದೊಲವು
ಬೆಳಕಿನೆಡೆ ತಿರುಗುತಲಿ ನಡೆಯರಿತು ಬಾಗಿದರೆ
ನೆರಳು ಕೂಡ ಮನವನರಳಿಸುವುದು!

***

ಸಾತಜ್ಜಿಯ ಮೆಟ್ರೋ ಪ್ರಯಾಣ

– ಟಿ.ಆರ್.ಉಷಾರಾಣಿ

ಬೆಂಗಳೂರಿಗೆ ಮೆಟ್ರೋ ಬಂದ ಹೊಸತು. ಶ್ರೀಕಂಠೂ ಮಾತೃಶ್ರೀ ಎಂಬತ್ತು ವರ್ಷದ ಚಿರಯೌವನೆ ಸಾತಜ್ಜಿ ಉರ್ಫ್ ಸಾವಿತ್ರಮ್ಮ ಮೆಟ್ರೋ ಹತ್ತಬೇಕೂಂತ ತನ್ನ ಮನದಿಂಗಿತವನ್ನ ಮಗನ ಮುಂದಿಟ್ಟಾಗ ಅವನು ಕೇಳಿದ – "ನಿಂಗೆ ಹತ್ತೋಕಾಗುತ್ತಾ?"

"ಓ ಯಾಕಾಗಲ್ಲ? ನಮ್ಮ ಮೆಟ್ರೋ ಮೆಟ್ಟಿ ನಾನು ಅಷ್ಟು ಸುಲಭವಾಗಿ ಪ್ರಾಣ ಬಿಡೋಳಲ್ಲಪ್ಪ. ಲೇ ಇವನೆ.. ಎಂಥದ್ದೋ ನಿನ್ನ ಮಗನ ಹೆಸ್ರು? ಹಾಳಾದ್ದು ಬಾಯಿಗೇ ಬರವಲ್ದು ಅವನ ಹೆಸರು..."

"ಸಮೀರ ಅಮ್ಮ..."

"ಅದನ್ನೇ ಮಾರುತೀನೋ, ಆಂಜನೇಯ ಅಂತ್ಲೋ ಇಟ್ಟಿದ್ರೆ ಆಗ್ತಿರ್ಲಿಲ್ವ? ಸಮೀರ ಅಂತೆ, ಲೋ, ನಮ್ಮ ಪಾತೂ ಮನೇತನಕ ಮೆಟ್ರೋ ರೈಲು ಓಡುತ್ತೇನೋ ಮರಿ...?"

"ಪಾತಜ್ಜಿ ಮನೇವರಗೂ ಏನು, ಅವರ ಮನೆ ಒಳಗೇ ಹೋಗುತ್ತೆ. ಏ ಹೋಗಜ್ಜಿ, ನೀನು ಸುಮ್ನೆ ತಲೆ ತಿನ್ಬೇಡ"

"ಅಯ್ಯೋ ನಾನೇನು ನಿನ್ನನ್ನ ಗರುಡನ ಪಾರ್ಟು ಹಾಕು, ನಾನು ನಿನ್ನ ಹೆಗಲ ಮೇಲೆ ಕೂತ್ಕೊಂಡು ಬರ್ತೀನಿ ಅಂತಾ ಕೇಳಿದ್ನೇ? ಮೆಟ್ರೋದಲ್ಲಿ ಒಂದುಸಲ ರೌಂಡು ಹೋಗಬೇಕು ಅಂದೆ ಅಷ್ಟೇ."

"ನಾನೂ ನೀನೂ ಶಾಮ್ಲು ಒಟ್ಟಿಗೆ ಹೋಗೋಣ ಒಂದು ದಿನ" ಶ್ರೀಕಂಠುವಿಗೆ ಹೇಗಾದರೂ ಅಮ್ಮ ಮೆಟ್ರೊ ಹತ್ತುವುದನ್ನು ಮರೆತರೆ ಸಾಕೆನಿಸಿತ್ತು.

"ಅದೆಲ್ಲಾ ಆಗೋಲ್ಲಾಪ್ಪ. ನಾನು ನಾಳೇನೆ ಹೋಗಬೇಕು"

"ನಾಳೆ ಸೋಮವಾರ ರಷ್ ಇರುತ್ತೆ. ಮಂಗಳವಾರ ಹೋಗೋಣ"

"ನೋಡ್ತಾ ನೋಡ್ತಾ ಯಾರಾದ್ರೂ ಮಂಗಳವಾರ ಹೋಗ್ತಾರೇನೋ. ನಾನಂತೂ ನಾಳೇನೆ ಹೋಗೋಳು"

"ನೀನು ಕಚ್ಚೆ ಸೀರೆ ಉಟ್ಕೊಂಡು ಹೋಗೋಕಾಗೋಲಮ್ಮ".

"ನೀನೊಬ್ಬ ಮೂದೇವಿ ಕಣೋ ಶ್ರೀಕಂಠು. ಇದೇ ಕಚ್ಚೆಸೀರೇಲಿ ನಾನು ಏರೋಪ್ಲೇನೇ ಹತ್ತಿದೀನಿ, ಅಮೆರಿಕಾ ಎಲ್ಲಾ ಸುತ್ತಿದೀನಿ."

ವಿಧಿ ಇಲ್ಲದೆ ಶ್ರೀಕಂಠೂ ಮಗನಿಗೆ ಆಜ್ಞೆ ಮಾಡಿದರು. "ಸಮ್ಮು, ನಾಳೆ ವಿಜಯನಗರದ ಪಾತಜ್ಜಿ ಮನೆಗೆ ಹೋಗಬೇಕು. ನೀನು ಕಾರಲ್ಲಿ ನಮ್ಮನ್ನ ಡ್ರಾಪ್ ಮಾಡಪ್ಪ ಮೆಟ್ರೋಗೆ ಆಮೇಲೆ ಅಲ್ಲಿ ಕಾಯ್ತಾ ಇರು. ಶಾಮ್ಲಾ ನಾಳೆ ನೀನೂ ಬಂದ್ಬಿಡು. ನಿಮ್ಮಮ್ಮನ್ನ ಮಾತ್ರ ಕರೆದ್ರಿ ಅಂತಾ ಗೊಣಗಾಡಬೇಡ..."

ಶಾಮ್ಲ ಮೊಗಚೇಕಾಯಿ ಕೈಯ್ಯಲ್ಲಿ ಹಿಡಿದೇ ಸಮರಕ್ಕೆ ಬಂದವಳಂತೆ ಗಂಡನಿಗೆ ಹೇಳಿದಳು, ''ನಂಗೇನು ಆಸೆ ಇಲ್ಲಾಪ್ಪ. ನೀವು ನಿಮ್ಮಮ್ಮನ್ನ ಕರೆದುಕೊಂಡು ಹೋಗಿ ಬನ್ನಿ. ನಂಗೆ ಮನೇಲಿ ರಾಶಿ ಕೆಲಸ ಬಿದ್ದಿದೆ.''

ಸಾವಿತ್ರಮ್ಮನವರಿಗೆ ಖುಷಿಯಾಯಿತು. ''ಪಾತಿಗೆ ಫೋನ್ ಮಾಡಿ ಹೇಳ್ಬಿಡೋ. ನಾಳೆ ನಿಮ್ಮನೇಗೆ ಬರ್ತಾ ಇದೀವಿ ಅಂತಾ. ಅವ್ಳು ಕಾಯಿ, ವೀಳ್ಯೆದೆಲೆ ತರ್ಸಿಟ್ಟಿರ್ತಾಳೆ. ಇಲ್ದೆ ಇದ್ರೆ ಇನ್ನೇನು ಹೊರಡ್ತೀವಿ ಅನ್ನೋವಾಗ ತರಿಸೋಕೆ ಕಳಿಸ್ತಾಳೆ. ಹಾಗೇ ಒಂದಿಷ್ಟು ಕೊಬ್ರಿ ಮಿಠಾಯಿ, ಕೋಡ್ಬಳೆ ಕೆದಕಿಬಿಡ್ತೀನಿ''

''ಅಮ್ಮ, ನೀನೇನೂ ಕೆದಕ್ಬೇಡ. ನಿಂಗೇನೂ ಕಾಯಿಲೆ ಇಲ್ಲಾಂದ್ರೆ ಪಾಪ ಪಾರ್ವತಿ ಚಿಕ್ಕಮ್ಮಂಗೆ ಹೈ ಬಿಪಿ, ಶುಗರು. ಅವರು ಅವರು ಸ್ವೀಟು, ಕರಿದ ತಿಂಡಿ ತಿನ್ನೋಹಾಗಿಲ್ಲ''

''ಅವಳು ಯಾರೂ ಇಲ್ದೆ ಇದ್ದಾಗ ಒಂದು ಚೂರು ಬಾಯಿಗೆ ಹಾಕ್ಕೋತಾಳೆ ಕಣೋ. ಒಂದು ಮಾತ್ರೆ ಜಾಸ್ತಿ ನುಂಗುದ್ರೆ ಆಯ್ತು ಅಂತಾಳೆ''

''ಒಂದು ಚೂರು ಬಾಯಿಗೆ ಹಾಕ್ಕೋಳಕ್ಕೆ ಇಲ್ಲೇ ಹತ್ತಿರದ ಸ್ವೀಟ್ ಸ್ಟಾಲ್ನಿಂದ ತಂದುಬಿಡ್ತೀನಿ ಅಜ್ಜಿ. ಅಲ್ಲಿ ಸೆಕ್ಯೂರಿಟಿ ಚೆಕ್ ಇರುತ್ತೆ. ತಿಂಡಿಗಿಂಡಿ ಬಿಡಲ್ಲ'' ಸಮೀರ ಮಧ್ಯೆ ಬಾಯಿಹಾಕಿದ.

''ಲೇ... ನನ್ನನ್ನೇನು ಪೆದ್ದು ಅಂದ್ಕೊಂಡಿದೀಯೇನೋ. ದಿನಾ ಆಫೀಸಿಗೆ ಹೋಗೋರಿಗೆ ಊಟದ ಡಬ್ಬಿ ಬಿಡಲ್ವಾ? ನಂಗೇ ಹೇಳೋಕೆ ಬರ್ತಾನೆ''. ಅಜ್ಜಿ ಹೇಳಿದ ಮೇಲೆ ಶಾಸನ.

ಸಮೀರ, ವಿಜಯನಗರ ಸ್ಟೇಷನ್ನಲ್ಲಿ ಕಾದಿದ್ದು ಇವರನ್ನು ಪಾರ್ವತಮ್ಮನವರ ಮನೆಗೆ ಡ್ರಾಪ್ ಮಾಡುವುದೆಂದು ತೀರ್ಮಾನವಾಯಿತು.

''ಶಾಮ್ಲ, ಸ್ವಲ್ಪ ಮಾವಿನಕಾಯಿ ಉಪ್ಪಿನಕಾಯಿ ತೊಗೊಳ್ಳೆ. ಪಾತಿಗೆ ತುಂಬಾ ಇಷ್ಟ.''

''ಅತ್ತೆ, ಅವ್ರ ಮನೇಲೂ ಉಪ್ಪಿನಕಾಯಿ ಹಾಕಿರ್ತಾರೆ. ಅಲ್ಲದೆ ಈ ಇಷ್ಟ ಅವರಿಗೆ ಕಷ್ಟ ಆಗುತ್ತೆ''

''ಶಾಮ್ಲ ನಿಂಗ್ಯಾಕೆ? ನೀನೇನು ಡಾಕ್ಟ್ರಾ? ಸುಮ್ನೆ ಅಮ್ಮ ಹೇಳಿದ್ದು ಕೇಳೋದ ಕಲ್ತುಕೋ'' ಶ್ರೀಕಂಠು ಸಿಟ್ಟನ್ನೆಲ್ಲಾ ಹೆಂಡತಿಯ ಮೇಲೆ ಕಾರಿದರು.

ಮೆಟ್ರೋ ಸ್ಟೇಷನ್ ತಲುಪಿ ಸಮೀರ ಇವರಿಗೆ ಟಿಕೇಟು ಖರೀದಿಸಿ ಕಾರಿನಲ್ಲಿ ಹೊರಟ.

''ಅಮ್ಮ, ಹುಷಾರು ನೀನು ಕೈ ಹಿಡ್ಕೊಂಡಿರು, ತಪ್ಪಿಸ್ಕೊಂಡುಬಿಟ್ಟೀಯ''. ಶ್ರೀಕಂಠುಗೆ ಒಳಗೊಳಗೇ ತಳಮಳ. 'ಈ ಅಮ್ಮ ಸುಮ್ನೆ ರಾಮಾಕೃಷ್ಣಾಂತ ಮನೇಲಿ ಇರೋದು ಬಿಟ್ಟು...' ಎಂದು ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಿದ್ದ. ಮೆಟ್ರೊ ಟಿಕೇಟ್ ಕರಿ ಬಿಲ್ಲೆಗಳನ್ನು ಬ್ಯಾಗಿನೊಳಗೆ ಸುರಕ್ಷಿತವಾಗಿ ಇಡುತ್ತಿದ್ದರೆ, ಅಜ್ಜಿಯ ಕಣ್ಣು ಬಿಲ್ಲೆಗಳ ಮೇಲೆ ಬಿತ್ತು.

''ಲೋ ಶ್ರೀಕಂಠು, ಯಾವುದಕ್ಕೂ ಇರ್ಲಿ. ಆ ಕಪ್ಪು ಬಿಲ್ಲೆ ನನ್ಹತ್ರ ಕೊಟ್ಟಿರು''

ಶ್ರೀಕಂಠುಗೆ ಧರ್ಮಸಂಕಟಕ್ಕಿಟ್ಟುಕೊಂಡಿತು. ''ಅಮ್ಮ ಆ ಬಿಲ್ಲೇನೆ ಟಿಕೀಟು. ಅದನ್ನ ಹುಷಾರಾಗಿ ಇಟ್ಕೊಂಡಿರಬೇಕು''

"ನನ್ನ ಬಿಲ್ಲೆ ನನ್ನ ಹತ್ರ ಇರ್ಲಿ ಕೊಡಪ್ಪಾ". ಶ್ರೀಕಂಠು ಜೇಬು, ಬ್ಯಾಗು ಎಲ್ಲಾ ತಡಕಿ ಬಿಲ್ಲೆಯನ್ನು ಈಚೆಗೆ ತೆಗೆದ. ಅಷ್ಟು ಹೊತ್ತಿಗೆ ಮೆಟ್ರೋ ಬಂದು ಹೋಗಿ ಆಯ್ತು.

"ಅದಕ್ಕೇ ನಂಗೆ ನಿಮ್ಮ ಜೊತೆ ಬರೋಕ್ಕೇ ಬೇಜಾರು. ರಾಮಾಯಣ ಮಾಡ್ತೀರ. ಒಂದು ಟಿಕೇಟ್ ಇಟ್ಟುಕೊಳ್ಳೋದು ಈ ಲಕ್ಷಣಾನಾ..."

ಶಾಮ್ಲಾ ತಾನೇನು ಕಮ್ಮಿ ಅಂತಾ ಒಂದಷ್ಟು ಒದರಿದಳು. ಅಷ್ಟರಲ್ಲಿ ಸಮೀರನ ಫೋನು ಟ್ರಿಣ್ಗುಟ್ಟಲು ಶುರುವಾಯಿತು. ಟಿಕೇಟು ಬಿಲ್ಲೆಯನ್ನು ಸಾತಜ್ಜಿ ತನ್ನ ಸೀರೆಯ ನೆರಿಗೆಗಳಿಂದ ಸುತ್ತಿದ್ದ ಬಾಳೇಕಾಯಿ ಭದ್ರತಾ ಕಪಾಟಿನಲ್ಲಿ ಇಟ್ಟುಕೊಂಡಳು.

ಶ್ರೀಕಂಠೂಗೆ ಗಾಬರಿ. "ಅಮ್ಮ, ಈ ಬಿಲ್ಲೆ ಹಾಕಿದ್ರೇನೆ ಹೊರಗೆ ಹೋಗೋಕೆ ಆಗೋದು. ಅದೇನಾದ್ರೂ ಬಿದ್ದು ಹೋದ್ರೆ..."

"ಇದರಲ್ಲಿ ಪ್ರಾಣ ಕಟ್ಟಿಟ್ಟುಕೊಂಡ್ರೂ ಯಮ ತೊಗೊಂಡು ಹೋಗೋಕಾಗೋಲ್ಲ ಕಣೋ" ಮಾತಿನಲ್ಲಿ ಸಾವಿತ್ರಮ್ಮ ನವರನ್ನು ಮೀರಿಸುವುದುಂಟೇ!

ಇಷ್ಟೆಲ್ಲಾ ಆಗುವ ಹೊತ್ತಿಗೆ ಮತ್ತೊಮ್ಮೆ ಮೆಟ್ರೋ ಬಂದು ನಿಂತಿತು. ಶ್ರೀಕಂಠು ಗಾಬರಿಯಿಂದ ಅತ್ತ-ಇತ್ತ ನೋಡುತ್ತಾ, "ಅಮ್ಮ, ಶಾಮ್ಲು, ಹತ್ತಿ... ಹತ್ತಿ...,. ನಿಧಾನ... ಹುಷಾರು" ಎನ್ನುವ ಹೊತ್ತಿಗೆ ಮೆಟ್ರೋ ಚಲಿಸಿತು. ಸಾತಜ್ಜಿ ಮಾತ್ರ ಎಲ್ಲರನ್ನೂ ತಳ್ಳಿ ಮೆಟ್ರೊ ಏರಿ, ತಮ್ಮ ಜೀವನದ ಪರಮಾಸೆಯನ್ನು ಪೂರೈಸಿಕೊಂಡ ಖುಷಿಯಲ್ಲಿದ್ದರು.

ಸಾತಜ್ಜಿ ಜಾಗ ಮಾಡಿಕೂಂಡು ದೊಸಕ್ಕೆಂದು ಕುಳಿತೇಬಿಟ್ಟರು. ಪಕ್ಕದವರ ಕುಶಲೋಪರಿ ಕೇಳಿ ತಿಳಿದುಕೊಂಡು, "ನೋಡಿ, ನನ್ಮಗ ಸೊಸೆಗೆ ಹತ್ತೋಕೆ ಆಗ್ಲಿಲ್ಲ. ಸಧ್ಯ ನಾನು ನನ್ನ ಟಿಕೇಟು ಬಿಲ್ಲೆ ಮೊದ್ಲೆ ಇಸ್ಕೊಂಡೆ. ನನ್ಮಗನಿಗೆ ಸ್ವಲ್ಪ ಗಾಬರಿ ಜಾಸ್ತಿ. ಸ್ವಲ್ಪ ವಿಜಯನಗರದಲ್ಲಿ ನನ್ನನ್ನ ಇಳಿಸಿಬಿಡೀಪ್ಪ..." ತಮ್ಮನ್ನು ಇಳಿಸುವ ಜವಾಬ್ದಾರಿಯನ್ನು ಅವರಿಗೆ ವಹಿಸಿ ಮುದ್ದಾಗಿ ಉಲಿಯುತ್ತಿದ್ದ ಅಪರ್ಣಾರ ಸ್ಟೇಷನ್ ಮಾಹಿತಿ ಧ್ವನಿಯನ್ನು ಆಸ್ವಾದಿಸುತ್ತಿದ್ದರು..

ಇತ್ತ ಗಾಬರಿಯಿಂದ ಶ್ರೀಕಂಠು ಸ್ಟೇಷನ್ನಿನಲ್ಲೇ ನಿಂತಿದ್ದ. "ಎಂಥ ಕೆಲ್ಸ ಆಗೋಯ್ತು. ಸಧ್ಯ, ಶಾಮ್ಲು ಅಮ್ಮನ ಜೊತೆಗಿದಾಳಲ್ಲ" ಎಂದು ಸ್ವಗತದಲ್ಲಿ ತಿರುಗುತ್ತಾನೆ, ಶಾಮ್ಲು ಪಕ್ಕದಲ್ಲೇ ನಿಂತಿದ್ದಾಳೆ. ಶ್ರೀಕಂಠುವಿನ ತೆರೆದ ಬಾಯಿ ತೆರೆದಂತೆ ಇತ್ತು. ಗಂಡನ ಗಾಬರಿ ನೋಡಿ ಶಾಮ್ಲಾ,

"ಅಯ್ಯೋ, ನಿಮ್ಮಮ್ಮನ ಬಗ್ಗೆ ಏನೂ ಯೋಚ್ನೆಮಾಡ್ಬೇಡಿ. ಅಕ್ಕಪಕ್ಕದವರಿಗೆ ಹೇಳಿ ಸರಿಯಾಗಿ ಇಳ್ಕೋತಾರೆ". ಮಗನಿಂದ ಮತ್ತೊಮ್ಮೆ ಫೋನು ಟ್ರಿಣ್ ಗುಟ್ಟಿತು.

"ಶಾಮ್ಲು, ನಡೀ.. ಈ ಮೆಟ್ರೋ ಸಹವಾಸಾನೇ ಬೇಡ ಆಟೋ ಹತ್ತಿಕೊಂಡು ಹೊರಟುಬಿಡೋಣ". ಶ್ರೀಕಂಠುಗೆ ಸಾಕಪ್ಪಾ ಈ ಮೆಟ್ರೊ ಸಹವಾಸ ಎನಿಸುತ್ತಿತ್ತು.

"ಆಟೋದಲ್ಲಿ ತಲುಪೋ ಹೊತ್ಗೆ ಒಂದು ಗಂಟೆ ಮೇಲಾಗುತ್ತೆ. ನಿಮ್ಮಮ್ಮ ಸಹಸ್ರನಾಮ ಮಾಡ್ತಾ ಇರ್ತಾರೆ. ನಡೀರಿ ಮುಂದಿನ ಸಲ ರಾಮಾಕೃಷ್ಣಾಂತ ಹತ್ತೇ ಬಿಡೋಣ"

"ನನ್ನ ಕೈಯಲ್ಲಿ ಆಗಲ್ಲ ಕಣೇ. ನಾನಂತೂ ಹೊರಟೆ" ಎಂದವನೆ ಹೆಂಡತಿಗೂ ಕಾಯದೇ ಹೊರಟೇಬಿಟ್ಟ ಶ್ರೀಕಂಠು.

ಅಜ್ಜಿ ಅವರಿವರನ್ನು ಕೇಳಿಕೊಂಡು ಹೊರಕ್ಕೆ ಬಂದೇಬಿಟ್ಟರು. ಸಮೀರನಿಗೆ ಅಜ್ಜಿಯೊಬ್ಬಳನ್ನೇ ನೋಡಿ ಆಶ್ಚರ್ಯ, ನಗು.

"ಎಲ್ಲಜ್ಜಿ, ನಿನ್ನ ಮಗ ಸೊಸೆ"

"ಅಯ್ಯ, ನಿಮ್ಮಪ್ಪಂಗೆ ಮೊದಲಿನಿಂದ್ಲೂ ಗಾಬರಿ, ಅವನ ಜೊತೆ ಸೇರ್ಕೊಂಡು ನಿಮ್ಮಮ್ಮಾನೂ ಪೆದ್ದಿ ಆಗ್ಬಿಟ್ಟಿದಾಳೆ."

ಸಮೀರ ನಗುತ್ತಾ ಕಾರಿನ ಬಾಗಿಲು ತೆಗೆದು ಅಜ್ಜಿಯನ್ನು ಒಳಗಡೆ ಕೂರಿಸಿ ತಾನು ಡ್ರೈವರ್ ಸೀಟಲ್ಲಿ ಕುಳಿತ.

"ಏನಜ್ಜಿ ನಿಂಗಿರೋ ಸ್ಮಾರ್ಟ್‌ನೆಸ್ ಸ್ವಲ್ಪ ನಿನ್ನ ಮಗನಿಗೂ ಕೊಡೋದು ತಾನೆ? ಕಾದೂಕಾದೂ ಸಾಕಾಯ್ತು" ಎಂದು ಬಾಗಿಲು ತೆಗೆದುಕೊಂಡು ಹೊರಗೆ ಬರುತ್ತಾನೆ. ಕೊನೆಗೂ ಮೀಟರ್ ಮೇಲೆ ಇಪ್ಪತ್ತು ಹೆಚ್ಚು ಕೊಟ್ಟು ಶ್ರೀಕಂಠು ಮತ್ತು ಶಾಮ್ಲು ಹ್ಯಾಪುಮೋರೆ ಹಾಕಿಕೊಂಡು ಆಟೋದಲ್ಲಿ ಬಂದಿಳಿದರು.

ಮಗನನ್ನು ಕಂಡ ತಕ್ಷಣ ಸಾವಿತ್ರಮ್ಮ, "ಅಂತೂ ಬಂದ್ರಾ, ಶ್ರೀಕಂಠು ವಾಪಸ್ಸು ಹೋಗೋವಾಗ ನನ್ನ ಜೋತೇನೆ ಇರು" ಎನ್ನುವುದೇ?

ವಾಪಸ್ಸೂ ಮೆಟ್ರೋದಲ್ಲೇ ಹೋಗ್ಬೇಕಾ ಎಂದು ದೈನ್ಯದಿಂದ ಅಮ್ಮನ ಮುಖ ನೋಡಿದ. ಸಮೀರ ಒಳಗೊಳಗೇ ಮುಸಿಮುಸಿ ನಗುತ್ತಿದ್ದರೆ ಶಾಮ್ಲು ಮುಖ ದಪ್ಪ ಮಾಡಿಕೊಂಡು ಕುಳಿತಿದ್ದಳು.

"ಅಮ್ಮ, ಪಾತು ಚಿಕ್ಕಮ್ಮಂಗೆ ಕತೇ ಎಲ್ಲ ಹೇಳ್ಬಿಡಬೇಡ." ಶ್ರೀಕಂಠುವಿನ ಮಾತು ಪಾತಾಳಕ್ಕಿಳಿದು ಹೋಗಿತ್ತು.

"ಇಲ್ಲ ಕಣೋ, ಆ ತಿಂಡಿ ಬ್ಯಾಗು ಇಲ್ಲಿ ಕೊಡೋ. ನಿನ್ನ ಅವಾಂತರದಲ್ಲಿ ಎಲ್ಲಾ ಪುಡಿಪುಡಿ ಮಾಡ್ಬಿಡ್ತೀಯ"

"ತಿಂಡಿ ಬ್ಯಾಗಾ.. ಶಾಮ್ಲು, ಆ ಬ್ಯಾಗನ್ನ ಅಮ್ಮನ ಕೈಯಲ್ಲಿ ಕೊಡೆ"

"ಯಾವ ಬ್ಯಾಗು, ನನ್ಹತ್ರ ಯಾವ ಬ್ಯಾಗೂ ಇಲ್ಲ. ನೀವೇ ಅಲ್ವಾ ಹೆಗಲಿಗೆ ನೇತು ಹಾಕ್ಕೊಂಡು ನಿಂತಿದ್ದವ್ರು. ಅಯ್ಯೋ ಮೆಟ್ರೋ ಸ್ಟೇಷನ್ನಲ್ಲೇ ಬಿಟ್ಟ್ ಬಿಟ್ರೇನ್ರೀ."

"ಕೂಗಬೇಡ್ವೆ, ಅಮ್ಮನ ಕಿವಿ ಬೇರೆ ಚುರುಕು"

"ತಿಂಡಿ ಬ್ಯಾಗು. ಅಲ್ಲೇ ಬಿಟ್‌ಬಿಟ್ಯೇನೋ. ಏನಪ್ಪ ನೀನು ಇಷ್ಟು ಗಾಬರಿ ಮಾಡಿಕೊಳ್ತೀಯ. ಮಾಡಿದ್ದೆಲ್ಲಾ ಅನ್ಯಾಯ ವಾಗಿ ಹೋಯ್ತು. ಬರೀ ಕೈಯಲ್ಲಿ ಹ್ಯಾಗೋ ಹೋಗೋದು?" ಅಜ್ಜಿ ಲೊಚಗುಟ್ಟುತ್ತಲೇ ಮನೆಯಲ್ಲಿ ಅಡಿ ಇಟ್ಟಳು. ಪಾರ್ವತಿ ಅತ್ಯಂತ ಆತ್ಮೀಯತೆಯಿಂದ ಅಕ್ಕನನ್ನು ಬರಮಾಡಿಕೊಂಡರು.

"ಪಾತಿ, ಮೆಟ್ರೊದಲ್ಲಿ ಬಂದೆ ಕಣೆ. ಕಣ್ಮುಚ್ಚಿ ಬಿಡೋ ಹೊತ್ಗೆ ವಿಜಯನಗರ ಬಂದೇಬಿಡ್ತು" ಸಾತಜ್ಜಿ ತನ್ನ ಸಾಧನೆಯನ್ನು ಹೇಳಿಕೊಂಡರೆ,

"ಹೋ, ನಾನೂ ಬೇಕಾದಷ್ಟು ಸಲ ಹೋಗಿ ಬಂದಿದೀನಿ ಕಣೆ. ಬೇಡಾಂದ್ರೆ ಈ ಮೊಮ್ಮಕ್ಕಳು ಕೇಳ್ಬೇಕಲ್ಲ.." ತನಗಿಂತ ಮೊದಲು ತನ್ನ ತಂಗಿ ಮೆಟ್ರೊ ಹತ್ತಿದ್ದಾಳೆ ಎಂದು ತಿಳಿದ ತಕ್ಷಣ ಸಾತಜ್ಜಿ ಅವಳ ಮಾತು ತುಂಡರಿಸಿ,

"ಅಯ್ಯೋ ನನಗಿದೇನು ಹೊಸತಲ್ಲ. ಅಟ್ಲಾಂಟಾದಲ್ಲಿ ಬೇಕಾದಷ್ಟು ಸಲ ಓಡಾಡಿದೀನಿ. ನಮ್ಮ ಶ್ರೀಕಂಠು, ಶಾಮ್ಲಾಗೆ ಹೊಸತು, ಪಾಪ" ಎಂದರು.

ಪಾತಜ್ಜಿ ನಗುತ್ತಾ, "ಶ್ರೀಕಂಠು, ಮೆಟ್ರೋದಲ್ಲಿ ಮೊದಲ ಸರ್ತಿ ಬಂದ್ಯೇನೋ."

"ಅವನಾ.., ಅಯ್ಯೋ ಯಾಕೆ ಹೇಳ್ತಿಯ ಪಾತು, ನಮ್ಮ ಶ್ರೀಕಂಠು..." ಸಾತಜ್ಜಿ ಬಾಯಿ ತೆರೆಯುವ ಮುನ್ನ ಸಮೀರ,

"ಅಜ್ಜಿ, ತೊಗೋ ಸ್ವೀಟು ಖಾರ" ಅಂತ ಬಾಯಿ ಮುಚ್ಚಿಸಿಬಿಟ್ಟ. ಬಡಪಾಯಿ ಬದುಕಿದೆಯಾ ಬಡ ಜೀವವೇ ಎಂದುಕೊಂಡ ಶ್ರೀಕಂಠು. ಅಂತೂ ಇಂತೂ ಸಾತಜ್ಜಿಯ ಮೆಟ್ರೋ ಪ್ರಯಾಣದ ಆಸೆ ಈಡೇರಿತ್ತು.

***

ಗುಲ್ಮೊಹರ್

– ಲೀಲಾ ವಾಸುದೇವ

ಗುಲ್ಲೋಗುಲ್ಲು ಅರಳಿತು ಗುಲ್ಮೊಹರ್
ವರ್ಷ ಕಳೆದರೂ ಅದೇ ಹರ್ಷ
ಬಣ್ಣದಲಿ ಕುಂದಿಲ್ಲ ರೂಪದಲಿ ಬದಲಿಲ್ಲ
ತರುಲತೆ ಹೂವುಗಳ ಸಂಭ್ರಮ
ವರ್ಣನೆಗೆ ನಿಲುಕಲ್ಲ – ಗುಲ್ಮೊಹರ್

ಅಚ್ಚ ಹಸಿರು ಮುಚ್ಚಿ ಹೋಗಿ
ಕೆಂಪು ರಂಗಿನ ದಳಗಳು
ಪ್ರಕೃತಿಯೇ ಹೆಣೆದ ಚಪ್ಪರಕೆ
ಬಿಸಿಲು ನೀಗುವ ಚಾಮರ

ಗಂಡುಮಕ್ಕಳ ಆಕರ್ಷಣೆ
ಕತ್ತಿ ಕಾಯಿಗೆ ಮನ್ನಣೆ
ಹಸಿರು ಕೆಂಪಿನ ಮಿಶ್ರಣ
ಮನಕೆ ಆನಂದ ದರ್ಶನ

ಹಾದಿಯಲಿ ಹೊಕ್ಕವರ ಕಣ್ಮನವ
ಸೋಜಿಗದಿಂದಿಣಿಕಿಸುವ
ಹೊಸ ಚಿಗುರಿಗೆ ನವಕಾಂತಿ
ಬಂದಿತು ಬೇಸಿಗೆಯ ಸಂಕೇತ– ಗುಲ್ಮೊಹರ್

***

ತಾಯಿ

– ಲೀಲಾ ವಾಸುದೇವ

ತಾಯಿ ಅಲ್ಲವೆ ಹೆತ್ತವಳು
ಮಡಿಲೊಳಗೆ ಮರೆಮಾಡಿ
ಕಂದನಿಗೆ ಹಾಲುಣಿಸಿದವಳು
ಹಸಿದ ಕಂದಗೆ ಕೈತುತ್ತ ಕೊಟ್ಟವಳು

ಅಳುವ ಕೂಸಿನ ಕಂಬನಿ ವರೆಸಿದವಳು
ಎದ್ದು ಬಿದ್ದು ಹೆಜ್ಜೆ ಇಡುತಿರೆ
ಮುದ್ದಿಸಿ ಕೈಹಿಡಿದು ನಡೆಸಿದವಳು
ಕೊನೆತನಕ ಕೈಬಿಡದವಳು

ಧೈರ್ಯ ತುಂಬಿ ನಿಲಿಸುವಳು
ಗುರುವಾಗಿ ವಿದ್ಯೆ ಕಲಿಸಿದವಳು
ಹಂಚಿ ತಿನ್ನುವ ನೀತಿ ತಿಳಿಸಿ
ಜೀವನದ ಪಾಠ ಹೇಳಿದವಳು

ಪ್ರೀತಿ ಸುಧೆಯ ಧಾರೆ ಹರಿಸಿ
ಗೃಹಿಣಿಯಾಗಿ ಬಾಳಿ ಬದುಕಿ
ಮನೆಮಂದಿಗೆ ಆಶ್ರಯದಾತಳು
ಮನೆಯ ಜ್ಯೋತಿ ಬೆಳಗುವವಳು

***

ಮಂಜನ ನೆನಪು

– ಗೌರಿ ಭಟ್ಟ

ಮಕ್ಕಳು ಮಣ್ಣಿನಲ್ಲಿ, ಮರಳಿನಲ್ಲಿ ಆಡುವುದನ್ನು ನೋಡಿದಾಗ ನನಗೆ ನನ್ನ ಮಗನ ಬಾಲ್ಯದ ಜೊತೆಗೆ ಅವನ ಗೆಳೆಯ ಮಂಜನ ನೆನಪಾಗುವುದು. ಮಂಜ ನನಗೇನು ಸಂಬಂಧಿಯಲ್ಲ, ಹೊಟ್ಟೆಯಲ್ಲಿ ಹುಟ್ಟಿದ ಮಗನೂ ಅಲ್ಲ. ನನ್ನ ಮಗನಿಗೆ ಖುಷಿಯನ್ನೂ, ಸಂತೋಷವನ್ನೂ ಕೊಟ್ಟ ಪುಟ್ಟ ಬಾಲ.

ನಾನು ಹೊಟ್ಟೆ ಪಾಡಿಗಾಗಿ ಬ್ಯಾಂಕಿಗೆ ಕೆಲಸಕ್ಕೆ ಹೋಗುತ್ತಿದ್ದೆ. ಮಂಜನ ಅಮ್ಮ ಕೂಲಿನಾಲಿ ಮಾಡಿ ಸಂಸಾರ ತೂಗಿಸುತ್ತಿದ್ದಳು.

ಸುಮಾರು ಇಪ್ಪತ್ತೈದು, ಮೂವತ್ತು ವರ್ಷಗಳ ಹಿಂದೆ ನಾವು ಮಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆವು. ಅವರು ನಮ್ಮ ಮನೆಯ ಎದುರು ಒಂದು ಜೋಪಡಿಯಲ್ಲಿ ಇದ್ದರು.

ಅಲೋಕ ಎರಡನೇ ತರಗತಿಯಲ್ಲಿ ಓದುತ್ತಿದ್ದ. ಮಂಜ ಶಾಲೆಗೆ ಹೋಗುತ್ತಿರಲಿಲ್ಲ. ನನ್ನ ಮಗ ಶಾಲೆಯಿಂದ ಬಂದು ನಾನು ಬ್ಯಾಂಕಿನಿಂದ ಮನೆಗೆ ಬರುವವರೆಗೆ ಮಂಜನೊಟ್ಟಿಗೇ ಊಟ, ತಿಂಡಿ, ಆಟ ಎಲ್ಲಾ ನಮ್ಮ ಮನೆಯಲ್ಲೇ ಮಾಡುತ್ತಿದ್ದ.

ಸರಿಸುಮಾರು ಒಂದೇ ಪ್ರಾಯದ ಇಬ್ಬರೂ ಚೆನ್ನಾಗಿ ಹೊಂದಿಕೊಂಡು ಆಟವಾಡುತ್ತಿದ್ದರು. ಮನೆಯ ಅಂಗಳದ ಮಣ್ಣು, ಮರಳಿನಲ್ಲೇ ಆಟ. ಮಂಜನಿಗೂ ಅಲೋಕನನ್ನು ಬಿಟ್ಟರೆ ಬೇರೆ ಯಾರೂ ಜೊತೆಗಿರಲಿಲ್ಲ ಹಾಗೂ ಕೂಲಿಯವರ ಮಗನಾದುದರಿಂದ ಯಾರೂ ಆಟಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಅಲೋಕನಿಗೆ ಬೇರೆ ಗೆಳೆಯರಿದ್ದರೂ ಮಂಜನ ಮೇಲೆ ಪ್ರೀತಿ. ಕೂಲಿಯವರ ಮಗನಾದ ಮಂಜನನ್ನು ಮನೆಯೊಳಗೆ ಸೇರಿಸಿಕೊಂಡು ತಪ್ಪು ಮಾಡುತ್ತಿದ್ದೇನೆಂದೂ, ಅವನು ನಮ್ಮ ಮನೆಯಿಂದ ಏನಾದರೂ ಕದ್ದುಕೊಂಡು ಹೋಗಬಹುದೆಂದೂ, ಅಕ್ಕಪಕ್ಕದ ಮನೆಯವರೂ, ಮನೆ ಮಾಲೀಕರೂ ನನಗೆ ತಿಳಿಹೇಳಿದ್ದರು. ಆದರೆ ಮಂಜನನ್ನು ನಾನು ಆ ರೀತಿ ಊಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅವರೆಲ್ಲರ ಹೇಳಿಕೆಗೆ ಮೌನವಾಗಿದ್ದೆ ನಾನು.

ಒಂದು ದಿನ ನಾನು ಬ್ಯಾಂಕಿನಿಂದ ಮನೆಗೆ ಬಂದಾಗ ಆಲೋಕ ನನ್ನನ್ನು ತಬ್ಬಿಕೊಂಡು ಅಳಲು ಶುರು ಮಾಡಿದ. ಏನೋ ಅನಾಹುತ ಆಗಿದೆಯೆಂದು ಊಹಿಸಲು ಕಷ್ಟವಾಗಲಿಲ್ಲ. ಮಂಜ ಎಲ್ಲಿ ಎಂದು ಮಗನಿಗೆ ಕೇಳಿದೆ. ಅವನು ಇನ್ನೂ ಜೋರಾಗಿ ಅಳಲು ಶುರುಮಾಡಿದ. ಮಂಜನಿಗೇ ಏನೋ ಆಗಿರಬೇಕೆಂದು ಅವನ ಜೋಪಡಿಗೆ ಅವಸರದಿಂದ ಹೋದೆ. ಜೋಪಡಿಯಲ್ಲಿ ಬಟ್ಟೆ, ಪಾತ್ರೆಗಳೆಲ್ಲಾ ಚೆಲ್ಲಾಪಿಲ್ಲಿಯಾಗಿತ್ತು. ಅತ್ತೂ, ಅತ್ತೂ ಮಂಜನ ಕಣ್ಣೆಲ್ಲಾ ಊದುಕೊಂಡಿತ್ತು. ಅವನಿಗೆ ಮಾತೇ ಹೊರಡುತ್ತಿರಲಿಲ್ಲ ಸಮಾಧಾನಿಸಿ ಕೇಳಿದಾಗ ಅವನು ಬಿಕ್ಕುತ್ತಾ ವಿಷಯ ತಿಳಿಸಿದ. ನಮ್ಮ ಮನೆಯ ಮಾಲೀಕರ ಮಗನ ಕೈಗಡಿಯಾರ ಕಾಣುತ್ತಿರಲಿಲ್ಲವಂತೆ. ಮಂಜನ ಮೇಲೆ ಸಂಶಯ ಬಂದು ಅವನಿಗೆ ಚನ್ನಾಗಿ ಏಟು ಹಾಕಿದ್ದಾರೆ, ಅಷ್ಟೇ ಅಲ್ಲ, ಅವನ ಜೋಪಡಿಗೆ ಹೋಗಿ ಎಲ್ಲಾ ಜಾಲಾಡಿಸಿದ್ದಾರಂತೆ. ಇನ್ನು ಮುಂದೆ ನಮ್ಮ ಮನೆಗೂ ಮಂಜ ಬರಬಾರದೆಂದು ತಾಕೀತು ಮಾಡಿದ್ದಾರಂತೆ. ನನಗೆ ಮಾತು ಬಾರದೇ ಮೂಕಿಯಾಗಿಬಿಟ್ಟೆ.

ಮಂಜನನ್ನು ನೋಡಿದರೇ ಗೊತ್ತಾಗುತ್ತಿತ್ತು, ಹಸಿವಿನಿಂದ ಬಳಲುತ್ತಿದ್ದ. ಕಂಗಾಲಾಗಿದ್ದ. ಬೆಳಿಗ್ಗೆಯಿಂದ ಏನೂ ತಿಂದಿರಲಿಲ್ಲವಂತೆ. ಮನೆಗೆ ಹೋಗಿ ಬಿಸ್ಕತ್ತು, ಸೇಬುಹಣ್ಣು ತಂದು ಅವನಿಗೆ ತಿನ್ನಲು ಕೊಟ್ಟೆ. ಮೊದಲು ನಿರಾಕರಿಸಿದ. ಆದರೆ ಖಾಲಿ ಹೊಟ್ಟೆ ಕೇಳಬೇಕಲ್ಲ. ಮೆಲ್ಲನೆ ಕೈಚಾಚಿ ತೆಗೆದುಕೊಂಡ. 'ಅಳಬೇಡ ಮಂಜ, ಅಮ್ಮ ಇನ್ನೇನು ಬರುತ್ತಾರೆ' ಎಂದು ಸಮಾಧಾನ ಮಾಡಿಬಂದೆ. ಅಲೋಕನೂ ಅಳುತ್ತಲೇ ಇದ್ದ.

ಅವನ ಅಮ್ಮ ಕೂಲಿ ಕೆಲಸ ಮುಗಿಸಿ ಮನೆಗೆ ಬಂದು ವಿಚಾರಿಸಿದಾಗ, ನಮ್ಮ ಮನೆಯ ಮಾಲೀಕರು ತಮ್ಮ ಮಗನ ಕೈಗಡಿಯಾರ ಕಾಣದೇ ತನ್ನ ಮಗನಿಗೆ ಹೊಡೆದಿದ್ದಾರೆ ಅಂತ ತಿಳಿಯಿತು. ಮಂಜನಿಂದ ವಿಷಯ ವಿವರವಾಗಿ ತಿಳಿಯದಿರಲು ಅವನನ್ನು ಎಳೆದುಕೊಂಡು ಸೀದಾ ನಮ್ಮ ಮಾಲೀಕರ ಮನೆಗೆ ಹೋದಳು. ಮಾಲೀಕರನ್ನೂ, ಅವರ ಹೆಂಡತಿಯನ್ನೂ ಹೊರಗೆ ಕರೆದಳು. ಜೊತೆಯಲ್ಲಿ ಅವರ ಮಗನೂ ಹೊರಗಡೆ ಬಂದ. ಅವನ ಕೈಯಲ್ಲಿ ಗಡಿಯಾರ ನೋಡಿದವಳೇ, ಸಿಟ್ಟು ನೆತ್ತಿಗೇರಿ, ಇಡೀ ಬೀದಿಗೇ ಕೇಳುವಂತೆ ದೊಡ್ಡದಾಗಿ ಹೇಳಿದಳು. "ಓಹೋ, ಅಣ್ಣಾರೆ ಗಡಿಯಾರ ನಿಮ್ಮ ಮಗನ ಕೈಯ್ಯಲ್ಲೇ ಇದೆಯಲ್ಲ, ತಪ್ಪೇ ಮಾಡದ ನನ್ನ ಮಗನಿಗೆ ಈ ರೀತಿ ಹೊಡೆದಿದ್ದೀರಿ. ನೀವು ಮಾಡಿದ್ದು ಸರಿಯಾ? ನಾವು ಬಡವರಿರಬಹುದು, ಆದರೆ ಕಳ್ಳರಲ್ಲ. ನಿಮ್ಮದು ನಮಗೆ ಬೇಡ. ನಾವು ದುಡಿದು ತಿನ್ನುತ್ತೇವೆ. ನಮಗೂ ಮನಸ್ಸಿದೆ. ನನ್ನ ಮಗನ ಮೇಲೆ ಕೈ ಮಾಡಿದಿರಿ. ನಿಮಗೆ ಒಳ್ಳೇದಾಗುತ್ತಾ?"

ಮಂಜನ ಅಮ್ಮ ಏನೇನೋ ಬಡಬಡಿಸುತ್ತಾ ಇದ್ದಳು. ಅವಳ ಸಂಕಟ ನನಗೆ ಅರ್ಥ ಆಗುತ್ತಿತ್ತು. ಬಡವರಿಗೆ ಸ್ವಾಭಿಮಾನ ಜಾಸ್ತಿ.

ಮಂಜನ ಅಮ್ಮ ತನ್ನ ಮಗ ಕಳ್ಳನಲ್ಲ, ಮಾಲು ನಿಮ್ಮ ಕೈಯ್ಯಲ್ಲಿದೆ ಎಂದರೂ ಅದನ್ನು ಒಪ್ಪಿಕೊಳ್ಳುವ ಕನಿಷ್ಠ ಸೌಜನ್ಯವನ್ನೂ ಮಾಲೀಕರು ತೋರಿಸಲಿಲ್ಲ. ಆ ತಾಯಿ ಕಣ್ಣೀರು ಒರೆಸಿಕೊಳ್ಳುತ್ತಾ ಮಂಜನ್ನು ಎಳೆದುಕೊಂಡು ಹೋದಳು. ನಾನು ಅಸಹಾಯಕಳಾಗಿ ಆ ದೃಶ್ಯ ನೋಡುತ್ತಾ ನಿಂತುಕೊಂಡಿದ್ದೆ. ಮಂಜ ಮತ್ತೆ ಅಲೋಕನ ಜೊತೆಗೆ ಆಟವಾಡಲು ಬರಲಿಕ್ಕೂ ಹೆದರುತ್ತಿದ್ದ. ದಿನ ಕಳೆದಂತೆ ಅಲೋಕ ಗೆಳೆಯನನ್ನು ಮರೆತುಬಿಟ್ಟ.

ಆಮೇಲೆ ಮಂಜ ಹಾಗೂ ಅವನ ಅಮ್ಮ ವಿಳಾಸ ಹೇಳದೇ ಬೇರೆ ಊರಿಗೆ ಹೊರಟು ಹೋದರು. ನಾವು ಸ್ವಂತ ಮನೆ ಮಾಡಿಕೊಂಡು ಈಗ ಇರುವಲ್ಲಿಗೆ ಬಂದೆವು.

ನನಗೆ ಈಗಲೂ ಮಂಜನ ತಾಯಿಯ ನೋವು ಹಾಗೂ ಆಕ್ರೋಶ ನೆನಪಾದಾಗಲೆಲ್ಲಾ ಕರುಳು ಚುರುಕ್ ಅನ್ನುತ್ತೆ. ಅಲೋಕನ ಬಾಲ್ಯದೊಂದಿಗೆ ಬೆಸೆದಿರುವ ಪುಟ್ಟ ಮಂಜನ ನೆನಪಾಗಿ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತೆ.

***

ಬೇಂದ್ರೆ ಬಂದಿದ್ದರು ಕ್ಲಬ್ ಹೌಸಿಗೆ

– ಕೆ.ಎನ್.ಭಗವಾನ್

ನಿಮಗೆ ಗೊತ್ತಿಲ್ಲ ಬಿಡಿ,
ಮೊನ್ನೆ ಬಂದಿದ್ದರು ಬೇಂದ್ರೆ
ನಮ್ಮ ಸಂಜೆಯ ಕ್ಲಬ್ ಹೌಸಿಗೆ,
ಯುಗಾದಿ ಮರಳಿ ಬರುವಂತೆ.
ನಾವ್ ನೀವು ಅನುದಿನವೂ ಕಾಣೊ
ಮೂಡಣದ ಹೊನ್ನದೇರನು ತೋರಿ
ಇದು ಬರಿ ಬೆಳಕಲ್ಲೋ 'ಬೆಡಗು'
ಅಂತ ಬೆರಗಾಗಿಸಿದರು.

ಒಲವಿಗಿಲ್ಲ ಬಡತನವೆಂದು
ಸುಖಿಸುವ ಬಾಳ ಸಖಿಗೆ
ಬಳಸಿದಷ್ಟು ತೋಳುಬಂದಿ ಕೆನ್ನೆತುಂಬ
ಮುತ್ತನಿತ್ತು ಹೋದರು.

ಕಾಲವೆಂಬ ಹಕ್ಕಿಗೆ ರೆಕ್ಕೆ ಪುಕ್ಕಗಳಿರಿಸಿ
ಚುಕ್ಕೆ ಮಾಲೆಯ ಸಿಕ್ಕಿಸಿ
ದೂರ ದೂರಕೆ- ಗಾವುದ ಗಾವುದಕೆ
ಯುಗ ಯುಗಕೆ ಹಾರಲುಬಿಟ್ಟರು.

ಧಾರವಾಡದ ರಸಿಕ ಗಂಡು
ಹುಬ್ಬಳ್ಳಿಗೆ ಹೊಂಟಾನಂದ್ರ,
ಕಳ್ಳಾಟವೇನಲ್ಲ, ಬಿಡ, ಮಲ್ಲಿಗಿ
ಘಮಘಮಾಡ್ತಾವ ಅಂದ್ರು.

ರಾಜ ಭಗೀರಥ ಗಂಗಮ್ಮನ
ಧರೆಗಿಳಿಸಿ ತಂದದ್ದನ್ನು
ದುಮು ದುಮೆಂದು ಧುಮುಕಿಸಿ
ಹಾಡಿ ಅದ್ಭುತ ತೋರಿದರು.

ಹೊಲದೆದೆಯ ಮೇಲೆ
ತೆನೆಯ ಧ್ವಜವನೆ ಕಂಡು
ಅನ್ನದಾತನ ಹಿರಿಮೆ
ಮನಸಾರ ಹೊಗಳಿದರು.

ಒಂದಾಯಿತು ಹೆಸರಾಯಿತು
ನಮ್ಮ ಕರ್ನಾಟಕ
ಉಸಿರಾಯಿತೇನು ಕನ್ನಡ?
ತಾಯಿಯ ಕೊರಗು ತಪ್ಪಿಲ್ಲವೆಂದರು.

ನಾನು ನೀನು ಆನು ತಾನು,
ಅದೇನದು ಪದಗಳ ಹೊಸರಾಗ?
ಅರ್ಥವಾಯಿತೇ ನಾಕು ತಂತಿಗಳಲ್ಲಿ
ಅಧ್ಯಾತ್ಮ ನುಡಿಸಿದ್ದು ?


ಏಕತಾರಿ ಮೀಟುತ್ತ ಮೀಟುತ್ತ
ತಿರುಗೊ ಜೋಗಿಯ ಕರೆಸಿ
ನಮ್ಮಂತರಂಗದಲ್ಲಿ
ಮೃದಂಗ ನುಡಿಸಿದರು.

ಮತ್ತೇನೆಂದರು ಗೊತ್ತೇ ಬೇಂದ್ರೆ ?
ಎನ್ನ ಪಾಡೆನಗಿರಲಿ, ಅದರ ಹಾಡನ್ನಷ್ಟೆ
ನೀಡುವೆನು ರಸಿಕ ನಿನಗೆ,
ಕಲ್ಲುಸಕ್ಕರೆಯಂಥ ನಿನ್ನೆದೆಯು ಕರಗಿದರೆ,
ಆ ಸವಿಯ ಹನಿಸು ನನಗೆ..

***

'ಮೊಗೆದಷ್ಟೂ ವಿನೋದ' ಎಂಬ ಕೃತಿಯ ಪರಿಚಯವಲ್ಲದ ಪರಿಚಯ

– ಶೀಲಾ ಅರಕಲಗೂಡು



ಪ್ರಕಾಶಕರು: ಶ್ರೀನಿವಾಸ ಪುಸ್ತಕ ಪ್ರಕಾಶನ
ಪುಟಗಳು 184

ಇದೇನು ಶೀರ್ಷಿಕೆ ಹೀಗಿದೆ ಅಂತೀರಾ? ಪರಿಚಯವಲ್ಲದ ಪರಿಚಯ ಅಂದ್ರೆ ಏನು ಎನ್ನುವ ಜಿಜ್ಞಾಸೆಯೇ? ಹೌದು, ಪುಸ್ತಕ ಪರಿಚಯ ಮಾಡಿಕೊಡುವುದು ಎಂದರೆ ಸರಳವಲ್ಲ. ಪ್ರಬುದ್ಧ ಲೇಖನವನ್ನೇ ಬರೆಯಬೇಕು. ಆಗ ಮಾತ್ರ ಲೇಖಕರಿಗೆ ಗೌರವ ಸಂದಂತಾಗುತ್ತದೆ. ಆದರೆ, ನನಗೋ ಹಾಗೆಲ್ಲ ಪ್ರಬುದ್ಧವಾಗಿ ಬರೆಯೋಕೇ ಬರೋಲ್ವಲ್ಲ? ಆದರೆ ನಾನು ಇದೇ ಈಗ ಓದಿದ, ಓದಿ ಜೋರಾಗಿ ಒಬ್ಬಳೇ ನಗುತ್ತ ಆನಂದಿಸಿದ ಮೊಗೆದಷ್ಟೂ ವಿನೋದ ಪುಸ್ತಕದ ಬಗ್ಗೆ ನಿಮಗೆ ಹೇಳಲೇಬೇಕೆಂದೆನಿಸಿ, ಹೀಗೆ ಪರಿಚಯವಲ್ಲದ ಪರಿಚಯ ಎಂದಿರುವೆ.

ನಾನು ಹೇಳುವ ವಿಷಯಗಳನ್ನು ಕೇಳಿ. ನೀವು ಆ ಪುಸ್ತಕವನ್ನು ಕೊಂಡು ಓದಿಯೇ ಓದುತ್ತೀರಿ ಎಂದು ನನ್ನ ವಿಶ್ವಾಸ. 'ನಾವು ಓದಿಲ್ಲದ ಪುಸ್ತಕವನ್ನು ಇವಳು ಓದಿಬಿಟ್ಟಿದ್ದಾಳಲ್ಲ! ಇವಳು ಹೇಳುವುದು ಸರಿ ಇದೆಯೇ?' ಎಂದು ಪರೀಕ್ಷಿಸಲಾದರೂ ನೀವು ಪುಸ್ತಕ ಕೊಳ್ಳಲೆಂದು, ಕೊಂಡೋದಿ ಆನಂದಿಸಲಿ ಎಂಬುದು ನನ್ನ ಅಭಿಲಾಷೆ. ಕೇವಲ ಆರು ನಿಮಿಷಗಳಲ್ಲಿ ನಾನಾದರೂ ಎಷ್ಟು ಮಾತ್ರದ ಪರಿಚಯ ನೀಡಲು ಸಾಧ್ಯ ನೀವೇ ಹೇಳಿ. ಭಂಡಾರದಷ್ಟು ಸವಿರುಚಿಯ ತಿನಿಸಿನ ಒಂದು ತುಣುಕನ್ನಷ್ಟೇ ನಾನೀಗ ನಿಮಗೆ ನೀಡಲು ಸಾಧ್ಯ.

ನನಗೆ ಪುಸ್ತಕ ಸಿಕ್ಕಿದ್ದಾದರೂ ಹೇಗೆ ಅಂತೀರಾ? ಕಳೆದ ವಾರವಷ್ಟೇ ಬಿಡುಗಡೆಯಾದ ಪುಸ್ತಕವಿದು. ಲೇಖಕರು ಅಣಕು ರಾಮನಾಥ್ ಎಂದೇ ಹೆಸರಾಗಿರುವ ರಾಮನಾಥ್ ಎನ್. ಅವರು. ಇದರಲ್ಲಿ 'ಹೊಸ ದಿಗಂತ' ವಾರಪತ್ರಿಕೆಯಲ್ಲಿ ಪ್ರಕಟವಾದ ಅವರ ಅಂಕಣ ಬರಹಗಳಿಂದಾಯ್ದ ೪೪ ಲೇಖನಗಳಿವೆ. ಇದನ್ನು ಅವರು ಖ್ಯಾತ ಹಾಸ್ಯ ಲೇಖಕಿ ಭುವನೇಶ್ವರಿ ಹೆಗಡೆಯವರಿಗೆ ಅರ್ಪಣೆ ಮಾಡಿದ್ದಾರೆ. ಶ್ರೀನಿವಾಸ ಪುಸ್ತಕ ಪ್ರಕಾಶನದವರು ಇದನ್ನು ಪ್ರಕಟಿಸಿದ್ದಾರೆ.

'ಮೊಗೆದಷ್ಟೂ ವಿನೋದ' ಎಂಬ ಹೆಸರೇ ಸೂಚಿಸುವಂತೆ, ಈ ಪುಸ್ತಕ ನಾವು ಊಹಿಸಲೂ ಸಾಧ್ಯವಾಗದಷ್ಟು ವಿನೋದ ಕೊಡುವುದಷ್ಟೇ ಅಲ್ಲದೆ, ನಮ್ಮ ಬುದ್ಧಿಗೆ ಸಾಕಷ್ಟು ಕೆಲಸವನ್ನೂ, ಮೆದುಳಿಗೆ ಆಲೋಚನೆಯ ಆಹಾರವನ್ನೂ ಕೊಡುತ್ತದೆ ಎಂದರೆ ಉತ್ಪ್ರೇಕ್ಷೆಯಲ್ಲ. ಈ ರೀತಿ ಬರೆಯಲು ಅತೀವ ಬುದ್ಧಿಮತ್ತೆ, ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷಾ ಸಾಹಿತ್ಯದ ವಿಸ್ತೃತ ಓದು, ಛಂದಸ್ಸು, ವ್ಯಾಕರಣ ಇತ್ಯಾದಿಗಳ ಮೇಲೆ ಹಿಡಿತ,

ತಾರ್ಕಿಕ ಚಿಂತನೆ, ಜೊತೆಗೊಂದಷ್ಟು ವಕ್ರ ಚಿಂತನೆಯೂ ಬೇಕು. ಇದಲ್ಲದೆ ಕನ್ನಡ, ಹಿಂದಿ ಚಿತ್ರಗೀತೆಗಳ ಜ್ಞಾನ, ಅವುಗಳನ್ನು ಅರ್ಥಪೂರ್ಣವಾಗಿ ಅಣಕು ಮಾಡಿ ಬರೆಯುವ ಸಾಮರ್ಥ್ಯವೂ ಇರಬೇಕು. ಇವೆಲ್ಲವೂ ರಾಮನಾಥ್ ಅವರಲ್ಲಿ ಅದೆಷ್ಟು ಸಮೃದ್ಧವಾಗಿದೆಯೆಂಬುದು ಅವರನ್ನು ಬಲ್ಲವರೆಲ್ಲರಿಗೂ ಗೊತ್ತು. ಇವರು ಬೀಚಿ, ಕೈಲಾಸಂ, ಪ್ರೊಫೆಸರ್ ಮಿತ್ರರಂತಹವರ ಸಾಲಿನಲ್ಲಿ ಬರತಕ್ಕವರು ಎಂದೂ ತಿಳಿದವರು ಹೇಳುವುದನ್ನು ಕೇಳಿದ್ದೇನೆ.

ಎಚ್.ದುಂಡಿರಾಜ್ ಅವರು ಪುಸ್ತಕದ ಬಗ್ಗೆ ಬರೆಯುತ್ತಾ, 'ಒಂದು ಪದ ಕೊಟ್ಟರೆ ಸಾಕು. ಅದರ ಎಲ್ಲ ಪದರಗಳನ್ನು ಬಿಡಿಸಿ, ಅವರಿಗೆ ಬೇಕಾದಂತೆ ಜೋಡಿಸಿ ಒಂದು ನಗೆಬರಹ ಮಾಡಬಲ್ಲ ಪದ ಪ್ರಯೋಗ ಪರಿಣತ ಈ ರಾಮನಾಥ ಎನ್ನುತ್ತಾರೆ. ಪದಗಳ ವಿವಿಧಾರ್ಥಗಳನ್ನು ಬಳಸಿಕೊಂಡು ಪನ್ ಮಾಡುವುದೇ ರಾಮನಾಥ್ ಅವರ ಪೂರ್ಣಾವಧಿ ಉದ್ಯೋಗವಾಗಿರು

ವುದರಿಂದ ನಾನು ರಾಮನಾಥ್ ಅವರನ್ನು punಜಾಬಿನ punಡಿತ ಎಂದು ಕರೆಯುತ್ತೇನೆ' ಎನ್ನುತ್ತಾರೆ. ಈ ಮಾತಿಗೆ ಪೂರಕವೆನ್ನುವಂತೆ ಇವೆ ಎಲ್ಲ ಲೇಖನಗಳು. ಉದಾಹರಣೆಗೆ, 'ಮಡದಿಯ ಪುರುಷ ವ್ಯಾಖ್ಯಾನ' ಎಂಬ ಒಂದು ಅಧ್ಯಾಯದಲ್ಲಿ, ಗಂಡ ಹೆಂಡತಿಯಿಂದ ವಿಶ್ವ ಪುರುಷರ ದಿನದ ಶುಭಾಶಯಗಳನ್ನು ಪಡೆಯಲು ಹೆಣಗಾಡುತ್ತಾನೆ. ಇಬ್ಬರ ಮಾತುಗಳ ನಡುವೆ ಪುರುಷ ಶಬ್ದದ ಅರ್ಥ ವಿವಿಧ ಬಗೆಯಲ್ಲಿ ತೆರೆದುಕೊಳ್ಳುತ್ತಾ ಎಲ್ಲೆಲ್ಲಿಗೋ ಹೋಗುವ ಪರಿ ಓದಿಯೇ ತಿಳಿಯಬೇಕು. ಪುರುಷ ಎಂದೊಡನೆ ನಮಗೆ ಒಬ್ಬ ಗಂಡಸು ಎಂದಷ್ಟೇ ಹೊಳೆದರೆ, ಇವರ ಲೇಖನದಲ್ಲಿ ಪ್ರಥಮ, ಮಧ್ಯಮ, ಉತ್ತಮರೆಂಬ ರೂಪದಲ್ಲಿ ಬರುತ್ತಾರೆ. ಗಂಡನೆಂಬುವವ ಈ ಮೂರೂ ಹೇಗೆ ಆಗಲಾರ ಎಂಬುದನ್ನು ಹೆಂಡತಿಯ ಬಾಯಿಂದ ಅವರು ನಿರೂಪಿಸುವ ಪರಿ ಅಚ್ಚರಿ ಮೂಡಿಸುತ್ತದೆ.

ನಲ್ನುಡಿ ಬರೆಯುತ್ತಾ, ಗಂಗಾವತಿ ಪ್ರಾಣೇಶ ಅವರು ಹೀಗೆ ಹೇಳುತ್ತಾರೆ: 'ರಾಮ್ ತೇರಿ ಗಂಗಾ ಕಿಲೋಮೀಟರ್' ಎಂಬ ಲೇಖನವನ್ನು ಓದಿದಾಗ ನನಗೆ ನಿಮ್ಮ ಓದಿನ ವಿಸ್ತಾರ, ಅದನ್ನು ಬಳಸಿಕೊಳ್ಳುವ ಜಾಣ್ಮೆ ಈಗಿನ ಪೀಳಿಗೆಗೆ ಮಾದರಿ ಎನಿಸಿತು. ಎಲ್ಲಿಂದೆಲ್ಲಿಗೆ ಮಾತನ್ನೊಯ್ಯುವಿರಿ ನೀವು! 'ಬಾಚಿ ತಬ್ಬಿ ಕೊಳ್ಳುವುದು' ಎಂದರೆ 'ಬಾಚಣಿಕೆಯನ್ನು ಹೊರತೆಗೆದು ಒಪ್ಪಗೊಳಿಸಿ ನಂತರ ತಬ್ಬಿ ಕೊಳ್ಳುವುದು' ಎಂದಿರುವುದು ಸಾಮಾನ್ಯರ ಅರ್ಥದ ಅಳವಿಗೆ ದೊರಕದು. ನೀವು ಓದಿದ್ದನ್ನು ನಮಗೂ ಹಂಚುವ ದೊಡ್ಡ ಕಾರ್ಯವನ್ನು ಹೀಗೆಯೇ ಬಹುಕಾಲ ಮುಂದುವರಿಸಿರೆಂದು ಬಿನ್ನಹ.'

'ದೇವರ ರುಜುವಿನ ಜಾಡಿನಲ್ಲಿ' ಎಂಬ ಲೇಖನದಲ್ಲಿ ಕುವೆಂಪುರವರ 'ದೇವರು ರುಜು ಮಾಡಿದನು' ಎಂಬ ಕವನದ ಒಂದು ಚರಣವನ್ನು ಅವರು ವ್ಯಾಖ್ಯಾನಿಸಿರುವ ಪರಿ ನಗೆ ತರಿಸುತ್ತದೆ.

'ಬಿತ್ತರದಾಗಸ' ಎನ್ನುವುದನ್ನು ಸಾಮಾನ್ಯವಾಗಿ ನಾವೆಲ್ಲರೂ ಬಿತ್ತರದ ಆಗಸ ಎಂದರೆ ಇವರು ಬಿತ್ತರದ ಅಗಸ ಎಂದು ಆಲೋಚಿಸುತ್ತಾರೆ. ಕುವೆಂಪು ರಾಮಾಯಣ ಬರೆದವರು. ಅಗಸನ ಮಾತುಗಳು ಅವರ ತಲೆಯಲ್ಲಿ ಇರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಇಂತಿಪ್ಪ ಸಮಯದೊಳ್ ಅವರು ಬಿತ್ತರದ ಆಗಸ ಉರುಫ್ ಹರಡಿರುವ ಗಗನದ ಬಗ್ಗೆ ಹೇಳಿದರೋ ಅಥವಾ ಸೀತೆ ಮಲಿನಳಾಗಿದ್ದಾಳೆ ಎಂದು ಬಿತ್ತರಿಸಿದ ಅಗಸನ ಬಗ್ಗೆ ಹೇಳಿದ್ದಾರೋ ಎಂದು ಗೊಂದಲಕ್ಕೊಳಗಾಗಬೇಕೆಂದು ಇಂದಿನ ಮಾಧ್ಯಮಗಳು, ವಾಹಿನಿಗಳು ಹೇಳಿಕೊಟ್ಟಿವೆ ಎನ್ನುತ್ತಾರೆ. ಬೆಳ್ಳಕ್ಕಿಗಳು ಹಾರುತ್ತಿದ್ದಾಗ ದೇವರು ಒಂದೇ ಬಾರಿ ರುಜು ಮಾಡಿದನೋ, ಹಲವು ಬಾರಿಯೋ? ಎಂದು ಅನುಮಾನ ವ್ಯಕ್ತಪಡಿಸುತ್ತಾರೆ. ನಿಮಗೀ ಅನುಮಾನ ಬಂದಿತ್ತೇ? ನನಗಂತೂ ಬಂದಿರಲಿಲ್ಲ.

ರಾಮನಾಥ್ ಅವರು ಸತಿಯೊಡನೆ ಸಹಗಮನ ಮಾಡುತ್ತಾರಂತೆ. ಗಾಬರಿಯಾಗ್ಬೇಡಿ. ಅವರ ಪ್ರಕಾರ ಸತಿಯೊಡನೆ ಸಹಗಮನವೆಂದರೆ, ಸತಿಯೊಡನೆ ಪ್ರಯಾಣ ಮಾಡುವುದು ಎಂದು.

ಮತ್ತೊಂದು ಅಧ್ಯಾಯದಲ್ಲಿ, ಮೊಲವನ್ನು rabbit ಎಂದು ಕರೆದಾಗ ಅದು ಬೇಸರಪಟ್ಟುಕೊಳ್ಳುತ್ತದೆ ಎನ್ನುತ್ತಾರೆ. ಏಕೆಂದರೆ, ಅದರ ಪ್ರಕಾರ, ಅದನ್ನು raw ಆಗಿ bit by bit ತಿಂದುಹಾಕುವವರು ಇಟ್ಟ ಹೆಸರಂತೆ! ನಾವೆಲ್ಲ ಮೊಲ ಹಾಗೂ ಆಮೆಯ ಕಥೆ ಕೇಳಿದ್ದೇವೆ ಅಲ್ಲವೇ? ಅದಕ್ಕೆ ಬೇರೊಂದೇ ರೂಪ ಕೊಟ್ಟ ಪರಿ ಇದೆಯಲ್ಲ, ಅದನ್ನೋದಿದಾಗ ನಂಬಲಾಗದಷ್ಟು ದಿಗ್ಭ್ರಮೆಯಾಗುತ್ತದೆ. ಮೊಲ ಬೇಕಾಗಿಯೇ ಸೋಲನ್ನು ಒಪ್ಪಿಕೊಂಡಿತಂತೆ. ಅದು ಆಮೆಯನ್ನು ಶಿಶುವಾಗಿ ಕಂಡು ತಾನು ಅಮ್ಮನ ಪಾತ್ರ ವಹಿಸಿತಂತೆ. ಇದು ರಾಮನಾಥ್ ಅವರ ವ್ಯಾಖ್ಯೆ!

ಈ ಪುಸ್ತಕದ ಪ್ರತಿಯೊಂದು ಅಧ್ಯಾಯದ, ಪ್ರತಿಯೊಂದು ಸಾಲಿನಲ್ಲೂ ಅಚ್ಚರಿ, ನಗೆ ಮೂಡಿಸುವ ಪದ ಪುಂಜಗಳಿವೆ. ಅರ್ಥವಾಗಬೇಕಾದರೆ, ನಮಗೂ ಒಂದಷ್ಟು ಹೆಚ್ಚಿನ ಜ್ಞಾನವಿರಬೇಕು, ಪಾಂಡಿತ್ಯವೂ ಬೇಕು. ನಾನು ಸರಿಯಾಗಿ ಅರ್ಥ ಮಾಡಿಕೊಂಡು ಆನಂದಿಸಲು ಇನ್ನೊಂದೆರಡು ಮೂರು ಬಾರಿಯಾದರೂ ಓದಲೇಬೇಕು. ನನಗರ್ಥವಾಗದ್ದನ್ನು ನಿಮ್ಮನ್ನು ಕೇಳಿ ತಿಳಿಯುವೆ. ಆದೀತಲ್ಲವೆ?

***

ಪುಟ್ಟ ಕಥೆ

ಗ್ರಹಣ ವಿಮೋಚನೆ

– ಸಿಂಧು ಹರಿಥಸ್

ಕನ್ಯಾಂ ಕನಕ ಸಂಪನ್ನಂ ಕನಕಾಭರಣೈರ್ಯುತಂ। ದಾಸ್ಯಾಮಿ....
ಕನ್ಯಾದಾನದ ಮಂತ್ರ, ವೋಲಗದ ಸದ್ದು, ಜನರ ಮಾತು, ನಗು, ಸಂಭ್ರಮ ಯಾವುದೂ ಕೇಳದಂತಾಗಿ ವಿನಯ್ ಜಾಹ್ನವಿಯ ಮುಖ ನೋಡುತ್ತಾ ಮೈಮರೆತ. ಅವಳನ್ನು ಮೊದಲಬಾರಿ ಆಸ್ಪತ್ರೆಯಲ್ಲಿ ಎತ್ತಿಕೊಂಡಾಗ ಇದ್ದ ಅದೇ ಮುಗ್ಧತೆ ಇನ್ನೂ ಅವಳಲ್ಲಿತ್ತು. ಅಂದಿನಿಂದ ಕಳೆದ ಅಷ್ಟೂ ವರ್ಷಗಳೂ ಕಣ್ಣಿನ ಮುಂದೆ ಚಲನಚಿತ್ರದಂತೆ ಕಾಣಿಸಿತು.

ಮದುವೆಯಾಗಿ ಐದು ವರ್ಷಗಳಾದರೂ ವಿನಯ್–ರೂಪ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ. ಅವರು ಹೋಗದ ಗುಡಿಯಿಲ್ಲ, ಮಾಡದ ಪೂಜೆಯಿಲ್ಲ, ಕಾಣದ ವೈದ್ಯರಿಲ್ಲ, ಮಾಡಿಸದ ತಪಾಸಣೆಯಿಲ್ಲ. ಜಾತಕದಲ್ಲಾಗಲಿ, ವೈದ್ಯರ ಪರೀಕ್ಷೆಗಳಲ್ಲಾಗಲಿ ಯಾವ ದೋಷವೂ ಕಂಡುಬರಲಿಲ್ಲ. ಆದರೆ ಸಂತಾನ ಸುಖವಿಲ್ಲ!

ಹೀಗೇ ಒಮ್ಮೆ ಆಸ್ಪತ್ರೆಗೆ ಹೋದ ದಂಪತಿಗಳು, ಮನೆಗೆ ಹಿಂದಿರುಗುವಾಗ ಒಂದು ನವಜಾತ ಮಗುವನ್ನು ಮಡಿಲಲ್ಲಿಟ್ಟುಕೊಂಡು ಬಂದರು. ವಿನಯ್ನ ಹೆತ್ತವರಿಗೆ ಇದು ಹಿಡಿಸಲಿಲ್ಲ. "ವಯಸ್ಸಿದೆ, ಕಾದಿದ್ದರೆ ಸ್ವಂತ ಮಗುವಾಗುತ್ತಿತ್ತು. ಯಾರದೋ ಪಾಪ ನಮ್ಮನೆ ಒಕ್ಕರಿಸಿತು" ಎಂದು ಮೂಗು ಮುರಿದರು. ಅವರಿಗೆ ಏನೂ ಹೇಳಲು ತೋಚದೆ ವಿನಯ್ ಮತ್ತು ರೂಪ ಮಗುವನ್ನು ಒಳಗೆ ಕರಕೊಂಡು ಹೋದರು. ಜಾಹ್ನವಿ ಎಂದು ಹೆಸರಿಟ್ಟರು.

ಜಾಹ್ನವಿಯ ಆರೈಕೆಯಲ್ಲಿ ಮುಳುಗಿದ್ದ ರೂಪ ವರ್ಷದೊಳಗೆ ಗರ್ಭಿಣಿಯಾಗಿ ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಜನನ್ ಹುಟ್ಟಿದ್ದು ಜಾಹ್ನವಿಯ ಕಾಲ್ಗುಣದಿಂದ ಎಂದು ವಿನಯ್ ತಾಯಿ ರಾಧಾ, ಜಾಹ್ನವಿಯನ್ನು ತನ್ನ ಮೊಮ್ಮಗುವೆಂದು ಒಪ್ಪಿದರು. ಆದರೆ ಲಕ್ಷ್ಮಣರಾಯರ ನಿಲುವು ಬದಲಾಗಲಿಲ್ಲ. ಜಾಹ್ನವಿಯನ್ನು ಸ್ವೀಕರಿಸಲೇ ಇಲ್ಲ. ಹೊರತಾಗಿ ಜನನ್ ಮತ್ತೆ ಜಾಹ್ನವಿಯ ಮಧ್ಯೆ ತಾರತಮ್ಯ ಮಾಡಲಾರಂಭಿಸಿದರು.

ಮಕ್ಕಳು ಬೆಳೆಯುತ್ತ ಹೋದಂತೆ ಅವರಲ್ಲಿ ಒಳ್ಳೆಯ ಅನ್ಯೋನ್ಯತೆ ಬೆಳೆಯಿತು. ಒಟ್ಟಿಗೆ ಇರುತಿದ್ದರು, ಹಂಚಿಯೇ ತಿನ್ನುತ್ತಿದ್ದರು. ಬುದ್ಧಿ ತಿಳಿದಾಗಿನಿಂದ ತಾತ ಮಾಡುತ್ತಿದ್ದ ತಾರತಮ್ಯ ಇಬ್ಬರಿಗೂ ಗೊತ್ತಾಗುತ್ತಿತ್ತು. ಕಾರಣ ತಿಳಿಯದು. ಜೊತೆಗೆ ಜಾಹ್ನವಿಯ ಬಗ್ಗೆ ಕೆಲವು ನೆಂಟರ ವರ್ತನೆಯೂ ಬೇಸರ ತರುತಿತ್ತು. ಆದರೂ ಜಾಹ್ನವಿ ಯಾವುದನ್ನೂ ಲೆಕ್ಕಿಸದೆ ಎಲ್ಲರೊಂದಿಗೆ ಪ್ರೀತಿಯಿಂದ ಇರುತ್ತಿದ್ದಳು.

ಜಾಹ್ನವಿಗೆ ಅಜ್ಜಿಯ ಭಜನೆಗಳಲ್ಲಿ ಆಸಕ್ತಿ, ಅಮ್ಮನ ಬಲಗೈಯಾಗಿದ್ದಳು, ಅಪ್ಪನಿಗೂ ಅವಳೆಂದರೆ ಪ್ರಾಣ. ಆಟ ಪಾಠಗಳಲ್ಲಿ ಮುಂದೆ. ತಮ್ಮನಿಗೆ ತಾಯಿಯಂತೆ ಮಮತೆ ತೋರುತ್ತಿದ್ದಳು. ತಾನು ಓದುವುದಲ್ಲದೆ, ತಮ್ಮನಿಗೂ ಹೇಳಿಕೊಡುತ್ತಿದ್ದಳು. ಸದ್ಗುಣಿ.

ವರ್ಷಗಳು ಉರುಳಿದವು. ಜಾಹ್ನವಿ ಸ್ನಾತಕೋತ್ತರ ಪದವಿಗಾಗಿ ಬೇರೆ ಊರಿಗೆ ಹೋದಳು. ಹಾಸ್ಟೆಲಲ್ಲಿ ಇದ್ದಳು. ಒಂದು ದಿನ ಕಾಲೇಜಿನಲ್ಲಿದ್ದಾಗ, ತಾತನಿಗೆ ಲಘು ಹೃದಯಾಘಾತ ಆಗಿ ಹಾಸಿಗೆ ಹಿಡಿದಿದ್ದಾರೆ ಎಂದು ಸುದ್ದಿ ತಲುಪಿತು. ಒಡನೆಯೇ ಊರಿಗೆ ಹಿಂತಿರುಗಿ ತಾತನ ಉಪಚಾರದಲ್ಲಿ ತೊಡಗಿಕೊಂಡಳು. ಅವರ ಕೋಣೆಯಲ್ಲೇ ತನ್ನ ಓದು, ಬರಹ, ನಡುವೆ ತಾತನ ಊಟ, ಔಷಧಿ ಎಲ್ಲದಕ್ಕೂ ನೆರವಾದಳು.

ಜಾಹ್ನವಿಯ ನಿಸ್ವಾರ್ಥ ಸೇವೆಯನ್ನು ಬಹಳ ದಿನಗಳಿಂದ ಗಮನಿಸಿದ್ದ ಲಕ್ಷ್ಮಣರಾಯರು ಮಗ-ಸೊಸೆಯರನ್ನು ಕರೆದು, "ತಾಯಿಯಂತೆ ಮಗಳು ಅನ್ನೋ ಗಾದೆ ಇದೆ. ಜಾಹ್ನವಿಯ ಹೆತ್ತವರು ಯಾರೋ! ಅವರ ಜಾತಿ, ಗುಣ, ನಡತೆ ಎಂಥದ್ದೋ ಅನ್ನೋ ಆತಂಕ ಇತ್ತು. ಅವಳನ್ನ ತುಂಬಾ ನಿರ್ಲಕ್ಷಿಸಿದೆ. ನೋವು ಕೊಟ್ಟೆ. ಆದ್ರೆ ಅವ್ಳು ಮಾತ್ರ ನನ್ನನ್ನ ಪ್ರೀತಿಯಿಂದ್ಲೇ ನೋಡಿದ್ಳು. ರಕ್ತ ಸಂಬಂಧ, ವಂಶ ಅನ್ನೋ ಗ್ರಹಣ ಕಳೆದಿದೆ. ನನ್ನನ್ನ ಕ್ಷಮಿಸಪ್ಪ" ಎಂದರು.

ತಂದೆಯ ಮಾತನ್ನು ಕೇಳಿ, ವಿನಯ್, "ಅಪ್ಪಾ, ನೀನು ಹೇಳಿದ್ದು ನಿಜ. ಅವಳು ಅವಳಮ್ಮನ ಹಾಗೇ. ಗುಣ ರೂಪ ಎಲ್ಲಾ ಅವಳಮ್ಮನ ಪ್ರತಿರೂಪವೇ!" ಲಕ್ಷ್ಮಣರಾಯರಿಗೆ ಆಶ್ಚರ್ಯವಾಯಿತು, "ನಿನಗೆ ಅವಳಮ್ಮನ ಪರಿಚಯ ಇದ್ಯಾ, ವಿನಿ? ಯಾರದು? ಎಲ್ಲಿದ್ದಾಳೆ?" ಎಂದು ಪ್ರಶ್ನಿಸಿದರು.

"ಅವಳಮ್ಮ ನನ್ನ ಶಿಷ್ಯೆಯಾಗಿದ್ದಳಪ್ಪ. ಗಂಗಾ ಅಂತ. ಅವಳಿಗೆ ಓದಿನಲ್ಲಿದ್ದ ಆಸಕ್ತಿ ಹೇಳಲಾಗದು. ಬಹಳ ಚೂಟಿ. ಆದರೆ ಆಕೆ ಅನಾಥೆ. ಅವಳಿದ್ದ ಆಶ್ರಮದಲ್ಲಿ ಪಿಯುಸಿವರೆಗೆ ಮಾತ್ರ ಶಿಕ್ಷಣಕ್ಕೆ ಅವಕಾಶ ಇತ್ತು. ಮುಂದೆ ಓದಬೇಕೆಂಬ ಹಂಬಲ ತಿಳಿದ ಅವಳ ಶಿಕ್ಷಕರು, ತಮ್ಮ ಆಶ್ರಮಕ್ಕೆ ಧನ ಸಹಾಯ ಮಾಡುತ್ತಿದ್ದ ಮಹಾನುಭಾವರನ್ನು ಬೇಡಿಕೊಂಡು ಅವಳ ಮುಂದಿನ ಓದಿಗೆ ದಾರಿ ಮಾಡಿಕೊಟ್ಟರು. ಆಗ ಅವಳು ನಮ್ಮ ಕಾಲೇಜು ಸೇರಿದಳು. ಮೊದಲೆರಡು ವರ್ಷ ಚೆನ್ನಾಗಿ ಓದುತ್ತಿದ್ದ ಗಂಗಾ, ಮೂರನೇ ವರ್ಷದಲ್ಲಿ ಮಂಕಾದಳು. ಎರಡು ಮೂರು ತಿಂಗಳ ಬಳಿಕ ಕಾಲೇಜಿಗೆ ಬರೋದನ್ನೇ ನಿಲ್ಲಿಸಿಬಿಟ್ಟಳು".

ರೂಪ ಮುಂದುವರೆಸಿದಳು, "ಒಮ್ಮೆ ನಾವು ಆಸ್ಪತ್ರೆಗೆ ಹೋಗಿದ್ದಾಗ ಗಂಗಾ ಕಂಡಳು. ತುಂಬು ಗರ್ಭಿಣಿ. ಜೊತೆಯಲ್ಲಿ ಯಾರೂ ಇರಲಿಲ್ಲ, ಪಾಪ. ಹೆರಿಗೆ ನೋವು ಶುರುವಾಗಿತ್ತು. ಅವಳನ್ನು ಮಾತನಾಡಿಸಿದೆವು, ವಿಚಾರಿಸಿದೆವು. ಹಿಂಜರಿಕೆಯಿಂದಲೇ ನಡೆದದನ್ನೆಲ್ಲಾ ವಿವರಿಸಿದಳು. ಅವಳಿಗೆ ಧನಸಹಾಯ ಮಾಡುತ್ತಿದ್ದ ವ್ಯಕ್ತಿ ಒಳ್ಳೆಯವರು. ಯಾವುದೇ ಅಪೇಕ್ಷೆ ಇಲ್ಲದೆ ಅವಳ ಓದಿಗೆ ನೆರವಾಗಿದ್ದರು. ಆದರೆ ಅವರು ನಿಧನರಾದ ನಂತರ ಅವರ ಮಗ ಇವಳಿಗೆ ಸಹಾಯ ಮಾಡುವುದಾಗಿ ಹೇಳಿ, ಪ್ರತಿಯಾಗಿ ಅವಳ ಶೀಲವನ್ನೇ ಕಸಿದುಕೊಂಡನಂತೆ. ಅದೇ ಕಾರಣಕ್ಕೆ ಆಕೆ ಮಾಂಕಾಗಿ ಹೋಗಿದ್ದಳು. ಅವಳು ಬಸರಿಯಾದಳು. ವಿಷಯ ತಿಳಿದು ಆಶ್ರಮದವರು ಅವಳನ್ನು ಹೊರ ದೂಡಿದರಂತೆ ಮಾವಯ್ಯ."

"ನಾವು ವೈದ್ಯರ ಬಳಿ ಚರ್ಚಿಸಿ ಬರುವುದರಲ್ಲಿ ಅವಳು ಹೆಣ್ಣು ಮಗುವಿಗೆ ಜನ್ಮ ನೀಡಿ ಕಣ್ಣು ಮುಚ್ಚಿದ್ದಳು. ಆ ಮಗುವೇ ಜಾಹ್ನವಿ. ನಮಗೆ ಬೇಕೆಂದರೂ ಸಿಗದ ಸಂತಾನ, ಅವಳ ಪಾಲಿಗೆ ಮುಳ್ಳಾಗಿತ್ತು. ತಬ್ಬಲಿಯಾಗಿ ಈ ಮಗು ಅನಾಥಾಶ್ರಮ ಸೇರುತ್ತಿತ್ತು. ಮತ್ತೆ ಗಂಗಾಳ ಗತಿ ಮಗುವಿಗೆ ಬರಬಾರದೆಂದು ಅವಳನ್ನು ದತ್ತು ಪಡೆದೆವಪ್ಪ." ಎಂದು ವಿನಯ್ ನಿಟ್ಟುಸಿರುಬಿಟ್ಟನು.

ಮಗನ ಮಾತು ಕೇಳಿ ಲಕ್ಷ್ಮಣರಾಯರಿಗೆ ಮಗನ ಮೇಲೆ ಹೆಮ್ಮೆಯಾಯಿತು. ತನ್ನ ವರ್ತನೆಯ ಬಗ್ಗೆ ನಾಚಿಕೆ ಯಾಯಿತು. ಮನೆಯವರನ್ನೆಲ್ಲ ಕರೆಸಿದರು. ಜಾಹ್ನವಿಯನ್ನು ಮುದ್ದಿಸಿದರು. ತಾತನ ಪ್ರೀತಿಗಾಗಿ ಹಂಬಲಿಸುತ್ತಿದ್ದ ಜಾಹ್ನವಿಗೆ ಸಂತೋಷವಾಯಿತು.

"ವಿನಿ, ಎಲ್ಲಿ ಮುಳುಗ್ಹೋಗಿದ್ಯಾ? ಅತ್ತ ಸರಿ, ಕನ್ಯಾದಾನದ ಪುಣ್ಯ ನಮ್ಗೂ ಬರಲಿ, ನಾವೂ ಶಾಸ್ತ್ರ ಮಾಡ್ಬೇಕು" ಎಂದು ಲಕ್ಷ್ಮಣರಾಯರು ಕರೆದಾಗ ವಿನಯ್ ವಾಸ್ತವಕ್ಕೆ ಬಂದ. ಮಗಳ ಮದುವೆಯ ಸಂಭ್ರಮದಲ್ಲಿ ಮಗ್ನನಾದ.

***

ಕಿರುಗತೆ

ದಯೆಯೇ ಧರ್ಮದ ಮೂಲವಯ್ಯಾ!

– ಎಲ್. ಗಿರಿಜಾ ರಾಜ್

ಓ! ದೇವರೇ, ಅದೆಂಥ ಸಂದರ್ಭ! ಪ್ರಾಣಕ್ಕೆ ಕುತ್ತು ತಂದ ಹೊತ್ತು! ನನ್ನ ಮಡದಿ ನಿಶ್ಚಿಂತೆಯಿಂದ ತವರು ಸೇರಿದ್ದಳು. ನನ್ನೊಂದಿಗೆ ಯಾವುದೋ ವಿಷಯಕ್ಕೆ ತಗಾದೆ ತೆಗೆದು, ಮುನಿಸಿಕೊಂಡು ಹೊರಟು ಹೋಗಿದ್ದಳು. ಐದು ವರುಷದ ಮುದ್ದು ಮಗ ಒಳಗೆ ಮಂಚದ ಮೇಲೆ ಸವಿಗನಸಿನ ಹೂ ನಿದ್ದೆಯಲ್ಲಿ ತೇಲುತ್ತಿದ್ದ.

ಇನ್ನೊಂದು ಕ್ಷಣದಲ್ಲಿ ಆ ದುಷ್ಟ ಹಿಡಿದ ಮಿರಿಮಿರಿ ಹೊಳೆಯುವ ಚೂಪಾದ ಚಾಕು ನನ್ನನ್ನು ಕೊಲ್ಲಲು ಹವಣಿಸುತ್ತಿತ್ತು. ನನ್ನ ಬಳಿ ಆಪತ್ತಿನ ಸಂದರ್ಭಕ್ಕೆ ಅಂತ ಲೈಸೆನ್ಸ್ ಪಡೆದ ಪಿಸ್ತೂಲು ಇದ್ದರೂ, ಇದ್ದ ಸ್ಥಳದಿಂದ ತೆಗೆದುಕೊಳ್ಳಲು ಸಮಯವಿರಲಿಲ್ಲ. ಹಾಗೆ ಸಿಕ್ಕಿಹಾಕಿಕೊಂಡಿದ್ದೆ. ಇದ್ದಬದ್ದ ಒಡವೆಗಳು, ಮಗನ ಶಾಲೆಗೆ ಡೊನೇಷನ್ ಕಟ್ಟಲೆಂದು ಬ್ಯಾಂಕಿನಿಂದ ತಂದ ಹಣ, ಇಪ್ಪತ್ತೈದು ಸಾವಿರ ರೂಪಾಯಿ ಎಲ್ಲ ಗಂಟು ಕಟ್ಟಿ ಅವನ ಕೈವಶ ಮಾಡಲಾಗಿತ್ತು. ಎಲ್ಲ ಕೊಟ್ಟಮೇಲೂ ಕೊಲ್ಲುವುದೇತಕ್ಕೆ? ಎಂದು ಕೇಳಿದ ಪ್ರಶ್ನೆಗೆ, ಕುಡಿದ ಅಮಲಿನಲ್ಲಿ ಹರಿಹಾಯ್ದಿದ್ದ. "ಏಯ್ ಮಗನೇ, ಹೆಚ್ಗೆ ಮಾತಾಡ್ಬ್ಯಾಡ, ನೀನು ನನ್ನನ್ನು ಕಂಡುಹಿಡಿದ್ರೆ ಪೋಲೀಸರು ನನ್ನ ಸುಮ್ನೆ ಬಿಡ್ತಾರಾ? ಅದಕ್ಕೇ ನೀನಿರಬಾರದು!" ಎಂದ.

ಹೇಗಾದರೂ, ಏನಾದರೂ ಮಾಡಿ ಈಗ ಪಾರಾಗಬೇಕು. ದೈಹಿಕವಾಗಿ ಅವನು ಅಷ್ಟೇನೂ ಬಲಿಷ್ಟನಲ್ಲದಿದ್ದರೂ ನಾನು ನಿರಾಯುಧನಾಗಿದ್ದೆ. ನಾನು ನಯದಿಂದ "ಒಂದು ನಿಮಿಷ ಕೇಳು, ದುಡುಕಬೇಡ, ನನ್ನನ್ನು ಕೊಂದ ಮೇಲೆ ನೀನು ನೆಮ್ಮದಿಯಾಗಿ ಇರಬಲ್ಲೆಯಾ? ಕೊಂದುಬಿಟ್ಟರೆ ನೀನು ಸಿಕ್ಕಿಹಾಕಿಕೊಳ್ಳುವುದಿಲ್ಲ ಎಂದು ತಿಳಿದಿರುವೆಯಾ? ಒಂದಲ್ಲ ಒಂದುದಿನ ನೀನು ಎಲ್ಲಿಗೆ ಹೋದರೂ ಬಿಡದೆ ಸೆರೆಹಿಡಿಯುತ್ತಾರೆ. ಒಂದೊಂದು ನಿಮಿಷವೂ ಆತಂಕದಲ್ಲಿ ಜೀವ ಅಂಗೈಲಿ ಇಟ್ಕೊಂಡು ಬದುಕಬೇಕು. ನಿನ್ನ ಸಂಸಾರಕ್ಕೂ ನೆಮ್ಮದಿಯಿರುವುದಿಲ್ಲ. ಒಂದೊಂದು ಕ್ಷಣವೂ ಸತ್ತು ಬದುಕುತ್ತಿರಬೇಕು! ನನ್ನನ್ನು ಕೊಂದ ಪಾಪವೂ ನಿನ್ನ ಹೆಗಲೇರುತ್ತದೆ. ನಾನು ಸಾಯಲು ಸಿದ್ಧ! ಆದರೆ ನನ್ನ ಹೆಂಡತಿ, ಪುಟ್ಟ ಮಗ ನನ್ನನ್ನೇ ನಂಬಿದ್ದಾರೆ, ಎಲ್ಲ ಕೊಟ್ಟುಬಿಟ್ಟಿದ್ದೇನೆ, ನನ್ನನ್ನು ಬಿಡು, ಈ ಚಿನ್ನ, ಈ ಹಣ ನಿನ್ನ ಸಂಸಾರಕ್ಕೆ ಉಪಯೋಗಿಸಿಕೊಂಡು ಸುಖವಾಗಿರು. ನಾನು ಖಂಡಿತ ಪೋಲೀಸರಿಗೆ ಕಂಪ್ಲೈಂಟ್ ಕೊಡುವುದಿಲ್ಲ. ನಾನೊಬ್ಬ ಮೇಷ್ಟ್ರು! ಸುಳ್ಳು ಹೇಳುವುದಿಲ್ಲ, ನಂಬು ನನ್ನನ್ನು.." ಎಂದು ಅವನ ಮನಸಿಗೆ ನಾಟುವಂತೆ ಹೇಳಿದೆ.

ಕಟುಕತನವೇ ಮೂರ್ತಿವೆತ್ತಂತಿದ್ದ ಆ ಹೃದಯದಲ್ಲೂ ಕರುಣೆಯ ಸೆಲೆ ಒಡೆಯಿತೆಂದು ಕಾಣುತ್ತದೆ. ಬಹಳ ಮೊದಲೇ ಕುಡಿದಿದ್ದಿನೇನೋ. ಅಮಲು ಸ್ವಲ್ಪ ಇಳಿದಂತೆ ಕಂಡಿತು. ನಾನು ಹೇಳಿದ್ದು ತಲೆಗೆ ಹೋಗಿರಬೇಕು.

ಅವನೂ ಮನುಷ್ಯನೇ ತಾನೇ! ಮನುಷ್ಯ ಕೆಲವು ಸಂದರ್ಭಗಳಲ್ಲಿ ರಾಕ್ಷಸನಂತೆ ವರ್ತಿಸಿದರೂ, ಮತ್ತೆ ತನ್ನ ಅಸಲಿತನಕ್ಕೆ ಮರಳಲೇಬೇಕಲ್ಲ! ಅವನು ನಂಬಿದಂತೆ ಕಂಡರೂ ಮತ್ತೆ ಧೃಡಪಡಿಸಿಕೊಳ್ಳಲು, "ನಿಜವಾಗಿ ಪೋಲೀಸ್ ಕಂಪ್ಲೈಂಟ್ ಕೊಡುವುದಿಲ್ಲವೇ?" ಎಂದ ಅನುಮಾನದಿಂದ. "ಇಲ್ಲಯ್ಯ, ನನ್ನ ತಾಯಿ ಆಣೆಗೂ ಇಲ್ಲ. ನಂಬಿಕೆ ಬಂದಿತೇ? ಕೊಲೆ ಮಾಡಿದವನಾವನೂ ಅಂತರಂಗದಲ್ಲಿ ನೆಮ್ಮದಿಯಾಗಿ ಈ ಜಗತ್ತಿನಲ್ಲಿ ಇದುವರೆಗೆ ಬದುಕಿಲ್ಲ. ಪೋಲೀಸರ ಕೈಗೆ ಸಿಕ್ಕು, ಕೋಳ ಹಾಕಿಸಿಕೊಂಡು, ಕಂಬಿಗಳ ಹಿಂದೆ ಕಣ್ಣೀರು ಸುರಿಸುತ್ತ ಜೀವನ ಕಳೆಯಬೇಕು. ನಿನ್ನ ನೋಡಲು ಬಂದ ಹೆಂಡತಿ ಮಕ್ಕಳು ಕಂಬಿಗಳ ಆಚೆಗೆ ನಿಂತು ಅವರೂ ಅಳಲೇಬೇಕು" ಎಂದೆ. ಆ ಪಾಷಾಣ ಹೃದಯದಲ್ಲೂ ದಯೆಯ ಸಂಚಾರವಾಯ್ತೆಂದು ಕಾಣುತ್ತದೆ. "ಸರಿ, ನಿನ್ನನ್ನು ಕೊಲ್ಲುವುದಿಲ್ಲ, ಈ ದುಡ್ಡು, ಒಡವೆ ತೆಗೆದುಕೊಂಡು ಹೋಗುತ್ತೇನೆ, ನಿನ್ನ ಮುಂದೆ ಸತ್ಯ ಹೇಳುತ್ತೇನೆ ಕೇಳು, ನಾನು ಕಳ್ಳನಲ್ಲ, ನಾನೊಬ್ಬ ನಿರುದ್ಯೋಗಿ ಪದವೀಧರ. ಮನೆಯವರು ಬೇಡಬೇಡವೆಂದರೂ ಬಲವಂತವಾಗಿ ಮದುವೆ ಮಾಡಿಬಿಟ್ಟರು. ನನ್ನ ತಾಯಿ ಆಸ್ಪತ್ರೆಯಲ್ಲಿದ್ದಾಳೆ, ಅವಳ ಚಿಕಿತ್ಸೆಗೂ ನನ್ನಲ್ಲಿ ಹಣವಿಲ್ಲ. ಓರ್ವ ಮಗನಿದ್ದಾನೆ, ಒಳ್ಳೆಯ ಶಾಲೆಯಲ್ಲಿ ಓದಿಸಲು ನನ್ನ ಹೆಂಡತಿಗೆ ಆಸೆ! ಆದರೆ ಹೇಗೆ? ಅವಳೇ ಪ್ರೇರೇಪಿಸಿ ಈ ಕೆಲಸಕ್ಕೆ

ಕಳುಹಿಸಿದಳು'' ಎಂದು ಬಾಗಿಲೆಡೆಗೆ ತಿರುಗಿದ್ದೇ ತಡ, ಎಲ್ಲಿದ್ದನೋ ನನ್ನ ಮಗ ಥಂಗನೆ ಅವನ ಎದುರಿಗೆ ನಿಂತ. ಕೈಯಲ್ಲಿ ನನ್ನ ಪಿಸ್ತೂಲು. ಅರೆ! ಇವನ ಕೈಗೆ ಹೇಗೆ ಸಿಕ್ಕಿತು? ಕಳ್ಳನೆಡೆಗೆ ಪಿಸ್ತೂಲು ಗುರಿ ಹಿಡಿದು ನಿಂತಿದ್ದಾನೆ.

ಮಗ ಅವನನ್ನು ಕೊಲ್ಲುವುದು ನನಗಿಷ್ಟವಿರಲಿಲ್ಲ. ಬದಲಾದ ಹೃದಯದಿಂದ ನನ್ನನು ಕೊಲ್ಲದೇ ಬಿಟ್ಟ ಅವನ ಪ್ರಾಣ ಬಲಿ ತೆಗೆದುಕೊಳ್ಳುವುದು ಸರಿ ಕಾಣಲಿಲ್ಲ. ಜೊತೆಗೆ ಮಗ ಕೊಲೆಗಾರನಾಗುತ್ತಾನೆ. ನಾನು ಆತಂಕದಿಂದ ಬೇಡವೆಂದು ಕೈಯಾಡಿಸುತ್ತ ಕೂಗಿದೆ. "ಪಾಪು, ಬೇಡ ಪಾಪು, ನನ್ನನ್ನು ಜೀವಸಹಿತ ಬಿಟ್ಟಿದ್ದಾನೆ. ಹೋಗಲಿ ಬಿಡು ಅವನು" ಎಂದೆ. ಕಳ್ಳ ಈ ಅನಿರೀಕ್ಷಿತ ದಾಳಿಗೆ ಬೆಚ್ಚಿ ಸುಮ್ಮನೆ ನಿಂತು ನೋಡಲಾರಂಭಿಸಿದ. ಮಗನ ಕೈ ಟ್ರಿಗ್ಗರ್ ಅದುಮಲು ಸಿದ್ಧವಾಗಿತ್ತು. ಒಂದೇ ಕ್ಷಣ! ''ಬೇಡ ಮಗು" ಎಂದು ನಾನು ಕೂಗುತ್ತಲೇ ಇದ್ದೆ.

ಪಿಸ್ತೂಲೆಂದರೆ ಅವನಿಗೆ ಮಗುವಾಗಿದ್ದಾಗಿನಿಂದಲೂ ಆಸಕ್ತಿ! ನಾನು ಪಿಸ್ತೂಲು ಇಡುವ ಜಾಗ, ಹಿಡಿಯುವ ರೀತಿ, ಗುಂಡು ಲೋಡ್ ಮಾಡುವುದು ಎಲ್ಲ ತಿಳಿದುಕೊಂಡಿದ್ದ. ಪ್ರಾಣಭಯದಿಂದ ನಾನು ಇಷ್ಟು ಹೊತ್ತೂ ನಡುಗಿದ್ದೆ, ಇದೀಗ ಕಳ್ಳನ ಸರದಿ!

"ಅಮ್ಮನ ಒಡವೆ, ಹಣ ಎಲ್ಲ ಹಿಂದಿರುಗಿ ಕೊಡಲು ಹೇಳಿ ಅಪ್ಪ" ಎಂದು ಪಾಪು ಕೂಗಿದ. ಅವನ ಕಣ್ಣುಗಳು ರೋಷದಿಂದ ಕೆಂಪಾಗಿದ್ದವು. ನಾನು "ಹಾಗೇ ಅಗಲಿ ಮಗನೇ, ನನ್ನ ಮುದ್ದು ಮಗನೇ, ಚಿನ್ನ ಮರಿ, ಬೇಡಪ್ಪ ಬೇಡ ಮಗು" ಎಂದು ಹೇಳುತ್ತ ಹೇಳುತ್ತ ಮೆಲ್ಲಗೆ ಅವನೆಡೆಗೆ ಸರಿಯತೊಡಗಿದೆ. "ಅಪ್ಪ, ಬರಬೇಡಿ ಅಲ್ಲೇ ನಿಲ್ಲಿ" ಎಂದು ಅವನು ಹೇಳುತ್ತಿದ್ದರೂ ನಾನು ಅವನೆಡೆಗೆ ಧಾವಿಸಿ ಆ ಎಳೆಯ ಕೈಗಳಿಂದ ಉಪಾಯವಾಗಿ ನನ್ನ ಪಿಸ್ತೂಲು ಕಸಿದು ಕೊಂಡು ಆ ಕಳ್ಳನಿಗೆ, "ನೀನು ಬೇಗ ಇಲ್ಲಿಂದ ಹೋಗು, ಖಂಡಿತ ಕೊಲ್ಲುವುದಿಲ್ಲ. ಪೋಲೀಸ್ ಕಂಪ್ಲೈಂಟ್ ಕೊಡುವುದಿಲ್ಲ" ಎನ್ನುತ್ತಿದ್ದಂತೆ ಅವನು ಒಡವೆ, ಹಣದ ಗಂಟಿನ ಸಮೇತ ನನ್ನ ಪಾದಗಳ ಮೇಲೆ ಕುಸಿದ. ''ಕ್ಷಮಿಸಿ, ನಾನು ಕಳ್ಳನಲ್ಲ, ಎಂದೂ ಕಳ್ಳತನ ಮಾಡಿದವನಲ್ಲ, ಒತ್ತಡಗಳಿಗೆ ಸಿಕ್ಕಿ ಹೀಗೆ ಮಾಡಿದೆ"ಎಂದು ಅಳತೊಡಗಿದ. ಮತ್ತೆ ಅರೆಕ್ಷಣ ಬಿಟ್ಟು, "ನನಗೊಂದು ಕೆಲಸ ಕೊಡಿಸಿಬಿಡಿ ಸರ್, ನಿಮ್ಮನೆಂದೂ ಮರೆಯುವುದಿಲ್ಲ. ನಿಮ್ಮ ಒಡವೆ, ಹಣ ಎಲ್ಲ ತೆಗೆದುಕೊಳ್ಳಿ" ಎಂದು ನನ್ನ ಕಾಲ ಬಳಿ ಕುಸಿದಿದ್ದ ಅವನನ್ನು ಮೇಲೆತ್ತಿ, "ಯಾರ ಪ್ರಾಣ ಯಾರಿಗೂ ತೆಗೆದುಕೊಳ್ಳಲು ಅಧಿಕಾರವಿಲ್ಲ. ಪ್ರಾಣ ನೀಡುವವನಿಗೆ ಮಾತ್ರ ಆ ಹಕ್ಕಿರುವುದು. ಖಂಡಿತ ನಿನಗೆ ಕೆಲಸ ಕೊಡಿಸುತ್ತೇನೆ. ಸರ್ಕಾರ ಕೆಲಸ ಕೊಡುತ್ತದೆ ಎಂದು ಕಾಯುತ್ತ ಕೂಡದೆ ಎಲ್ಲರೂ ತಮ್ಮ ಸ್ವಂತ ದುಡಿಮೆಯಿಂದ, ಜಾಣ್ಮೆಯಿಂದ ಬದುಕಬೇಕಾಗುತ್ತದೆ. ಮನಸ್ಸಿದ್ದರೆ ದುಡಿಯುವ ಕೈಗಳಿಗೆ ಹಲವಾರು ದಾರಿ ತೆರೆದು ಕೊಳ್ಳುತ್ತವೆ. ಈ ಹಣ ನಿನ್ನ ತಾಯಿಯ ಚಿಕಿತ್ಸೆಗೆ ಉಪಯೋಗಿಸಿಕೋ" ಎಂದು ಬಲವಂತವಾಗಿ ಅವನ ಕೈಗಿಟ್ಟೆ.

ನನ್ನ ಮಗ ಎಲ್ಲವನ್ನೂ ತನ್ನ ಅರಳುಗಣ್ಣುಗಳಿಂದ ನೋಡುತ್ತಿದ್ದವನು ಅದೆಷ್ಟು ಅರ್ಥವಾಯಿತೋ? ಏನು ಅರ್ಥವಾಯಿತೋ, ನನ್ನ ಕೊರಳನ್ನು ಬಿಗಿದಪ್ಪಿ, "ಅಪ್ಪ ನೀವೆಷ್ಟು ಒಳ್ಳೆಯವರು" ಎಂದು ನನ್ನ ಕೆನ್ನಗೆ ಮುತ್ತಿಟ್ಟ.

ಇದೆಲ್ಲವನ್ನೂ ನೋಡುತ್ತ ಕಳ್ಳ ಕರುಣೆಯ ಕೂಸಾಗಿದ್ದ.

ಅಷ್ಟರಲ್ಲೇ ಯಾರೋ ದಬದಬ ಬಾಗಿಲು ಬಡಿಯುತ್ತಿದ್ದಾರೆ, ಕಣ್ತೆರೆದೆ. ಕಳ್ಳನೆಲ್ಲಿ? ಮಗನೆಲ್ಲಿ? ಯಾವ ಕಳ್ಳನೂ ಇಲ್ಲ, ಮಗ ನೋಡಿದರೆ ಮಂಚದ ಮೇಲೆ ಹಾಯಾಗಿ ಮಲಗಿ ಮುದ್ದಾಗಿ ಗೊರಕೆ ಹೊಡೆಯುತ್ತಿದ್ದಾನೆ. ಇದೆಲ್ಲಾ ಕೇವಲ ಕನಸೇ?

ಬಾಗಿಲು ಬಡಿಯುವುದು ಮತ್ತೆ ಜೋರಾಯಿತು, ಇದು ಕನಸಲ್ಲ, ಇದು ನಿಜ! ಎಂದುಕೊಂಡು ''ಯಾರದು?'' ಎಂದು ಕೂಗುತ್ತಾ ಹೋಗಿ ಬಾಗಿಲು ತೆರೆದರೆ, ತವರಿನಿಂದ ಹಿಂತಿರುಗಿದ್ದ ನನ್ನವಳು ಲಗೇಜ್ ಕೈಯಲ್ಲಿ ಹಿಡಿದು ನಿಂತಿದ್ದಳು.

"ಅದೆಂಥ ದೆವ್ವದಂಥ ನಿದ್ದೆ ಹಾಡಹಗಲಿನಲ್ಲೇ. ಎಷ್ಟು ಹೊತ್ತಾಯಿತು ಬಾಗಿಲು ತೆರೆಯಲು" ಎಂದು ಹುಸಿಮುನಿಸು ತೋರುತ್ತಾ, ನನ್ನನ್ನು ತುಸು ತಳ್ಳಿಕೊಂಡೇ ಒಳಬಂದಳು.

***

ಲಾಲಿ – ಜೋಗುಳ

– ಸುಜಾತಾ ರವೀಶ್, ಮೈಸೂರು

ಲಾಲಿ ಹಾಡು ಕೇಳಿ ನಿದ್ರಿಸದ ಕಂದನಿಲ್ಲ ಹಾಡಿ ಮಲಗಿಸದ ಅಮ್ಮನಿಲ್ಲ. ಅಮ್ಮ ಮತ್ತು ಮಗುವಿನ ಕರುಳ ಬಂಧದೊಡನೆ ಭಾವದ ಬೆಸುಗೆ ಜೋಗುಳ. ಅಮ್ಮನ ಲಾಲಿ ಹಾಡು ಕೇಳುತ್ತಾ ಇದ್ದರೆ ಮಗುವಿಗೊಂದು ಸುರಕ್ಷತಾ ಭಾವ ಹಾಗೂ ಆ ಬೆಚ್ಚಗಿನ ಭಾವನೆಯೊಂದಿಗೆ ಅದು ನಿದ್ರೆಗೆ ಜಾರುತ್ತದೆ. ಇನ್ನು ಹೆಣ್ಣುಮಕ್ಕಳಂತೂ ಕೈಯಲ್ಲೊಂದು ಪುಟ್ಟ ಗೊಂಬೆ ಹಿಡಿದು ಅದಕ್ಕೆ ಲಾಲಿ ಹಾಡುತ್ತಾ ಮಲಗಿಸುತ್ತಾ ಇರುವ ಆಟ ಆಡುತ್ತಾರೆ, ಮುಂದಿನ ಜೀವನ ನಾಟಕಕ್ಕೆ ನಡೆಯುವ ತಾಲೀಮಿನಂತೆ. ಸರಳ ಸುಂದರ ನುಡಿಗಳು, ಮೆಲುದನಿಯ ರಾಗ, ಎಲ್ಲಕ್ಕಿಂತ ಹೆಚ್ಚಾಗಿ ಗರ್ಭದಲ್ಲಿದ್ದಾಗಿನಿಂದ ಪರಿಚಿತವಾದ ಅಮ್ಮನ ಕಂಠ, ಇನ್ನೇನು ಬೇಕು ಜೋಗುಳದ ಅಪ್ಯಾಯತೆಯನ್ನು ಹೆಚ್ಚಿಸುವುದಕ್ಕೆ. .

ಇನ್ನು ನನ್ನ ಹಾಗೂ ಲಾಲಿ ಹಾಡುಗಳ ನಂಟು. ನನಗಿಂತ ನಾಲ್ಕು ವರ್ಷ, ಏಳು ವರ್ಷ ಕಿರಿಯರಾದ ನನ್ನ ತಂಗಿಯರನ್ನು ಮಲಗಿಸುವಾಗ ತೊಟ್ಟಿಲು ತೂಗುವ ಕೆಲಸವನ್ನು ಅಮ್ಮ ನನಗೆ ವಹಿಸಿದ್ರಂತೆ. ಮೊದಲ ತಂಗಿಯ ವಿಷಯ ಅಷ್ಟು ನೆನಪಿಲ್ಲ. ಆದರೆ ಅಮ್ಮ ಹೇಳುವಂತೆ ಬರುವ ಹಾಡುಗಳನ್ನೆಲ್ಲ ಸಾಲಾಗಿ ಹೇಳುತ್ತಿದ್ದೆನಂತೆ. ಕೆಲವೊಮ್ಮೆ ಮಗು ನಿದ್ರಿಸಿದ್ದರೂ ನನ್ನ ತೂಗಾಟ ಹಾಡಾಟ ನಿಂತಿರುತ್ತಿರಲಿಲ್ಲವಂತೆ. ನಮ್ಮ ಸೋದರಮಾವ ಮೈಸೂರಲ್ಲೇ ಇದ್ದುದರಿಂದ ಅವರ ಮಕ್ಕಳಿಗೂ ನನ್ನ ಈ ತೊಟ್ಟಿಲು ತೂಗುವ ಜೋಗುಳ ಹಾಡುವ ಸೇವೆ ಸಂದಿತ್ತು. ಕೆಲವೊಮ್ಮೆ ತಂಗಿಯರನ್ನು ಸೇರಿಸಿಕೊಂಡು ಜುಗಲ್ ಬಂದಿ. ಪಾಪ! ಅವರ ಕರ್ಣಗಳಿಗದೆಷ್ಟು ಕಠೋರ ಶಿಕ್ಷೆ ಕೊಟ್ಟಿರಬಹುದು. ಇನ್ನು ಈಗಲೂ ಕೆಲವೊಮ್ಮೆ ಸಂಬಂಧಿಕರ ಮಕ್ಕಳನ್ನು ಮಲಗಿಸುವುದುಂಟು. ಮಕ್ಕಳು ನನ್ನ ಬಳಿ ಬೇಗ ಮಲಗುತ್ತವೆ. ಆದರೆ ಅದಕ್ಕೆ ನನ್ನವರ ಎಕ್ಸ್‌ಪರ್ಟ್ ಕಾಮೆಂಟ್ ಏನು ಗೊತ್ತಾ? ನನ್ನ ಹಾಡು ಕೇಳುವುದಕ್ಕಿಂತ ಮಲಗುವುದು ಲೇಸು ಎಂದು ಬೇಗ ಮಲಗಿಬಿಡುತ್ತವಂತೆ. ನಾನು ಈ ಮಾತು ಒಪ್ಪುವುದಿಲ್ಲ. ಅದು ಬೇರೆ ವಿಷಯ ಬಿಡಿ.

ಕನ್ನಡದ ಲಾಲಿ ಹಾಡುಗಳ ವಿಷಯಕ್ಕೆ ಬಂದರೆ ಜಾನಪದ, ದಾಸರ ಪದಗಳು, ಭಾವಗೀತೆಗಳು ಮತ್ತು ಸಿನಿಮಾ ಹಾಡುಗಳು ಎಂಬ ನಾಲ್ಕು ವಿಂಗಡಣೆಯನ್ನು ಮಾಡಬಹುದು.

ಜನಪದದಲ್ಲಿ ಲಾಲಿ ಹಾಡುಗಳ ವೈವಿಧ್ಯತೆಯನ್ನೇ ಕಾಣಬಹುದು. ಹೆಚ್ಚಾಗಿ ತ್ರಿಪದಿ ಶೈಲಿಯಲ್ಲಿರುವ ಈ ಪದಗಳಲ್ಲಿ ಮೂರನೆಯ ಸಾಲಿನಲ್ಲಿ ಎರಡನೆಯ ಸಾಲಿನ ಕಡೆಯ ಪದ ದ್ವಿರುಕ್ತಿಯಾಗಿರುತ್ತದೆ. ಉದಾಹರಣೆಗೆ –

ಏಕಳುವೆ ಎಲೆ ರಂಗ ಬೇಕಾದ್ದು ನಿನಗೀವೆ
ನಾಕೆಮ್ಮೆ ಕರೆದ ನೊರೆ ಹಾಲು
ನಾಕೆಮ್ಮೆ ಕರೆದ ನೊರೆ ಹಾಲು ಸಕ್ಕರೆ
ನೀ ಕೇಳಿದಾಗ ಕೊಡುವೇನು

ಅಳ್ಳೊಳ್ಳಾಯೀ ಎಂದು ಶುರುಮಾಡಿ ಮುಂದೆ ಸಾಗುವ ಈ ತ್ರಿಪದಿಗಳಲ್ಲಿ ಅದೆಷ್ಟೋ ಪದಗಳ ಭಂಡಾರವಿದ್ದು ತಲೆಮಾರಿನಿಂದ ತಲೆಮಾರಿಗೆ ಹರಿದುಬಂದ ಸಂಸ್ಕೃತಿಯ ಸಂಪತ್ತು ಇದು. ಅತ್ತರೆ ಅಳಲವ್ವಾ ಈ ಕೂಸು ನಮಗಿರಲಿ, ಕತ್ತೆಯ ಮರಿ ಚೆಂದ, ಕೂಸಿದ್ದ ಮನೆಗೆ ಬೀಸಣಿಗೆ ಯಾಕ, ತಾಯಿದ್ರೆ ತವರು ಹೆಚ್ಚು, ಕಂದನ ತುಟಿಯ ಹವಳಾದ ಕುಡಿಹಂಗ ಮುಂತಾದವು ಜನಪ್ರಿಯ ಜೋಗುಳ ಪದಗಳು. ಇತ್ತೀಚೆಗೆ ಕೇಳುವವರಿಲ್ಲದೆ ಬಳಕೆಯಲ್ಲಿಲ್ಲದೆ ಈ ಪದ ಕಣಜ ಸೊರಗುತ್ತಿದೆ ನಶಿಸುವ ಹಾದಿಯಲ್ಲಿದೆ. ಉಳಿಸಿಕೊಳ್ಳಲು ಸೂಕ್ತ ಪ್ರಯತ್ನ ಬೇಕಾಗಿದೆ.

ಇನ್ನು ದಾಸರ ಪದಗಳು. ನಮ್ಮ ದಾಸವರೇಣ್ಯರಿಗಂತೂ ಎಷ್ಟು ವಿಧದಲ್ಲಿ ಹಾಡಿ, ಹರಿಯನ್ನು ಮಲಗಿಸಿದರೂ ತೃಪ್ತಿ ಇಲ್ಲ. ಬಹುಶಃ ಬೇರೆಲ್ಲಾ ಅವತಾರಗಳಿಗಿಂತ ಶ್ರೀ ಕೃಷ್ಣಾವತಾರದಲ್ಲಿ ಭಗವಂತನಿಗೆ ಹೆಚ್ಚು ಲಾಲಿ ಕೇಳಿದ ಭಾಗ್ಯ. ಜೋಜೋ ಶ್ರೀಕೃಷ್ಣ

ಪರಮಾನಂದ ಕೇಳಿ ಮಲಗದ ಕನ್ನಡದ ಕಂದ ಇರಲಿಕ್ಕೇ ಇಲ್ಲ. ನಮ್ಮ ದಾಸ ಸಾಹಿತ್ಯದಲ್ಲೂ ಕೃಷ್ಣನ ಲಾಲಿ ಹಾಡುಗಳ ಸಂಖ್ಯೆ ವಿಪುಲ. ಕೆಲವನ್ನು ಹೆಸರಿಸಿದ್ದೇನೆ ಅಷ್ಟೇ. ತೂಗುವೆ ರಂಗನ, ಜೋಜೋ ರಂಗಧಾಮ, ಪವಡಿಸು ಪರಮಾತ್ಮನೇ ಸ್ವಾಮಿ, ಲಾಲಿ ಪಾವನ ಚರಣ, ಜೋಜೋ ಕಂದರ್ಪ ಕೋಟಿ ಲಾವಣ್ಯ, ಲಾಲಿ ಗೋವಿಂದ ಲಾಲಿ. ಒಂದು ಡಾಕ್ಟರೇಟ್ ಪ್ರಬಂಧವನ್ನೇ ಬರೆಯಬಹುದಾದಷ್ಟು ಸಮಗ್ರ ಈ ವಿಷಯ.

ಲಾಲಿ ಹಾಡುವುದರಲ್ಲಿ ನಮ್ಮ ಕನ್ನಡ ಕವಿಗಳೇನೂ ಹಿಂದುಳಿದಿಲ್ಲ. ಭಾವಗೀತೆಗಳಲ್ಲಿ ಜೋಗುಳದ ಲಾಲಿ ಹಾಡುಗಳ ಅಪಾರ ಸಂಖ್ಯೆ ಕಾಣಬಹುದು. ಕನ್ನಡಕ್ಕೇ ವಿಶಿಷ್ಟವಾದ ಭಾವಗೀತೆಯ ಪ್ರಕಾರ ಲಾಲಿ ಹಾಡುಗಳನ್ನು ಕೊಡುವುದರಲ್ಲಿ ಹಿಂದೆ ಬಿದ್ದಿಲ್ಲ. ನನ್ನ ಸೀಮಿತ ಜ್ಞಾನಕ್ಕೆ ಅಲ್ಪಕಾಲದಲ್ಲಿ ಹೊಳೆದ ಕೆಲವು ಗೀತೆಗಳ ಪಟ್ಟಿ ಮಾಡಿದ್ದೇನೆ ಅಷ್ಟೇ. ಆದರೆ ಸಂಖ್ಯೆ ಮಾತ್ರ ಅನಂತ ಹಾಗೂ ಇನ್ನೂ ಅವಿರತ. ಅತ್ತಿತ್ತ ನೋಡದಿರು ಅತ್ತು ಹೊರಳಾಡಿದರು, ಮಲಗು ಮಲಗೆನ್ನ ಮರಿಯೇ, ನಿದ್ದೆ ಬರುತ್ತಿದೆ ಕಣ್ಣಿನಲ್ಲಿ, ನಿದಿರೆ ನಗರಕ್ಕೆ ಬಾರೆನ್ನ ದೊರೆಯೇ, ಹೂಬಳ್ಳಿಯ ಹಿಗ್ಗೆ ಆನಂದದ ಮೊಗ್ಗೆ, ತಿಳಿ ಮುಗಿಲ ತೊಟ್ಟಿಲಲ್ಲಿ ಮಲಗಿದ್ದ ಚಂದಿರನ ಇತ್ಯಾದಿ ಇತ್ಯಾದಿ.

ಕನ್ನಡ ಚಿತ್ರರಂಗದಲ್ಲಂತೂ ಜೋಗುಳದ ಹಾಡುಗಳ ಸುರಿಮಳೆಯೇ ಆಗಿಹೋಗಿದೆ. ಪರಮಾತ್ಮನನ್ನು ಮಲಗಿಸುವ ದಾಸರಪದಗಳ ಅಳವಡಿಕೆ ಮತ್ತು ಎಸ್ಪಿಬಿಯವರ ಶ್ರೀನಿವಾಸ ಕಲ್ಯಾಣ ಚಿತ್ರದ "ಪವಡಿಸು ಪರಮಾತ್ಮ ಶ್ರೀ ವೆಂಕಟೇಶ" ಹಾಡನ್ನು ಸ್ಮರಿಸದಿದ್ದರೆ ಆದೀತೆ? ಕಂದನಿಗೆ ಹಾಡುವ ಲಾಲಿಗಳಲ್ಲಿ ಮುಖ್ಯವಾಗಿ ಜೋಜೋ ಲಾಲಿ ನಾ ಹಾಡುವೆ (ಚಿನ್ನಾ ನಿನ್ನ ಮುದ್ದಾಡುವೆ), ನಿನ್ನ ಮುಖ ಅರವಿಂದ ನಿನ್ನ ನಗು ಶ್ರೀಗಂಧ ಮುದ್ದು ಕಂದ (ಕಲ್ಯಾಣಿ), ಲಾಲಿ ಲಾಲಿ ಲಾಲಿ (ಸರ್ವಮಂಗಳ), ಬಾರ ಒಲಿದು ಬಾರ (ಹಣ್ಣೆಲೆ ಚಿಗುರಿದಾಗ), ಲಾಲಿ ಲಾಲಿ ಸುಕುಮಾರ (ಭಕ್ತ ಪ್ರಹ್ಲಾದ), ರಾಜೀವ ನೇತ್ರನಿಗೆ (ಸ್ವಾತಿ ಮುತ್ತು), ಹಾಡೊಂದ ಹಾಡುವೆ ನೀ ಕೇಳು ಮಗುವೆ (ನಾಂದಿ), ನನ್ನ ಮುದ್ದು ತಾರೆ (ಮಂಕುತಿಮ್ಮ). ಇಲ್ಲಿಗೇ ಮುಗಿಯಲಿಲ್ಲ. ಪ್ರಿಯತಮೆಗೆ ಹಾಡುವ ಲಾಲಿ ಹಾಡುಗಳಲ್ಲಿ ಲಾಲೀ ಸುವ್ವಾಲಿ ಹಾಡೆಲ್ಲ ಲಾಲಿ (ಜೋಡಿ ಹಕ್ಕಿ) ಪ್ರಮುಖವಾದುದು. ಪವಡಿಸು ಪಾಲಾಕ್ಷ ಶ್ರೀ ವಿರೂಪಾಕ್ಷ ಹಾಡನ್ನು ಈ ಪಟ್ಟಿಗೆ ಸೇರಿಸಬಹುದು. ತಾಯಿಗೆ ಲಾಲಿ ಹಾಡುವ ತುಸು ಮೆಲ್ಲ ಬೀಸು ಗಾಳಿಯೇ, ತುತ್ತಮುತ್ತ ಚಿತ್ರದ ಹಾಡು ಗಮನಾರ್ಹ. ಹೂವು ಹಣ್ಣು ಚಿತ್ರದ "ಲಾಲಿ ಹಾಡು ಭೂಮಿ ತಾಯಿಗೆ ಲಾಲಿ ಹಾಡು ಹೆತ್ತ ತಾಯಿಗೆ" ಸಹ ವಿಶಿಷ್ಟವಾಗಿದೆ .

ಯಾವುದಾದರೂ ಒಂದು ಹಾಡಿನ ಬಗ್ಗೆ ಬರೆಯೋಣ ಎಂದು ಬರೆಯಲು ಕೂತಾಗ ಎಲ್ಲಾ ಲಾಲಿ ಹಾಡುಗಳು ನಾಮುಂದು ತಾಮುಂದು ಎಂದು ಬರತೊಡಗಿದವು. ಒಂದನ್ನು ಬರೆದರೆ ಇನ್ನೊಂದಕ್ಕೆ ಅನ್ಯಾಯವಾದಂತೆ ಎಂದೆಣಿಸಿದ ಪರಿಣಾಮ ಈ ಸುದೀರ್ಘ ಬರಹ. ಬೇಸರಿಸದೆ ಓದಿ ಪ್ರತಿಕ್ರಿಯಿಸಿ ಪ್ರೋತ್ಸಾಹಿಸುವಿರಿ ಎಂದು ನನ್ನ ನಂಬಿಕೆ.

***

'ವ್ಯೂಹದಲ್ಲಿ ಬಂಧಿ' ಲೇಖನ ಮಾಲೆ-2

ದೇವರು

– ಮಾಧುರಿ ಕೃಷ್ಣ

ಅಂದು ಎದ್ದೊಡನೆ ಬಿಸಿ ಬಿಸಿ ಡಿಕಾಕ್ಷನ್ ಇಳಿಸಿ, ಎರಡು ಲೋಟ ಕಾಫಿ ಮಾಡಿ ಯಜಮಾನರಿಗೊಂದು ಲೋಟ ಕೊಟ್ಟು ಬಂದು, ನನ್ನ ಲೋಟಕ್ಕೆ ಒಂದರ್ಧ ಚಮಚ ಸಕ್ಕರೆ ಹೆಚ್ಚು ಸೇರಿಸಿ, ರುಚಿರುಚಿಯಾಗಿ ಕುಡಿದು, 'ಬಾಗಿಲು ಹಾಕಿಕೊಳ್ಳಿ' ಎನ್ನುತ್ತಲೇ ಗೇಟು ತೆರೆದು ಬೀದಿಗೆ ಕಾಲಿಟ್ಟೆ.

ಪಕ್ಕದ ಖಾಲಿ ಸೈಟಿನಲ್ಲಿ ಹುಡುಗನೊಬ್ಬ ಎಲ್ಲಿಂದಲೋ ಕದ್ದು ಹಾರಿಸಿದ್ದ ತನ್ನ ಅಳತೆಗೆ ದೊಡ್ಡದಾದ ಪ್ಯಾಂಟನ್ನು ತೊಡುವ ಪ್ರಯತ್ನವನ್ನು ನಡೆಸಿದ್ದು ನೋಡಿ ನಗುತ್ತ ಬೀದಿ ದಾಟಿ ಪಾರ್ಕಿನ ದಾರಿ ಹಿಡಿದೆ. ಸುಮಾರು ಒಂದಿಡೀ ಕಿಲೋಮೀಟರ್ ದೂರವಿದ್ದ ಪಾರ್ಕಿಗೆ ರಭಸವಾಗೇ ಬಂದ ನನಗೆ ಪೂರ್ವದಲ್ಲಿ ಉದಯಿಸುತ್ತಿದ್ದ ಅರುಣ ಬಿಂಬ ಕಾಣಿಸಿ ಆ ಆನಂದವನ್ನು ಸಂಪೂರ್ಣ ಅನುಭವಿಸುವ ಆಕಾಂಕ್ಷಿಯಾಗಿ ಸಮೀಪದಲ್ಲೇ ಯಾವುದಾದರೂ ಬೆಂಚು ಕಾಣಿಸಬಹುದೇ ಎಂದು ದೃಷ್ಟಿ ಹಾಯಿಸಿದಾಗ ಯಾರೂ ಇಲ್ಲದ ಶಿಲಾಸನ ಕಾಣಿಸಿಯೇಬಿಟ್ಟಿತು. ಲಗುಬಗೆಯಿಂದ ಅದನ್ನು ತಲುಪಿ ಇನ್ನೇನು ಕುಳಿತೇಬಿಟ್ಟೆ ಎನ್ನುವಾಗ, ಆ ಹೂವುಪತ್ರೆಗಳ ಶಾಲಿನಿಂದ ಮುಖ ಮುಚ್ಚಿಕೊಂಡ ಕ್ಲಿಯರ್ ಲುಕಿಂಗ್ ವಿಲಕ್ಷಣ ವ್ಯಕ್ತಿ ಅಲ್ಲೇ ಕುಳಿತಿದ್ದು, ಕೂರಲು ಆಗದೇ, ತಿರುಗಿ ನಿಲ್ಲಲೂ ಆಗದ ತ್ರಿಶಂಕು ಸ್ಥಿತಿಯಲ್ಲಿದ್ದ ನನ್ನನ್ನು ಕರುಣೆಯಿಂದ, "ಧಾರಾಳವಾಗಿ ಕುಳಿತುಕೋ, ಬಾಕಿ ಎಲ್ಲಾ ಬೆಂಚುಗಳೂ ಭರ್ತಿಯಾಗಿವೆ" ಎಂದೂ ಹೇಳಿದ.

ಸುತ್ತ ನೋಡಿದೆ. 'ಹೌದಲ್ಲ! ಇಂದು ಎಲ್ಲಾ ಬೆಂಚುಗಳಲ್ಲೂ ಜನ ತುಂಬಿ ಬಿಟ್ಟಿದ್ದಾರೆ, ಒಬ್ಬರನ್ನೊಬ್ಬರು ತಳ್ಳಿಕೊಂಡೇ ವಾಕಿಂಗ್ ಮಾಡುತಿದ್ದಾರೆ. ಇವರ ಮಧ್ಯೆ ನಾನು ಹೋದರೆ ಪಡ್ಚ!' ಎಂದುಕೊಂಡು ಆದಷ್ಟೂ ಅವನಿಗೆ ತಗುಲದಂತೆ ಮುರುಟಿ ಕುಳಿತು, 'ಈ ಜನರಿಗೆ ಆದದ್ದಾದರೂ ಏನು' ಎಂದು ಮನಸ್ಸಿನಲ್ಲೇ ಗೊಣಗಿಯೂಬಿಟ್ಟೆ.

ಪಕ್ಕದಲ್ಲಿ ಕುಳಿತವ ವಿಚಿತ್ರವಾಗಿ ನಕ್ಕ. "ನಿನಗೊಂದು ವಿಷಯ ಗೊತ್ತಾ? ನಿನಗೇನನಿಸುತ್ತದೆಯೋ ಅದೇ ಅವರಿಗೂ ಅನಿಸುತ್ತಿರುತ್ತದೆ!" ಎಂದು ಪನಃ ನಕ್ಕ. ಇಲ್ಲಿಗೆ ಬಸವಳಿದವಳು ನಾನು. ನಾನು ಮನಸ್ಸಿನಲ್ಲೇ ಅಂದುಕೊಂಡಿದ್ದು ಈ ಘಟಿಂಗನಿಗೆ ಗೊತ್ತಾಗಿದ್ದಾದರೂ ಹ್ಯಾಗೆ? ಅಲ್ಲಿಗೂ ಬಾಯಿ ತೆರೆದು ತನ್ನ ದೊಡ್ಡ ದೊಡ್ಡ ದಾಡೆಗಳನ್ನು ತೋರಿಸಿ ಮತ್ತೊಮ್ಮೆ ಜೋರಾಗಿ ನಕ್ಕೂ ಬಿಟ್ಟನವನು. ಸಹಜವಾಗಿ ನನಗೆ ಕೋಪ ಬರದಿದ್ದೀತೇ? ಅವನೆಡೆ ನೋಡದೆ ಬಿಗಿದು ಕುಳಿತೆ ನಾನು. ಅಷ್ಟರಲ್ಲೇ ಮಹಾ ಸಂಭಾವಿತನಂತೆ, "ಆಂತರ್ಯದಲ್ಲಿ ಕೋಪತಾಪಗಳಿರುವುದು ಒಳ್ಳೆಯದಲ್ಲ, ಎಲ್ಲರೂ ಅವರವರ ವೈಯಕ್ತಿಕ ನೆಲೆಯಲ್ಲಿ ಪ್ರಮುಖರೇ. ಎಲ್ಲರೊಡನೆ ಬೆರೆಯುತ್ತಾ, ಎಲ್ಲವನ್ನೂ ಸಹಜವಾಗಿ ತೆಗೆದುಕೊಳ್ಳುತ್ತಾ, ತಪ್ಪುಗಳಿಂದ ಕಲಿಯುತ್ತಾ ಬದುಕಿದರೆ ಮಾತ್ರ ಎಲ್ಲವೂ ಶುದ್ಧ, ಶ್ರೇಷ್ಠ, ರುಚಿಕರ ಮತ್ತು ವ್ಯವಸ್ಥಿತವಾಗಿರುತ್ತದೆ" ಎಂದು ಹೇಳೇಬಿಟ್ಟ.

ಆತನ ಮಾತುಗಳು ನೈಜವಾಗಿದ್ದರೂ ಪ್ರಾತಃಕಾಲದ ಈ ತಂಪು ಹೊತ್ತಿನಲ್ಲಿ ಅನಗತ್ಯ ಎನಿಸಿತು. ತುಸು ಒರಟಾಗಿಯೇ ಕೇಳಿದೆ, " ನೀನು ಯಾರು, ನಿನ್ನ ಹೆಸರೇನು? ನಿನ್ನ ಉದ್ಯೋಗವೇನು?"

" ಅದೆಲ್ಲ ಅಪ್ರಸ್ತುತ!" ಥಟ್ಟನೆ ಉತ್ತರ ಬಂತು.

"ಯಾಕೆ ಅಪ್ರಸ್ತುತ? ಏನು ಕಲಿತಿದ್ದೀಯಾ, ನಿನ್ನ ತಂದೆತಾಯಿಗಳು ಯಾರು? ಬೆಳಿಗ್ಗೆಯಿಂದ ವಾಕಿಂಗ್ ಬರೋ ಹೆಂಗಸರನ್ನೆಲ್ಲ ಮಾತಾಡಿಸುತ್ತೀಯಲ್ಲಾ, ನಿನಗೆ ಕೆಲಸ ಕಾರ್ಯಗಳೇನೂ ಇಲ್ಲವೇ?" ಅಸಹನೆಯಿಂದ ಮಾತಿನಲ್ಲೇ ತಿವಿದೆ.

"ನನ್ನನ್ನು ಏನೆಂದೂ ಕರೆಯಬಹುದು ನೀನು. ನಾನು ದೇವರೆನಿಸಿಕೊಂಡು ಬದುಕುವವನು, ನನ್ನ ಸಾಧನೆಗಳಿಗೆ ನಾನೇ ಗೌರವ ಕೊಡುವವನು", ಶ್ರೀಮಂತ ಧ್ವನಿಯಲ್ಲಿ ಮಾತುಗಳು ಮೊಳಗಿ ಬಂದರೂನನ್ನ ಮೇಲೇನೂ ಪರಿಣಾಮವುಂಟಾಗಲಿಲ್ಲ.

"ಹೌದೇ! ನಾವು ಸ್ತ್ರೀಯರೋ, ಏಕತಾನತೆಯಲ್ಲಿ ಸತತ ಸಂಸಾರಕ್ಕಾಗಿ ದುಡಿಯುವವರು. ದೇಹಕ್ಕೆ ತುಸು ವ್ಯಾಯಾಮ ಸಿಕ್ಕಂತಾಗಲಿ ಎಂದು ಪಾರ್ಕಿಗೆ ವಾಕಿಂಗ್ ಬರುತ್ತೇವೆ. ನೀನಾದರೂ ಕೆಲಸವಿಲ್ಲದವನಂತೆ ಯಾಕೆ ಹೀಗೆ ಓಡಾಡುತ್ತೀ, ನಿನಗೊಂದು ಮನೆ ಸೂರು ಇಲ್ಲವೇ? ನಿನ್ನ ಈ ಹುಡುಗಾಟಿಕೆಯನ್ನು ನಿನ್ನ ತಂದೆತಾಯಿಗಳು ಏನೆಂದುಕೊಂಡಾರು ಎಂಬ ಭಯವೂ ನಿನಗಿಲ್ಲವೇ?"

ನನ್ನ ಮಾತಿಗೆ ಉತ್ತರ ಬಾರದಿದ್ದುದು ನೋಡಿ ಅವನನ್ನು ಇನ್ನಷ್ಟು ತಬ್ಬಿಬ್ಬಾಗಿಸಬೇಕು ಎಂದುಕೊಂಡು ತಿರುಗಿ ನೋಡಿದೆ.. ಆಸಾಮಿ ಅಲ್ಲಿದ್ದರೆ ತಾನೇ!

ಖುಷಿಯಾಯ್ತು ನನಗೆ. 'ಸದ್ಯ ಇನ್ಮೇಲಿಂದ ಇವನ ಕಾಟ ನನಗಿರೋಲ್ಲ' ಎಂದುಕೊಂಡು ಅಲ್ಲಿಂದ ಹೊರಟೆ. ಸುಗಂಧಯುಕ್ತ ಸಂಪಿಗೆ ಮರದ ಬಳಿ ಬರುವಾಗಲೇ ಜೋರಾಗಿ ಗಂಟೆಗಳ ನಾದವೂ, ಒಂದರ ಮೇಲೊಂದು ಆರತಿಯ ಬೆಳಕೂ ಕಾಣಿಸತೊಡಗಿತು. ಸಾಕಷ್ಟು ಭಕ್ತರುಗಳೂ ಕೈ ಜೋಡಿಸಿಕೊಂಡು ಭಕ್ತಿಪರವಶರಾಗಿ ನಿಂತಿದ್ದರು. ನಾನೂ ಅರೆಕ್ಷಣ ನಿಂತು ಆರತಿ ಸ್ವೀಕರಿಸಿ ಮನೆಯ ದಾರಿ ಹಿಡಿದೆ.

***

ನಾನೂ ರಾಧೆಯಾದೆ

– ಶಾಂತಿ ವಾಸು

ಕಣ್ಮುಚ್ಚಿ ಒರಗಲು ತೋಳ ತಡಕಿ ನೊಂದಿದ್ದೆ..
ಅಪ್ಪಲು ಅವಸರಿಸಿ ಅವನ ನೆರಳ ಹುಡುಕಿ ಬೆಂದಿದ್ದೆ..
ನನ್ನನ್ನಾರಾಧಿಸಿದ ಅವನ ಕಣ್ಣಿಗೆ ಮುತ್ತನಿಕ್ಕಲು ಕಾತರಿಸುತ್ತಿದ್ದೆ..

ಅವನ ತುದಿಬೆರಳು ಸೋಕಿದ ಮಿಂಚು ಪುಳಕಕೆ ಹೃದಯ ತುಡಿಯುತಿತ್ತು..
ನಿದ್ರಿಸುವಾಗ ಎಚ್ಚರವಿದ್ದು ನುಣುಪುಗೂದಲೊಡನೆ ಆಟವಾಡಿ ರಮಿಸಬೇಕಿತ್ತು..
ನನ್ನ ಶ್ಲೋಕ ಕವಿತೆಗಳ ಅರ್ಥೈಸಿ ಹೇಳಿ ಅವನ ನನ್ನಲ್ಲೇ ಉಳಿಸಿಕೊಳ್ಳಬೇಕಿತ್ತು..

ಅಂದಿದ್ದ. ಇಂದಿಲ್ಲ. ಮುಂದೆಯೂ ಇರುವುದಿಲ್ಲ ಎನ್ನಲಾಗದು. ಅನ್ನಲಾರೆ..
ಅಲ್ಲಿದ್ದ. ಇಲ್ಲಿದ್ದ. ಕುಳಿತಿದ್ದ. ನಿಂತಿದ್ದ ಎಂದು ಅವನನು ಭೂತಕಾಲಕ್ಕೆ ಸೀಮಿತಗೊಳಿಸಲಾರೆ..
ಮಾಡುವ ಕೆಲಸವೆಲ್ಲವೂ ಅವನ ಮೆಚ್ಚಿಸಲೆಂದೇ. ಭಾವ ಭ್ರಮೆಯೆಲ್ಲವನೂ ಅವನಿಗನುಕ್ಷಣವೂ ಸಾಬೀತುಗೊಳಿಸಲಾರೆ..

ನನ್ನ ಹೆಸರ ಉಸುರುವ ಅವನ ಹೃದಯದ ಮೌನ ಭಾಷೆ ಕೇಳಬೇಕಿತ್ತು..
ನನ್ನ ಮಾತುಗಳ ಹೊತ್ತೊಯ್ದವನ ಅಪ್ಪಿ ಉಸಿರುಗಟ್ಟಿಸಬೇಕಿತ್ತು..
ತಾನೇ ನನ್ನಂತಾಗಿ ಬೆರೆತು, ತನ್ನೊಡನೆ ನನ್ನನೂ ಮರೆತು ಮರೆಯಾದವನೊಡನೆ ಸವಿ ಮಾತಾಡಬೇಕಿತ್ತು..

ಸಮಯ, ಸಾವು, ಪ್ರೀತಿಯನು ತಣಿಸುವ ನೆನಪುಗಳಲ್ಲಿ ನಾನು ಜೀವಂತವಿದ್ದೆ..
ನಲಿವು, ಕಣ್ಣೀರನ್ನು ಪಿಸುಮಾತಿನಲ್ಲಿ ಹೇಳಲು ನನ್ನೊಂದಿಗುಳಿದ ಆತ್ಮಸಖನ ಸಂಧಿಸಿದಾಗ ನಾನೂ ರಾಧೆಯಾಗಿದ್ದೆ.

***

ಕಥೆ ಕೇಳಿದುದರ ಫಲ ಮತ್ತು ಕಥೆ ಹೇಳಿದುದರ ಫಲ

– ವಿಠ್ಠಲ ಇಜೇರಿ

ಕತೆಗಳು ಜೀವನದ ಅನೇಕ ಮುಖಗಳನ್ನು ಪರಿಚಯಿಸುತ್ತವೆ. ಅದರೊಂದಿಗೆ ಜ್ಞಾನವನ್ನು ಮತ್ತು ಮನಕ್ಕೆ ರಂಜನೆಯನ್ನೂ ಒದಗಿಸುತ್ತವೆ. ಇಂದಿನ ದಿನಮಾನದಲ್ಲಿ ಮನಸ್ಸನ್ನು ಗೊಂದಲಕ್ಕೆ ತಳ್ಳುವ ಸಾಕಷ್ಟು ವಿಷಯಗಳಿವೆ. ಆದುದರಿಂದ ನಮ್ಮ ಜನರಿಗೆ ಅದರಲ್ಲೂ ವಿಶೇಷವಾಗಿ ಯುವ ಪೀಳಿಗೆಗೆ ಪಾರಮಾರ್ಥ ವಿಷಯಗಳನ್ನು ತಿಳಿಸಿ ಅವರನ್ನು ಪ್ರಜ್ಞಾವಂತ ಪ್ರಜೆಗಳನ್ನಾಗಿ ಮಾಡುವ ಅವಶ್ಯಕತೆ ಇಂದು ಮುಂಚಿಗಿಂತ ಹೆಚ್ಚಿದೆ. ನಮ್ಮ ನಾಡಿನಲ್ಲಿ ತಲೆ ತಲಾತರಗಳಿಂದ ಬಾಯಿಂದ ಬಾಯಿಗೆ ಹರಿದು ಬಂದಿರುವ ಕತೆಗಳು ಸಾಕಷ್ಟಿವೆ. ಎಚ್. ಎಸ್. ಅಚ್ಚಪ್ಪ ಅವರು ಅಂತಹ ಕೆಲವು ಕತೆಗಳನ್ನು 'ಕಣ್ತೆರೆಯಿಸುವ ಕಿರುಗತೆಗಳು' ಎಂಬ ಪುಸ್ತಕದಲ್ಲಿ ಸಂಪಾದನೆ ಮಾಡಿದ್ದಾರೆ(1991). ಅದರಲ್ಲಿಯ ಒಂದು ಕಥೆ. 'ಕಥೆ ಕೇಳಿದ ಫಲ ಮತ್ತು ಕಥೆ ಹೇಳಿದ ಫಲ' ಇಲ್ಲಿದೆ.

ಕಥೆ ಕೇಳಿದ ಫಲ

ನಾವು ಸತ್ಯನಾರಾಯಣ ಕಥೆ ಕೇಳಲಿ, ವಿಷ್ಣು ಸಹಸ್ರನಾಮ ಪಠಣ ಮಾಡಲಿ, ಇನ್ನಾವುದೇ ವ್ರತ ಮಾಡಲಿ ಕೊನೆಯಲ್ಲಿ ಫಲಶ್ರುತಿ ಎಂದು ನಮಗೆ ದೊರೆಯುವ ಉತ್ತಮ ಫಲಗಳ ಪಾಠ ಇರುತ್ತದೆ. ಆಸ್ತಿಕರಿಗೆ ದೈವೀ ಭಾವದಿಂದ ದೊರೆಯುವ ಮನಸ್ಸಿನ ನೆಮ್ಮದಿ, ಸಂತೋಷಗಳ ಲಾಭ ಅದು.

ಈಗ್ಗೆ ಐದು ದಶಕಗಳ ಹಿಂದೆ ಒಂದು ಗ್ರಾಮದಲ್ಲಿ ಕುಮಾರವ್ಯಾಸ ಭಾರತ ವಾಚನ ಮತ್ತು ವ್ಯಾಖ್ಯಾನ ನಡೆಯಿತು. ಕರ್ನಾಟ ಭಾರತ ಕಥಾ ಕಾಲಕ್ಷೇಪ ನಡೆಯುತ್ತಿತ್ತು. ಅದರಲ್ಲಿ ಬರುವ "ಧುರ್ಯೋಧನನು ಪಾಂಡವರಿಗೆ ಒಂದು ಸೂಜಿ ಮೊನೆಯಷ್ಟು ಭೂಮಿಯನ್ನೂ ಕೊಡುವುದಿಲ್ಲ" ಎಂದುದನ್ನು ಕೇಳಿಯೂ ಯುಧಿಷ್ಟಿರ ಶಾಂತನಾಗಿಯೇ ಇದ್ದ ಎಂದು ಅಂದಿನ ಕಥೆಯಲ್ಲಿ ತಿಳಿಸಿದರು.

ಅದಾದ ಕೆಲದಿನಗಳಲ್ಲಿ ಒಂದು ಕುಟುಂಬದಲ್ಲಿ ಅಣ್ಣ ತಮ್ಮಂದಿರು ಸ್ವತ್ತುಗಳನ್ನು ಭಾಗ ಮಾಡಿಕೊಂಡರು. ಅಣ್ಣನು ತನ್ನ ಭಾಗಕ್ಕೆ ಹಿರಿಯರ ಪಾಲು ಎಂದು ಹೇಳಿ ಹೆಚ್ಚು ಸೊತ್ತುಗಳನ್ನು ಇಟ್ಟುಕೊಂಡು, ಕಡಿಮೆ ಸ್ವತ್ತು ತಮ್ಮನಿಗೆ ಕೊಟ್ಟನು. ತಮ್ಮನ ಭಾವಮೈದುನರು ಅಣ್ಣನ ಮೇಲೆ ವಿವಾದ ಹೂಡಬೇಕೆಂದು ಎತ್ತಿಕಟ್ಟಿದರು. ಅವರಾರು ಹೇಳಿದರೂ ತಮ್ಮ ಯಾರ ಮಾತಿಗೂ ಕಿವಿಗೊಡಲಿಲ್ಲ. ಅವರಿಗೆ ತಿರುಗಿ, "ಮೊನ್ನೆ ಕೇಳಲಿಲ್ಲವೇ, ಧುರ್ಯೋಧನ ಸೂಜಿ ಮೊನೆಯಷ್ಟು ಭೂಮಿನೂ ಕೊಡುವದಿಲ್ಲ ಅಂದಾಗ ಧರ್ಮರಾಜ ಕಿಮಕ್, ಕಮಕ್ ಅನ್ನಲಿಲ್ಲ. ನಮ್ಮ ಅಣ್ಣ ನನಗೆ ಭೂಮಿ ಸ್ವಲ್ಪ ಕಡಿಮೆ ಕೊಟ್ಟಿದ್ದಾನೆ. ಅಷ್ಟಕ್ಕೇ ಜಗಳ ಕಾಯಲೇ? 'ಪಿತೃ ಸಮೋ ಜೇಷ್ಠ' ಕೊಂಚ ಹೆಚ್ಚಿಗೆ ತೆಗೆದುಕೊಂಡ. ಅವನು ಹಿರಿಯ ಹೆಚ್ಚು ತೆಗೆದುಕೊಂಡ. ನಾನು ಕಿರಿಯ ಕೊಂಚ ಕಡಿಮೆ ಕೊಟ್ಟ. ಅವನಿಗೆ ಮಕ್ಕಳು ಹೆಚ್ಚು, ಇರಲಿ ಬಿಡಿ''.

ಕಥೆ ಹೇಳಿದುದರ ಫಲ

ಈ ಕಥೆಯನ್ನು ಒಬ್ಬ ದಕ್ಷ ಸರಕಾರಿ ಅಧಿಕಾರಿ ತನ್ನ ಮೇಲಾಧಿಕಾರಿಗಳಿಗೆ ಹೇಳಿದ್ದು.,

ಒಬ್ಬ ದೊರೆಯ ಬಳಿ ಹವಾಮಾನ ಮುನ್ಸೂಚನೆ ಹೇಳಲು ಒಬ್ಬ ಪ್ರವಾದಿ ಇದ್ದ. ಒಂದು ಸಂಜೆ ದೊರೆ ಮೀನು ಹಿಡಿಯಲು ಹೋಗಲಿಚ್ಚಿಸಿದ. ಅವನು ಮೀನು ಹಿಡಿಯಲು ಹೋಗುವ ಸ್ಥಳದ ಹತ್ತಿರದಲ್ಲಿ ಅರಸನ ಪ್ರೇಯಸಿ ಇದ್ದಳು. ಅರಸ ಅಲ್ಲಿಗೆ ಹೋಗಲು ಕಾತುರನಾಗಿದ್ದ. ಪ್ರವಾದಿಗೆ ''ಇಂದು ಸಂಜೆ ಮಳೆ ಬರುವ ಸಾಧ್ಯತೆ ಇದೆಯಾ'' ಎಂದು ಕೇಳಿದ. ಪ್ರವಾದಿ "ಪ್ರಭು, ಅಂತಹ ಲಕ್ಷಣಗಳು ಇಲ್ಲ" ಎಂದು ಹೇಳಿದ. ಅರಸು ಖುಷಿಯಿಂದ ಅತ್ಯುತ್ತಮವಾಗಿ ವೇಷ, ಭೂಷಣ ಧರಿಸಿ ಮೀನು ಹಿಡಿಯಲು, ಹಾಗೆಯೇ ಪ್ರೇಯಸಿಯನ್ನು ಕಾಣಲು ಹೊರಟ. ಮೀನು ಹಿಡಿಯುವ ಸ್ಥಳಕ್ಕೆ ಇನ್ನೇನು ತಲುಪಬೇಕು. ಎದುರು

ಅಗಸನೊಬ್ಬ ಕತ್ತೆಯನ್ನು ಹೊಡೆದುಕೊಂಡು ಬರುತ್ತಿದ್ದ. ಅವನು ಅರಸನಿಗೆ, "ಮಹಾರಾಜರೆ, ನಿಮ್ಮ ಬಟ್ಟೆ ಒದ್ದೆಯಾಗಬಾರದು ಅನ್ನುವಂತಿದ್ದರೆ ಬೇಗ ಹೋಗಿ ಅರಮನೆ ಸೇರಿಕೊಳ್ಳಿ. ಇನ್ನೊಂದು ಗಳಿಗೆಗೆ ಮಳೆ ಬೀಳಲಿದೆ" ಅಂದ. ಅರಸನು ಅಗಸನ ಮಾತು ಕಿವಿಗೆ ಹಾಕಿಕೊಳ್ಳದೆ ಮುನ್ನಡೆದ.

ಸ್ವಲ್ಪ ಸಮಯದಲ್ಲಿ ಮಳೆ ಜೋರಾಗಿ ಸುರಿಯತೊಡಗಿ ಅರಸನ ಬಟ್ಟೆಗಳೆಲ್ಲ ತೊಯ್ದುಹೋದವು. ಆದೇ ಅವಸ್ಥೆಯಲ್ಲಿ ಪ್ರೇಯಸಿಯ ಬಳಿ ಹೋದ ಅರಸನನ್ನು ಕಂಡು ಆಕೆ ಇದೇನು ನಿಮ್ಮ ಅವಸ್ಥೆ, ಮಳೆಯಲ್ಲಿಯೇ ಬಂದಿರುವಿರಿ, ಹೆಣ್ಣಿನ ಬಗ್ಗೆ ಮಹಾರಾಜರಿಗೆ ಇಷ್ಟೊಂದು ವ್ಯಾಮೋಹವೇ? ಅದು ಒಳ್ಳೆಯದಲ್ಲ" ಅಂದಳು. ಅರಸರಿಗೆ ಬೇಸರವಾಯಿತು.

ಅರಸು ಮರುದಿನ ಹವಾಮಾನ ತಿಳಿಸುವ ಪ್ರವಾದಿಯನ್ನು ವಜಾ ಮಾಡಿ ಆ ಅಗಸನನ್ನು ಆ ಸ್ಥಾನಕ್ಕೆ ನಿಯಮಿಸಿದನು. ಅಗಸ ಅರಸನಿಗೆ, "ಮಹಾಸ್ವಾಮಿ, ನೀವು ಈ ಸ್ಥಾನವನ್ನೇನೋ ದಯಪಾಲಿಸಿದಿರಿ. ಆದರೆ ನನಗೆ ಹವಾಮಾನದ ಮುನ್ಸೂಚನೆ ತಿಳಿಯುವುದಿಲ್ಲ. ನಾನು ನನ್ನ ಕತ್ತೆಯ ಕಿವಿಗಳನ್ನು ನೋಡುತ್ತೇನೆ, ಮಳೆ ಬರುವ ಲಕ್ಷಣಗಳು ಇದ್ದರೆ ಅವುಗಳು ಕೆಳ ಮುಖವಾಗಿ ಜೋತು ಬಿದ್ದಿರುತ್ತವೆ. ಅದು ಮಳೆ ಬರುವ ಲಕ್ಷಣ. ಅದನ್ನೇ ನಾನು ನಿಮಗೆ ಹೇಳಿದ್ದು" ಎಂದು ನುಡಿದ. ಆಗ ಅರಸ, "ನಿನ್ನ ಮನೆಗೆ ಹೋಗಿ ನಿನ್ನ ಕತ್ತೆಯನ್ನು ಅಟ್ಟಿಸಿಕೊಂಡು ಬಾ" ಎಂದು ಓಡಿಸಿದ. ಅಗಸ ಕತ್ತೆಯೊಡನೆ ಬಂದಾಗ ಅರಸು ಅಗಸನ ಬದಲು ಆ ಕತ್ತೆಯನ್ನು ಹವಾಮಾನ ಮುನ್ಸೂಚನೆ ಹೇಳುವ ಪ್ರವಾದಿಯನ್ನಾಗಿ ನಿಯಮಿಸಿದ. ಅಂದಿನಿಂದ ಸರ್ಕಾರದ ಉನ್ನತ ಹುದ್ದೆಯಲ್ಲಿರುವವರೆಲ್ಲ ಇಂಥ ಕತ್ತೆಗಳಂತೆ ಎಂಬ ಮಾತು ಪ್ರಚಲಿತವಾಯಿತು.

ಒಬ್ಬ ದಕ್ಷ ಅಧಿಕಾರಿ ತನಗೆ ದೊರೆಯಬಹುದಾದ ಸ್ಥಾನ ಸಿಗದೇ ಹೋದಾಗ ಈ ಕಥೆ ಬರೆದು ಒಂದು ಲಕೋಟೆಯಲ್ಲಿ ಮೇಲಧಿಕಾರಿಗಳಿಗೆ ಕಳಿಸಿದ. ಅವನು ಹೇಳಿದ (ಕಳಿಸಿದ) ಕಥೆ. ಅದನ್ನು ಅರ್ಥ ಮಾಡಿಕೊಂಡ ಮೇಲಾಧಿಕಾರಿಗಳು ಅವನ ಬಗ್ಗೆ ಸರಿಯಾದ ಮಾಹಿತಿ ಪಡೆದು ಪದೋನ್ನತಿ ನೀಡಿದರು.

***

ಕಾಲು ಕೈಕೊಟ್ಟಾಗ

- ನಾಗರತ್ನ ಚಂದ್ರಶೇಖರ್

"ಏನ್ರೀ, ಇದು ನಿಮ್ಮ ಹೊಸ ಕತೆನಾ?"

"ಅಲ್ಲಲ್ಲ, ಇದು ನನ್ನದೇ ಹೊಸ ಧಾರಾವಾಹಿ. ಇದರ ನಿರ್ಮಾಣ, ನಿರ್ದೇಶನ, ಅಭಿನಯ ಎಲ್ಲಾ ನನ್ನದೇ"

"ಓ ಗೊತ್ತಾಯ್ತು ಬಿಡಿ. ಈ ಹಿಂದೆನೂ ನೀವು ನಾಲ್ಕೈದು ಈ ರೀತಿ ಧಾರಾವಾಹಿ ಬರ್ದಿದ್ರಿ ಅಲ್ವಾ?"

"ಸರಿಯಾಗಿ ಹೇಳಿದ್ರಿ, ನಾಲ್ಕು ವರ್ಷದ್ ಹಿಂದೆ ನನ್ ಕಣ್ಣಿನ ಆಪರೇಷನ್ ಆದಾಗ, ಗಾಂಧಾರಿ ಪಾತ್ರದಲ್ಲಿ. ಎರಡು ವರ್ಷದ ಹಿಂದೆ ಹಲ್ಲಿನ ಚಿಕಿತ್ಸೆಗಾಗಿ 'ದಂತ ಯಾತ್ರೆ', ಹೋದ ವರ್ಷ ಕಿವಿನೋವು, ತಲೆ ಸುತ್ತು ಆದಾಗ 'ಕರ್ಣಗಳು ಕಠೋರವಾದಾಗ'.

"ಓಹೋ, ಹಾಗಾದ್ರೆ ಈ ವರ್ಷ"

"ಈಗಿನದು ಮಂಡಿ ನೋವಿನ ಧಾರಾವಾಹಿ 'ಕಾಲು ಕೈಕೊಟ್ಟಾಗ" ಈಗ ತಾನೆ ಪ್ರಾರಂಭವಾಗಿದೆ".

ಸ್ನೇಹಿತರೆ, ಗೆಳತಿಯ ಜೊತೆ ನನ್ನ ಸಂಭಾಷಣೆ ಕೇಳಿದ್ಮೇಲೆ ನಿಮಗೆ ನಾನು ಏನು ಹೇಳಕ್ ಹೊರಟಿದ್ದೇನೆ ಅಂತ ಈಗಾಗ್ಲೇ ಅರ್ಥ ಆಗಿರಬೇಕಲ್ಲವೇ?

ಈ ಕೈಕೊಡೋದು ಅನ್ನೋ ಮಾತು ದಿನನಿತ್ಯ ನಾವು ಒಂದಲ್ಲ ಒಂದು ಸಂದರ್ಭದಲ್ಲಿ ಬಳಸ್ತಾನೇ ಇರ್ತೀವಿ. ಟಿವಿನೋ ಮಿಕ್ಸಿನೋ ಕಂಪ್ಯೂಟರೋ ಕೆಟ್ಟು ಕೂತಾಗ ಅಥವಾ ರಿಪೇರಿಗೆ ಬಂದಾಗ ಎಲ್ಲರೂ ಹೇಳೋ ಮಾತು ಇದೇ. ಹಾಗೇನೆ ನಮ್ಮ ದೇಹದಲ್ಲಿ ಯಾವುದಾದರೂ ಅಂಗಾಂಗಗಳು ರಿಪೇರಿಗೆ ಬಂದಾಗ ಈ ಮಾತನ್ನು ಬಳಸಿದರೆ ಹೇಗೆ ಅನ್ನಿಸ್ತು.

ಬಾಳೆಹಣ್ಣಿನ ಚಿಪ್ಪು, ತೆಂಗಿನಕಾಯಿ ಚಿಪ್ಪು, ಕಂಪ್ಯೂಟರಿನಲ್ಲಿ ಚಿಪ್ಪು, ಇಂಥದ್ದನ್ನೆಲ್ಲ ಕೇಳ್ತಾ ಇರೋ ಕಾಲದಲ್ಲೇ ಮಂಡಿ ಚಿಪ್ಪುನೂ ಕೂಡ ಜಾಸ್ತಿ ಬಳಕೆ ಆಗ್ತಾ ಇರೋ ಶಬ್ದ ಆಗಿದೆ. ನಾನು ಕುಂಟಿಕೊಂಡು ಕಾಲು ಎಳೆಯುತ್ತಾ ನಡೆದಾಡುವುದನ್ನು ನೋಡಿದವರೆಲ್ಲ ಏನಾಯ್ತು ರೀ ಅಂತ ಕೇಳೋಕೆ ಶುರು ಮಾಡಿದ್ಮೇಲೆ ನಾನು ನಗ್ತಾ ಕಾಲು ಕೈ ಕೊಡ್ತು ಅನ್ನೋಕೆ ಶುರುಮಾಡಿದೆ. ಮೂಳೆ ಡಾಕ್ಟರ್ ಹತ್ತಿರ ಹೋದ್ರೆ ಅವರು ಹೇಳಿದ್ದು- "ಚಿಪ್ಪು ಸವೆದಿದೆ, ಆಪರೇಷನ್ ಈಗ್ಲೇ ಬೇಡ. ಆದ್ರೆ, ಬೆಟ್ಟಗುಡ್ಡ ಹತ್ತಬೇಡಿ, ಏರುದಿಣ್ಣೆ ಇಳೀಬೇಡಿ, ಚಕ್ಕಳಮಕ್ಕಳ ಹಾಕಿ ನೆಲದ ಮೇಲೆ ಕೂರಬೇಡಿ. ವೆಸ್ಟರ್ನ್ ಶೌಚಾಲಯ ಮಾತ್ರ ಬಳಸಿ. ಈ ತರಹ ನೀವು ಮಾಡ್ತಾ ಇದ್ರೆ ಇನ್ನೊಂದೆರಡು ವರ್ಷಕ್ಕೆ ಮುಂದೂಡ್ಬಹುದು ಆಪರೇಷನ್" ಅಂತ ಹೇಳಿ ಆರು ವರ್ಷ ಆಯ್ತು. ದೇಶ ವಿದೇಶಗಳನ್ನೆಲ್ಲಾ ಕುಂಟುತ್ತಾನೆ ಸುತ್ತಿದ್ದಾಯಿತು.

'ಕರುಣಾಳು ಬಾ ಬೆಳಕೆ, ಕೈಹಿಡಿದು ನಡೆಸೆನ್ನನು' ಎಂದು ಬೆಳಗ್ಗೆ ಎದ್ದ ಕೂಡಲೇ ಮರೆಯದೆ ಪ್ರಾರ್ಥನೆ ಮಾಡಲು ಶುರು ಮಾಡಿದ್ದರ ಫಲ, ಪತಿರಾಯರು ನಾನು ಹೊರಗಡೆ ಹೋದಾಗಲೆಲ್ಲ ಕೈಹಿಡಿದು ಹತ್ತಿಸಿ, ಇಳಿಸಿ, ಸುರಕ್ಷಿತವಾಗಿ ಕರೆತರುತ್ತಾರೆ. "ಮೆಲ್ಲಗೆ... ನಡೆ ನನ್ನ ಮಲ್ಲಿಗೆ" ಅಂತ ಹೇಳಕ್ಕೂ ಅವರಿಗೆ ಸಾಧ್ಯವಿಲ್ಲ. ಏಕೆಂದರೆ ನಾನು ಮಲ್ಲಿಗೆ ಬಳ್ಳಿಯಾಗದೆ ಕುಂಬಳಕಾಯಿ ತರ ಆಗ್ತಾ ಇದ್ದೀನಿ.

ಧಾರಾವಾಹಿ ಅಂತ ಹೇಳಿದ ಮೇಲೆ ಇಲ್ಲಿಗೆ ಮುಗಿದರೆ ಹೇಗೆ ಹೇಳಿ? ಇನ್ನು ನೋವು ನಿವಾರಕಗಳು. .ಹೋದ್ ಕಡೆ ಬಂದ್ ಕಡೆ ಎಲ್ಲಾ ಎಣ್ಣೆ ಬಾಟ್ಲು ಹುಡುಕಿಕೊಂಡು ತಂದಿದ್ದು ಆಯ್ತು. ಅಯ್ಯೋ, ಅದು ನಮ್ಮೆಜಮಾನ್ರ ಹೊಟ್ಟೆಗಲ್ರಿ, ನನ್ನ ಮೊಣಕಾಲಿಗೆ. ಮೊನ್ನೆ ಶ್ರೀಲಂಕಾದಿಂದ ತಂದ ದುಬಾರಿ ಎಣ್ಣೆ ಕೂಡ ಏನೂ ಪ್ರಯೋಜನ ಅನಿಸಲೇ ಇಲ್ಲ. ಕೊನೆಗೆ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ.., ಇಂಥ ಅಡುಗೆಮನೆ ವೈದ್ಯನೂ ಆಗೋಯ್ತು. ಯೂಟ್ಯೂಬ್‌ನಲ್ಲಿ ಬರ್ತಾ ಇರೋ ರಾಶಿ ರಾಶಿ ಸಲಹೆಗಳು, ಪರಿಹಾರಗಳು... ಉಹುಂ.. ಯಾವುದಕ್ಕೂ ಜಗ್ಗದೆ, ಬಗ್ಗದೇ ಇದ್ದಾಗ, ದೂರದ ಆಶಾಕಿರಣದಂತೆ ಬಂದಿತ್ತು ಒಂದು ಜಾಹೀರಾತು. ಅದು ಪ್ಲಾಸ್ಮಾ ಥೆರಪಿ. ಮೂರು ತಿಂಗಳ ಅವಧಿಯ ಈ ಚಿಕಿತ್ಸೆಯಿಂದ ಕಾಲುಗಳಲ್ಲಿದ್ದ ಗಂಟು ಕರಗದೆ ಬ್ಯಾಂಕಿನ ಹಣದ ಗಂಟು ಕರಗಿದ್ದೇ ಲಾಭ. ಅಮೆರಿಕದಿಂದ ಬಂದ ಮಗಳು ನನ್ನ ಅವಸ್ಥೆ ನೋಡಿ ಅಂತರ್ಜಾಲದಲ್ಲಿ ಹುಡುಕಿ ಕೈರೋ ಪ್ರಾಕ್ಟೀಸ್, ಆಕ್ವಾ ತೆರಪಿ ಹಾಗೂ ಲೇಸರ್, ಮಸಾಜ್ ಇತ್ಯಾದಿಗಳ ಒಂದು ದೊಡ್ಡ ಕಸರತ್ತುಗಳ ಕಾರ್ಖಾನೆಗೆ ನನ್ನನ್ನು ಸೇರಿಸಿದಳು. ಈಜು ಬಾರದ ನನ್ನನ್ನು ಈಜುಕೊಳದಲ್ಲಿ ನಿಲ್ಲಿಸಿ ಮುಳುಗಿಸಿ, ತೇಲಿಸಿ, ಕೈಕಾಲುಗಳನ್ನೆಲ್ಲ ಎಳೆದು ಒಂದು ಗಂಟೆ ವ್ಯಾಯಾಮ ಮಾಡಿಸಿದ್ದು ಆಯಿತು. ಹೀಗೆ ಎರಡು ದಿನ ಈಜುಕೊಳದಲ್ಲಿ ಮುಳುಗೇಳುವಷ್ಟರಲ್ಲಿ ನೆಗಡಿ, ಶೀತ, ಗಂಟಲು ಕೆರೆತ ವಕ್ಕರಿಸಿತ್ತು. ಇನ್ನು ನರಕದ ಹೆಬ್ಬಾಗಿಲು ತೆರೆದಂತಹ ಚಿಕಿತ್ಸೆ ಎಂದರೆ ಕೈನಿಂದ ಮಸಾಜ್. ಹಾಗೂ ಬ್ಯಾಟರಿಚಾಲಿತ ಬಾಲ್‌ನಂತಹ ಉಪಕರಣದಿಂದ ಇಡೀ ಬೆನ್ನು ಮತ್ತು ಕಾಲುಗಳ ಮೇಲೆ ಒತ್ತುತ್ತಿದ್ದರೆ ಮೈಮೇಲೆ ಬಸ್ಸು, ಕಾರು ಹರಿದಷ್ಟು ನೋವು. ತಾಳಲಾರದೆ ಮೆಲ್ಲಗೆ ಚೀರುತ್ತಿದ್ದೆ ಕೂಡ. ಮನೆಗೆ ಬರುವಷ್ಟರಲ್ಲಿ ಕರೆಂಟು ಹೊಡೆದ ಕಾಗೆಯಂತೆ ಬಿದ್ದುಕೊಳ್ಳುತ್ತಿದ್ದೆ. ಇಷ್ಟೆಲ್ಲ ಇದ್ದರೂ ಮನೆ ಅಡುಗೆ, ಮನೆ ಊಟವಂತೂ ತಪ್ಪುತ್ತಿರಲಿಲ್ಲ. ಆದರೆ ಬರವಣಿಗೆ ಮಾತ್ರ ಮಕಾಡೆ ಮಲಗಿತ್ತು. ಹದಿನೈದು ದಿನಕ್ಕೇ ದೊಡ್ಡ ನಮಸ್ಕಾರ ಹಾಕಿದೆ.

ಈಗ ಗಂಟು ನೋವಿಗೆ ಕುಂಟುವುದೇ ಪರಿಹಾರ ಎಂದುಕೊಂಡೆ. ಈ ಮಧ್ಯೆ ನನ್ನ ತಂಗಿ ಎರಡು ಕಾಲುಗಳಿಗೆ ಮಂಡಿ ಮರುಜೋಡಣೆ ಚಿಕಿತ್ಸೆ ಮಾಡಿಸಿಕೊಂಡು ಚೆನ್ನಾಗಿ ಓಡಾಡತೊಡಗಿದ್ದನ್ನು ನೋಡಿದ ಮೇಲೆ ನಾನು ಕೂಡ ಆಶಾವಾದಿ ಯಾಗಿರುವೆ. ಆದ್ದರಿಂದ ಧಾರಾವಾಹಿ ಮುಂದಿನ ದಿನಗಳಲ್ಲಿ ಮುಂದುವರಿಯುವುದರಿಂದ ದಯವಿಟ್ಟು ನಿರೀಕ್ಷಿಸಿ..

***

ಕಾವ್ಯ ಶೋಧಕ : ಆದರ್ಶ ಪರಿಚಾರಕ

- ಮಹಾಬಲ



ನನಗೆ ಆಗಾಗ್ಗೆ ಬರುತ್ತಿದ್ದ ಒಂದು ದೂರವಾಣಿ ಕರೆ, "ನಮಸ್ಕಾರ ಸಾರ್, ಚೆನ್ನಾಗಿದ್ದೀರಾ? ನಾನು ಕೃಷ್ಣಪ್ಪ" ಎಂದು ಆರಂಭವಾಗುತ್ತಿತ್ತು.


ನಾನು "ಹೇಳಿ ಬೇಂದ್ರೆಯವರೇ, ಏನು ಸಮಾಚಾರ?" ಎನ್ನುತ್ತಿದ್ದೆ. ಹೌದು, ನಾನು ನಾಡೋಜ ಬೇಂದ್ರೆ ಕೃಷ್ಣಪ್ಪನವರ ಹೆಸರನ್ನು "ಬೇಂದ್ರೆ" ಎಂದೇ ನನ್ನ ದೂರವಾಣಿಯಲ್ಲಿ ಉಳಿಸಿಕೊಂಡಿದ್ದೆ. ಉಭಯಕುಶಲೋಪರಿಯ ನಂತರ ತಮ್ಮದೊಂದು ಲೇಖನ ಇಂಥ ಪತ್ರಿಕೆಯಲ್ಲಿ ಬಂದಿದೆ. ಓದಿ ಅಭಿಪ್ರಾಯ ಹೇಳಿ ಎಂದೋ, ನಿಮ್ಮ ತಂದೆ ಕೆಎಸ್‌ನ ಅವರ ಬಗ್ಗೆ ಈ ಪತ್ರಿಕೆಯಲ್ಲಿ ಲೇಖನ ಬಂದಿದೆ, ನೀವೂ ಓದಿರಬಹುದು ಎಂದೋ ತಮ್ಮ ಮೆಲುದನಿಯಲ್ಲಿ ಹೇಳುತ್ತಿದ್ದರು. ಇತ್ತೀಚಿಗೆ ಪ್ರಜಾವಾಣಿಯಲ್ಲಿ ಬರುತ್ತಿರುವ ಅವರ 'ಕುವೆಂಪು ಪದಸೃಷ್ಟಿ' ಅಂಕಣದ ಬಗ್ಗೆಯೂ ನಮ್ಮ ಚರ್ಚೆಯಾಗುತ್ತಿತ್ತು.

'ಹೀಗೆಂದು ಕೃಷ್ಣಪ್ಪನವರ ದೂರವಾಣಿ ಮಾತುಗಳು ತಮ್ಮ ಬರವಣಿಗೆಗಳ ಸ್ವಪ್ರಚಾರ ಧಾಟಿಯದ್ದು ಮಾತ್ರವೇ ಆಗಿರಲಿಲ್ಲ. ಯಾರಾದರೂ ಕವಿ, ಸಾಹಿತಿಗಳು ಅವರಿಗೆ ತಮ್ಮ ಕೃತಿಗಳನ್ನು ಕಳುಹಿಸಿದಾಗ ಅದಕ್ಕೆ ತ್ವರಿತವಾಗಿ ಪತ್ರಮುಖೇನ ಅಥವಾ ದೂರವಾಣಿಯ ಮೂಲಕ ಕೃಷ್ಣಪ್ಪನವರ ಅಭಿಪ್ರಾಯ ತಲುಪುತ್ತಿತ್ತು. ಕೃತಿಯ ಇತ್ಯಾತ್ಮಕ ಅಂಶಗಳ ಜತೆಗೆ ತಮಗೆ ಅನಿಸಿಕೆಯ ಕಟುವಿಮರ್ಶೆಯನ್ನು ದಾಖಲಿಸಲೂ ಅವರು ಹಿಂಜರಿಯುತ್ತಿರಲಿಲ್ಲ. ನನ್ನ ಕೃತಿ "ಬೊಗಸೆ ತುಂಬಾ ಹೂವು" ಕೃತಿ ತಲುಪಿದ ಅರ್ಧದಿನದಲ್ಲಿ ಅಲ್ಲಿರುವ ಕವನಗಳ ಬಗ್ಗೆ ತಮ್ಮ ಮನದಾಳದ ಮಾತುಗಳಲ್ಲಿ ದೂರವಾಣಿಯಲ್ಲೇ ತಿಳಿಸಿದ್ದರು. ಒಟ್ಟಾರೆ ಕವನಗಳ ಬಗ್ಗೆ ಒಳ್ಳೆಯ ಮಾತನ್ನೇ ಆಡಿ ನನ್ನ ಕವನಗಳಲ್ಲಿ ಅಧ್ಯಾತ್ಮಿಕ ನೋಟ ಇಲ್ಲವೆಂದು ಗುರುತಿಸಿದ್ದರು.

ಕೃಷ್ಣಪ್ಪನವರು ಬೇಂದ್ರೆಯವರನ್ನು ಆವಾಹಿಸಿಕೊಂಡುಬಿಟ್ಟಿದ್ದಾರೆ.ಹಾಗಾಗಿ ಅವರಿಗೆ ಬೇಂದ್ರೆ ಕಾವ್ಯದ ಅರ್ಥಾನು ಸಂಧಾನ ಬಿಟ್ಟರೆ ಬೇರೆ ಕವಿಗಳ ಕಾವ್ಯಾಧ್ಯಯನ ಸಾಧ್ಯವಿಲ್ಲ ಎಂದು ಹಲವರು ಕುಟುಕಿದಾಗ ಕೃಷ್ಣಪ್ಪನವರ ಉತ್ತರ ನಸುನಗೆ ಹಾಗೂ ಮೌನ ಅಷ್ಟೇ. ಆದರೆ ಅನತಿಕಾಲದಲ್ಲೇ ಹರಿಹರ, ರಾಘವಾಂಕ, ಲಕ್ಷ್ಮೀಶ ಅಷ್ಟೇಕೆ ರಸಋಷಿ ಕುವೆಂಪುರವರ ಸಾಹಿತ್ಯವನ್ನು ಕುರಿತ ಹಲವಾರು ವಿದ್ವತ್ ಭರಿತ ಕೃತಿಗಳನ್ನು ಹೊರತಂದು ಸಾಹಿತ್ಯ ವಲಯಕ್ಕೆ ತಮ್ಮ ಅಧ್ಯಯನದ ಆಳವನ್ನು ಪರಿಚಯಿಸಿದರು.

ಕೃಷ್ಣಪ್ಪನವರು ಬೋಧಕೇತರ ನಾನ್ ಅಕೆಡೆಮಿಕ್ ವಲಯದ ಸಾಹಿತಿ ಎಂದೇ ಭಾವಿತರಾದವರು .ಹಿಂದುಳಿದ ವರ್ಗದ ಅತ್ಯಂತ ಬಡತನದ ಕುಟುಂಬದಿಂದ ಬಂದವರು ಓದಿದ್ದು ಆಟೊಮೊಬೈಲ್ ಡಿಪ್ಲೋಮೋ ಪದವಿ. ರಸ್ತೆ ಸಾರಿಗೆ ಇಲಾಖೆಯಲ್ಲಿ ವಾಹನಗಳ ಪರಿವೀಕ್ಷಕರಾಗಿ ನೇಮಕಗೊಂಡು ಸಹಾಯಕ ಸಾರಿಗೆ ಅಧಿಕಾರಿಯಾಗಿ ನಿವೃತ್ತರಾದವರು. ಸೇವೆಯಲ್ಲಿದ್ದಾಗಲೇ ಬಿ.ಎ. ಹಾಗೂ ಎಂ.ಎ. ಪದವಿ, ಜತೆಗೆ ಬೇಂದ್ರೆ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡು ಡಾ. ಎಚ್.ಎಸ್.ಹರಿಶಂಕರ ಅವರ ಮಾರ್ಗದರ್ಶನದಲ್ಲಿ 'ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ' ಎಂಬ ವಿಷಯ ಕುರಿತು ಡಾಕ್ಟರೇಟ್ ಪದವಿಯನ್ನೂ ಪಡೆದರು.

ಸಾರಿಗೆ ಕಚೇರಿಯಲ್ಲಿ ಅವರ ಮೇಜಿನ ಮೇಲೆ ಬೇಂದ್ರೆಯವರ ಒಂದು ಚಿಕ್ಕಮೂರ್ತಿಯೂ ಇರುತ್ತಿದ್ದು, ಅವರನ್ನು ಕಾಣಲು ಬಂದವರು "ಎತ್ತಣ ಆರ್‌ಟಿಓ ಎತ್ತಣ ಬೇಂದ್ರೆ " ಎಂದು ಸೋಜಿಗಪಡುವಂತಿತ್ತು.



ಕೃಷ್ಣಪ್ಪನವರು ಕೇವಲ ಪ್ರಬುದ್ಧರಿಗಷ್ಟೇ ಅಲ್ಲದೆ ಹೈಸ್ಕೂಲು ವಿದ್ಯಾರ್ಥಿಗಳಲ್ಲೂ ಬೇಂದ್ರೆ ಕಾವ್ಯಾಸಕ್ತಿ ಮೂಡಿಸುವ ಯತ್ನ ಮಾಡಿ ಸಫಲರೂ ಆಗಿದ್ದರು. ಕರ್ನಾಟಕದ ಉದ್ದಗಲ ಸಂಚರಿಸಿ ಐನೂರಕ್ಕೂ ಹೆಚ್ಚು ಶಾಲೆಗಳಲ್ಲಿ ಬೇಂದ್ರೆ ಕಾವ್ಯ ಗಾಯನ, ವಾಚನ ಸ್ಪರ್ಧೆ ಏರ್ಪಡಿಸಿ ಬಹುಮಾನಿತ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಹಣದಿಂದ ಬೇಂದ್ರೆ ರಚಿಸಿದ ಪುಸ್ತಕಗಳನ್ನು ಬಹುಮಾನವಾಗಿ ನೀಡುತ್ತಿದ್ದರು. ಮೊದಲು ಬೇಂದ್ರೆಯವರು ಕೆಲವು ಜನಜನಿತ ಕವನಗಳ ನೆರಳಚ್ಚು ಪ್ರತಿಗಳನ್ನು ಶಾಲೆಯ ಮುಖ್ಯಸ್ಥರಿಗೆ ಕಳುಹಿಸಿ ವಿದ್ಯಾರ್ಥಿಗಳಿಗೆ ಆ ಕವನಗಳ ಗಾಯನ/ವಾಚನಗಳ ತಾಲೀಮು ನೀಡಲು ಕೋರುತ್ತಿದ್ದರು. ಒಂದು ಗೊತ್ತಾದ ದಿನ ಶಾಲೆಯಲ್ಲಿ ಕಾರ್ಯಕ್ರಮ ಏರ್ಪಡಿಸಿ ತಾವೇ ಅಲ್ಲಿ ಖುದ್ದಾಗಿ ಹಾಜರಿದ್ದು ವಿದ್ಯಾರ್ಥಿಗಳ ಗಾಯನ/ವಾಚನ ಆಲಿಸಿ ಮೊದಲು ನಾಲ್ಕು ಸ್ಥಾನ ಪಡೆದವರಿಗೆ ಬೇಂದ್ರೆ ಪುಸ್ತಕ ಬಹುಮಾನ ನೀಡುತ್ತಿದ್ದರು. ಅದೇ ಸಂದರ್ಭದಲ್ಲಿ ಬೇಂದ್ರೆ ಕಾವ್ಯ ಕುರಿತು ವಿದ್ಯಾರ್ಥಿಗಳಿಗೆ ಒಂದು ಪುಟ್ಟ ಉಪನ್ಯಾಸ ನೀಡುತ್ತಿದ್ದರು.


ಒಮ್ಮೆ ನಮ್ಮ ಮನೆ ಹತ್ತಿರದ ಸರಕಾರಿ ಶಾಲೆಯಲ್ಲಿ ನಡೆದ ಅಂಥ ಒಂದು ಕಾರ್ಯಕ್ರಮಕ್ಕೆ ನಾನೂ ಹೋಗಿ ಅಲ್ಲಿನ ಕಲಾಪ ವೀಕ್ಷಿಸಿ ಸಂತಸಪಟ್ಟಿದ್ದೆ. ಹುಡುಗರಿಗೆ 'ಹಕ್ಕಿ ಹಾರುತಿದೆ ನೋಡಿದಿರಾ' ಕವನ ಹಾಡಿ ತೋರಿಸಿವಾಗ ತಮ್ಮ ಎಪ್ಪತ್ತರ ವಯಸ್ಸನ್ನೂ ಮರೆತು ಕೈಬೀಸುತ್ತ ಕುಣಿದರು. ಹಲವಾರು ಬೇಂದ್ರೆ ಗೀತೆಗಳನ್ನು ಕಂಸಾಳೆ ನೃತ್ಯಕ್ಕೂ ಅಳವಡಿಸುವ ಸಾಹಸ ಮಾಡಿದ್ದಾರೆ.

ಕೃಷ್ಣಪ್ಪನವರು ಬೇಂದ್ರೆ ಕಾವ್ಯ ಪ್ರಸಾರಕ್ಕೆ ಸುಸಂಘಟಿತ ರೂಪ ನೀಡಿ, 'ದ.ರಾ.ಬೇಂದ್ರೆ ಕಾವ್ಯ ಕೂಟ' ಎಂಬ ನೋಂದಾಯಿತ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಇದರ ಮೂಲಕ ಸಮಾನ ಮನಸ್ಕ ಉತ್ಸಾಹಿ ಸದಸ್ಯರನ್ನು ಬೇಂದ್ರೆ ಕಾವ್ಯದತ್ತ ಆಸಕ್ತಿ ಹೊಂದಲು ಪ್ರೇರೇಪಿಸಿದ್ದಾರೆ. ಯಾವುದೇ ಸದಸ್ಯತ್ವ ಶುಲ್ಕವಿಲ್ಲ. ಧನಸಹಾಯಕ್ಕಾಗಿ ಯಾರನ್ನೂ ಗೋಗರೆಯುವುದಿಲ್ಲ. ಆಸಕ್ತರು ನೀಡಿದಷ್ಟು ಮಾತ್ರ ಸ್ವೀಕರಿಸುತ್ತಾರೆ.

ನಮ್ಮ ಮನೆಯಲ್ಲಿ ನಡೆದ ಎಚ್ಚೆಸ್ಕೆ ಸ್ಮರಣೆಯ ಸಾಹಿತ್ಯ ದಾಸೋಹದಲ್ಲಿ ಭಾಗವಹಿಸಿ ತಾವು ಮೈಸೂರಿನ ಆರ್ ಟಿ ಓ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಎಚ್ಚೆಸ್ಕೆಯವರು ನಿಕಟವಾಗಿ ಪರಿಚಯವಾದದ್ದನ್ನು ಸ್ಮರಿಸಿದ್ದರು, (ಪ್ರಾಚಾರ್ಯರು ಸುಧಾ ವಾರಪತ್ರಿಕೆಯ ವ್ಯಕ್ತಿ ವಿಷಯ ಅಂಕಣದಲ್ಲಿ ಕೃಷ್ಣಪ್ಪನವರನ್ನು ಪರಿಚಯಿಸಿದ್ದಾರೆ). ಅಲ್ಲದೆ ಎರಡು ಬಾರಿ ನಮ್ಮ ಬ್ಯಾಂಕಿನ ಸ್ಥಳೀಯ ಪ್ರಧಾನ ಕಚೇರಿಯ ಕನ್ನಡ ಸಂಘದ 'ತಿಂಗಳ ಬೆಳಕು' ಕಾರ್ಯಕ್ರಮ ಮತ್ತು ಸಸಕಸ ವೇದಿಕೆಯ 'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬೇಂದ್ರೆ ಕಾವ್ಯದ ಬಗ್ಗೆ ಸೊಗಸಾದ ಉಪನ್ಯಾಸ ನೀಡಿದ್ದರು.

ಬೇಂದ್ರೆ ಕಾವ್ಯ ಪ್ರಸಾರಕ್ಕಾಗಿ ದಣಿವರಿಯದೆ ನಾಡಿನ ಉದ್ದಗಲ ಪ್ರವಾಸ ಮಾಡುತ್ತಿದ್ದ ಕೃಷ್ಣಪ್ಪನವರು ಕೋವಿಡ್ ದಾಳಿಗೆ ತುತ್ತಾಗಿ ಉತ್ತಮ ಚಿಕಿತ್ಸೆಯಿಂದ ಗುಣಮುಖರಾದರೂ ನಂತರದ ದಿನಗಳಲ್ಲಿ ನಿತ್ರಾಣರಾದರು. ಅದಕ್ಕೆ ಮುನ್ನ ಹೃದಯದ ಬೈಪಾಸ್ ಚಿಕಿತ್ಸೆಗೆ ಒಳಗಾಗಿದ್ದರು. ಹೊರಗಿನ ಓಡಾಟ ಬಹುಪಾಲು ನಿಲ್ಲಿಸಿಯೇಬಿಟ್ಟಿದ್ದರು. ಆದರೆ ಅವರ ಬರವಣಿಗೆಯ ಲೇಖನಿ ಮಾತ್ರ ಕೊನೆಯವರೆಗೂ ಕ್ರಿಯಾಶೀಲವಾಗಿತ್ತು. ಕುವೆಂಪು ಕಾವ್ಯದ ಪದಸೃಷ್ಟಿಯ ಬಗ್ಗೆ ಶೋಧ ನಡೆಸಿದ್ದರು.

ನಮ್ಮ ತಂದೆ ಕೆ.ಎಸ್.ನ. ಅವರ ಕೆಲವು ಸಂಕೀರ್ಣ ಕವನಗಳ ಬಗ್ಗೆ ವ್ಯಾಖ್ಯಾನಿಸುವ ಯೋಜನೆಯೊಂದನ್ನು ಅವರು ಹೊಂದಿದ್ದು, ಅದಕ್ಕೆ ನನ್ನ ಸಹಕಾರವನ್ನೂ ಕೋರಿದ್ದರು. ಆದರೆ ಅನಾರೋಗ್ಯವನ್ನು ಜಯಿಸಲಾಗದೆ ಬೇಂದ್ರೆ ಜನ್ಮದಿನ ಇನ್ನೂ ಮೂರು ದಿನ ಇರುವಾಗಲೇ ಜನವರಿ ೨೮, ೨೦೨೫ರಂದು ಕಾಲವಾದರು.



ಜನವರಿ ೩೧ರಂದು ವರಕವಿ ದ.ರಾ.ಬೇಂದ್ರೆಯವರ ಹುಟ್ಟುಹಬ್ಬವನ್ನು ನಾಡೋಜ ಡಾ.ಜಿ.ಕೃಷ್ಣಪ್ಪನವರು ತಮ್ಮ ಮನೆಯದೇ ಸಮಾರಂಭವೇನೋ ಎಂಬಂತೆ ಆಯೋಜಿಸುತ್ತಿದ್ದರು. ಆದಿನ ಕೃಷ್ಣಪ್ಪನವರ ಉತ್ಸಾಹ ಗರಿಗೆದರಿರುತ್ತಿತ್ತು. ತಮ್ಮ ಸಂಸ್ಥೆ ದ.ರಾ.ಬೇಂದ್ರೆ ಕಾವ್ಯ ಕೂಟದ ಸದಸ್ಯರಾದ ತುಳಜಾರಾಂ ಭೂತೆ, ಸಮಿಯುಲ್ಲಾ, ಪಾರ್ಶ್ವನಾಥ್ ಮುಂತಾದ ನಂಬುಗೆಯ ಬಂಟರೊಂದಿಗೆ ಸಾಹಿತ್ಯ ಪರಿಷತ್ತಿನಲ್ಲೋ, ಉದಯಭಾನು ಕಲಾಸಂಘದ ಸಭಾಂಗಣದಲ್ಲೋ ಬೇಂದ್ರೆ ಸ್ಮೃತಿ ಕಾರ್ಯಕ್ರಮ ಆಯೋಜಿಸುತ್ತಿದ್ದುದು ವಾಡಿಕೆ.

ಎಲ್ಲ ಕಾವ್ಯಾಭಿಮಾನಿಗಳಿಗೆ ಅಂಚೆಯಲ್ಲಿ ಆಹ್ವಾನ ತಲುಪಿದ್ದನ್ನು ಖಾತರಿ ಪಡಿಸಿಕೊಳ್ಳುವಂತೆ ದೂರವಾಣಿಯಲ್ಲೂ ಆಹ್ವಾನಿಸುವ ಸೌಜನ್ಯ ಹಾಗೂ ಶಿಸ್ತು. ಸಾಯಂಕಾಲ ೪.೩೦ರ ಹೊತ್ತಿಗೆ ತಾವೇ ಸಭಾಂಗಣದ ಬಾಗಿಲಲ್ಲಿ ನಿಂತು ಬಂದವರನ್ನು ಸಂತಸದಿಂದ ಆಹ್ವಾನಿಸುವ ರೀತಿ ಅನ್ಯತ್ರ ದುರ್ಲಭವೆ.

ಬಂದವರಿಗೆ ಶುಚಿ ರುಚಿಯಾದ ಉಪಾಹಾರದ ಆತಿಥ್ಯ. ಅದೇ ಸಮಯದಲ್ಲಿ ಸಭಾಂಗಣದಲ್ಲಿ ಯುವ ಗಾಯಕ ಗಾಯಕಿಯರಿಂದ ಬೇಂದ್ರೆ ಗೀತೆಗಳ ಗಾಯನ. ಐದೂವರೆಗೆ ಸರಿಯಾಗಿ ಸಭಾ ಕಾರ್ಯಕ್ರಮ. ಪ್ರಾರ್ಥನೆಯ ನಂತರ ಸ್ವಾಗತ, ಕಾವ್ಯಕೂಟದ ವಾರ್ಷಿಕ ವರದಿ ಮಂಡನೆ, ಎಲ್ಲ ಸಭಾಸದರಿಗೆ ಆ ವರ್ಷದ ಚಟುವಟಿಕೆಗಳ ಕುರಿತ ವಾರ್ತಾಪತ್ರ ಹಂಚಿಕೆ. ಬೇಂದ್ರೆ ಸಾಹಿತ್ಯ ಸ್ಪರ್ಧೆಯಲ್ಲಿ ಬಹುಮಾನದ ವಿಜೇತರಾದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿಪತ್ರ ವಿತರಣೆ ಎಲ್ಲವೂ ಶಿಸ್ತುಬದ್ಧನಾಗಿ ನಡೆಯುತ್ತದೆ.

ನಂತರ ಬೇಂದ್ರೆ ಸಾಹಿತ್ಯದಲ್ಲಿ ವಿಶೇಷ ಅಧ್ಯಯನ ಮಾಡಿರುವ ವಿದ್ವಾಂಸರೊಬ್ಬರಿಗೆ ಅಥವಾ ಇನ್ನಿತರ ಸಾಧಕರಿಗೆ ಸನ್ಮಾನ. ಈ ಸ್ಮರಣೀಯ ಸಮಾರಂಭಕ್ಕೆ ಕೃಷ್ಣಪ್ಪನವರೇ ಅಧ್ಯಕ್ಷರು. ಅವರ ಮಾತಿನ ಸರದಿ ಬಂದಾಗ ಅವರದ್ದು ಒಂದೇ ವಾಕ್ಯ. "ಹುಸಿನಗುತ ಬಂದೇವ ನಸುನಗುತ ಬಾಳೋಣ. ತುಸುನಗುತ ತೆರೆಳೋಣ, ಬಡ ನೂರು ವರುಷಾನ ಹರುಷಾದಿ ಕಳೆಯೋಣ. ಯಾಕಾರೆ ಕೆರಳೋಣ. ನಮಸ್ಕಾರ". ಅಷ್ಟೆ.

ವಂದನಾರ್ಪಣೆಯೊಂದಿಗೆ ಬೇಂದ್ರೆ ಸ್ಮರಣೆಯ ಸಮಾರಂಭ ಮುಕ್ತಾಯ. ಬೇರೆಲ್ಲೂ ಕಾಣದ ಶಿಸ್ತು, ಸಂಭ್ರಮದ ಕಾರ್ಯಕ್ರಮ.

ಈ ಬಾರಿಯೂ ಜನವರಿ ೩೧ರ ಸಾಯಂಕಾಲವೂ ಬೇಂದ್ರೆ ನಮನ ಕಾರ್ಯಕ್ರಮ ಉದಯಭಾನು ಕಲಾಸಂಘದ ಸಭಾಂಗಣದಲ್ಲಿ ಸ್ಮರಣೀಯವಾಗಿ ನಡೆಯಿತು. ಎಲ್ಲ ವ್ಯವಸ್ಥೆಯನ್ನು ಸ್ವಯಂ ಕೃಷ್ಣಪ್ಪನವರೇ ಮುತುವರ್ಜಿ ವಹಿಸಿ ಮಾಡಿದ್ದರು. ಆದರೆ ಕೃಷ್ಣಪ್ಪನವರು ಎರಡು ದಿನಗಳ ಮೊದಲೇ ಕಾಲವಾಗಿದ್ದ ಕಾರಣ ಈ ಸಮಾರಂಭ ಬೇಂದ್ರೆ ಕೃಷ್ಣಪ್ಪನವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವೂ ಆದುದು ಮಾತ್ರ ದುಃಖ ತರುವ ಸಂದರ್ಭವಾಗಿತ್ತು.

***

ಸೀತಾರಾಮು ಮತ್ತು ಅನ್ನಪೂರ್ಣ – ನೆನಪಿನಲ್ಲಿ

– ಮಾಲತಿ ಶ್ರೀನಿವಾಸನ್



ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯಲ್ಲಿ ಸದಾ ಸಕ್ರಿಯವಾಗಿ ತಮ್ಮ ಲೇಖನ, ಹಾಡುಗಾರಿಕೆ, ಪ್ರಬಂಧ ರಚನೆ, ವಿಮರ್ಶೆಗಳು, ಪುಸ್ತಕ ಬಿಡುಗಡೆ ಮುಂತಾದ ಎಲ್ಲಾ ಕಾರ್ಯಕ್ರಮಗಳ ಮೂಲಕ ವೇದಿಕೆಯ ಬೆಳವಣಿಗೆಗೆ ಶ್ರಮಿಸಿದ ಸರಳ, ಸ್ನೇಹಮಯಿ ಆದರ್ಶ ದಂಪತಿಗಳು ಶ್ರೀಯುತ ಸೀತಾರಾಮ ಮತ್ತು ಶ್ರೀಮತಿ ಅನ್ನಪೂರ್ಣ.

ಕೋವಿಡ್ ಸಮಯದಲ್ಲಿ ಶ್ರೀ ಸೀತಾರಾಮು ಅವರ ಅಗಲಿಕೆ ವೇದಿಕೆಯಲ್ಲಿ ತುಂಬಲಾರದ ನಷ್ಟ ಸೃಷ್ಟಿಸಿತ್ತು. ಸೀತಾರಾಮು ಮತ್ತು ಅವರ ಬಗ್ಗೆ, ಅವರ ಕೃತಿಗಳ ಬಗ್ಗೆ ಹಿರಿಯ ಸಾಹಿತಿ ಶ್ರೀ ಚಂದ್ರಶೇಖರ್ ಅವರು ವಿಸ್ತೃತ ವರದಿ ಪ್ರಸ್ತುತಪಡಿಸಿದ್ದರು.

ಸಸಕಸ ವೇದಿಕೆಯ ವಿವಿಧ ಲೇಖಕರ ಬರಹಗಳನ್ನೊಳಗೊಂಡ "ಸಾಹಿತ್ಯ ಮಂದಾರ" ಮತ್ತು "ಸಾಹಿತ್ಯ ಧಾರೆ" ಸಂಕಲನಗಳ ಸಂಚಿಕೆಯ ಸಂಪಾದಕರಾಗಿ, ಶ್ರೀಯುತರಾದ ಬಿ.ಎಸ್.ಚಂದ್ರಶೇಖರ್, ಬಿ.ಎಸ್.ರವೀಂದ್ರ ಮತ್ತು ಮಹಾಬಲ ಅವರೊಡನೆ ಸೀತಾರಾಮು ಸೇವೆ ಸಲ್ಲಿಸಿದ್ದರು. ಅವರ ಹುರುಪು, ವೇದಿಕೆಯ ಕೆಲಸಗಳಲ್ಲಿನ ಆಸಕ್ತಿ ಸದಾಸ್ಮರಣೀಯ, ಅನುಕರಣೀಯ.

ಕಳೆದ ವಾರ ವೇದಿಕೆಯಲ್ಲಿ ಆತ್ಮೀಯ ಗೆಳತಿ ಅನ್ನಪೂರ್ಣ ಸೀತಾರಾಮು ಅವರು ಸ್ವರ್ಗಸ್ಥರಾದ ಸುದ್ದಿ ಹಂಚಿಕೊಂಡಾಗ, ಸೀತಾರಾಮು–ಅನ್ನಪೂರ್ಣ ದಂಪತಿಗಳೊಡನೆ ಕಳೆದ ದಶಕಗಳ ಜೀವನದ ಹಲವಾರು ನೆನಪುಗಳು ನನ್ನ ಮನಸ್ಸಿನಲ್ಲಿ ಹಾದುಹೋದವು.

ಶ್ರೀ ಸೀತಾರಾಮು ಅವರಿಗೆ ನನ್ನ ಪರಿಚಯ ಮೊದಲು ಆಗಿದ್ದು ನಮ್ಮ ಮದುವೆಯ ಸಂದರ್ಭದಲ್ಲಿ. ಆಗ ಅವರಿಗಿನ್ನೂ ಮದುವೆಯಾಗಿರಲಿಲ್ಲ. ಸೀತಾರಾಮು ಅವರು ಭೂಗರ್ಭ ಶಾಸ್ತ್ರದಲ್ಲಿ ತಮ್ಮ ಸ್ನಾತಕೋತ್ತರ ಪದವಿ ಪೂರೈಸಿ, ಸಂಶೋಧಕರಾಗಿ ಕೆಲಸ ಮಾಡುತ್ತಿದ್ದರು. ಐದನೇ ತಾರೀಖು, ಜೂನ್ ತಿಂಗಳು. 1971ರಲ್ಲಿ ವೈಶ್ಯ ಸಮುದಾಯ ಭವನದಲ್ಲಿ ನಡೆಯುತ್ತಿದ್ದ ನಮ್ಮಿಬ್ಬರ ಮದುವೆಗೆ ವರಪೂಜೆಯ ದಿನದಿಂದಲೇ ಸೀತಾರಾಮು ಮತ್ತು ಇವರ ನಾಲ್ಕೈದು ಜನ ವಿದ್ಯಾರ್ಥಿಗಳು ಬಂದು ಆರತಕ್ಷತೆಯ ದಿನದವರೆಗೂ ನಮ್ಮೊಡನೆ ಸಂಭ್ರಮಿಸಿದ್ದರು. ಸೀತಾರಾಮು ಅವರು ವರಪೂಜೆಯಿಂದ ಹಿಡಿದು ಆರತಕ್ಷತೆ ವರೆಗೂ ತಮ್ಮ ಕ್ಯಾಮರಾದಲ್ಲಿ ಫೋಟೋ ಕ್ಲಿಕ್ಕಿಸಿ ನಮ್ಮ ಮದುವೆಗೆ ದಾಖಲೆ ಸೃಷ್ಟಿಸಿದರು. ನಮ್ಮ ತಂದೆತಾಯಿ, ಅತ್ತೆಮಾವ ಎಲ್ಲರೊಡನೆ ಬೆರೆತು ಕ್ಲಿಕ್ಕಿಸಿದ ಫೋಟೋಗಳ ಎರಡು ಆಲ್ಬಮ್ ತಯಾರಿಸಿ ನಮಗೊಂದು, ನನ್ನ ತವರಿನ ಅವರಿಗೊಂದು ಉಡುಗೊರೆಯಾಗಿ ಕೊಟ್ಟಿದ್ದರು. ಇಂದು ಆ ಕಪ್ಪುಬಿಳುಪು ಹಳೆಯ ಫೋಟೋಗಳನ್ನು ನೋಡಿದಾಗ ಅವರ ಸಮಯ ಪ್ರಜ್ಞೆ, ಪ್ರೀತಿ, ಗುರುಭಾವ ಸದಾ ಮನಸ್ಸು ತುಂಬುತ್ತದೆ.

ನಂತರ ಅನ್ನಪೂರ್ಣ ಜೊತೆ ಸೀತಾರಾಮು ಅವರ ಮದುವೆಯ ಸಂಭ್ರಮದಲ್ಲಿ ನಮ್ಮ ಮಗನೊಡನೆ ನಾವೂ ಪಾಲ್ಗೊಂಡಿದ್ದೆವು. ಮುಂದೆ ಅವರು ಬ್ಯಾಂಕ್ ಕೆಲಸಕ್ಕೆ ಸೇರಿ ದೇಶದ ಬೇರೆಬೇರೆ ಭಾಗಗಳಲ್ಲಿ ವರ್ಗಾವಣೆಯಾದಾಗ ಅವರೊಡನೆ ನಮ್ಮ ಸಂಪರ್ಕ ಸ್ವಲ್ಪಮಟ್ಟಿಗೆ ದೂರಾಗಿತ್ತು.

ಹೈದ್ರಾಬಾದ್‌ನಲ್ಲಿ ಶ್ರೀನಿವಾಸನ್ ಸಂಶೋಧನಾ ಕೇಂದ್ರ ಸೇರಿದಾಗ ನಾನು ಸ್ವಯಂನಿವೃತ್ತಿ ಪಡೆದು ಅಲ್ಲಿಗೆ ಹೋದಾಗ ಮತ್ತೆ ಅನ್ನಪೂರ್ಣ ಸೀತಾರಾಮ್ ಮತ್ತು ಮಗಳು ಕಾರುಣ್ಯಳೊಡನೆ ನಮ್ಮಿಬ್ಬರ ಒಡನಾಟ ಶುರುವಾಯಿತು.

ಆ ದಿನಗಳಲ್ಲಿ ಅವರಿಬ್ಬರೂ ಬೆಂಗಳೂರಿನಲ್ಲಿ ಅಪಘಾತದಲ್ಲಿ ಮಡಿದ ವಯಸ್ಸಿಗೆ ಬಂದ ಮಗನ ಅಗಲಿಕೆಯ ನೋವಿನಿಂದ ಹೊರಬರುವ ಪ್ರಯತ್ನದಲ್ಲಿದ್ದರು. ಪುತ್ರ ಶೋಕವನ್ನು ಧೈರ್ಯದಿಂದ ಎದುರಿಸಿ ಮಗಳ ಭವಿಷ್ಯ ಕಟ್ಟಲು ಪ್ರಯತ್ನಿಸುತ್ತಿದ್ದ ಇಬ್ಬರೂ ಸಹೃದಯಿಗಳ ನೋವು, ಆತ್ಮಸ್ಥೈರ್ಯದ ಪರಿಚಯ ಮತ್ತು ತನ್ನ ಓದನ್ನು ಮನೆಯಿಂದಲೇ ಮುಂದುವರಿಸಿ ತಂದೆತಾಯಿಗಳ ಆಸರೆಯಾಗಿದ್ದ ಕಾರುಣ್ಯಳ ತಾಳ್ಮೆ ಮತ್ತು ಸಹನೆಯ ಪರಿಚಯವೂ ಆಯಿತು. ಕಾರುಣ್ಯ ಹಿಂದೂಸ್ತಾನಿ ಸಂಗೀತದಲ್ಲಿ ನುರಿತ ಗಾಯಕಿ, ಅವಳ ಕಂಠ ಮಾಧುರ್ಯವನ್ನು ನಾವೆಲ್ಲ ವೇದಿಕೆಯಲ್ಲಿ ಹಲವಾರು ಬಾರಿ ಆಸ್ವಾದಿಸಿದ್ದೇವೆ.

ಪ್ರತಿಸಲ ಸೀತಾರಾಮು ಅವರ ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಕಾರುಣ್ಯಳ ಹಾಡುಗಾರಿಕೆ ತಪ್ಪದೆ ಇರುತ್ತಿತ್ತು. ಮುಂದೆ ಸಮಯ ಸರಿದಂತೆ ಇವರು ನಿವೃತ್ತರಾಗುವ ಸಂದರ್ಭದಲ್ಲಿ ಬಾಸರ್‌ಗೆ ನಾವೆಲ್ಲ ಒಟ್ಟಾಗಿ ಹೋಗಿ ನಮ್ಮವರ ಷಷ್ಠಿ-ಪೂರ್ತಿ ಸಂಭ್ರಮಿಸಿದ್ದೆವು.

ನಮ್ಮವರ ನಿವೃತ್ತಿಯ ನಂತರ ನಾವು ಬೆಂಗಳೂರು ಸೇರಿ ಮಗಳ ಓದಿನ ಕೊನೆಯ ಹಂತ ಮತ್ತು ಮನೆ ಕಟ್ಟುವ ಸಂಭ್ರಮದಲ್ಲಿ ನಮ್ಮೆರಡು ಕುಟುಂಬಗಳ ನಡುವೆ ಭೇಟಿ ದೂರವಾಣಿ ಸಂಪರ್ಕಕ್ಕೆ ಸೀಮಿತವಾಗಿತ್ತು. ಮತ್ತೆ ಅವರನ್ನು ಭೇಟಿಯಾಗಿದ್ದು ಮಗಳು ಮಮತಾ ಹೊರದೇಶಕ್ಕೆ ಹೊರಡುವ ಸಿದ್ಧತೆಯಲ್ಲಿದ್ದಾಗ. ಆರ್ಥಿಕ ನೆರವಿಗಾಗಿ ನಗರದ ಕೆ.ಜಿ.ರೋಡ್ ನಲ್ಲಿದ್ದ ಸಿಂಡಿಕೇಟ್ ಬ್ಯಾಂಕ್ ಅಧಿಕಾರಿ ಸುಧಾಕರ್ ಅವರನ್ನು ಸಂಪರ್ಕಿಸಿದಾಗ, ಅವರು ಎಲ್ಲಾ ವ್ಯವಸ್ಥೆ ಮಾಡಿ ಕೊನೆಯ ಹಂತದಲ್ಲಿ "ಎಲ್ಲಾ ವ್ಯವಸ್ಥೆ ಸರಿ ಇದೆ. ಕೆಲವು ಕಾಗದಗಳಿಗೆ ಚೀಫ್ ಮ್ಯಾನೇಜರ್ ಅವರ ಸಹಿ ಆಗಬೇಕು, ಮೇಲೆ ಇದ್ದಾರೆ ಹೋಗಿ ಭೇಟಿಮಾಡಿ ಸಹಿ ಮಾಡಿಸಿಕೊಂಡು ಬನ್ನಿ" ಅಂತ ಅಂದಾಗ ಯಾರಪ್ಪ ಚೀಫು ಅಂತ ಆತಂಕದಲ್ಲೇ ನಾವು ಅವರ ಚೇಂಬರೊಳಗೆ ಕಾಲಿಟ್ಟಾಗ ಸೀಟಿನಲ್ಲಿ ಸೀತಾರಾಮು ಅವರನ್ನು ನೋಡಿ ಆಶ್ಚರ್ಯ ಸಂತಸ ಒಟ್ಟಿಗೆ ಆಗಿತ್ತು, ಗುರು ಶಿಷ್ಯರು ಮತ್ತೆ ಒಂದಾದ ಆ ಘಳಿಗೆ ನೆನೆಪಿಸಿಕೊಂಡು ನಾವು ಹಲವಾರು ಬಾರಿ ನಗುತ್ತಿದ್ದೆವು.

ಮುಂದೆ ಮಗಳ ಮದುವೆ, ಮೊಮ್ಮಕ್ಕಳ ಸಂಭ್ರಮ, ವಿದೇಶ ಪ್ರಯಾಣ, ಈ ಎಲ್ಲಾ ಏರುಪೇರುಗಳಲ್ಲೂ ನಮ್ಮೊಡನಿದ್ದು ಈ ದಂಪತಿಗಳು ನಮ್ಮನ್ನು ಮೊದಲ ಬಾರಿಗೆ ತಮ್ಮ ಮನೆಯಲ್ಲಿ ಸಸಕಸ ವೇದಿಕೆಗೆ ಪರಿಚಯಿಸಿದರು. ಅಂದು ನಾ ಬರೆದ ಮೂರು ಕವನಗಳನ್ನು ಅಳುಕುತ್ತ ಪ್ರಸ್ತುತಪಡಿಸಿದ್ದೆ. ಅಂದಿನ ವೇದಿಕೆಯ ಹಿರಿಯ ಸಂಚಾಲಕರ, ದಾಸೋಹಿ ಮಿತ್ರರ ಪ್ರೋತ್ಸಾಹ, ಮೂರು ಕವನ ಸಂಕಲನಗಳ ಬಿಡುಗಡೆಗೆ ಪೂರಕವಾಯಿತು.

ಅಧ್ಯಾಪಕ ವೃತ್ತಿ ಬಿಟ್ಟಾಗಿಂದ ಮನದಲ್ಲಿನ ಸುಪ್ತನೋವು ದೂರಾದಂತಿತ್ತು. ಈ ವೇದಿಕೆ ಹೊಸ ಹುರುಪು, ಚೈತನ್ಯ ತುಂಬಿತ್ತು ನನಗೆ.

ನನ್ನ ಎರಡೂ ಕವನ ಸಂಕಲನಗಳ ಬಿಡುಗಡೆ ಸಂದರ್ಭದಲ್ಲಿ, ಮುಖಪುಟ ಸ್ವತಃ ಸಿದ್ದಮಾಡಿ, ವೇದಿಕೆಯ ಸಂಚಾಲಕರೊಡನೆ ಹಿರಿಯ ಸಾಹಿತಿಗಳನ್ನು ಬಿಡುಗಡೆಗೆ ಆಹ್ವಾನಿಸಿ, ದಂಪತಿಗಳು ತಮ್ಮ ಮನೆಯ ಕಾರ್ಯಕ್ರಮ ಅನ್ನುವಷ್ಟು ಆತ್ಮೀಯತೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಗುರು-ಶಿಷ್ಯರು ಸೇರಿ ಹೊರತಂದ ತಮ್ಮ ಅಚ್ಚುಮೆಚ್ಚಿನ ಭೂಗರ್ಭ ಶಾಸ್ತ್ರ ಕುರಿತ ಪುಸ್ತಕ "ಕರ್ನಾಟಕದ ಭೂವೈಜ್ಞಾನಿಕ ವಿಸ್ಮಯಗಳು" (2020, ನವಕರ್ನಾಟಕ ಪ್ರಕಾಶನ) ಎರಡುಬಾರಿ ಮರುಮುದ್ರಣ ಕಂಡು ಈಗ "ಇ-ಬುಕ್" ಆಗಿದೆ. ಇದೇ ಶೀರ್ಷಿಕೆಯ ಎರಡನೆಯ ಭಾಗ ಹೊರತರುವ ಯೋಚನೆಯಲ್ಲಿದ್ದಾಗ ಕೋವಿಡ್ ಮಾರಿ ಸೀತಾರಾಮು ಅವರನ್ನು ನಮ್ಮೆಲ್ಲರಿಂದ ಸೆಳೆಯಿತು. ಇತ್ತೀಚೆಗೆ ಶ್ರೀಮತಿ ಅನ್ನಪೂರ್ಣ ಸೀತಾರಾಮು ಅವರೂ ಇಹಲೋಕ ತ್ಯಜಿಸಿದರು,

ಜೀವನದ ಆಗುಹೋಗುಗಳನ್ನೆಲ್ಲ ತಮ್ಮದೇ ಸಮಚಿತ್ತ ಸಂಯಮದಲ್ಲಿ ಸ್ವೀಕರಿಸಿ, ಸದಾ ಸಕಾರಾತ್ಮಕ ಚಿಂತನೆಯಲ್ಲಿ ತೊಡಗಿದ್ದ ಸೀತಾರಾಮು-ಅನ್ನಪೂರ್ಣ ದಂಪತಿಗಳ ಧೀಮಂತ ವ್ಯಕ್ತಿತ್ವಕ್ಕೆ ನಮಿಸುತ್ತ ಅವರಿಬ್ಬರ ಆತ್ಮಕ್ಕೆ ಶಾಂತಿ ನೆಮ್ಮದಿ ಕೋರುತ್ತೇನೆ.

***

ಅಮೆರಿಕಾ ವೀಸಾ – ನಾನು ಕಲಿತಂತೆ

– ಗುರುರಾಜ ಶಾಸ್ತ್ರಿ

ಈಗಾಗಲೇ ಹದಿನೆಂಟು ದೇಶಗಳನ್ನು ನೋಡಿದ್ದೆ. ನೋಡಲೇಬೇಕೆಂದು ನನ್ನ ಪಟ್ಟಿಯಲ್ಲಿ ಹೆಸರಿಸಿದ್ದ ದೇಶಗಳಲ್ಲಿ ಇನ್ನೂ ಐದು ದೇಶಗಳ ಜೊತೆಗೆ ಅಮೆರಿಕಾವು ಉಳಿದುಕೊಂಡಿತ್ತು. ಆದರೆ ಅಮೆರಿಕಾಗೆ ಹೋಗುವುದು ಬೇರೆ ದೇಶಕ್ಕೆ ಹೋದಷ್ಟು ಸುಲಭವಲ್ಲ. ಇದರ ಮೊದಲ ಘಟ್ಟವೇ ಅಂದರೆ ವೀಸಾ ಅರ್ಜಿ ಹಾಕಿ ನಂತರ ನಡೆಯುವ ವೀಸಾ ಸಂದರ್ಶನ ಬಹಳ ಕಠಿಣವಾಗಿರುತ್ತದೆ. ಹೆಚ್ಚು ಜನ ಪ್ರವಾಸಿಗರಾಗಿ ಅಮೆರಿಕಾಗಿ ಹೋಗಿ ಅಲ್ಲಿ ಅಕ್ರಮ ವಲಸಿಗರಾಗಿ ನೆಲೆಸುತ್ತಿರುವುದರಿಂದ ಅಮೆರಿಕಾ ಈ ವೀಸಾ ನೀಡುವುದನ್ನು ಸ್ವಲ್ಪ ಬಿಗಿಮಾಡಿದೆ. ಪ್ರವಾಸಿಗರ ವೀಸಾಕ್ಕಂತೂ ಅರ್ಜಿ ಹಾಕಿದ ಮೇಲೆ ಸುಮಾರು ಹದಿನೈದರಿಂದ ಹದಿನೆಂಟು ತಿಂಗಳು ಕಾಯಬೇಕಾಗುತ್ತದೆ. ಸದ್ಯಕ್ಕೆ ಅಮೆರಿಕಾ ಪ್ರವಾಸದ ಆಸೆ ಮುಂದಕ್ಕೆ ಹಾಕಿ ಬೇರೆ ದೇಶಗಳನ್ನು ನೋಡುವುದೆಂದು ನಿಶ್ಚಯಿಸಿದ್ದೆ.

2022 ಡಿಸೆಂಬರ್‌ನಲ್ಲಿ ನನ್ನ ಅಕ್ಕನ ಮಗ ಇಂಜಿನಿಯರಿಂಗ್ ಮುಗಿಸಿ ಉನ್ನತ ಶಿಕ್ಷಣಕ್ಕಾಗಿ ಅಮೆರಿಕಾಗೆ ಹೊರಟ. "ನನ್ನ ಓದು 2024 ಡಿಸೆಂಬರ್‌ಗೆ ಮುಗಿಯುತ್ತದೆ, ನೀವು ಮತ್ತು ಅಪ್ಪ ಅಮ್ಮ ಮೇ 2025ರಲ್ಲಿ ನಡೆಯುವ ನನ್ನ ಗ್ರಾಜುಯೇಶನ್ ದಿನಕ್ಕೆ ಅಮೆರಿಕಾಗೆ ಬರಬಹುದು" ಎಂದು ಹೇಳಿ ಬತ್ತಿಹೋಗಿದ್ದ ನನ್ನ ಅಮೆರಿಕಾ ಆಸೆಗೆ ತುಂತುರು ನೀರು ಸುರಿಸಿದ. ಕೆಲವೊಮ್ಮೆ ಗ್ರಾಜುಯೇಶನ್ ದಿನಕ್ಕೆ ಅಮೆರಿಕಾಗೆ ಹೋಗಲಿಚ್ಚಿಸುತ್ತೇವೆ ಎಂದು ನಾವು ತಿಳಿಸಿದರೆ ವೀಸಾ ನೀಡಲು ಹೆಚ್ಚು ತಕರಾರು ಮಾಡುವುದಿಲ್ಲ ಎಂದು ಗೆಳೆಯರು ಹೇಳಿದ್ದರು. ನವೆಂಬರ್ 2023ರಲ್ಲಿ ವೀಸಾಗೆ ಅರ್ಜಿ ಹಾಕಿದೆ. ನನಗೆ ಸಂದರ್ಶನಕ್ಕೆ ಅವರು ಸಮಯ ಕೊಟ್ಟದ್ದು ಜನವರಿ 2025ಕ್ಕೆ.

ಸಂದರ್ಶನದಲ್ಲಿ ಅವರು ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರ ಕೊಡಲು ತಯಾರು ನಡೆಸಲು ಆರಂಭಿಸಿದ್ದು ಡಿಸೆಂಬರ್ 2024ರಿಂದ. ಯೂಟ್ಯೂಬಿನಲ್ಲಿ ಸಂದರ್ಶನದ ಬಗ್ಗೆ ಇದ್ದ ಹಲವಾರು ಮಾಹಿತಿಗಳನ್ನು ಸಂಗ್ರಹಿಸಿದೆ. ಈ ನಿಟ್ಟಿನಲ್ಲಿ ನಾನು ಮೊದಲು ನೋಡಿದ ವೀಡಿಯೋದ ಕುತೂಹಲಕಾರಿ ಆರಂಭ ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು.

ಆ ವೀಡಿಯೋ ಆರಂಭವಾಗಿದ್ದು ಹೀಗೆ. "ನೀವು ಅಮೆರಿಕಾ ಪ್ರವಾಸಿ ವೀಸಾ ಸಂದರ್ಶನಕ್ಕೆ ಹೋಗುತ್ತಿದ್ದೀರಾ, ನೀವೇನೂ ಹೆದರಬೇಕಿಲ್ಲ. ಹೆಚ್ಚಾಗಿ ಮಧ್ಯವಯಸ್ಸಿನ, ಭಾರತದಲ್ಲಿ ಏನೂ ಉದ್ಯೋಗವಿಲ್ಲದ ವ್ಯಕ್ತಿಗಳಿಗೆ ಮಾತ್ರ ಪ್ರವಾಸಿ ವೀಸಾ ನಿರಾಕರಿಸುತ್ತಾರೆ" ಎಂದು. ಅಲ್ಲಿಗೆ ಅವನು ನನ್ನ ಬಗ್ಗೆಯೇ ಮಾತನಾಡುತ್ತಿದ್ದಾನೆಂಬುದು ಖಚಿತವಾಯಿತು. ಇತರ ವೀಡಿಯೋ ಗಳಿಂದ ನಾನು ಕಲಿತಿದ್ದೇನೆಂದರೆ ಮುಖ್ಯವಾಗಿ ಅವರು ಕೇಳುವುದು ಮೂರರಿಂದ ಆರು ಪ್ರಶ್ನೆ ಮಾತ್ರ. ಅವೆಂದರೆ –

1. ಪ್ರವಾಸಕ್ಕೆ ಹೋಗುವ ಕಾರಣ ಏನು?
2. ಭಾರತದಲ್ಲಿ ನಿಮ್ಮ ಉದ್ಯೋಗ ಏನು?
3. ನಿಮ್ಮ ಗೆಳೆಯರು ಅಥವಾ ಬಂಧುಗಳು ಅಮೆರಿಕಾದಲ್ಲಿ ನೆಲೆಸಿದ್ದಾರೆಯೇ?
4. ನಿಮ್ಮ ಪ್ರವಾಸದ ಖರ್ಚಿಗೆ ಹಣ ನೀಡುತ್ತಿರುವವರು ಯಾರು?
5. ಪ್ರವಾಸಕ್ಕೆ ಹೋದಾಗ ಅಮೆರಿಕಾದಲ್ಲಿ ಎಲ್ಲಿ ಉಳಿದುಕೊಳ್ಳುತ್ತೀರಿ?
6. ಯಾವ ಸಮಯದಲ್ಲಿ ಮತ್ತು ಎಷ್ಟು ದಿನ ಪ್ರವಾಸ ಮಾಡಲಿದ್ದೀರಿ?
7. ನಿಮ್ಮ ಜೊತೆಗೆ ಮತ್ತಿನ್ಯಾರಾದರೂ ಪ್ರವಾಸ ಮಾಡುತ್ತಿದ್ದಾರೆಯೇ?

ಈ ಪ್ರತಿಯೊಂದು ಪ್ರಶ್ನೆಗೂ ಉತ್ತರ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾವು ತೋರಿಸಬೇಕು. ಮುಖ್ಯವಾಗಿ ಅವರಿಗೆ ನಾನು ಭಾರತಕ್ಕೆ ವಾಪಸ್ ಬರಲೇಬೇಕು ಎನ್ನುವುದಕ್ಕೆ ಇರುವಂತಹ ಕಾರಣಗಳನ್ನು ವಿವರಿಸಿ ಹೇಳಿ ಅವರಿಗೆ ಅದರಲ್ಲಿ ನಂಬಿಕೆ ತರಿಸಬೇಕು.

ಈಗ ಇದರಲ್ಲಿ ಒಂದೊಂದೇ ಪ್ರಶ್ನೆ ನೋಡೋಣ.

1. ಪ್ರವಾಸಕ್ಕೆ ಹೋಗುವ ಕಾರಣಕ್ಕೆ ನಾವು ಕೊಡಬಹುದಾದ ಉತ್ತರಗಳು.
   - ನನ್ನ ಬಂಧು ಉನ್ನತ ಶಿಕ್ಷಣ ಮುಗಿಸಿದ್ದಾನೆ, ಅವನ ಗ್ರಾಜುಯೇಶನ್ ದಿನಕ್ಕೆ ಹೋಗಿ, ಹಾಗೇ ಒಂದೆರೆಡು ವಾರ ಪ್ರವಾಸಮಾಡೋಣ ಅಂದುಕೊಂಡಿದ್ದೇನೆ. ನನ್ನ ಬಂಧುವಿನಿಂದ ಬಂದಿರುವ ಆಹ್ವಾನಪತ್ರ ಮತ್ತು ಅವನ ವೀಸಾ ವಿವರ ಇಲ್ಲಿದೆ ನೋಡಿ ಎಂದು ದಾಖಲೆ ನೀಡಬೇಕು.
   - ನನಗೆ ಪ್ರವಾಸವೆಂದರೆ ತುಂಬಾ ಇಷ್ಟ, ನನ್ನ ಹಳೆಯ ಅಂತರಾಷ್ಟ್ರೀಯ ಪ್ರವಾಸಗಳ ಬಗ್ಗೆ ನನ್ನ ಪಾಸ್ಪೋರ್ಟಿನಲ್ಲಿ ವಿವರಗಳಿವೆ ನೋಡಿ.
   - ನನಗೆ ಮೊಮ್ಮಗಳು/ಮೊಮ್ಮಗ ಹುಟ್ಟಿದ್ದಾರೆ, ಅವರೊಡನೆ ಕೆಲವು ತಿಂಗಳು ಸಂತೋಷದಿಂದ ಇದ್ದುಬರುವ ಆಸೆಯಾಗಿದೆ.

2. ಭಾರತದಲ್ಲಿ ನಿಮ್ಮ ಉದ್ಯೋಗ ಏನು?
   - ಈ ಪ್ರಶ್ನೆಗೆ ಭಾರತದಲ್ಲಿರುವ ನಿಮ್ಮ ಸ್ಥಿರಾಸ್ತಿ, ನಿಮ್ಮ ಸಂಸಾರದಲ್ಲಿರುವ ಇತರರ ವಿವರ ಮತ್ತು ಉದ್ಯೋಗ ಎಲ್ಲವನ್ನೂ ಸೇರಿಸಿ ಉತ್ತರಕೊಡುವುದು ಒಳ್ಳೆಯದು. ಇದರಿಂದ ನೀವು ಭಾರತಕ್ಕೆ ವಾಪಸ್ ಬಂದೇ ಬರುತ್ತೀರೆಂದು ಅವರಿಗೆ ಖಾತ್ರಿಪಡಿಸಬಹುದು.
   - ಉದ್ಯೋಗದಲ್ಲಿದ್ದರೆ ನಿಮ್ಮ ಕಂಪನಿಯ ಐಡಿ ಕಾರ್ಡ್ ಮತ್ತು ಸಾಧ್ಯವಾದರೆ ವೀಸಾಗಾಗಿ ಕಂಪನಿಯಿಂದ ಪಡೆದ ಒಂದು ಪತ್ರ ತೋರಿಸಬೇಕು.
   - ನಿವೃತ್ತರಾಗಿದ್ದರೆ, ನೀವು ನಿವೃತ್ತರಾದಾಗ ನಿಮ್ಮ ಕಂಪನಿ ಕೊಟ್ಟ ಪತ್ರವನ್ನು ತೋರಿಸಬಹುದು.
   - ಏನೂ ಕೆಲಸವಿಲ್ಲದಿದ್ದರೆ ಅದನ್ನೂ ಹಾಗೇ ಹೇಳಬಹುದು ಆದರೆ ಆಗ ಮತ್ತಷ್ಟು ಪ್ರಶ್ನೆಗಳು ಅವರಿಂದ ಬರಬಹುದು. ಅವಕ್ಕೆಲ್ಲಾ ಉತ್ತರ ನೀಡಲು ತಯಾರಿರಬೇಕು.

3. ನಿಮ್ಮ ಗೆಳೆಯರು ಅಥವಾ ಬಂಧುಗಳು ಅಮೆರಿಕಾದಲ್ಲಿ ನೆಲೆಸಿದ್ದಾರೆಯೇ?
   - ನಿಮ್ಮ ಗೆಳೆಯರ ಅಥವಾ ಬಂಧುಗಳ ಸಂಪೂರ್ಣ ವಿಳಾಸ, ವೀಸಾ ವಿವರ ಇದ್ದರೆ ಮಾತ್ರ ಈ ಪ್ರಶ್ನೆಗೆ "ಹೌದು" ಎಂದು ಉತ್ತರ ನೀಡಿ. ಇಲ್ಲವಾದರೆ ಸುಮ್ಮನಿರುವುದು ವಾಸಿ ಅಥವಾ ಶಾಲಾ ಕಾಲೇಜಿನ ಗೆಳೆಯರಿದ್ದಾರೆ, ಅವರ ಸಂಪರ್ಕ ಇತ್ತೀಚೆಗೆ ಇಲ್ಲ ಎನ್ನಬಹುದು.

4. ನಿಮ್ಮ ಪ್ರವಾಸದ ಖರ್ಚಿಗೆ ಹಣ ನೀಡುತ್ತಿರುವವರು ಯಾರು?
   - ಸಾಮಾನ್ಯವಾಗಿ ನಿಮ್ಮ ಬಂಧುಗಳಿಂದ ಆಹ್ವಾನಪತ್ರ ಬಂದಿದ್ದಲ್ಲಿ ಇದರ ಬಗ್ಗೆ ತಿಳಿಸಿರುತ್ತಾರೆ. ನಿಮ್ಮ ಬಂಧುಗಳೇ ನಿಮ್ಮ ಖರ್ಚನ್ನು ನಿಭಾಯಿಸುವುದಾದರೆ ಅವರ ಆದಾಯದ ವಿವರಗಳನ್ನು ಅವರು ನಿಮಗೆ ಕಳಿಸಿರುತ್ತಾರೆ.
   - •ಸ್ವಂತ ಖರ್ಚಿನಲ್ಲಿ ನೀವು ಹೋಗುತ್ತಿರುವುದು ಎಂದು ಹೇಳಿದರೆ ನಿಮ್ಮ ಮೂರು ವರ್ಷದ ಆದಾಯ ತೆರಿಗೆ ವಿವರ, ನಿಮ್ಮ ಸಂಬಳ ಅಥವಾ ಪೆನ್ಶನ್ ಚೀಟಿ, ನಿಮ್ಮ ಬ್ಯಾಂಕ್ ಖಾತೆಗಳ ವಿವರ, ಎಲ್ಲವನ್ನೂ ತೆಗೆದುಕೊಂಡು ಹೋಗಿರಬೇಕು, ಅವರು ಅವುಗಳನ್ನು ಕೇಳಿದರೆ ತೋರಿಸಬೇಕಾಗುತ್ತದೆ. ಬ್ಯಾಂಕ್ ವಿವರಕ್ಕೆ ಬ್ಯಾಂಕ್ ಮ್ಯಾನೇಜರ್ ಮುದ್ರೆ ಮತ್ತು ಸಹಿ ಅವಶ್ಯಕ.

5. ಪ್ರವಾಸಕ್ಕೆ ಹೋದಾಗ ಅಮೆರಿಕಾದಲ್ಲಿ ಎಲ್ಲಿ ಉಳಿದುಕೊಳ್ಳುತ್ತೀರಿ?
6. ಯಾವ ಸಮಯದಲ್ಲಿ ಮತ್ತು ಎಷ್ಟು ದಿನ ಪ್ರವಾಸ ಮಾಡಲಿದ್ದೀರಿ?
7. ನಿಮ್ಮ ಜೊತೆಗೆ ಮತ್ತಿನ್ಯಾರಾದರೂ ಪ್ರವಾಸ ಮಾಡುತ್ತಿದ್ದಾರೆಯೇ?
   - ಈ ಮೂರು ಪ್ರಶ್ನೆಗಳಿಗೆ ನಿಮ್ಮ ಬಂಧುಗಳು ನೀಡಿದ ಆಹ್ವಾನಪತ್ರದಲ್ಲಿ ವಿವರ ಇರುತ್ತದೆ. ಆದರೂ ನೀವೂ ಉತ್ತರ ನೀಡಲೇಬೇಕು. ಪ್ರವಾಸಕ್ಕೆ ಜೊತೆಗೆ ಬರುತ್ತಿರುವವರಿಗೆ ವೀಸಾ ಇದೆ ಎಂಬುದರ ದಾಖಲೆಗಳನ್ನು ನೀಡಬೇಕಾಗುತ್ತದೆ.

ವೀಡಿಯೋಗಳಿಂದ ಮತ್ತೊಂದು ಕಲಿತಿದ್ದೇನೆಂದರೆ, ಯಾವುದೇ ಕಾರಣಕ್ಕೂ ಸಂದರ್ಶನ ಮಾಡುವವರನ್ನು ಸಾರ್, ಮೇಡಮ್ ಎಂದು ಸಂಬೋಧಿಸಬಾರದು. ಅವರನ್ನು ನಮ್ಮ ಗೆಳೆಯರಂತೆ ಪರಿಗಣಿಸಿ ಮಾತನಾಡಬೇಕು, ಇದು ಅವರಿಗೆ ಇಷ್ಟವಾಗುತ್ತದೆ. ಯಾವುದೇ ಪ್ರಶ್ನೆಗೆ ಒಂದೇ ಪದದ ಉತ್ತರ ನೀಡಬಾರದು. ಉದಾಹರಣೆಗೆ "ನೀವು ನಿವೃತ್ತರೇ?" ಎಂದು ಅವರು ಕೇಳಿದರೆ, "ಹೌದು, ನಾನು ಈ ಕಂಪನಿಯಲ್ಲಿ ಇಷ್ಟು ವರ್ಷ ದುಡಿದು, ಈಗ ನಿವೃತ್ತನಾಗಿದ್ದೇನೆ" ಎಂದು ಉತ್ತರ ಕೊಡಬೇಕು.

ಇವೆಲ್ಲವನ್ನೂ ಯೂಟ್ಯೂಬ್ ವೀಡಿಯೋಗಳಿಂದ ತಿಳಿದುಕೊಂಡು ನನ್ನ ಸಂದರ್ಶನಕ್ಕೆ ತಯಾರಾಗಿದ್ದಾಗ, ಗೆಳೆಯನೊಬ್ಬ "ಏ ನೀನು ಬ್ರಹ್ಮಚಾರಿ, ನಿರುದ್ಯೋಗಿ, ನಿನ್ನದೇ ಅಂತ ಯಾವುದೇ ಸ್ಥಿರಾಸ್ತಿ ಇಲ್ಲ, ಅಮೆರಿಕಾಗೆ ಹೋಗಿ ನಿನ್ನ ಅಕ್ಕನ ಮಗನಿಗೆ ಅಡುಗೆ ಮಾಡಿಕೊಂಡು ಅಕ್ರಮ ವಲಸಿಗನಾಗಿ ಇದ್ದುಬಿಡುತ್ತಿ ಎಂದು ಅನುಮಾನಿಸುತ್ತಾರೆ. ನಿನಗೆಲ್ಲಿ ವೀಸಾ ಕೊಡುತ್ತಾರೆ, ಅದು ಕನಸಷ್ಟೇ" ಎಂದಾಗ ನಾನು ನನ್ನ ಇತರ ಗೆಳೆಯರಲ್ಲಿ ಈ ವಿಷಯ ವಿಚಾರಿಸಿದೆ. ಅವರುಗಳು ಅದು ಸತ್ಯ ಎಂದರು. ಅಲ್ಲಿಗೆ ವೀಸಾ ಸಿಗುವುದೇ ಇಲ್ಲ ಎಂದು ಖಾತ್ರಿಯಾಯಿತು.

ವೀಸಾ ಸಂದರ್ಶನದ ಹಿಂದಿನ ದಿನ ಈ ವಿಷಯ ಹಾಸ್ಯ ಲೇಖಕರಾದ ಎಂ.ಎಸ್.ನರಸಿಂಹಮೂರ್ತಿಯವರೊಂದಿಗೆ ಚರ್ಚಿಸಿದಾಗ, "ನಾನೊಬ್ಬ ಲೇಖಕ ಅಂತ ಹೇಳು, ವೀಸಾ ಕೊಟ್ಟರೂ ಕೊಡಬಹುದು" ಎಂದು ಉಪಾಯ ತಿಳಿಸಿದರು. ಹಾಗಾಗಿ ನಾನು ಬರೆದ ಎರಡು ಪುಸ್ತಕಗಳನ್ನೂ ತೆಗೆದುಕೊಂಡುಹೋಗಲು ನಿರ್ಧರಿಸಿದೆ.

ವೀಸಾ ಸಂದರ್ಶನಕ್ಕೆ ಹೋದೆ. ನನ್ನ ಸರದಿ ಬಂತು. ಸಂದರ್ಶನಗಾರ್ತಿ ತನ್ನ ಕಂಪ್ಯೂಟರ್ ನೋಡುತ್ತಾ

"ಶುಭ ಮುಂಜಾನೆ, ನಿಮ್ಮ ಪಾಸ್‌ಪೋರ್ಟ್ ಕೊಡಿ?"

"ಓ ನಿಮಗೂ ಶುಭಮುಂಜಾನೆ, ನನ್ನ ಪಾಸ್‌ಪೋರ್ಟ್ ದಾಖಲೆಗಳನ್ನು ಮೇಲೆಯೇ ಇಟ್ಟುಕೊಂಡಿದ್ದೇನೆ, ತೆಗೆದುಕೊಳ್ಳಿ"

"ನಿಮ್ಮ ಅಮೆರಿಕಾ ಪ್ರವಾಸದ ಕಾರಣ?"

"ನನ್ನ ಅಕ್ಕನ ಮಗ ಅಲ್ಲಿ ಉನ್ನತ ಶಿಕ್ಷಣ ಮುಗಿಸಿದ್ದಾನೆ, ಅವನ ಗ್ರಾಜುಯೇಶನ್ ದಿನದಂದು ಸಂಭ್ರಮಿಸಲು ಹೋಗುತ್ತಿದ್ದೇನೆ. ಇಲ್ಲಿದೆ ನೋಡಿ, ಅವನ ಆಹ್ವಾನಪತ್ರ ಮತ್ತು ಅವನ ವೀಸಾ ವಿವರ."

"ಸಂತೋಷ, ಓ ಏನಿದು, ನನ್ನ ಕಂಪ್ಯೂಟರ್ ಆಫ್ ಆಯಿತು, ನೀವು ಒಂದರೆಡು ನಿಮಿಷ ಕಾಯಬೇಕಷ್ಟೆ" ಎಂದು ನನ್ನ ಕಡೆ ನೋಡಿದಳು. ನನ್ನ ಕೈಲಿದ್ದ ಎರಡು ಪುಸ್ತಕಗಳನ್ನು ನೋಡಿ, "ಏನು, ಇಲ್ಲಿ ಓದಲು ಪುಸ್ತಕ ತಂದಿದ್ದೀರಾ?" ಅವಳ ಪ್ರಶ್ನೆ.

"ಇಲ್ಲ, ಇದು ನಾನು ಈವರೆಗೆ ಪ್ರವಾಸ ಮಾಡಿರುವ ದೇಶಗಳ ಬಗ್ಗೆ ನಾನು ಬರೆದಿರುವ ಪ್ರವಾಸ ಕಥನ ನನ್ನ ಮಾತೃಭಾಷೆ ಕನ್ನಡದಲ್ಲಿ" ಎಂದೆ.

"ಓ ನೀವು ಲೇಖಕರೇ, ನಮ್ಮ ಅಮೆರಿಕಾದ ಬಗ್ಗೆಯೂ ನಿಮ್ಮ ಭಾಷೆಯಲ್ಲಿ ಬರೆಯುತ್ತೀರೇನೂ?"

"ಖಂಡಿತವಾಗಿಯೂ" ಎಂದೆ.

"ಸರಿ ನಿಮಗೆ ನಾವು ವೀಸಾ ನೀಡುತ್ತೇವೆ, ನೀವಿನ್ನು ಹೊರಡಬಹುದು" ಎಂದಳು ನಗುತ್ತಾ ಆ ಅಮೆರಿಕಾ ಮಹಿಳೆ.

"ತುಂಬಾ ಸಂತೋಷವಾಯ್ತು, ಧನ್ಯವಾದಗಳು" ಎಂದು ಹೇಳಿ ತೊಂಬತ್ತು ಸೆಕೆಂಡ್‌ಗಳ ಸಂದರ್ಶನ ಮುಗಿಸಿ ಹೊರಬಂದೆ.

***

ತಿರುಗು ಬಾಣ

- ಗಾಯತ್ರಿ ಮೂರ್ತಿ

ನನ್ನ ಗೆಳತಿ ಸುನಂದಾ ಒಂದು ದಿನ ಫೋನ್ ಮಾಡಿ, ತನ್ನ ಮಗನಿಗೆ ಮದುವೆಯಾಗಲು ಇನ್ನೂ ಹುಡುಗಿ ಸಿಕ್ಕದಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದಳು. 'ಗಂಡು ಹುಡುಗನ ಮದುವೆ ಬಗ್ಗೆ ಯಾಕೆ ಯೋಚಿಸ್ತೀಯ? ಆಗತ್ತೆ ಬಿಡು' ಎಂದು ನಾನು ಹಗುರವಾಗಿ ಹೇಳಿದೆ.

'ವಿಷಯ ಹಾಗಲ್ಲಕಣೆ. ಇಲ್ಲೀವರೆಗೂ ಹತ್ತಾರು ಹುಡುಗೀರನ್ನು ನೋಡಿದ್ದಾಯ್ತು. ಒಂದೂ ಸರಿಹೋಗಲಿಲ್ಲ. ನಮಗಲ್ಲ, ಹುಡುಗಿ ಮನೆಯವರಿಗೆ! ನನಗೆ ಯಾಕೋ ಇವನಿಗೆ ಮದುವೆ ಆಗತ್ತೋ ಇಲ್ವೋಂತ ಆತಂಕ ಆಗ್ತಿದೆ ಕಣೆ' ಎಂದಳು.

'ಅಲ್ವೆ, ಅಷ್ಟೊಂದು ಯಾಕೆ ಯೋಚಿಸ್ತೀಯಾ? ನಿನ್ನ ಮಗ ವಿದ್ಯಾವಂತ, ಬುದ್ಧಿವಂತ ನೊಡಕ್ಕೂ ಚೆನ್ನಾಗಿದಾನೆ, ಇನ್ನಾಕೆ ಯೋಚನೆ' ಎಂದೆ.

'ಅಯ್ಯೋ, ಪ್ರಾಬ್ಲಮ್ ಅವನದಲ್ಲ, ನಮ್ಮದು.'

'ಅಂದರೆ? ನೀವು ಯಾರನ್ನೂ ಒಪ್ತಿಲ್ವಾ? ಹುಡುಗ, ಹುಡುಗಿ ಒಪ್ಪಿದ್ರೆ ನಿಮ್ಮದೇನು ತಕರಾರು?' ಎಂದು ನಾನು ಬಡಬಡಿಸಿದೆ.

'ಎಲ್ಲ ಹೇಳೋವರೆಗೂ ಸ್ವಲ್ಪ ಸುಮ್ಮನಿರ್ತೀಯಾ? ಒಂದು ಹುಡುಗಿ ಒಪ್ಪಿಗೆಯಾಗಿದ್ಲು. ನನ್ನ ಮಗನಿಗೂ ಹಿಡಿಸಿದ್ಲು. ಅವಳನ್ನು ಮಾತಾಡಿಸ್ತಿದ್ದಾಗ ಕೇಳಿದ್ಲಂತೆ, ಓಲ್ಡ್ ಫರ್ನೀಚರ್ ಏನು ಮಾಡ್ತೀಯಾಂತ!'

'ಓಎಲ್ ಎಕ್ಸ್‌ನಲ್ಲಿ ಮಾರ್ತೀನಿ ಅಂತ ಹೇಳಿದ್ರೆ ಆಗ್ತಿತ್ತು. ಅದಕ್ಯಾಕೆ ಯೋಚನೆ?' ಎಂದೆ ನಾನು.

'ಅಯ್ಯೋ ಹುಚ್ಚಿ, ನೀನೆಲ್ಲಿದೀಯಾ? ಓಲ್ಡ್ ಫರ್ನೀಚರ್ ಅಂದ್ರೆ ನಾನು ಮತ್ತು ನನ್ನ ಗಂಡ. ಅರ್ಥಾತ್ ಭಾವೀ ಅತ್ತೆ, ಮಾವ, ಗೊತ್ತಾಯ್ತಾ? ಇತ್ತೀಚೆಗೆ ಹುಡುಗನ ತಂದೆತಾಯಿಗೆ ಹುಡುಗೀರು ಕೊಟ್ಟಿರೋ ಬಿರುದುಕಣೆ ಅದು. ಸದ್ಯ, ನಮ್ಮ ಪುಣ್ಯ, ನಮ್ಮ ಮಗ ಆ ಹುಡುಗೀನ ಒಪ್ಪಲಿಲ್ಲ' ಎಂದಳು.

'ಅರೆ, ಈ ತರಹ ಮಾತಾಡ್ತಾರಾ ಹುಡುಗೀರು? ನಂಬಕ್ಕೇ ಆಗಲ್ಲ' ಎಂದೆ. ನನ್ನ ಮಗನಿಗೆ ಹತ್ತು ವರ್ಷದ ಹಿಂದೆ ಮದುವೆ ಆಗಿದ್ದು ಒಳ್ಳೇದೇ ಆಯ್ತು ಎಂದುಕೊಂಡೆ ನಿಟ್ಟುಸಿರು ಬಿಡುತ್ತಾ.

'ನನ್ನ ಮಗ ತನಗೆ ಇಷ್ಟಬಂದ ಹುಡುಗೀನ ಪ್ರೀತಿಸಿ ಮದುವೆ ಆಗಿದ್ರೆ ಯೋಚನೇನೆ ಇರ್ತಿರ್ಲಿಲ್ಲ. ಈಗ ನೋಡು, ಇವನಿಗೆ ಹುಡುಗಿ ಹುಡುಕೋದೇ ದೊಡ್ಡ ಸಮಸ್ಯೆ ಆಗಿದೆ. ಇನ್ನೊಂದು ಸಲ ಒಬ್ಬಳು ಹುಡುಗಿ, 'ಮದುವೆ ಆದ ಕೂಡಲೇ ನಿನ್ನ ಅಪ್ಪ ಅಮ್ಮ ಬೇರೆ ಹೋಗ್ಬೇಕು. ನಮ್ಮನೇಗೆ ಬಂದರೂ ಗೆಸ್ಟ್ ಥರ ಒಂದರ್ಧ ಗಂಟೆ ಬೇಕಾದ್ರೆ ಬಂದು ಹೋಗಬಹುದು. ನೀನು ಅವರಿಗೆ ಒಂದು ರೂಪಾಯಿ ಹಣಾನೂ ಕೊಡೋ ಹಾಗಿಲ್ಲ. ಊಟ ಮಾಡ್ಕೊಂಡು ಹೋಗಿ, ಹಾಗೆ ಹೀಗೆ ಅನ್ನೋ ಹಾಗಿಲ್ಲ. ಹಾಗಿದ್ರೆ ಮಾತ್ರ ನಿನ್ನನ್ನು ಮದುವೆ ಆಗ್ತೀನಿ,' ಅಂದಳಂತೆ. ನನ್ನ ಗಂಡನಿಗೆ ಪೆನ್ಶನ್ ಕೂಡ ಬರಲ್ಲ. ರಿಟೈರ್ ಆದಾಗ ಬಂದಿದ್ದ ಹಣದಲ್ಲಿ ಮನೆ ಕಟ್ಟಿದರು, ಮಗಳ ಮದುವೆ ಮಾಡಿದರು. ಈಗ ಏನಿದ್ರೂ ನಾವು ಮಗನ ಜವಾಬ್ದಾರಿ. ಹೀಗಿರೋವಾಗ ನಮಗೆ ಅವನು ಒಂದು ರೂಪಾಯಿ ಕೋಡೋದಿಲ್ಲ, ಕಷ್ಟಪಟ್ಟು ಕಟ್ಟಿದ ಮನೇನೂ ಬಿಟ್ಟು ಹೋಗೂಂದ್ರೆ ಏನು ಮಾಡ್ಬೇಕು ಹೇಳು?' ಎಂದು ಕಣ್ಣೀರು ಹಾಕಿದಳು.

'ಅಳ್ಬೇಡ ಸುಮ್ಮನಿರು. ಒಳ್ಳೆಯ ಹುಡುಗಿ ಜೊತೇನೇ ನಿನ್ನ ಮಗನ ಮದುವೆ ಆಗತ್ತೆ. ಅದಕ್ಕೆ ಕಾಯಬೇಕಷ್ಟೆ.' ಎಂದು ನಾನು ಧೈರ್ಯವೇನೋ ಹೇಳಿದೆ. ಆದರೆ ಅದು ಸಾಧ್ಯವೇ ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತು.

ಈ ಸಮಸ್ಯೆ ಸುನಂದಳದು ಮಾತ್ರವಲ್ಲ, ಸಾಂಕ್ರಾಮಿಕ ರೋಗದಂತೆ ಸಮಾಜದಲ್ಲಿ ಹರಡುತ್ತಿರುವ ಜ್ವಲಂತ ಸಮಸ್ಯೆ.

ಮತ್ತೊಂದು ದಿನ ಸುನಂದಾ ಫೋನ್ ಮಾಡಿದ್ಲು. ಓ, ಮಗನಿಗೆ ಮದುವೆ ಗೊತ್ತಾಯ್ತೇನೋ ಎಂದು ಯೋಚಿಸುತ್ತಾ, ಅವಳಿಗೆ 'ಹಲೋ, ಏನೇ ಸಮಾಚಾರ?' ಎಂದು ವಿಚಾರಿಸಿದೆ. 'ಏನೂ ಇಲ್ಲಕಣೆ. ಮತ್ತದೇ ಗೋಳು. ಮೊನ್ನೆ ಒಂದು ಹುಡುಗಿ ಮನೆಯವರು ನಮ್ಮ ಮನೆಗೇ ಬಂದರು. ಅವರಿಗೆ ತಿಂಡಿ, ತೀರ್ಥ ಉಪಚಾರ ಎಲ್ಲಾ ಆಯ್ತಾ, ನಂತರ ಹುಡುಗಿಯ ಅಪ್ಪನ ವಿಚಾರಣೆ ಆರಂಭವಾಯ್ತೂಂತೀನಿ! 'ಈ ಮನೆ ನಿಮ್ಮ ಸ್ವಂತದ್ದಾ, ಪಿತ್ರಾರ್ಜಿತಾನೋ?' ಎಂದರು.

ನನ್ನ ಗಂಡ, 'ಸ್ವಂತ ಮನೇನೆ. ಆದರೆ ಪಿತ್ರಾರ್ಜಿತ' ಎಂದರು.

'ಇದರಲ್ಲಿ ಪಾಲುಂಟೋ?' ಬಾಣದಂತೆ ಸರ್ರನೆ ಇವರತ್ತ ಪ್ರಶ್ನೆ ಎಸೆದರು. 'ಹೌದು. ನಾವು ಮೂವರು ಸೋದರರು, ಒಬ್ಬಳು ತಂಗಿ ಇದೀವಿ' ಎಂದೊಡನೆ, 'ಓ, ಇಷ್ಟು ಚಿಕ್ಕ ಮನೇಲಿ ನಾಲ್ಕು ಪಾಲಾ? ನಮ್ಮ ಮಗಳಿಗೇನು ದಕ್ಕತ್ತೆ ನಿಮ್ಮನೇಲಿ. ಇರಲಿ, ನಿಮ್ಮದೇನಾದರೂ ಸ್ವಯಾರ್ಜಿತ ಏನಾದರೂ ಆಸ್ತಿ ಉಂಟಾ?' ಎಂದು ಮತ್ತೆ ಮಾತಿನ ಬಾಣ. ನನ್ನ ಗಂಡ, 'ಬೇರೇನೂ ಇಲ್ಲ. ನನಗೂ ನಮ್ಮಿಬ್ಬರು ಮಕ್ಕಳ ವಿದ್ಯಾಭ್ಯಾಸ, ಮಗನನ್ನು ಫಾರಿನ್‌ಗೆ ಕಳಿಸೋದು ಹೀಗೇ ಹಣವೆಲ್ಲಾ ಖರ್ಚಾಯಿತು' ಎಂದಾಗ, 'ಸರಿ ಬಿಡಿ, ನಿಮ್ಮ ಮನೇಲಿ ನಮ್ಮ ಹುಡುಗಿ ಏನು ಸುಖ ಉಂಡಾಳು' ಎಂದವರೇ ಮಾತು ಮುಂದುವರೆಸದೆ ಹೊರಟೇಬಿಟ್ಟರು. ನಾವಂತೂ ಬೆಪ್ಪುತಕ್ಕಡಿಗಳ ತರಹ ಇಂತಹ ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು ಕಷ್ಟವೇ ಕಣೆ,' ಎಂದಾಗ ಅವಳಿಗೆ ನಾನೇನು ಉತ್ತರ ಕೊಡಬಹುದಿತ್ತು ಎಂದು ಯೋಚಿಸತೊಡಗಿದೆ.

ಕಾಲ ಬದಲಾಗಿದೆ, ಉಹುಂ, ಕಾಲ ಕಳೆದಂತೆ ಜನಗಳ ಮನೋಭಾವ ಬದಲಾಗಿದೆ. ಕೆಲವು ದಶಕಗಳ ಹಿಂದೆ ಮಗಳಿಗೆ ಹದಿವಯಸ್ಸು ಬಂದ ಕೂಡಲೇ ತಂದೆತಾಯಿಗೆ ಮದುವೆಯ ಬಗ್ಗೆ ಆತಂಕ ಆರಂಭ. ಬಡತನ, ವರದಕ್ಷಿಣೆ, ಇಂತಹ ನಾನಾ ಕಾರಣಗಳಿಂದ ಹೆಣ್ಣುಮಕ್ಕಳಿಗೆ ಮದುವೆ ತಡವಾದರೆ ಆತಂಕ ಚಿಂತೆಗೆ ಎಡೆಗೊಡುತ್ತಿತ್ತು. ಯಾರಾದರೂ ಸರಿ, ವರನಿಗೆ ಎರಡನೆಯ ಮದುವೆಯಾದರೂ ಪರವಾಗಿಲ್ಲ, ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿ ಧನ್ಯರಾಗುತ್ತಿದ್ದ ಕಾಲ ಈಗ ಕಳೆದಿದೆ. ತಿರುಗುಬಾಣದಂತೆ ಅದು ಈಗ ಗಂಡು ಹುಡುಗರ ತಂದೆತಾಯಿಗಳನ್ನು ಕಾಡತೊಡಗಿದೆ.

ಹಿಂದೆ ಗಂಡುಮಗನ ತಾಯಿತಂದೆ ಎಂದು ಅವರು ವಿಶೇಷವಾದ ಗತ್ತು, ಬಿಂಕದಿಂದ ಬೀಗುತ್ತಿದ್ದರು. ಅದೇ ಈಗ? ಮಗನಿಗೆ ಮದುವೆಯಾಗಿಲ್ಲವಲ್ಲಾ ಎಂದು ಪರದಾಡುವ ಸರದಿ ಗಂಡುಮಕ್ಕಳ ತಂದೆತಾಯಿಗೆ ಬಂದಿದೆಯಲ್ಲಾ!!! ಇದಲ್ಲವೇ ಕಾಲದ ಮಹಿಮೆ! ಆಹಾ, ಗಂಡು ಮಗು ಹುಟ್ಟಿತೆಂದು ಬೀಗುತ್ತಿದ್ದ ಕಾಲ ಕಳೆದು, ಅಯ್ಯೋ, ಗಂಡು ಮಗು ಹುಟ್ಟಿಬಿಡ್ತಲ್ಲಾ? ಏನಪ್ಪಾ ಗತಿ? ಮುಂದೆ ಇವನಿಗೆ ಎಲ್ಲಿಂದ ಹೆಣ್ಣು ತಂದು ಮದುವೆ ಮಾಡಲಿ ಅನ್ನೋ ಕಾಲ ಬಂದರೂ ಆಶ್ಚರ್ಯವಿಲ್ಲ!

ಇರಲಿ, ನಮ್ಮ ಪ್ರಶ್ನೆ ಅದಲ್ಲ. ಹುಡುಗಿಯರೇಕೆ ಹೀಗೆ ಸಾರಾಸಗಟಾಗಿ ಅತ್ತೆಮಾವಂದಿರನ್ನು ಓಲ್ಡ್ ಫರ್ನೀಚರ್, ಮುದಿ ಗೂಬೆಗಳು, ಎಂದು ತಿರಸ್ಕಾರದಿಂದ ಕಾಣುತ್ತಾರೆ? ಅದೇ ಓಲ್ಡ್ ಫರ್ನೀಚರ್ ಅಲ್ಲವೇ ಈಗ ಮದುವೆಗೆ ಸಿದ್ಧವಾಗಿ ನಿಂತ ಮಗನನ್ನು ಹೆತ್ತವರು? ಅದೇ ಮುದಿಗೂಬೆಗಳು ಹೀಗೆಯೇ ಇದ್ದರೇ? ತಮ್ಮ ಯೌವ್ವನದಲ್ಲಿ ಈ ಪುರುಷ ಶಿಖಾಮಣಿಯನ್ನು ಹೆತ್ತು ಧನ್ಯರಾದೆವೆಂದು ಬೀಗುತ್ತಿದ್ದ ಮುದಿಗೂಬೆಗಳು ಇವರೇ ಅಲ್ಲವೇ? ಅದೇ ತಂದೆತಾಯಿಯಲ್ಲವೇ ತಮ್ಮ ಕಷ್ಟಗಳನ್ನು ಮರೆತು ಮಗ ವಿದ್ಯಾವಂತನಾಗಲಿ ಎಂದು ಅವನು ಬಯಸಿದಂತೆ ಅವನನ್ನು ಇಂಜಿನಿಯರ್ ಅಥವಾ ಡಾಕ್ಟರಾಗಿ ಮಾಡಿದ್ದು? ತಮ್ಮೆಲ್ಲ ಹಣಕಾಸನ್ನೂ ಧಾರೆಯೆರೆದು ಅವನು ವಿದ್ಯಾಭ್ಯಾಸ ಪೂರೈಸಲು ನೆರವಾದದ್ದು? ಈಗ ವಯಸ್ಸಾಗಿ,

ಕೈಲಾಗದೆ ಇರುವಾಗ, ನಿವೃತ್ತಿಯಿಂದಾಗಿ ಸಂಪಾದನೆ ಸೊನ್ನೆಯಾದಾಗ, ಸಂಪಾದಿಸುವ ಮಗ ತಮಗೆ ನೆರವಾಗಲಿ ಎಂದು ಬಯಸುವುದು ತಪ್ಪೇ? ಮದುವೆಯಾದ ತಕ್ಷಣ ಗಂಡನ ಸಂಪಾದನೆಗೆಲ್ಲಾ ತಾನೇ ಹಕ್ಕುದಾರಳು ಎಂದು ಮೆರೆಯುವ ಬದಲು, ತನ್ನನ್ನು ಸಾಕಿ ಸಲಹಿ, ವಿದ್ಯಾಭ್ಯಾಸ ಕೊಡಿಸಿದ ತಂದೆತಾಯಿ ತನಗಾಗಿ ಕಷ್ಟಪಟ್ಟಂತೆ, ತನ್ನನ್ನು ಮದುವೆಯಾಗಲು ಸಿದ್ಧವಾಗಿರುವ ಗಂಡಿನ ತಂದೆತಾಯಿ ಕೂಡ ಇದೇ ಹಂತಗಳನ್ನು ದಾಟಿದವರು. ವಯಸ್ಸಾಗಿ ನಿವೃತ್ತರಾದ ಮೇಲೆ, ಹಣಕಾಸಿಗೆ ಮಗನ ಮುಂದೆ ಕೈಚಾಚಬೇಕಾದ ಪರಿಸ್ಥಿತಿ ಅನೇಕ ತಂದೆತಾಯಿಗಳಿಗಿರಬಹುದು ಅಥವಾ ಇಲ್ಲದೆಯೂ ಹೋಗಬಹುದು. ಆದರೆ ಆರ್ಥಿಕವಾಗಿ ಅಲ್ಲದೆಹೋದರೂ ನೈತಿಕ ಬೆಂಬಲವನ್ನು, ವಯಸ್ಸಾದ ಮೇಲೆ ಮಗ ತಮ್ಮ ಕ್ಷೇಮ ಸಮಾಚಾರ ನೋಡಿಕೊಳ್ಳಲಿ ಎಂದು ಬಯಸುವುದು ತಪ್ಪೇ?

ಇದೇ ಹೆಣ್ಣುಮಕ್ಕಳು, ತಮ್ಮ ತಂದೆತಾಯಿ ವಿಷಯವಾಗಿ ಹಾಗೆಯೇ ನಡೆದುಕೊಳ್ಳುತ್ತಾರೆಯೇ?

ವಧೂ ಅನ್ವೇಷಕ ಯುವಕನನ್ನು ಒಬ್ಬಳಂತೂ 'ನಿಮ್ಮ ತಂದೆತಾಯಿ ನೆಲದ ಮೇಲಿದಾರೋ ಫೋಟೋದಲ್ಲಿದಾರೋ' ಎಂದು ಕೇಳಿದಳಂತೆ. ಒಂದು ಕ್ಷಣ ಕಕ್ಕಾಬಿಕ್ಕಿಯಾದ ಹುಡುಗ, ನನ್ನ ಅಪ್ಪ ಅಮ್ಮ ಬದುಕಿದಾರೆ. ನಿಮಗೋಸ್ಕರ ಅವರು ಸಾಯಬೇಕಾಗಿಲ್ಲ, ಬೈ' ಎಂದು ಹೇಳಿ ಪೆಚ್ಚು ಮುಖ ಹಾಕಿಕೊಡು ವಾಪಸ್ಸು ಬಂದನಂತೆ.

'ಮದುವೆ ಆದ ಕೂಡಲೇ ನಮ್ಮ ತಂದೆತಾಯಿ ಬೇರೆ ಇರಬೇಕು, ನಮ್ಮ ಮನೆಗೆ ಸದಾ ಬರಬಾರದು' ಎಂದು ಒಬ್ಬಳು ಕರಾರು ಹಾಕಿದಳಂತೆ. ನಿನ್ನ ಅಪ್ಪ ಅಮ್ಮನ ವಿಷಯ ಏನು? ಎಂದು ಕೇಳಿದರೆ, ನಾನು ನನ್ನ ತಂದೆತಾಯಿಗೆ ಒಬ್ಬಳೇ ಮಗಳು. ಅವರನ್ನು ನಾನೇ ನೋಡಿಕೊಳ್ಳಬೇಕು. ಹೀಗಾಗಿ, ಅವರಿಗಿಷ್ಟ ಬಂದಾಗ ಅವರು ಬಂದು ನನ್ನ ಜೊತೆ ಇರ್ತಾರೆ. ವಯಸ್ಸಾದ ನಂತರ ನಮ್ಮ ಮನೆಯಲ್ಲೇ ಇದ್ದರೂ ಇರಬಹುದು' ಎಂದು ಹೇಳಿದಾಗ, ಆ ಹುಡುಗ, 'ಇರಲಿ, ನನ್ನ ಅಪ್ಪ ಅಮ್ಮನಿಗೂ ನಾನು ಒಬ್ಬನೇ ಮಗ. ಅವರನ್ನು ನಾನೇ ನೋಡಿಕೊಳ್ಳಬೇಕು. ಹೀಗಾಗಿ ನಿನ್ನ ಅಪ್ಪ ಅಮ್ಮನ್ನ ನೀನು ನೋಡ್ಕೊ. ನನ್ನ ಅಪ್ಪ ಅಮ್ಮನ್ನ ನಾನು ನೋಡ್ಕೊತೀನಿ, ಬೈ,' ಎಂದು ಹೇಳಿ ಬಂದನಂತೆ.

ಗಂಡು ಮಕ್ಕಳ ವಯಸ್ಸಾದ ತಂದೆ ತಾಯಿಯರು ಮುದಿ ಗೂಬೆಗಳು, ಓಲ್ಡ್ ಫರ್ನೀಚರ್, ಇತ್ಯಾದಿ ಬಿರುದಾಂಕಿತರಾಗಲು ಮೂಲ ಕಾರಣವೇನು? ಎಂದು ಚಿಂತಿಸಬೇಕಾದ ಸಮಯ ಇದು. ನನ್ನ ಪ್ರಕಾರ, ಇದಕ್ಕೆ ಪ್ರಮುಖ ಕಾರಣ ವರದಕ್ಷಿಣೆ ಪಿಡುಗು, ನವ ವಧುಗಳನ್ನು ಹಣದ ಆಸೆಯಿಂದಲೋ, ಮತ್ಯಾವುದೋ ಕಾರಣಕ್ಕೆ ಚಿತ್ರಹಿಂಸೆ ನೀಡಿ ಸೀಮೆಎಣ್ಣೆ ಸುರಿದು ದಹಿಸುವ ಕ್ರೂರ ಗಂಡಿನ ತಂದೆತಾಯಿಗಳು. ಇಂತಹ ಹೀನ ಕೃತ್ಯದಲ್ಲಿ ಗಂಡನ ಸಹಯೋಗವೂ ಇರುತ್ತಿತ್ತು ಎಂಬುದು ನಿರ್ವಿವಾದ. ಇಲ್ಲವಾದರೆ ಅತ್ತೆ ಎಂಬ ಕಾರಣಕ್ಕೆ ಸೊಸೆಯನ್ನು ನಾನಾ ವಿಧವಾಗಿ ಕಿರುಕುಳ ನೀಡುವ ಅತ್ತೆಯರ ಆರ್ಭಟಕ್ಕೆ ಕಡಿವಾಣ ಬೀಳುತ್ತಿತ್ತು. ಹೆಂಡತಿಯಾದವಳಿಗೆ ತನ್ನ ತಾಯಿ ನಾನಾ ವಿಧವಾಗಿ ಕಿರುಕುಳ ಕೊಡುತ್ತಿದ್ದರೂ ಗಂಡ ಏಕೆ ಸುಮ್ಮನಿರುವನು? ತಾಯಿಯ ಅಡೆತಡೆಯಿಲ್ಲದ ಕೆಟ್ಟಮಾತುಗಳ ಹೆದರಿಕೆ, ತಾಯಿಯ ಮೇಲಿನ ಅತಿಯಾದ ಪ್ರೀತಿ ಅಥವಾ ಅವಲಂಬನೆ, ತಂದೆತಾಯಿಯ ನೆರಳನ್ನು ಬಿಟ್ಟು ಸ್ವತಂತ್ರವಾಗಿ ಸಂಸಾರ ಹೂಡಿ ನಿಭಾಯಿಸುವ ಧೈರ್ಯ ಇಲ್ಲದಿರುವುದು ಇತ್ಯಾದಿ ಕಾರಣಗಳಿರಬಹುದು.

ಇನ್ನು ಹೊಸದಾಗಿ ಮದುವೆಯಾಗಿ, ನೂರಾರು ಕನಸುಗಳನ್ನು ಹೊತ್ತು ಗಂಡನ ಮನೆ ಸೇರಿರುವ ಹೆಣ್ಣಿಗೆ ಮತ್ತೆ ತವರು ಮನೆಯಲ್ಲಿ ಸ್ವಾಗತವಿಲ್ಲವೆಂಬ ಸತ್ಯದ ಅರಿವು (ಇದು ಅನೇಕ ಹೆಣ್ಣುಮಕ್ಕಳ ಪರಿಸ್ಥಿತಿಯಂತೂ ಹೌದು) ಕೂಡ ಹೆಣ್ಣಿನ ಶೋಷಣೆಗೆ ಕಾರಣವಾಗಿದ್ದಿರಬಹುದು.

ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಆದ್ಯತೆ ಇರಲಿಲ್ಲ. ಹುಟ್ಟಿದ ಕೂಡಲೇ, 'ಅಯ್ಯೋ ಹೆಣ್ಣು ಹುಟ್ಟಿತೇ? ಇನ್ನು ಇವಳ ಮದುವೆಗೆ ವರದಕ್ಷಿಣೆ, ವರೋಪಚಾರ ಎಲ್ಲಾ ಎಲ್ಲಿಂದ ದುಡ್ಡು ಹೊಂದಿಸೋದು' ಎಂಬ ಯೋಚನೆಯೇ ಹೆಣ್ಣು ಮಗುವಿನ ತಂದೆ ತಾಯಿಯ ಮನಸ್ಸನ್ನು ಕುಗ್ಗಿಸಿಬಿಡುತ್ತಿತ್ತು.

ಈಗ ಪರಿಸ್ಥಿತಿ ಖಂಡಿತಾ ಬದಲಾಗಿದೆ. ಗಂಡುಮಕ್ಕಳ ವಿದ್ಯಾಭ್ಯಾಸದಷ್ಟೇ ಆದ್ಯತೆ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೂ ಒದಗಿ ಬಂದಿರುವುದು ಅತ್ಯಂತ ಸ್ವಾಗತಾರ್ಹವಾದ ಸಂಗತಿ. ವಿದ್ಯಾಭ್ಯಾಸವಷ್ಟೇ ಅಲ್ಲ, ಇಂದಿನ ಮಹಿಳೆ ಉದ್ಯೋಗಸ್ಥೆಯಾಗಿ ಆರ್ಥಿಕವಾಗಿ ಸ್ವತಂತ್ರಳು ಕೂಡ. ಗಂಡನ ಜೊತೆ ಸಂಸಾರಸ್ಥೆಯಾಗಿ, ಅವನಿಗೆ ಆರ್ಥಿಕವಾಗಿಯೂ ಬೆಂಬಲ ನೀಡುತ್ತಾ, ಸುಖಸಂಸಾರ ಸಾಗಿಸುತ್ತಿರುವ ಮಹಿಳೆಯರು ಇಲ್ಲದಿಲ್ಲ. ಆದರೆ, ಅವರು ಇಂದಿನ ಅತ್ಯಾಧುನಿಕ ಮಹಿಳೆಯಲ್ಲ. ಇಂದಿನ ಮಹಿಳೆ ಲಕ್ಷಗಟ್ಟಲೆ ಸಂಪಾದಿಸುವ ಸಾಮರ್ಥ್ಯವುಳ್ಳವಳು. ಆದರೆ, ತಾನು ಮದುವೆಯಾಗುವ ಹುಡುಗನ ತಂದೆ ತಾಯಿಯನ್ನು ನಿಕೃಷ್ಟವಾಗಿ ಕಾಣುವುದು, ಅವರಿಗೆ ಮುದಿಗೂಬೆಗಳ ಪಟ್ಟ ಕಟ್ಟುವುದು ಸರಿಯೇ?

ಹೆಣ್ಣು ಇಂತಹ ಕಠಿಣ, ಕ್ರೂರ ಮನೋಭಾವ ತಾಳಲು ಕಾರಣಗಳಿರಬಹುದು. ಇದಕ್ಕೂ ಪರಿಹಾರವಿದೆಯಲ್ಲವೇ? ತಾನು, ತನ್ನ ಗಂಡ ಇಬ್ಬರೇ ಸಂಸಾರ ಹೂಡಬೇಕು, ಅದರಲ್ಲಿ ಬೇರೆಯವರಿಗೆ ಅವಕಾಶವಿಲ್ಲ ಎಂಬ ಮನೋಭಾವ ತಳೆದರೆ, ಸ್ವತಂತ್ರವಾಗಿ ಸಂಸಾರ ಹೂಡಲು ಅವಕಾಶವಿದೆ. ಆದರೆ, ಗಂಡನ ತಂದೆ, ತಾಯಿ ಆರ್ಥಿಕವಾಗಿ ನೆರವು ಬಯಸಕೂಡದು, ಅವರು ತಮ್ಮ ಮನೆಗೆ ಬರಬಾರದು ಎಂಬ ನಿಲುವು ತಾಳುವುದು, ತನ್ನ ತಂದೆ ತಾಯಿಗೆ ಮಾತ್ರ ತಾನು ನೆರವು ನೀಡಬೇಕು, ಅವರು ಯಾವಾಗ ಬೇಕಾದರೂ ತಮ್ಮ ಮನೆಗೆ ಬರಲು ಸ್ವತಂತ್ರರು. ಅವರಿಗೆ ತೀರಾ ಅವಶ್ಯಕವೆನಿಸಿದಾಗ ತಮ್ಮ ಮನೆಯಲ್ಲಿಯೇ ಅವರು ಬಂದಿರಲು ಸ್ವತಂತ್ರರು ಎಂಬ ನಿಲುವು ತಪ್ಪಲ್ಲವೇ? ಇದು, ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದಕ್ಕೆ ಸುಣ್ಣ' ಎಂಬ ಗಾದೆಯನ್ನು ನೆನಪಿಗೆ ತರಿಸುತ್ತಿದೆ.

***

ಪುಣ್ಯ ಶ್ಲೋಕ – ಅಹಲ್ಯಾದೇವಿ ಹೋಳ್ಕರ್

– ರೇಣುಕಾ ದೇಸಾಯಿ



ಮೂಲವನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಂಡು ಮುಂದೆ ಬರುವುದನ್ನು ಸ್ವೀಕಾರ ಮಾಡುವ ದೂರದೃಷ್ಟಿಯುಳ್ಳ ರಾಣಿ ಅಹಲ್ಯಾದೇವಿ ಹೋಳ್ಕರ್. ಮೌಲ್ಯಗಳ ಆಧಾರದ ಮೇಲೆ ಅಪಾರ ಶ್ರದ್ಧೆ ಇಟ್ಟುಕೊಂಡು ಅವುಗಳನ್ನು ಸ್ವಯಂ ಆಚರಣೆಯಿಂದ ತೋರಿಸುತ್ತ ಸುತ್ತಲಿದ್ದವರಿಗೂ ಪ್ರಭಾವ ಬೀರುವಂತಹ ವ್ಯಕ್ತಿತ್ವ ಹಾಗೂ ನೇತೃತ್ವ ಅವರದ್ದಾಗಿತ್ತು. ಸಮಗ್ರ ರಾಷ್ಟ್ರೀಯತೆ ಅವರ ಮೂಲೋದ್ದೇಶವಾಗಿತ್ತು. ಸನಾತನ ಧರ್ಮದ ರಕ್ಷಣೆ, ಸಂರಕ್ಷಣೆಯ ಹೊಣೆ ಹೊತ್ತ 'ಲೋಕಮಾತೆ' ಅವರು.

ಅಹಲ್ಯಾದೇವಿಯು ತನ್ನ ಆಡಳಿತ ಇರುವ ಪ್ರದೇಶದಲ್ಲಿ ಹಾಗೂ ಭರತಖಂಡದಾದ್ಯಂತ ಮಾಡುತ್ತಿದ್ದ ದಾನ ಧರ್ಮಗಳು ಜನಸಾಮಾನ್ಯರ ಹೃದಯದಲ್ಲಿ ವಿಶೇಷ ಗೌರವಕ್ಕೆ ಪಾತ್ರವಾಗಿದ್ದವು. ಈ ಕುರಿತ ದಾಖಲೆಗಳು, ಅದನ್ನೂ ಮೀರಿದ ಇವರ ಪ್ರಸಿದ್ಧಿ ಇತಿಹಾಸದ ಪುಟದಲ್ಲಿ ದಾಖಲಾಗಿದೆ. ಆಕೆಯ ಆಡಳಿತ ಪೂರ್ತಿಯಾಗಿ ಆಕೆಯ ದೊರೆಗಳಾದ ಪೇಶ್ವೆಯವರ ಆಡಳಿತದ ವೈಖರಿಯಲ್ಲೇ ಇದ್ದಿತು, ಅದು ಛತ್ರಪತಿ ಶಿವಾಜಿ ಮಹಾರಾಜ ಅವರ 'ಹಿಂದವಿ' ಸಾಮ್ರಾಜ್ಯದ ಮಾದರಿಯಲ್ಲೇ ಇತ್ತು. ಹೀಗಾಗಿ ದೇವಾಲಯಗಳು, ಘಾಟ್‌ಗಳು ಮತ್ತು ಇತರ ದತ್ತಿ ಕಟ್ಟಡಗಳು ಎಲ್ಲೇ ಇದ್ದರೂ, ಭಾರತೀಯ ಮನಸ್ಸು ಅವುಗಳನ್ನು ಅಹಲ್ಯಾದೇವಿಯ ಹೆಸರಿನೊಂದಿಗೆ ಗುರುತಿಸಲು ಉತ್ಸುಕವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, "ದೇವಿಯ ಹೆಸರು" ಮತ್ತು "ದತ್ತಿ ಸಂಸ್ಥೆಗಳು" ಭಾರತೀಯ ಮನಸ್ಸಿನಲ್ಲಿ ಸಮಾನಾರ್ಥಕ ಪದಗಳಾಗಿವೆ. ಶಿವಭಕ್ತೆಯಾದ ರಾಣಿ ಅಹಲ್ಯಾ ಬಾಯಿಯು ಶಿವ ದೇವಾಲಯಕ್ಕೆ ನೀಡಿದ ದಾನದ ಬಗೆಗೆ 'Life and Life Work of Shri Devi Ahilyabai Holkar– V.V.Thakur ಎಂಬ ಪುಸ್ತಕದಲ್ಲಿ ಉಲ್ಲೇಖವಿದೆ. ಅವರು ಕಾಶಿ ವಿಶ್ವನಾಥ ದೇವಾಲಯದಿಂದ ಹಿಡಿದು ದೇಶದ ಉದ್ದಗಲಕ್ಕೂ ಇರುವ ಹನ್ನೆರಡು ಜ್ಯೋತಿರ್ಲಿಂಗ ದೇವಾಲಯಗಳಿಗೆ ನೀಡಿದ ದತ್ತಿ ದಾನಗಳ ಬಗೆಗೆ, ಇತರ ಪ್ರಮುಖ ಶಿವ ದೇವಾಲಯಗಳಿಗೆ, ಹಿಂದೂ ಪವಿತ್ರ ಯಾತ್ರಾ ಸ್ಥಳಗಳಾದ ಚಾರ್‌ಧಾಮ್‌ನ ಎಲ್ಲಾ ಕಡೆ ಅನ್ನಛತ್ರ, ಧರ್ಮಶಾಲೆ, ದೇವಸ್ಥಾನಗಳು, ಹೂತೋಟಕ್ಕೆ ಭೂಮಿ. ನಿತ್ಯಪೂಜೆಯ ಸಾಮಗ್ರಿಗಳ ಖರ್ಚಿಗೆ ಭೂಮಿ ದಾನ, ವಿಶ್ರಾಂತಿ ಗೃಹ, ತೀರ್ಥಕುಂಡಗಳು, ಬಾವಿಗಳು, ಸ್ನಾನಘಟ್ಟಗಳು ಹಾಗೂ ಪ್ರತಿವರ್ಷ ಶಿವರಾತ್ರಿಯಂದು ಶಿವನ ಅಭಿಷೇಕಕ್ಕಾಗಿ ಆರ್ಯಾವರ್ತದ ಎಲ್ಲಾ ಪ್ರಮುಖ ಶಿವಾಲಯಗಳಿಗೆ (ರಾಮೇಶ್ವರದಿಂದ ಕನ್ಯಾಕುಮಾರಿವರೆಗೆ) ಗಂಗೋತ್ರಿಯಿಂದ ಇಂತಿಷ್ಟು ಬಿಂದಿಗೆ ನೀರು ಕಳಿಸುವ ವ್ಯವಸ್ಥೆ ಮಾಡಿದ್ದರು ಎನ್ನುವ ಬಗ್ಗೆ ಸರಕಾರದ ಯಾವಯಾವ ಇಲಾಖೆಯಲ್ಲಿ ದಾಖಲೆಗಳಿವೆ ಎಂದು ಈ ಪುಸ್ತಕದಲ್ಲಿ ವಿವರವಾದ ಮಾಹಿತಿ ನೀಡಿದ್ದಾರೆ.

ಹಿಂದೂಗಳ ಶ್ರದ್ಧಾ ಕೇಂದ್ರ, ಅಧ್ಯಯನ ಕೇಂದ್ರ, ಜ್ಞಾನಾರ್ಜನೆಯ ಕೇಂದ್ರ, ಪವಿತ್ರ ಕೇಂದ್ರವಾದ ಕಾಶಿಯಲ್ಲಿ, ದೇವ ನಿರ್ಮಿತವೆಂದೇ ಪುರಾಣಗಳಲ್ಲಿ ಉಲ್ಲೇಖಿಸಿರುವ, ಕಾಶಿ ವಿಶ್ವನಾಥ ದೇವಾಲಯವು ಮೂರು ಬಾರಿ ದಾಳಿಗೆ ಒಳಗಾಗುತ್ತದೆ. ಮೂರನೇ ಬಾರಿ 1669ರಲ್ಲಿ ಹಿಂದೂ ರಾಷ್ಟ್ರದಲ್ಲಿ ಎಲ್ಲ ಕಡೆಗೂ ಇಸ್ಲಾಂ ಧರ್ಮ ಸ್ಥಾಪಿಸಲು ಉತ್ಸುಕನಾಗಿದ್ದ ಔರಂಗಜೇಬನ ಆದೇಶದಂತೆ ಕಾಶಿ ವಿಶ್ವನಾಥ ದೇವಾಲಯವನ್ನು ಲೂಟಿ ಮಾಡಿ, ಅಪವಿತ್ರಗೊಳಿಸಿ, ಅಲ್ಲಿರುವ ಮೂರ್ತಿಗಳನ್ನು ಭಗ್ನಗೊಳಿಸಿ, ಅಲ್ಲಿನ ಸಂಪತ್ತನ್ನು ದೋಚಿಕೊಂಡ ಮೊಘಲರು, ಮಂದಿರದ ಮೇಲೆ ಮಸೀದಿ ಕಟ್ಟಿಸಿ, ಅದಕ್ಕೆ 'ಜ್ಞಾನವ್ಯಾಪಿ ಮಸೀದಿ' ಎಂಬ ಹೆಸರನ್ನು ಕೊಡುತ್ತಾರೆ. ದೇವಾಲಯ ಕೆಡುವಲು ಔರಂಗಜೇಬ್ ಆದೇಶ ನೀಡಿದ್ದನ್ನು ಔರಂಗಜೇಬನ ಸಮಕಾಲೀನನಾದ ಸಕಿ ಮುಸ್ತಾದ್ ಖಾನ್, ಮಾಸಿರ್–ಇ–ಅಲಂಗಿರಿಯಲ್ಲಿ ಬರೆಯುತ್ತಾರೆ —

ಇದಾದ 100 ವರ್ಷಗಳ ನಂತರ 1776ರಲ್ಲಿ ದೇವಿ ಅಹಲ್ಯಾಬಾಯಿಯು ಆ ಮಸೀದಿಯ ಪಕ್ಕದಲ್ಲಿ ವಿಶಾಲವಾದ ಜಾಗವನ್ನು ಕೊಂಡುಕೊಂಡು ಈಗಿರುವ ಕಾಶಿ ವಿಶ್ವನಾಥ ದೇವಾಲಯವನ್ನು ಮರುನಿರ್ಮಾಣ ಮಾಡುತ್ತಾರೆ. ಜ್ಞಾನವ್ಯಾಪಿ ಮಸೀದಿಯೇ ಮೂಲ ದೇವಾಲಯ. ಆ ಪ್ರದೇಶದಲ್ಲಿ ಮುಸ್ಲಿಮರ ಆಳ್ವಿಕೆ ಇದ್ದರೂ ಧೈರ್ಯದಿಂದ, ತನ್ನ ರಾಜಕೀಯ ಚತುರತೆಯಿಂದ, ದಕ್ಷತೆಯಿಂದ ಈ ಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಳಿಸುತ್ತಾರೆ. ಅವರ ಆಡಳಿತದ ಕೇಂದ್ರವಾದ ಮಹೇಶ್ವರ ಈಗಿನ ಮಧ್ಯಪ್ರದೇಶದಲ್ಲಿ ಇದೆ, ಕಾಶಿ ವಿಶ್ವನಾಥ ದೇವಾಲಯ ಉತ್ತರ ಪ್ರದೇಶದಲ್ಲಿದೆ. ಸಾವಿರಾರು ಮೈಲಿಗಳ ದೂರದಿಂದ ಬಂದು ಹಿಂದೂಗಳ ಶ್ರದ್ಧಾ ಕೇಂದ್ರವನ್ನು ಪುನರ್ ನಿರ್ಮಾಣ ಮಾಡಿದ ಅವಳ ಕೆಚ್ಚೆದೆಗೆ ನಾವೆಲ್ಲ ಹಿಂದೂಗಳು ನಮನ ಸಲ್ಲಿಸುತ್ತೇವೆ, 'ತಾಯಿ' ಎಂದು ಸಂಬೋಧಿಸುತ್ತೇವೆ. ಅವಳ ಈ ಧಾರ್ಮಿಕ ನಡೆ, ಅವಳೊಬ್ಬ ಅಪ್ಪಟ ಶಿವಭಕ್ತೆ ಎನ್ನುವದನ್ನು ಸಾಬೀತುಪಡಿಸುತ್ತದೆ. ಮಹಾದೇವನ ಅನುಗ್ರಹ ಅವಳ ಮೇಲಿತ್ತು, ಆ ಶಿವನೇ ಅವಳಿಂದ ಇಷ್ಟೆಲ್ಲಾ ಪುಣ್ಯದ ಕೆಲಸ ಮಾಡಿಸಿರುವನು.

ಅಹಲ್ಯಾಬಾಯಿ ಹೋಳ್ಕರ್ ಅವರ ಜನ್ಮ ಮತ್ತು ಆಳ್ವಿಕೆಯ ಕಾಲಖಂಡದಲ್ಲಿ ಭಾರತದ ಪರಿಸ್ಥಿತಿ ಒಂದು ಸಂಕ್ರಮಣ ಕಾಲವಾಗಿತ್ತು, ಒಂದುಕಡೆ ಶಿವಾಜಿ ಮಹಾರಾಜರ ಹಿಂದವಿ ಸಾಮ್ರಾಜ್ಯ ವಿಸ್ತಾರವಾಗುತ್ತಿತ್ತು, ಮೊಗಲರ ಆಳ್ವಿಕೆಯ ಶಕ್ತಿ ಕಡಿಮೆ ಆಗುತ್ತಿತ್ತು ಹಾಗೂ ಅದೇ ಸಮಯದಲ್ಲಿ ಬ್ರಿಟಿಷರು ಈಸ್ಟ್ ಇಂಡಿಯಾ ಕಂಪನಿ ಮೂಲಕ ಬಂದು ವ್ಯಾಪಾರದ ಜೊತೆ ಜೊತೆಗೆ ರಾಜ್ಯವಿಸ್ತಾರದ ಹಂತದಲ್ಲಿದ್ದರು. ಆಗ ಅಹಲ್ಯಾ ದೇವಿಯವರ ಇಂದೋರ್ ರಾಜ್ಯ ಹಿಂದವಿ ಸಾಮ್ರಾಜ್ಯದ ಭಾಗವಾಗಿತ್ತು, ಔರಂಗಜೇಬ ಮೃತ್ಯುವಾದಮೇಲೆ ಮರಾಠ ಸೇನೆ ದಿಲ್ಲಿಯವರೆಗೂ ಮುಟ್ಟಿತ್ತು. ನಂತರ ಕೆಲವೇ ವರ್ಷಗಳಲ್ಲಿ ಬಂಗಾಳ, ಕರ್ನಾಟಕ ಒಳಗೊಂಡಂತೆ ಇಡೀ ದೇಶದಲ್ಲಿ ಪ್ರಾಬಲ್ಯ ಮತ್ತು ವಿಸ್ತಾರಗೊಂಡಿತ್ತು.

ಈಗ ಅಹಲ್ಯಾ ದೇವಿಯವರ ಜನ್ಮ ತ್ರಿಶತಮಾನೋತ್ಸವ ಆಚರಣೆ ನಡೆದಿದೆ. ಇವರ ಜನ್ಮವು ಮಹಾರಾಷ್ಟ್ರದ ಈಗಿನ ಅಹಮದ್‌ನಗರ್ ಜಿಲ್ಲೆಯ ಜಾಮಖೇಡ ತಾಲ್ಲೂಕಿನ, ಚೌಂಡಿ ಹೆಸರಿನ ಹಳ್ಳಿಯಲ್ಲಿ 1725ರಲ್ಲಿ ಆಯಿತು. ಅಹಲ್ಯಾಳ ತಂದೆ ಆ ಪ್ರದೇಶದ ಪಾಟೀಲರಾಗಿದ್ದರು, ಹೀಗಾಗಿ ಅಹಲ್ಯ ಚಿಕ್ಕಂದಿನಿಂದ ತಂದೆಯವರ ಮುಂದಾಳತ್ವ, ಹಳ್ಳಿಯ ಆಡಳಿತ, ನ್ಯಾಯಪರತೆ, ಕಠಿಣ ಪರಿಶ್ರಮ ನೋಡುತ್ತಾ ಬೆಳೆದವಳು. ತಂದೆತಾಯಿಯರಿಂದ ಉನ್ನತ ಸಾಂಸ್ಕೃತಿಕ ಶಿಕ್ಷಣ ಪಡೆದ ಈಕೆ ಅಸಮಾನ್ಯ ಕರ್ತೃತ್ವವನ್ನು ಪಡೆದವಳಾಗಿದ್ದಳು. ಮಾಣಕೋಜಿ ಶಿಂಧೆಯವರ ಮಗಳಾದ ಅಹಲ್ಯೆಯು ಸದ್ಗುಣಗಳಿಂದ,



ನರ್ಮದಾ ನದಿ ತಟದಲ್ಲಿರುವ ಮಹೇಸ್ವರದಲ್ಲಿ ಅಹಲ್ಯಾಬಾಯಿ ನಿರ್ಮಿಸಿದ ಕೋಟೆ

ಬುದ್ಧಿವಂತಿಕೆಯಿಂದ ಬೆಳೆದು 12 ವರ್ಷದವಳಾದಳು. ಸಹಜವಾಗಿ ತಂದೆತಾಯಿಗೆ, ತಮ್ಮ ಮಗಳಿಗೆ ಯೋಗ್ಯ ವರನನ್ನು ಹುಡುಕುವ ಚಿಂತೆ ಪ್ರಾರಂಭವಾಯಿತು. ಒಂದು ಸಲ ಪೇಶ್ವೆ ಮಹಾರಾಜರು ಮಾಲವದ ಮೂಲಕ ಪುಣೆಯ ಕಡೆಗೆ ಹೋಗುವಾಗ ಅಕಸ್ಮಾತ್ ಚೌಂಡಿ ಗ್ರಾಮದಲ್ಲಿ ತಂಗುವ ಪ್ರಮೇಯ ಉಂಟಾಯಿತು. ಪ್ರಾತಃಕಾಲದಲ್ಲಿ ಅಲ್ಲೇ ಅಡ್ಡಾಡುತ್ತಾ ಹೋಗುತ್ತಿದ್ದಾಗ ಸಮೀಪದ ಶಿವ ದೇವಸ್ಥಾನದಲ್ಲಿ ಶಿವಪೂಜೆಯಲ್ಲಿ ಮಗ್ನಳಾಗಿದ್ದ ಬಾಲಕಿಯನ್ನು ಕಂಡರು, ಆಕೆಯ ಮುಖದಲ್ಲಿ ಏನೋ ಅಸಮಾನ್ಯ ದೇದೀಪ್ಯಮಾನ ರೂಪವನ್ನು ಕಂಡ ಮಹಾರಾಜರು, ಜೊತೆಗೆ ಬಂದಿದ್ದ ಮಲ್ಹಾರ ರಾವರೊಡನೆ ನಿಮ್ಮ ಮಗ ಖಂಡೇರಾವನಿಗೆ ಸುಯೋಗ್ಯಳಾದ ಕನ್ಯೆ ಈಕೆ. ಇವಳು ನಿಮ್ಮ ಸೊಸೆ ಆದರೆ ಖಂಡಿತವಾಗಿಯೂ ನಿಮ್ಮ ಕುಲದ ಹೆಸರು ಉಜ್ವಲಗೊಳ್ಳುವುದು ಎಂದರು. ಮಲ್ಹಾರರಾವ್ ಅವರಿಗೂ ಇದು ಸರಿ ಎನ್ನಿಸಿತು. ವೈಭವ ಸಂಪನ್ನವಾದ ಹೋಳ್ಕರ್ ಮನೆತನಕ್ಕೆ ಗುಣಸಂಪನ್ನೆಯಾದ ಅಹಲ್ಯಾಬಾಯಿ ಪಾದಾರ್ಪಣೆ ಮಾಡಿದರು.



ತನ್ನ ಪತಿಯಲ್ಲಿ ವೀರತ್ವ ಪರಾಕ್ರಮ ನಿರೀಕ್ಷಿಸಿದ್ದ ಅಹಲ್ಯಾಬಾಯಿ ಯವರಿಗೆ ಪತಿಯ ವಿಲಾಸ ಲೋಲುಪತೆಯ ಅರಿವಾಯಿತು. ಆಕೆಯ ಮನದಲ್ಲಿದ್ದ ಕಲ್ಪನೆಗಳು ಚೂರು ಚೂರಾದವು. ತನ್ನ ಸತೀತ್ವದ ಬಲದಿಂದ ಪತಿಯ ಸ್ವಭಾವವನ್ನು ಬದಲಿಸಬೇಕೆಂದು ಕೊಂಡರು, ಆದರೆ ಸಾಧ್ಯವಾಗದೆ ನಿರಾಸೆಗೊಂಡರು.

1745ರಲ್ಲಿ ಮಾಲೇರಾವ ಎಂಬ ಮಗನನ್ನು, 1748ರಲ್ಲಿ ಮುಕ್ತಾಬಾಯಿ ಎನ್ನುವ ಸುಪುತ್ರಿಯನ್ನು ಪಡೆದರು. ಒಂದುಕಡೆ, ಖಂಡೇರಾವ್ ಅವರ ರಂಗುರಂಗಿನ ಜೀವನ ಮುಂದುವರೆಯುತ್ತಿದ್ದಂತೆ, ಅಹಲ್ಯಾಬಾಯಿಯವರು ತನ್ನ ಮಕ್ಕಳನ್ನು ಬೆಳೆಸುತ್ತಾ ಮಾವ ಮಲ್ಹಾರರಾವ್ ಅವರ ಜೊತೆಯಲ್ಲಿ ರಾಜ್ಯ ಆಡಳಿತದ ಒಳಹೊರಗನ್ನು ಅರಿಯಲು ಪ್ರಯತ್ನಿಸಿದರು. ಅವರಿಗೆ ತಾನು ಖಂಡೇರಾವ್ ಪತ್ನಿ ಎಂದು ಕರೆಸಿಕೊಳ್ಳುವದಕ್ಕಿಂತ ಸುಭೇದಾರ್ ಮಲ್ಹಾರರಾವ ಸೊಸೆ ಎನಿಸಿಕೊಳ್ಳುವುದು ಇಷ್ಟವಾಗುತ್ತಿತ್ತು. ಮಲ್ಹಾರರಾವ್ ಅವರು ತನ್ನ ಮಗನ ಗುಣಾವಗುಣಗಳನ್ನು ಅರಿತಿದ್ದರು, ಹಾಗೆಯೇ ತನ್ನ ಸೊಸೆಯ ಸಾಮರ್ಥ್ಯದ ಅರಿವು ಸಹ ಅವರಿಗೆ ಇದ್ದಿತು. ಆದುದರಿಂದಲೇ ಆಡಳಿತದ ಜವಾಬ್ದಾರಿಯನ್ನು ಸೊಸೆಗೆ ವಹಿಸಿಕೊಡಲು ಪ್ರಾರಂಭಿಸಿದರು. ಯುದ್ಧಗಳಿಗೆ ಹೋಗುವ ಸಂದರ್ಭಗಳಲ್ಲಿ ಇಡೀ ರಾಜ್ಯದ ಜವಾಬ್ದಾರಿಯನ್ನು ಅಹಲ್ಯಾಬಾಯಿಯವರಿಗೆ ವಹಿಸುತ್ತಿದ್ದರು.

ಸುಭೇದಾರ್ ಮಲ್ಹಾರರಾವ ಶೂರ ಸೇನಾನಿಯಾಗಿದ್ದು, ಅವರ ಮುಂದಾಳತ್ವದಲ್ಲಿ ಅನೇಕ ಯುದ್ಧ ಗೆದ್ದ ಕಾರಣಕ್ಕೆ ಪೇಶ್ವೆ ಅವರು 1728ರಲ್ಲಿ ಉತ್ತರದ 12 ಪರಗಣಗಳು, 1731ರಲ್ಲಿ 70 ಪರಗಣಗಳನ್ನು ಮತ್ತು ಒಂದು ಸಣ್ಣ ತುಕಡಿ ಸೇನೆ, ಕುದುರೆಗಳನ್ನು ಮಲ್ಹಾರರಾವ್ ಅವರಿಗೆ ಕೊಟ್ಟು ಸಾಮಂತರನ್ನಾಗಿಸಿದರು. ಹೀಗೆ ತನ್ನ ದಕ್ಷತೆ ಮತ್ತು ಪರಾಕ್ರಮದೊಂದಿಗೆ ಕ್ರಮೇಣ ಬೆಳೆದು, ಅವರ ಆಡಳಿತದ 31 ವರ್ಷಗಳಲ್ಲಿ ಹಿಂದೂ ಸಾಮ್ರಾಜ್ಯದ ಸರದಾರರಲ್ಲಿ ಅವರಿಗೆ ಅಗ್ರಸ್ಥಾನ ದೊರಕಿತ್ತು. ಅವರನ್ನು ಗೌರವದಿಂದ 'ಸುಬೇದಾರ' ಎಂದು ಕರೆಯಲಾಗುತ್ತಿತ್ತು. ಮರಾಠ ಸರದಾರರಲ್ಲಿ 'ಸುಬೇದಾರ' ಎಂದು ಕರೆಯಲ್ಪಟ್ಟವರು ಇವರೊಬ್ಬರೇ ಆಗಿದ್ದರು. ಜೊತೆಗೆ ಮಲ್ಹಾರರಾವ್ ಅವರು ಅಧಿಪತಿ ಪೇಶ್ವೆ ಬಾಜಿರಾವ್ ಅವರ ಸೈನ್ಯದ ಕಮಾಂಡರ ಮತ್ತು ಮಾಳ್ವ ಪ್ರದೇಶದ ಸುಬೇದಾರರಾಗಿದ್ದರು. ಇವರು ಇಂದೋರನ್ನು ಮಾಳ್ವದ ರಾಜಧಾನಿಯನ್ನಾಗಿ ಮಾಡಿಕೊಂಡರು. ಈ ಪ್ರದೇಶವು ಇಂದಿನ ಮಧ್ಯಪ್ರದೇಶದಲ್ಲಿ ಇದೆ. ಆ ದಿನಗಳಲ್ಲಿ ಮೊಘಲರ ಆಡಳಿತ ಇಳಿಮುಖವಾಗಿತ್ತು. ಅವರ ದುರ್ದೆಸೆ ನೋಡಿದ ಮಲ್ಹಾರರಾವ ಅವರ ಮನದಲ್ಲಿ ಉತ್ತರ ಭಾರತದಲ್ಲಿ ಹಿಂದೂ ಸಾಮ್ರಾಜ್ಯದ ವಿಸ್ತರಣೆಯ ಆಕಾಂಕ್ಷೆ ಜಾಗೃತವಾಯಿತು. ಇತರ ಸರದಾರರನ್ನು ಜೊತೆ ಸೇರಿಸಿ ಅಯೋಧ್ಯೆಯಿಂದ ಸಿಂಧೂ ನದಿಯ ತನಕ ಮತ್ತು

ರಾಜಸ್ಥಾನದಿಂದ ಕುಮಾವೂ ಪರ್ವತಗಳವರೆಗೆ ಆಕ್ರಮಣ ಮಾಡಿದರು. ರೋಹಿಲರ ಆಕ್ರಮಣದಿಂದ ಅಯೋಧ್ಯೆಯನ್ನು ರಕ್ಷಿಸಿದ್ದಕ್ಕಾಗಿ ಮಹಮ್ಮದಶಾಹ ಬಾದಶಾಹನು ಮಲ್ಹಾರರಾವ ಅವರಿಗೆ ಚಾಂದಗಡದ 'ಸರದೇಶಮುಖ್' ಪದವಿಯನ್ನಿತ್ತು ಗೌರವಿಸಿದನು. ಮಲ್ಹಾರರಾವ ಅವರಿಗೆ ಪರಗಣದಿಂದ ಶೇಕಡ 12.5 ಕರ ವಸೂಲಿ ಮಾಡುವ ಅಧಿಕಾರ ದೊರಕಿತ್ತು. 1757ರಲ್ಲಿ ಡೆಲ್ಲಿ ವಶಪಡಿಸಿಕೊಂಡರು. 1758ರಲ್ಲಿ ಲಾಹೋರ್ ಗೆದ್ದುಕೊಂಡರು. ಹೀಗೆ ಮಾಳ್ವ ರಾಜ್ಯ ವಿಸ್ತರಣೆಗೊಂಡಿತು.

ಮಲ್ಹಾರರಾವ ಪತ್ನಿ ಗೌತಮಿಬಾಯಿಯವರು ವೀರ ಪತ್ನಿ ಆಗಿದ್ದರು. ತಮ್ಮ ಪತಿಯ ಕೆಲಸಕಾರ್ಯಗಳಲ್ಲಿ ಕಾಲಕಾಲಕ್ಕೆ ಸಲಹೆ ಎಚ್ಚರಿಕೆ ಕೊಡುತ್ತಿದ್ದರು. ಮಾಲವ ರಾಜ್ಯದ 2/5ನೇ ಭಾಗ ಶಾಹೂ ಮಹಾರಾಜರಿಂದ ಮಲ್ಹಾರರಾವ ಅವರಿಗೆ ದೊರೆತಾಗ ಅದನ್ನು ಅವರು ಗೌತಮಿಬಾಯಿಯವರ ಹೆಸರಿಗೆ ಮಾಡಿದರು. ಹೀಗಾಗಿ ಗೌತಮಿಬಾಯಿಯವರಿಗೆ ಆ ಕಾಲದಲ್ಲೇ ವರ್ಷಕ್ಕೆ ಮೂರು ಲಕ್ಷದಷ್ಟು ಆದಾಯವಿತ್ತು. ಅತ್ತೆಯ ಮರಣದ ನಂತರ ಇದೆಲ್ಲಾ ಸೊಸೆ ಅಹಲ್ಯಾಬಾಯಿಯವರಿಗೆ ದೊರಕಿತ್ತು, ಮಾತ್ರವಲ್ಲ ಅಹಲ್ಯಾದೇವಿಯವರು ಅದಕ್ಕೆ 18 ಗ್ರಾಮಗಳನ್ನು ಜೋಡಿಸಿಕೊಂಡರು. ಈ ಆದಾಯದಿಂದ ಅಹಲ್ಯಾ ಬಾಯಿಯವರು ದೇಶದ ಉದ್ದಗಲಕ್ಕೂ ನಮ್ಮ ಧಾರ್ಮಿಕ ಸ್ಥಳಗಳ ಜೀರ್ಣೋದ್ಧಾರ ಮಾಡಿ, ಹಿಂದೂ ಧರ್ಮಿಯರಿಗೆ '**ಪುಣ್ಯ ಶ್ಲೋಕ**'ರಾದರು.

ಅಹಲ್ಯಾಬಾಯಿಯವರ ಜೀವನದಲ್ಲಿ ಅಗ್ನಿ ಪರೀಕ್ಷೆಯ ಕ್ಷಣಗಳು ಒಂದರ ಮೇಲೊಂದರಂತೆ ಎರಗಿ ಬಂದವು, 14.03.1754 ರಂದು ಕುಂಬೇರು ಯುದ್ಧದಲ್ಲಿ ಅವರ ಪತಿ ಖಂಡೇರಾಯರು ಮೃತ್ಯು ವಶರಾದರು. ಪತಿಯ ಅಕಾಲ ಮರಣದಿಂದ ಶೋಕತಪ್ತರಾದ ಅಹಲ್ಯಾಬಾಯಿ ಸತಿಯಾಗಲು ನಿಶ್ಚಯಿಸಿದರು. ಆದರೆ ಮಾವ ಮಲ್ಹಾರರಾವ್ ಅವರ ಒತ್ತಾಯಕ್ಕೆ ಕಟ್ಟುಬಿದ್ದು, ಪ್ರಜೆಗಳ ಮಾತೆಯಾಗಲು ಒಪ್ಪಿದರು. "ಸತಿ ಆಗುವುದರಿಂದ ಸ್ವಂತಕ್ಕೆ ಪುಣ್ಯ ಪ್ರಾಪ್ತಿಯಾಗಿ ಲಾಭ ಆಗಬಹುದು. ಆದರೆ ರಾಜ್ಯಕರ್ತೃಗಳಿಗೆ ವ್ಯಕ್ತಿಗತ ಸಂಬಂಧಗಳು, ಸುಖ-ದುಃಖಗಳು ಇರಬಾರದು. ಪ್ರಜಾಹಿತ ರಕ್ಷಣೆಯೇ ಅವರ ಏಕಮಾತ್ರ ಕರ್ತವ್ಯವಾಗಿರಬೇಕು. ನಿನಗೆ ಲೋಕಾಪವಾದದ ಭಯವಿದ್ದರೆ ನಿನ್ನ ಎದುರಿಗೆ ಬೆಟ್ಟದಂತೆ ನಿಂತು ಎಲ್ಲವನ್ನು ತಡೆಯುತ್ತೇನೆ" ಎಂದ ಮಾವನವರ ಮಾತಿಗೆ ಒಪ್ಪಿ ಪ್ರಜೆಗಳಿಗೆ ತಾಯಿಯಾದರು, ರಾಣಿಯಾದರು. ಮಾವ ಮಲ್ಹಾರರಾವ್ ಅವರಿಂದ ರಾಜಾಡಳಿತದ ಒಳಹೊರಗನ್ನು ಬೇಗನೇ ಅರಿತುಕೊಂಡರು.

ಅವರನ್ನು ಪ್ರೀತಿಯಿಂದ ತಾಯಿಯಂತೆ ಮಮತೆಯಿಂದ ನೋಡಿಕೊಳ್ಳುತ್ತಿದ್ದ ಅತ್ತೆಯವರಾದ ಗೌತಮಿಬಾಯಿಯವರು 1761ರಲ್ಲಿ ಸ್ವರ್ಗಸ್ಥರಾದರು. ಅದಾದ ಐದು ವರ್ಷಗಳ ನಂತರ ಗುರುವೂ ಪಿತೃ ಸಮಾನರೂ ಆದ ಮಲ್ಹಾರರಾವ ಅವರು



1ಮಹೇಶ್ವರದಲ್ಲಿರುವ ಅಹಲ್ಯಾಬಾಯಿಯವರ ಅರಮನೆ – ಹೊರನೋಟ



ಮಹೇಶ್ವರದಲ್ಲಿರುವ ರಾಣಿ ಪ್ರತಿಮೆ

ವಿಧಿವಶರಾದರು. ರಾಜ್ಯ ಶಾಸನದ ಸಂಪೂರ್ಣ ಜವಾಬ್ದಾರಿ ಅಹಲ್ಯಾಬಾಯಿಯವರದಾಯಿತು. ಅವರ ಸುಪುತ್ರ ಮಾಲೇರಾವನು ರಾಜನೀತಿ ನಿಪುಣನಾಗದೆ ಪ್ರಜೆಗಳ ದೃಷ್ಟಿಯಲ್ಲಿ ದಕ್ಷನೆನಿಸಿಕೊಳ್ಳಲಿಲ್ಲ. ಅಲ್ಲದೇ ಅವನು ಅನೇಕ ದುಷ್ಕೃತ್ಯಗಳನ್ನು ಮಾಡುತ್ತಾ ಕಾಲ ಕಳೆಯುತ್ತಿರುವಾಗ, ಅವನ ದುರ್ವರ್ತನೆಯಿಂದ ರೋಸಿಹೋದ ತಾಯಿ ಅಹಲ್ಯಾಬಾಯಿ ಅವನಿಗೆ ಶಿಕ್ಷೆ ವಿಧಿಸಿ ಬಂಧನದಲ್ಲಿ ಇರಿಸಿದರು. ಅಲ್ಲೇ ಅವನ ದೇಹಾಂತ್ಯವಾಯಿತು. ಇತಿಹಾಸದ ಪುಟದಲ್ಲಿ ತಾಯಿಯೇ ನಿಂತು ತಪ್ಪು ಮಾಡಿದ ಮಗನಿಗೆ ಶಿಕ್ಷೆ ವಿಧಿಸಿದ ಪ್ರಸಂಗ ಬಹುಶಃ ಇನ್ನೊಂದಿರಲಿಕ್ಕಿಲ್ಲ!!

ಅವರ ಮಗಳು ಮುಕ್ತಾಬಾಯಿಯ ಗಂಡ ಯಶವಂತರಾವ್ ಸಾಮರ್ಥ್ಯವುಳ್ಳ ಯುವಕರಾಗಿದ್ದರು. ಆದರೆ ಅವನ ಪುಟ್ಟ ಮಗನ ಸಾವಿನ ಆಘಾತವನ್ನು ತಾಳಲಾರದೆ ಹಾಸಿಗೆ ಹಿಡಿದರು. ಹಾಗೆಯೇ ಮೂರು ವರ್ಷಗಳ ಬಳಿಕ ಅವರು ಕೂಡಾ ಇಹಲೋಕ ಯಾತ್ರೆ ಮುಗಿಸಿದರು. ಮಗಳು ಮುಕ್ತಾಬಾಯಿಯು ಸತಿ ಹೋಗಲು ನಿಶ್ಚಯಿಸಿದ್ದನ್ನು ತಿಳಿದು ತಾಯಿಯ ಹೃದಯಕ್ಕೆ ಆಘಾತವಾಯಿತು, ಎಷ್ಟೇ ಸಮಜಾಯಿಸಿ ಹೇಳಿದರೂ ಮುಕ್ತಾಬಾಯಿ ಒಪ್ಪದೇ ಸತಿಯಾದಳು. ಈ ಶೋಕ ವಿಲಾಪದಿಂದ ಪ್ರಜೆಗಳು ಕಂಗೆಟ್ಟರು, ಆದರೂ ದೇವಿಯು ತಮ್ಮ ಜೀವನದ ವ್ಯಕ್ತಿಗತ ದುಃಖಗಳನ್ನು ಇತರರಿಗೆ ತೋರ್ಪಡಿಸಿಕೊಳ್ಳದೇ ರಾಜ್ಯದ ಕರ್ತವ್ಯಗಳತ್ತ ಗಮನಹರಿಸಲು ಪ್ರಾರಂಭಿಸಿದರು.

ದೇವಿ ಅಹಲ್ಯಾಬಾಯಿ ಶ್ರೇಷ್ಠ ಆಡಳಿತಗಾರರಾಗಿದ್ದರು. ರಾಜ್ಯದಿಂದ ಹೊರಗೆ ಹೋಗಿದ್ದಾಗಲೂ ಪತ್ರ ಮುಖೇನ ಸೂಚನೆಗಳನ್ನು ರವಾನಿಸುತ್ತಿದ್ದರು. ರಾಣಿಯು ಎಂದೂ ಯುದ್ಧ ಆಕಾಂಕ್ಷೆಯುಳ್ಳವರಾಗಿರಲಿಲ್ಲ, ಆದರೆ ಸದಾ ಅವರ ಸೇನೆ ಯುದ್ಧ ಸನ್ನದ್ಧವಾಗಿರುತ್ತಿತ್ತು. "ಅತ್ಯಂತ ಕಡಿಮೆ ಸೈನ್ಯದಿಂದ ಅತ್ಯಧಿಕ ಯಶಸ್ಸು" ಎಂಬ ಮಾವ ಮಲ್ಹಾರರಾವ ಅವರ ಸೂತ್ರವನ್ನು ಅಹಲ್ಯಾಬಾಯಿಯವರು ತಮ್ಮದಾಗಿಸಿಕೊಂಡಿದ್ದರು. ಆರ್ಥಿಕ ವ್ಯವಹಾರಗಳಲ್ಲಿ ಅತಿ ದಕ್ಷತೆ ಹಾಗೂ ಸಾರ್ವಜನಿಕ ಹಣದ ಯೋಗ್ಯ ಉಪಯೋಗಕ್ಕೆ ಆಗ್ರಹಿಸುತ್ತಿದ್ದರು. ರಾಜಕೋಶದಲ್ಲಿರುವ ಧನವು ಪ್ರಜೆಗಳ ಪರಿಶ್ರಮದ್ದು ಮತ್ತು ಅದು ಪ್ರಜೆಗಳಿಗಾಗಿ ಇರಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಪ್ರತಿದಿನ ರಾಜ್ಯಕೋಶದ ಹಾಗೂ ಇತರ ಲೆಕ್ಕಗಳನ್ನು ಖುದ್ದಾಗಿ ಪರಿಶೀಲಿಸುತ್ತಿದ್ದರು. ಕೋಶ ಪ್ರಮುಖರಿಗೆ ಸೂಚನೆಗಳ ಆಜ್ಞಾಪತ್ರ ವ್ಯವಸ್ಥೆಯನ್ನು ಜಾರಿಗೆ ತಂದರು. ರಾಜ್ಯಕ್ಕೆ ಹೊರಗಿನ ವೈರಿಗಳಿಂದ ಹಾಗೂ ಒಳಗಿನ ಜನಗಳಿಂದ ಅಪಾಯ ಒದಗಿದಾಗ ಬಹಳ ಚಾಕಚಕ್ಯತೆಯಿಂದ ಯುದ್ಧಗಳನ್ನು ಆಯೋಜಿಸಿ ಗೆಲ್ಲುತ್ತಿದ್ದರು. ರಕ್ತಪಾತವಿಲ್ಲದೆ ತಮ್ಮ ಕುಶಲ ರಾಜನೀತಿಯಿಂದ ಸಂಸ್ಥಾನವನ್ನು ರಕ್ಷಿಸಿದ ಅನೇಕ ಉದಾಹರಣೆಗಳು ಅವರ ಆಳ್ವಿಕೆಯಲ್ಲಿ ಕಾಣಸಿಗುತ್ತವೆ. ರಾಜ್ಯಕೋಶದ ಒಂದು ಪೈಸೆಯೂ ಸೋರಿ ಹೋಗದಂತೆ ಕೋಶದ ಆಯವ್ಯಯದಲ್ಲಿ ಪೂರ್ಣವಾಗಿ ಎಚ್ಚರವಿರುವ ಆಡಳಿತಾತ್ಮಕ ವ್ಯವಸ್ಥೆ ಅವರದ್ದಾಗಿತ್ತು. ರಾಜ್ಯಾಡಳಿತದ ಪ್ರತಿಯೊಂದು ಕಾರ್ಯದ ಅರಿವು ದೇವಿ ಅಹಲ್ಯಾಬಾಯಿಯವರಿಗಿರುತಿತ್ತು. ಯಾವುದೇ ಕೆರೆಕಟ್ಟೆಯನ್ನಗಲೀ, ದೇವಾಲಯವನ್ನಾಗಲೀ ನಿರ್ಮಿಸುವಾಗ ಸ್ವತಃ ತಾವೇ ಹೋಗಿ ಸ್ಥಳ ಪರೀಕ್ಷಣೆ ಮಾಡಿ ಸಲಹೆ ನೀಡುವಂತಹ ಜಾಣ್ಮೆ ಅವರಲ್ಲಿತ್ತು. ಪ್ರತಿಕೂಲ ರಾಜಕೀಯ ಪರಿಸ್ಥಿತಿಯಿಂದಾಗಿ ಅಹಲ್ಯಾಬಾಯಿಯವರು ತಮ್ಮ ರಾಜ್ಯದ ರಾಜಧಾನಿಯನ್ನು ಇಂದೋರ್‌ನಿಂದ (ಇಂದಿನ ಮದ್ಯಪ್ರದೇಶ) ನರ್ಮದೆಯ ದಡದಲ್ಲಿರುವ ಮಹೇಶ್ವರಕ್ಕೆ ವರ್ಗಾಯಿಸಿಕೊಂಡರು.

ಒಮ್ಮೆ ಓಂಕಾರೇಶ್ವರ ಯಾತ್ರೆಯಿಂದ ಮರಳುತ್ತಿರುವ ಸಮಯದಲ್ಲಿ ಅವರಿಗೆ ಸ್ವಲ್ಪ ಹಣದ ಅವಶ್ಯಕತೆ ಉಂಟಾಯಿತು, ವಿಜಾಗಡದ (ಅವರದೇ ಆಳ್ವಿಕೆಯ ಪ್ರದೇಶ) ಕರಣಿಕನಿಂದ 58 ರೂಪಾಯಿ ಪಡೆದುಕೊಂಡರು, ತಾವು ಮಹೇಶ್ವರಕ್ಕೆ ಹಿಂದಿರುಗಿದ ಕೂಡಲೇ ಆ ಹಣವನ್ನು ವಿಜಾಗಡದ ಲೆಕ್ಕಕ್ಕೆ ಹಿಂದಿರುಗಿಸಿದರು. ರಾಜ್ಯ ಬೊಕ್ಕಸದ ಒಂದು ಪೈಸೆಯನ್ನೂ ವ್ಯಕ್ತಿಗತ ಕಾರ್ಯಕ್ಕೆ ಖರ್ಚು ಮಾಡಲಿಲ್ಲ, ಪ್ರತಿಯೊಂದಕ್ಕೂ ಲೆಕ್ಕವಿಡುವಂತಹ ಅತ್ಯಂತ ಸ್ವಚ್ಛ ಆಡಳಿತ ಅವರದಾಗಿತ್ತು. ಸಮವಸ್ತ್ರ, ಊಟದ ಖರ್ಚು, ದಾನಧರ್ಮ,... ಎಲ್ಲದಕ್ಕೂ ಲೆಕ್ಕ ಇಡುವ ಪರಿಪಾಟವಿತ್ತು. ಲೆಕ್ಕವನ್ನು ರಾಣಿಯವರು ಖುದ್ದಾಗಿ ಪರಿಶೀಲಿಸುತ್ತಿದ್ದರು.

ಅವರ ಆಡಳಿತಾವಧಿಯಲ್ಲಿ ನ್ಯಾಯ ವ್ಯವಸ್ಥೆ ಶೀಘ್ರ ಮತ್ತು ಅತಿ ಪ್ರಾಮಾಣಿಕವಾಗಿ ಜನತೆಗೆ ದೊರೆಯುತ್ತಿತ್ತು. ಆಧ್ಯಾತ್ಮದ ಚಿಂತನೆ ಮತ್ತು ಚಿಂತಕರನ್ನು ತುಂಬಾ ಗೌರವದಿಂದ ಕಾಣಲಾಗುತ್ತಿತ್ತು. ಡಕಾಯಿತ ಬಿಲ್ಲರನ್ನು ಶೂರ ಸೈನಿಕರಾಗಿ ಪರಿವರ್ತಿಸಿದ ಘಟನೆಯಂತೂ ಅವರ ಚಾಣಾಕ್ಷ ಆಡಳಿತಕ್ಕೆ ಒಂದು ಒಳ್ಳೆಯ ಉದಾಹರಣೆ. ದಾರಿಹೋಕರಿಗೆ ಈ ಡಕಾಯಿತ ಬಿಲ್ಲರ ಉಪಟಳ ಜಾಸ್ತಿ ಆದಾಗ ಅವರ ಮುಖಂಡನನ್ನು ಅತೀ ಚಾಣಾಕ್ಷತನದಿಂದ ಬಂಧಿಸಿ, ಆಸ್ಥಾನಕ್ಕೆ ಕರೆಸಿ ಕೇಳುತ್ತಾರೆ ಅಹಲ್ಯಾದೇವಿ –

"ನೀವು ಯಾಕೆ ಈ ವೃತ್ತಿ ಮಾಡುತ್ತೀರಿ? ಜನರನ್ನು ದೋಚಲು ಕಾರಣವೇನು?"

"ಮಾತೆಯವರೇ, ನಮಗೆ ಅನ್ಯ ಮಾರ್ಗವಿಲ್ಲ, ಜನರು ನಮ್ಮನ್ನು ಹೀನವಾಗಿ ಕಾಣುತ್ತಾರೆ, ಕೇಳಿದಾಗ ಸುಮ್ಮನೆ ಕೊಟ್ಟರೆ ನಾವು ಹಿಂಸಿಸುವದಿಲ್ಲ"

"ನಿಮಗೆ ಶಸ್ತ್ರ ಚಾಲನೆ ಬರುತ್ತದೆಯೋ?"

"ಹೌದು, ಬರುತ್ತದೆ"

"ನಮ್ಮ ಸೈನ್ಯದಲ್ಲಿ ಸೇರುತ್ತಿರಾ? ರಾಜ್ಯದ ಭದ್ರತೆಗಾಗಿ ವೈರಿಯೊಂದಿಗೆ ಹೋರಾಡುವಿರಾ? ನಿಮಗೆ ವೇತನ, ಬಟ್ಟೆ ಇತರ ಸೌಲಭ್ಯ ಮತ್ತು ಗೌರವವೂ ಸಿಗುತ್ತದೆ".

ಆ ಮಾತು ಕೇಳಿ ಭಿಲ್ಲ ಸರದಾರ ಬೆಚ್ಚಿಬಿದ್ದನು. ಇಲ್ಲಿಗೆ ಬರುವಾಗ ತನಗೆ ಉಗ್ರ ದಂಡನೆ ಕಾದಿದೆ ಎಂದುಕೊಂಡಿದ್ದ, ಆದರೆ ಇಲ್ಲಿ ನಡೆದಿದ್ದೇ ಬೇರೆ. ದೇವಿ ಅಹಲ್ಯಾಬಾಯಿಯವರು ಈ ರೀತಿಯಾಗಿ ಡಕಾಯಿತರನ್ನು ಸೈನಿಕರನ್ನಾಗಿ ಪರಿವರ್ತಿಸಿದರು. ಯಾತ್ರಿಗಳ ರಕ್ಷಣೆಯ ಜವಾಬ್ದಾರಿಯನ್ನೂ ಅವರಿಗೇ ವಹಿಸಲಾಯಿತು, ಕಾಡಿನ ದಾರಿಯಲ್ಲಿ ಹೋಗಬೇಕಾದರೆ ಯಾತ್ರಿಕರು ತಲಾ ಒಂದು ಕವಡೆ ತೆರಿಗೆಯನ್ನು ನೀಡುವ ಕ್ರಮವನ್ನು ಪ್ರಾರಂಭಿಸಿದರು. ಆ ಕ್ರಮವು ಆಮೇಲೆ 'ಬಿಲ್ಲ ಕವಡೆ' ಎಂದು ಪ್ರಸಿದ್ಧವಾಯಿತು. ಹೀಗೆ ಅವರ ಆಡಳಿತಾವಧಿಯಲ್ಲಿ ಅವರ ಜಾಣ್ಮೆ, ಕುಶಲತೆ, ಪ್ರಜಾಹಿತ, ಎಲ್ಲೆಲ್ಲೂ ಎದ್ದು ಕಾಣುತ್ತದೆ. ಅವರೊಬ್ಬ ಮುತ್ಸದ್ಧಿ ನಾಯಕಿ,

ಅವರಲ್ಲಿ ಟಪಾಲು ವ್ಯವಸ್ಥೆ ಅತ್ಯುತ್ತಮವಾಗಿತ್ತು, ಬೇರೆಯವರ ವ್ಯವಸ್ಥೆ ನೋಡಿ, ಅಭ್ಯಸಿಸಿ, ಜೊತೆಗೆ ತಮ್ಮ ಸ್ವಂತ ಅನುಭವ, ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸಿ, ಶೀಘ್ರ ಮತ್ತು ಸುಭದ್ರ ಅಂಚೆ ವ್ಯವಸ್ಥೆ ಜಾರಿಗೆ ತಂದಿದ್ದರು. ಮಹೇಶ್ವರವನ್ನು ವಿದ್ಯಾ ಕೇಂದ್ರವನ್ನಾಗಿಸಿದ್ದರು. ಅನೇಕ ವಿದ್ವಾಂಸರಿಗೆ, ವಿದ್ಯಾಭ್ಯಾಸ ಮಾಡುವವರಿಗೆ ರಾಜಾಶ್ರಯ ನೀಡಿದ್ದರು. ವ್ಯಾಕರಣ, ಪುರಾಣ ಕೀರ್ತನೆ, ಜ್ಯೋತಿಷ್ಯ ವ್ಯಾಕರಣ ಶಾಸ್ತ್ರ, ವೇದಾಂತ, ಸಂಸ್ಕೃತ, ವೈದ್ಯಕೀಯಶಾಸ್ತ್ರ, ಪೌರೋಹಿತ್ಯ ಮೊದಲಾದ ವಿಷಯಗಳಲ್ಲಿ ಪಾಂಡಿತ್ಯ ಪಡೆದ ವಿದ್ವಾಂಸರನ್ನು ಮಹೇಶ್ವರಕ್ಕೆ ಆಹ್ವಾನಿಸಿ, ಆಶ್ರಯ ನೀಡಿದ್ದರು.



ಅಹಲ್ಯಾಬಾಯಿ ಹೋಳ್ಕರ್ ರಾಣಿಯ ಪೀಠಾಸನ

ಅಹಲ್ಯಬಾಯಿಯವರು ತಮ್ಮ ಆಡಳಿತ ಕಾಲದಲ್ಲಿ ನಕಲು ಬರೆಯುವ ವ್ಯಕ್ತಿಯನ್ನು ನೇಮಕ ಮಾಡಿ ಅವನಿಂದ ಅನೇಕ ಗ್ರಂಥಗಳನ್ನು ನಕಲು ಮಾಡಿಸಿದುದರಿಂದ ಪುಸ್ತಕಗಳ ಸಂಗ್ರಹದ ಜೊತೆಗೆ ಉತ್ತಮ ಬರವಣಿಗೆಗಾರರಿಗೆ ಕೆಲಸವೂ ಸಿಕ್ಕಿತು. ಹೋಳ್ಕರ್ ಶಾಹಿಯ ಇತಿಹಾಸದಲ್ಲಿ ಈ ರೀತಿ 88 ಗ್ರಂಥಗಳ ಸೂಚಿಯು ದೊರೆತಿದೆ. ನಶಿಸಿ ಹೋಗುವಂತಹ ನಮ್ಮ ಅಮೂಲ್ಯ ಗ್ರಂಥಗಳನ್ನು ಸಂರಕ್ಷಿಸಿದ್ದರು. ಅನೇಕ ದೇಶವಿದೇಶಗಳ ಇತಿಹಾಸಕಾರರು ಅವರ ಸಾಮ್ರಾಜ್ಯಕ್ಕೆ ಭೇಟಿಕೊಟ್ಟಾಗ ಅವರ ಆಡಳಿತ ವೈಖರಿ ಬಗೆಗೆ ವರ್ಣಿಸಿರುವ ದಾಖಲೆಗಳು ಕಾಣಸಿಗುತ್ತವೆ. ಅವರ ಕಾಲದಲ್ಲಿ ಅವರ ವಿಚಾರಧಾರೆಯಿಂದ ನಿರ್ಮಾಣವಾದ ನೇಯಿಗೆ ಉದ್ಯೋಗ ಇಂದಿಗೂ ಪ್ರಸ್ತುತ. ಮಹೇಶ್ವರಿ ಸಿಲ್ಕ್ ಸೀರೆಗಳು ಇಂದಿಗೂ ಪ್ರಸಿದ್ಧವಾಗಿವೆ ಮತ್ತು ಶ್ರೇಷ್ಠತೆಯಿಂದ ಕೂಡಿವೆ. ಅವನ್ನು ದೇಶದೆಲ್ಲೆಡೆ ಮಾರಾಟಮಾಡುವ ವ್ಯವಸ್ಥೆ ಕಲ್ಪಿಸಲಾಗಿ, ನೇಯಿಗೆ ಮತ್ತು ಮಾರಾಟಕ್ಕೆ ಪ್ರಸಿದ್ಧಿ ಪಡೆದಿತ್ತು, ರಾಣಿಯ ವ್ಯವಹಾರ ಚತುರತೆಗೆ ಇದು ನಿದರ್ಶನವಾಗಿತ್ತು.

1795ನೇ ಇಸವಿ ಆಗಸ್ಟ್ 13ನೇ ತಾರೀಖು, ಶ್ರಾವಣ ಕೃಷ್ಣ ಚತುರ್ದಶಿಯ ದಿನ, ಪವಿತ್ರ ಗಂಗಾಜಲದಂತೆ ನಿರ್ಮಲ ಜೀವನ ಪ್ರವಾಹವು ಅಖಂಡ ಶಿವನಾಮಸ್ಮರಣೆ ಮಾಡುತ್ತಾ ಶಿವ ಪ್ರವಾಹದಲ್ಲಿ ವಿಲೀನವಾಯಿತು. ಪ್ರಜ್ವಲ ಜ್ಯೋತಿಯೊಂದು ದೈವೀ ಜ್ಯೋತಿಯೊಂದಿಗೆ ಸೇರಿಹೋಯಿತು.

'ಪರಸ್ಪರ ದ್ವೇಷಿಸದಿರಿ, ಒಂದೇ ಮನಸ್ಸಿನಿಂದ ಕಾರ್ಯತತ್ಪರರಾಗಿ, ಧನವನ್ನು ಸಂಪಾದಿಸಬೇಕು. ಹರಿದು ಹೋದ ನೀರಿಗೆ ಚಿಂತಿಸದೆ, ಉಳಿದದ್ದು ತೀರ್ಥವೆಂದು ಸ್ವೀಕರಿಸುವುದು ಉತ್ತಮ' – ಈ ಭಾವನೆಯಿಂದ ವ್ಯವಹರಿಸಬೇಕೆಂಬದು ದೇವಿಯವರ ಅಂತಿಮ ಸಂದೇಶವಾಗಿತ್ತು. 1975 ಮತ್ತು 1996 ಎರಡೂ ವರ್ಷ ಭಾರತ ಸರಕಾರ ಅವರ ಸವಿನೆನಪಿಗಾಗಿ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿ ಗೌರವ ಸೂಚಿಸಿದೆ.

ಈ ಲೇಖನಕ್ಕೆ ಆಕರ ಗಂಥಗಳು:

1. ಕರ್ಮಯೋಗಿನೀ– ದೇವೀ ಅಹಲ್ಯಾಬಾಯಿ ಹೋಳ್ಕರ್ : ಪ್ರಕಾಶಕರು: ಸುಕೃಪ ಟ್ರಸ್ಟ್

2. 'ಸ್ವರಾಜ್ಯ' ಇಂಗ್ಲಿಷ್ ಪತ್ರಿಕೆಯಲ್ಲಿ ಬರೆದ ಅಂಕಣ ಬರಹಗಳು

3. Peshwa Maratha Relations and Malharrao Holkar by N.N.Nagarale–1989

4 Life and Life Work of Shri Devi Ahilyabai Holkar (V.V Thakur

***

.

ಮೊಬೈಲ್ ಪ್ರಪಂಚ

– ಮಾನಸ ಕೆ.ಕೆ.

ಅಬ್ಬಾ! ಏನ್ ಕಾಲ ಬಂತಪ್ಪ, ಮೊಬೈಲ್ ಕಾಲ. ನಮ್ಮ ದೇಶ ಪ್ರಗತಿಯತ್ತ ಸಾಗುತ್ತಿದೆ ಅಂತ ಒಂದೆಡೆ ಖುಷಿ. ಆದರೆ ಇನ್ನೊಂದು ಕಡೆ ನಮ್ಮ ಜನರ ಜೀವನ ಎತ್ತ ಸಾಗುತ್ತಿದೆ ಅನ್ನುವ ಆತಂಕ. ಈ ಎರಡರ ನಡುವೆ ನಮ್ಮ ನೈಜ ಜೀವನ, ಸಂಬಂಧಗಳ ವಿಚಾರ, ಕಾಳಜಿ ಮರೆತರೆ ಅದೆಷ್ಟು ಜೀವಹಾನಿ, ಒಮ್ಮೆ ಯೋಚಿಸೋಣ ಅಲ್ಲವೇ?

ಮನಸ್ಸನ್ನು ಸಮತೋಲನವಾಗಿಟ್ಟು ಕೊಳ್ಳುವುದು ಒಂದು ಕಲೆ, ಅನುಕರಣೆ ನಮ್ಮ ಬದುಕಿಗೆ ಎಷ್ಟು ಸೂಕ್ತ? ವಾಸ್ತವ ಬದುಕನ್ನು ಒಮ್ಮೆ ಅವಲೋಕನ ಮಾಡಿ ಗಮನಿಸಬೇಕಿದೆ. ಪ್ರಪಂಚ ಬದಲಾಗಿದ್ದು ಹೆಚ್ಚು ಕಾಣಲಿಲ್ಲ. ಆದರೆ, ಸ್ವಂತಿಕೆ ಮರೆತು, ಜವಾಬ್ದಾರಿ ಮರೆತು, ಬದುಕು ಕೊಟ್ಟಿಕೊಂಡವರಿದ್ದಾರೆ. ಇದಕ್ಕೆ ನಾನಾ ಉದಾಹರಣೆಗಳಿವೆ. ಇವೆಲ್ಲಾ ಪೀಠಿಕೆ ಬೇಡ ಅನಿಸಿದರೂ ತಿಳಿದುಕೊಳ್ಳುವುದು ಉತ್ತಮ. ಬದಲಾವಣೆ ಜಗದ ನಿಯಮ ಅಂತಾರೆ, ಒಪ್ಪಲೇಬೇಕು. ಆದರೆ ಸಂಬಂಧಗಳೇನೂ ಬದಲಾಗಿಲ್ಲ ಕೆಲವು ವಿಚಾರಗಳು ಬದಲಾಗಿವೆ. ನಾವು ಗಮನಿಸಬೇಕು. ಇದರಿಂದ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುತ್ತಿರುವುದ ಗಮನಕ್ಕೆ ತೆಗೆದುಕೊಳ್ಳಬೇಕು. ಹಾಗೆಂದ ಮಾತ್ರಕ್ಕೆ ನಾವು ಹಳೆಯ ಕಾಲಕ್ಕೆ ಹೋಗುವ ಅವಶ್ಯವಿಲ್ಲ. ವಾಸ್ತವ ಜೀವನವನ್ನು ಸರಿತೂಗಿಸುವ ಜವಾಬ್ದಾರಿ ಹೊರುವುದು ಪ್ರತಿಯೊಬ್ಬ ಮನುಷ್ಯನ ಮೂಲ ಕರ್ತವ್ಯ.

ನಿತ್ಯ ಮೆಟ್ರೋದಲ್ಲಿ ಸ್ವಕಾಯಕಕ್ಕಾಗಿ ಪ್ರಯಾಣಿಸುತ್ತಿರುವೆ. ಸಾಧ್ಯವಾದಷ್ಟೂ ಮಹಿಳೆಯರ ಬೋಗಿಯಲ್ಲೇ ಪ್ರಯಾಣ ಮಾಡುವುದು. ಬಹಳಷ್ಟು ಜನ ಇತ್ತೀಚೆಗೆ ಮೆಟ್ರೊದಲ್ಲಿ ಓಡಾಡುವುದನ್ನು ಕಾಣುತ್ತೇವೆ, ಹೊಸದೇನಲ್ಲ. ಅಂದಿಗೂ ಇಂದಿಗೂ ಕೊಂಚ ಅಜಗಜಾಂತರವಿದೆ. ಹೌದು, ಕೆಲವು ವರ್ಷಗಳ ಹಿಂದೆ ಬರೀ ಬಸ್ಸಿನಲ್ಲೇ ಪ್ರಯಾಣ ಮಾಡುವಾಗ 5 ರೂ. ಟಿಕೆಟ್ ಪಡೆದು ಪ್ರಯಾಣಿಸುತ್ತಿದ್ದೆವು. ನನಗೆ ಇನ್ನೂ ನೆನಪಿದೆ. ಆಟೋಲಿ ಅಂದ್ರೆ 25 ರೂ ಮಿನಿಮಂ ಚಾರ್ಜ್. ಅದೇನು ದೂರದ ದಿನಗಳಲ್ಲಿ ಇರಲಿಲ್ಲ. ಈಗ ಬದಲಾದ ಬದುಕಿನ ಶೈಲಿ ನಿಜಕ್ಕೂ ಮನಸ್ಸನ್ನು ಕಲಕದೇ ಇರದು. ಈಗ ನಾರ್ಮಲ್ ಆಟೋದಲ್ಲಿ ಓಡಾಡುವ ಜನರ ಪ್ರಯಾಣದ ಮತ್ತು ಪ್ರಮಾಣದ ಸಂಖ್ಯೆ ಕಡಿಮೆ. ಈಗ ಪ್ರಯಾಣಿಕರಿಗೆ ಸಾಕಷ್ಟು ಆಯ್ಕೆಗಳಿವೆ.. ಒಲಾ, ನಮ್ಮ ಯಾತ್ರಿ, ಉಬರ್, ಕ್ಯಾಬ್ ಹೀಗೆ.

ನಾನಾ ರೀತಿಯ ಆಪ್‌ಗಳು ಹುಟ್ಟಿಕೊಂಡು ಬಹಳ ಕಾಲವಾಯಿತು. ಮಹಿಳೆಯರು ನಿರ್ಭಯವಾಗಿ ಓಡಾಡುವ ಅವಕಾಶ ಬಂದಾಗಿದೆ. ನಿತ್ಯ ಮೆಟ್ರೋದಲ್ಲಿ ಕುಳಿತ, ನಿಂತ ಎಲ್ಲಾ ವಯಸ್ಸಿನ ಮಹಿಳೆಯರನ್ನು, ಹುಡುಗಿಯರನ್ನು ಗಮನಿಸುವಾಗ ಒಂದಾದರೂ ಲಂಗ ಬ್ಲೌಸ್, ದಾವಣಿ, ,ಚೂಡಿದಾರ, ಸೀರೆ ಉಟ್ಟ ನಾರೀಮಣಿಯರ ಸಾಲು ಕಾಣಲೇ ಇಲ್ಲ. ಇದ್ದರೂ ಬೆರಳೆಣಿಕೆಯಷ್ಟು ಅಷ್ಟೇ. ಲಂಗ ಅಂತೂ ಇಲ್ಲವೇ ಇಲ್ಲ ಬಿಡಿ. ಇತ್ತೀಚೆಗೆ ನಾನು ಎಲ್ಲರನ್ನು ನೋಡಿ ಕಲಿಯುತ್ತಿರುವುದು ಹೆಚ್ಚಾಗಿದೆ. ಪ್ರಪಂಚಕ್ಕೆ ತಕ್ಕಹಾಗೆ ಬದುಕುವುದನ್ನು ರೂಡಿಸಿಕೊಂಡಿದ್ದೇನೆ

ಲೇಡಿಸ್ ಕಂಪಾರ್ಟ್ಮೆಂಟಲ್ಲಿ ಹರೆಯದ ಹುಡುಗಿಯರ ಸಂಖ್ಯೆ, ಮಧ್ಯ ವಯಸ್ಸಿನವರ ಸಂಖ್ಯೆ ಹೆಚ್ಚಿರುತ್ತದೆ. ಆದರೆ ಯಾರನ್ನೂ ಮಾತನಾಡಿಸುವಂತಿಲ್ಲ ಕಾರಣ ಎಲ್ಲರೂ ತುಟಿಗಳಿಗೆ ಬೀಗ ಜಡಿದು ಮೊಬೈಲ್ ಹಿಡಿದು ಟಕಾ ಟಕಾ ಅಂತ ಮೆಸೇಜ್ ಮಾಡುತ್ತಿರುತ್ತಾರೆ. ಯಾರೊಂದಿಗೆ ಮಾತೋ ದೇವರೇ ಬಲ್ಲ. ಒಂದು ಕೈಲಿ ಕಂಬಿ ಮತ್ತೊಂದು ಕೈಲಿ ಮೊಬೈಲ್ ಹಿಡಿದಿರುತ್ತಾರೆ, ಸ್ಮಾರ್ಟ್ ಆಗಿ ಇದ್ದವರು ಪ್ಯಾಂಟ್ ಧರಿಸಿದ ಎಲ್ಲರನ್ನು ನೋಡಿ ಅನಿಸಿದ್ದು ಕಾಲ ಬದಲಾಗಿದೆ, ವಾಸ್ತವ ಜಗತ್ತಿನಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಇದೇನಪ್ಪ ಈ ರೀತಿ ಇದ್ದಾರೆ. ನಾವU ಬದಲಾಗಬೇಕಾ? ಅನ್ನುವವರಿಗೆ ಒಂದು ಕಿವಿಮಾತು. ಖಂಡಿತ ಬದಲಾಗುವ ಅವಶ್ಯಕತೆ ಇಲ್ಲ. ಆದರೂ, ಮನಸ್ಸಿಗೆ ಅನಿಸಿದ್ದು ಒಂದೇ ಮಾತು. ನಮ್ಮತನವನ್ನು ನಾವು ಎಂದೂ ಬಿಡಬಾರದು. ಯಾರೋ ಹೇಗೋ ಬದುಕುತ್ತಿದ್ದಾರೆ ಅಂತ ನಾವು ಅವರಂತೆ ಬದುಕಲು ಸಾಧ್ಯವೇ?

ಅವರವರ ವೃತ್ತಿಗೆ ತಕ್ಕಂತೆ ಎಲ್ಲರೂ ಇರುವರು, ಅದು ತಪ್ಪಲ್ಲ. ಇರಲಿ ಇರಲೇಬೇಕು ಕಾಲಕ್ಕೆ ತಕ್ಕಂತೆ ಎಲ್ಲರೂ. ಹಾಗೆ ಒಂದು ದಿನ ಪ್ರಯಾಣದಲ್ಲಿ ಮೆಟ್ರೋದಲ್ಲಿ ಹೋಗುವಾಗ ಹುಡುಗಿಯೊಬ್ಬಳು ಸೀಟಿನಮೇಲೆ ಕಾಲುಮೇಲೆ ಕಾಲುಹಾಕಿ ಕುಳಿತಿದ್ದಳು. ವೃದ್ದೆಯೊಬ್ಬರು ಬಂದರೂ ಅವಳು ಸ್ಥಳ ಬಿಡಲಿಲ್ಲ. ನಾನೇ ಎದ್ದು ಸೀಟು ಬಿಟ್ಟೆ. ಇಂತಹ ಘಟನೆಗಳಿಗೆ ಏನು ಹೇಳೋದು?

ನಮ್ಮ ಹೆಣ್ಣುಮಕ್ಕಳು ಹಿರಿಯರಿಗೆ ಗೌರವ ನೀಡುವುದನ್ನು ಕಲಿತರೂ ಮರೆತಿದ್ದಾರೆ ಅನಿಸಿತು. ಹೌದಲ್ವಾ? ಇದೊಂದು ಉದಾಹರಣೆ ಅಲ್ಲ. ಪ್ರತಿಬಾರಿ ಹೋದಾಗಲೂ ಏನೋ ಒಂದು ಅನುಭವ ಅಗುತ್ತಲೇ ಇರುತ್ತದೆ. ಹಿರಿಯ ಕಿರಿಯ ಭೇದವಿಲ್ಲದೇ ಎಲ್ಲರನ್ನೂ ಸರಿಸಮಾನವಾಗಿ ಕಾಣುವ ಮನಸ್ಥಿತಿ ನಮ್ಮದಾಗಬೇಕು. ಅಂತಹ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿದೆ. ಇದಕ್ಕೆ ಲೋಕ ಕಾರಣ ಇರಬಹುದು, ಪರಿಸ್ಥಿತಿ ಕಾರಣ ಇರಬಹುದು. ಆದರೆ. ನಮ್ಮ ಭಾರತ ಭೂಮಿಯ ಹೆಣ್ಣುಮಕ್ಕಳು ಎಂದೂ ಬದಲಾಗಬಾರದು. ಸೇವಾ ಮನೋಭಾವವಿರಬೇಕು.

ಇತ್ತೀಚೆಗೆ ಇಲ್ಲಿ ಯಾರಿಗೂ ಯಾರೂ ಬೇಕಿಲ್ಲ. ಮಾತು ಎತ್ತಹೋಯಿತು? ಮೌನ ಜಗತ್ತನ್ನು ಗೆಲ್ಲಲು ಸಾಧ್ಯವೇ? ಸದಾ ಕಪ್ಪೆಯಂತೆ ವಟಗುಟ್ಟುವ ಮಾತುಗಳು ಒಮ್ಮೊಮ್ಮೆ ಬದುಕಿನ ಪಥವನ್ನೇ ಬದಲಿಸುತ್ತದೆ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಅಂದು ತಿಳಿದಿದ್ದ ನನಗೆ ಮೌನವೇ ಆಭರಣವಾಗಿತ್ತು. ಇಷ್ಟಕ್ಕೆ ಸುಮ್ಮನಿರಲಿಲ್ಲ. ಹಾಗೆ ಕಣ್ಣಾಯಿಸುವಾಗ ಬರೀ ಬಣ್ಣಬಣ್ಣದ ಮೊಬೈಲ್‌ಗಳು. ಯಾರೂ ತಲೆ ಎತ್ತರು. ನಿಂತರೂ ಸರಿ, ಕುಂತರೂ ಸರಿ. ಮೊಬೈಲ್ ನೋಡುವುದು ಜನರಿಗೆ ಸರ್ವೇಸಾಮಾನ್ಯ ಆಗಿಬಿಟ್ಟಿದೆ. ಜೊತೆಗೆ ಬದುಕೇ ಆಗಿಬಿಟ್ಟದ್ದು ಕಂಡೆ. ಸಂಬಂಧಗಳು ಮರೆಯಾಗುತ್ತಿರುವುದಕ್ಕೆ ಅರ್ಥ ಇಲ್ಲಿ ಸಿಕ್ಕಿತು. ಏನೇ ಇರಲಿ. ಇದು ಮೊಬೈಲ್ ಯುಗ ಅಂತ ನನಗಂತೂ ಅರ್ಥ ಆಯಿತು.

ಮೆಟ್ರೋ ಒಳಗೆ ಬರುವಾಗ, ಹೊರಗೆ ಹೋಗುವಾಗ ಮೊಬೈಲನ್ನು ಜೋಪಾನ ಮಾಡುವ ಕಲೆ ಕಲಿತಿದ್ದಾರೆ. ಅದರಲ್ಲೇನಿದೆ ಅನ್ನುವುದಕ್ಕಿಂತ ಎಲ್ಲವೂ ಮೊಬೈಲ್ ಒಳಗೆ ಇದೆ ಅನ್ನುವುದು ಕಟುಸತ್ಯ ಈಗಿನವರ ಐ ಕ್ಯೂ ಎಷ್ಟಿದೆ ಎಂದರೆ ಕಣ್ಣೆತ್ತಿ ನೋಡದೆ ತಮ್ಮ ಸ್ಟಾಪ್ ಬಂದ ಕೂಡಲೇ ಎದ್ದು ಇಳಿಯುವರು. ಇಲ್ಲಿ ನಮ್ಮ ಅಪರ್ಣಾ ಮೇಡಂ ಅವರನ್ನು ನಾವು ನೆನಸಿಕೊಳ್ಳಬೇಕು. ಅವರ ಮಧುರವಾದ ಧ್ವನಿ ಮೆಟ್ರೋದಲ್ಲಿ ಕೇಳಿಬರುತ್ತಿರುವುದು ಕನ್ನಡಿಗರ ಹೆಮ್ಮೆ ಅನಿಸಿತು, ಅವರ ಸುಂದರ ಕನ್ನಡದ ಪದಗಳು ಶಾಶ್ವತವಾಗಿ ಇರುವುದು ಸಂತೋಷವಾಗುತ್ತದೆ. ಸಜ್ಜನಿಕೆಯ ನಿರೂಪಕಿ, ಸಿನಿತಾರೆ, ದಿ.ಅಪರ್ಣಾ ನಮ್ಮೊಳಗೇ ಎಂದೂ ಮರೆಯದ ಮಾಣಿಕ್ಯ, ಅವರೊಂದು ರೋಲ್ ಮಾಡಿಲ್ ಆಗಿ ಉಳಿಯಲಿ ಎನ್ನುವುದು ನನ್ನ ಆಶಯ.

ಜನರಿಗೆ ಜನರ ಸಂಪರ್ಕಕ್ಕಿಂತ ಮೊಬೈಲ್ ಸಂಪರ್ಕವೇ ಇಲ್ಲಿ ಮುಖ್ಯ. ನಾವು ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ನೀವು ಎಲ್ಲಿ ಇಳಿಯೋದು? ಅಂತ ಕೇಳುವುದು .ವಾಡಿಕೆಯಾಗಿದ್ದ ಕಾಲ ಮರೆ ಆಗಿತ್ತು ಇಲ್ಲಿ ಈಗ ಕೇಳುವ ಪ್ರಮೇಯ ಇಲ್ಲ. ಟೆಕ್ನಾಲಜಿ ಮುಂದುವರೆದಿದೆ ಎನ್ನುವುದು ಖುಷಿಯ ವಿಚಾರವಾಗಿದೆ.

ಜಗತ್ತು ಏನೇ ಬದಲಾದರೂ ಇದು ಅನುಕರಣೆಯೇ ಹೊರತು ನಮ್ಮ ಸಂಪ್ರದಾಯ, ಸಂಸ್ಕೃತಿ, ಆಚಾರ, ವಿಚಾರ ಎಂದಿಗೂ ಬದಲಾಗಿಲ್ಲ! ಇದನ್ನು ಉಳಿಸಿಕೊಳ್ಳುವುದು ಬಹುಮುಖ್ಯ ಮತ್ತು ನಮ್ಮ ಬಹುದೊಡ್ಡ ಜವಾಬ್ದಾರಿ.

ಇನ್ನಾದರೂ ಮೊಬೈಲ್‌ಗೆ ರಸ್ಟ್ ಹಿಡಿಯದಿರಲಿ ಅದಕ್ಕೂ ಕೊಂಚ ರೆಸ್ಟ್ ನೀಡೋಣ. ಅದನ್ನು ಉಪಯೋಗಿಸಲು ಸಮಯ ನಿಗದಿಪಡಿಸೋಣ. ಅವಶ್ಯಕತೆ ಇದ್ದಲ್ಲಿ ಮಾತ್ರ ಉಪಯೋಗಿಸೋಣ.

ಮೊಬೈಲ್ ಇತ್ತೀಚಿಗೆ ನಿತ್ಯ ಜೀವನಕ್ಕೆ ಬೇಕಾಗುವ ಬದುಕಿನ ಭಾಗವಾಗಿದೆ. ಅದರಲ್ಲಿ ಬರುವ ಒಳಿತಿನ ವಿಚಾರ ತೆಗೆದುಕೊಳ್ಳೋಣ, ಮಿಕ್ಕದ್ದು ಬಿಟ್ಟುಬಿಡೋಣ

ಮಾಡುವ ಕಾಯಕ ಸಾಕಷ್ಟಿದೆ
ಮೊಬೈಲ್ ಅನ್ನು ಪ್ರೀತಿಸಿ
ಆದರೆ, ಅದೇ ನಿರಂತರ
ಪ್ರೇಮಿಯಾಗದಿರಲಿ.

ಮೊಬೈಲ್ನಿಂದ
ಕಟ್ಟಿಕೊಳ್ಳಿ ಬದುಕು.
ಒಮ್ಮೆ ದೂಡಿಬಿಡಿ
ಕೆಟ್ಟ ವಿಚಾರದ ಸರಕು

ರೀಲ್ಸ್ ಬೇಕಾ?
ರಿಯಲ್ ಬೇಕಾ?
ಆಯ್ಕೆ ಮಾಡಿದರೆ
ನಮ್ಮದೇ ಸುಂದರ ಬದುಕು.

***

ಪುಣ್ಯೇವೋ... ಗಾಚಾರವೋ...

– ಟಿ.ಎಸ್. ಶ್ರವಣಕುಮಾರಿ

ನಮ್ಮ ಪದ್ಮ ಬರಿಯ ಮನೆಕೆಲಸದಾಕೆಯಲ್ಲ; ಒಂದರ್ಥದಲ್ಲಿ ನಮ್ಮ ಮನೆಯ ಕಾರ್ಯಕಾರಿ ಮಂಡಲಿಯ ಮುಖ್ಯಸ್ಥಳು. ಬೆಳಗ್ಗೆ ಎದುರಂಗಡಿಯಿಂದ ಹಾಲಿನ ಪ್ಯಾಕೆಟ್ಟನ್ನು ಹಿಡಿದುಕೊಂಡೇ ಮನೆಯೊಳಗೆ ಕಾಲಿಡುವ ಅವಳು ಅದನ್ನು ಫ್ರಿಜ್ಜಿನೊಳಗಿರಿಸಿ, ನಿನ್ನೆಯ ವರ್ತಮಾನ ಪತ್ರಿಕೆಯನ್ನು ಹಳೆಯ ಪೇಪರಿನ ಸ್ಥಾನಕ್ಕೆ ಸರಿಸಿ, ನಿನ್ನೆ ಒಣ ಹಾಕಿದ ಬಟ್ಟೆಗಳನ್ನ ಎಳೆದುಕೊಂಡು ಬಂದು, ಕೈಯಲ್ಲಿ ಪೊರಕೆ ಹಿಡಿದಳೆಂದರೆ, ಮುಂದಿನ ಸುಮಾರು ಎರಡು ಗಂಟೆಗಳ ಕಾಲ ಅವಳ ನಿರಂತರ ಕಾರ್ಯಾಚರಣೆ ನಡೆಯುತ್ತಿರುತ್ತದೆ.

ಅಷ್ಟು ಸಮಯದಲ್ಲಿ ಕಡೆಪಕ್ಷ ಅವಳ ನಾಮದ ಒಂದು ಅಷ್ಟೋತ್ತರವಾದರೂ ನಡೆದಿರುತ್ತದೆ ನಮ್ಮಿಬ್ಬರಿಂದ. 'ಪದ್ಮಾ ಇದನ್ನಲ್ಲಿ ಎತ್ತಿಡು'; 'ಪದ್ಮಾ ರೂಮಿನಲ್ಲಿರೋ ಅದನ್ನು ತೊಗೊಂಡ್ಬಾ'; 'ಫ್ರಿಜ್‌ನಲ್ಲಿರೋ ಆ ತರಕಾರಿ ತೆಕ್ಕೊಡು'; 'ಅರ್ಜೆಂಟಾಗಿ ಮುಗುಚೋ ಕೈ, ಬಾಣಲಿ ತೊಳ್ಕೊಡು'; 'ಇವತ್ತು ತೆಂಗಿನಕಾಯಿ ತುರೀಬೇಕು'; 'ಇಸ್ತ್ರಿ ಅಂಗಡಿ ತೆಗೆದಿದ್ಯಾ ನೋಡು'; 'ಬೀದೀಲಿ ಕೊತ್ತಂಬರೀಸೊಪ್ಪು ಬರ್‍ತಿರೋ ಹಾಗಿದೆ, ನಾಟಿ ಸೊಪ್ಪಾದ್ರೆ ಒಂದು ಕಟ್ಟು ತೊಗೋ, ಅವ್ನು ಐವತ್ತು ಹೇಳಿದ್ರೆ ನಲವತ್ತಕ್ಕೆ ಕೇಳು' ಎಂದು ಚೌಕಾಸಿಯ ಬಾಬತ್ತನ್ನೂ ಅವಳಿಗೇ ಬಿಡುವುದೇ... ಹೀಗೆ ನಾವಿಬ್ಬರೂ ಹೇಳದಿರುವ ಕೆಲಸವೇ ಇಲ್ಲವೆನ್ನಿ. ಇಂತಹ ಸಣ್ಣಪುಟ್ಟ ಕೆಲಸಗಳಿಗೆ ನಮ್ಮ ಮನೆಯಲ್ಲಿ ಚಿಕ್ಕಪುಟ್ಟ ಮಕ್ಕಳ್ಯಾರೂ ಇಲ್ಲದಿರುವುದರಿಂದ, ಈ ವ್ಯವಸ್ಥೆಗೆ ಹದಿನೈದು ವರ್ಷದಿಂದ ಒಗ್ಗಿಹೋಗಿರುವ ಅವಳೂ 'ಹೂ ಸಾ', 'ಆಯ್ತಕ್ಕ' ಎನ್ನುತ್ತಾ ಗೊಣಗದೆ ಮಾಡುತ್ತಿರುತ್ತಾಳೆ.

ಎಷ್ಟೋ ಬಾರಿ ಯಾವುದಾದರೂ ವಸ್ತುವನ್ನು ಒಂದು ಕಡೆ ಇರಿಸಿದಾಗ ಅವಳಿಗೆ ತೋರಿಸಿ, "ನೋಡು, ಈ ಮಣೇನ ಮೆಟ್ಟಿಲ ಕೆಳಗಿನ ಗೂಡಿನ ಮೂಲೇಲಿ ಇಟ್ಟಿರು. ಕೇಳ್ದಾಗ ನೀನೇ ಜ್ಞಾಪಿಸಿಕೊಂಡು ತಂದುಕೊಡ್ಬೇಕು" ಎಂತಲೋ, "ಅವತ್ತು ಆ ದೊಡ್ಡ ಕುಕರ್‌ನ ಎಲ್ಲಿಟ್ಟಿದ್ದೆ?" ಎಂದೋ ಕೇಳಿದಾಗ ತಂದುಕೊಡುವುದು ಅವಳ ಜವಾಬ್ದಾರಿಯೇ. ಎಷ್ಟೋ ಹಳೆಯ ಸಾಮಾನುಗಳನ್ನು "ಇದ್ನ ನೀವು ಉಪ್ಯೋಗ್ಸದೇ ಇಲ್ಲ; ಆಚೆಗೆತ್ತಾಕ್ಬಿಡ್ತೀನಿ" ಎಂದು ಅವುಗಳ ನಿರ್ಗಮನದ ತೀರ್ಮಾನವನ್ನೂ ಧಾರಾಳವಾಗಿ ತೆಗೆದುಕೊಳ್ಳುವುದೂ ಅವಳೇ. ಸೊಪ್ಪು ತೆಗೆದುಕೊಂಡಾಗ ಅದನ್ನು ಸೋಸಿಕೊಡುವ, ಅವರೇಕಾಯಿ ಇಂಥವನ್ನು ಮನೆಗೆ ತೆಗೆದುಕೊಂಡು ಹೋಗಿ ಬಿಡಿಸಿಕೊಂಡು ತರುವ... ಇಂತಹ ತರಹೇವಾರಿ ಕೆಲಸಗಳನ್ನು ಇವಳಿಂದ ಮಾಡಿಸಿಕೊಂಡು ಅಭ್ಯಾಸವಾದ ನಮಗೆ ಇವಳೇನಾದರೂ ನಾಲ್ಕು ದಿನ ರಜೆ ಹಾಕಿ, ಹಂಗಾಮಿಯಾಗಿ ಮೇಲಿನ ಮನೆಯ ಕೆಲಸದವಳು ಬಂದರೆ ನಮ್ಮ ಗೋಳು ಹೇಳತೀರದು. ಇವಳ ಬರುವಿಗಾಗಿ ಜಾತಕಪಕ್ಷಿಯಂತೆ ಕಾಯುತ್ತಿರುತ್ತೇವೆ.

ದಿನವೂ ಅವಳ ಬೆಳಗಿನ ತಿಂಡಿ ನಮ್ಮ ಮನೆಯಲ್ಲೇ. ಅವಳು ರಜೆ ಹಾಕಿದ ದಿನದಲ್ಲಿ ನಮ್ಮ ಮನಃಸ್ಥಿತಿ 'ಇವತ್ತು ಪದ್ಮಾನೂ ಇಲ್ಲ; ಏನೋ ಒಂದು ಮಾಡಿಕೊಂಡ್ರೆ ಆಯ್ತು' ಎಂದು ದಿನವೂ ಅವಳ ಸಲುವಾಗೇ ತಿಂಡಿ ಮಾಡುತ್ತೇವೇನೋ ಅನ್ನುವ ಹಾಗಿರುತ್ತದೆ. ದೋಸೆ ಹಾಕುತ್ತಿರುವಾಗ 'ತಟ್ಟೆ ತೊಗೋ, ಬಿಸಿಬಿಸಿಯಾಗಿ ತಿನ್ನು; ಇನ್ನೂ ಒಂದು ಹಾಕ್ಲಾ' ಎನ್ನುತ್ತಾ ಮನೆಯವರಿಗೆ ಅಕ್ಕರೆಯಿಂದ ಬಡಿಸಿದಂತೆಯೇ ಇರುತ್ತದೆ. ನಾವು ತಿಂಗಳಾನುಗಟ್ಟಲೇ ಹೊರಹೋದಾಗಲೂ ಅವಳ ಸಂಬಳವನ್ನು ಮಾತ್ರಾ ತಪ್ಪಿಸದೆ ತಲುಪಿಸಿಬಿಡುತ್ತೇವೆ. ಅವಳು ಸಂಬಳವನ್ನು ಹೆಚ್ಚುಮಾಡಲು ಬೇಡಿಕೆ ಇಡುವಂತಹ ಸಂದರ್ಭ ಬಂದೇ ಇಲ್ಲ; ನಾವೇ ವರ್ಷಕ್ಕೊಮ್ಮೆ ಹೆಚ್ಚು ಮಾಡಿಬಿಡುತ್ತೇವೆ. ಅವಳ ಮನೆಯಲ್ಲಿ ಖಾಯಿಲೆಯೋ ಮತ್ತೊಂದೋ ಹೆಚ್ಚಿನ ಖರ್ಚು ಬಂದಾಗ 'ದುಡ್ಡೇನಾದ್ರೂ ಬೇಕಾಗಿತ್ತಾ?' ಎಂದು ನಾವೇ ಕೇಳಿ, ಕೊಟ್ಟು, ನಂತರ ಎಷ್ಟೋ ತಿಂಗಳು ಸಂಬಳದಲ್ಲಿ ಹಿಡಿದುಕೊಳ್ಳುವುದೂ, ಕೆಲವೊಮ್ಮೆ ಹಾಗೆಯೇ ಬಿಟ್ಟುಬಿಡುವುದೂ ಇದೆ. ಒಟ್ಟಿನಲ್ಲಿ ನಾವು ಹಿರಿಯರೆಂಬ ಗೌರವವನ್ನು ಅವಳೂ ಇಟ್ಟುಕೊಂಡಿದ್ದಾಳೆ; ಅವಳೂ ಮನೆಯ ಸದಸ್ಯಳೆಂಬ ಪ್ರೀತಿ, ಅಭಿಮಾನವನ್ನು ನಾವೂ ಇಟ್ಟುಕೊಂಡಿದ್ದೇವೆನ್ನಿ.

ಇಂಥಾ ನಮ್ಮ ಪದ್ಮನ ಮುಖ, ಕೆನ್ನೆ, ಮೈ ಕೈ ಅವಳ ಗಂಡನ 'ದಯ'ದಿಂದ ಆಗಾಗ ಊದಿಕೊಳ್ಳುವುದು, ಗಾಯವಾಗುವುದು ಇದ್ದದ್ದೇ. ಮೊದಲೆಲ್ಲಾ ತುಂಬಾ ಆತಂಕದಿಂದ ವಿಚಾರಿಸಿಕೊಳ್ಳುತ್ತಿದ್ದೆ. ಅವಳೋ ದಿವ್ಯ ನಿರ್ಲಿಪ್ತಿಯಿಂದ "ಅಯ್ಯೋ, ಇದ್ಯಲ್ಲಾ ನನ್ನೆಜ್ಮಾನ, ಕುಡ್ಯಕ್ಕೆ ಕಾಸ್ಕೊಡ್ಲಿಲ್ಲ ಅಂತ ವಡ್ದದೆ" ಎಂದನ್ನುತ್ತಾ ಮಾಮೂಲಿನಂತೆ ಕೆಲಸದಲ್ಲಿ ತೊಡಗಿಕೊಂಡರೆ, ನನಗೋ ಇವಳ ಮೇಲೆ ಮರುಕ, ಅವನ ಮೇಲೆ ಉರಿ, ಒಟ್ಟಿಗೇ ಉಂಟಾಗುತ್ತಿತ್ತು. "ನೀನು ದಬಾಯ್ಸೋದಲ್ವಾ; ಹೊಡಸ್ಕೊಂಡು ಬಂದಿದೀಯಲ್ಲ. ನೀನೂ ಏನಾರ ಒಂದನ್ನ ಕೈಗೆ ತೊಗೋಬೇಡ್ವಾ. ನೀನು ಹೊಡುಸ್ಕೊಳ್ತಿದ್ರೆ ಅವ್ನು ಹೊಡೀತಾನೇ ಇರ್‍ತಾನೆ" ಎಂದು ನಾನು ಉಪದೇಶ ಮಾಡಿದಾಗ "ಅಯ್ಯಾ ಆ ರಾಕ್ಷಸನ್ನ ಏನ್ಮಾಡಾಕ್ಕಾದ್ದು. ಎದ್ರುಬಿದ್ರೆ ಇನ್ನಾಲ್ಕು ವದೆ ಎಚ್ಚು ಅಷ್ಟೇಯ" ಎಂದಿದ್ದಳು ಏನೂ ಪ್ರಯೋಜನವಿಲ್ಲವೆಂಬಂತೆ. "ಜೋರಾಗಿ ಕೂಕ್ಕೊಂಡು ಮನೆಯಿಂದ ಹೊರಗೋಡಿ ಬರೋದ್ ತಾನೇ. ಅಕ್ಕಪಕ್ಕದವರಾದ್ರೂ ಸಹಾಯಕ್ಕೆ ಬಂದಿರೋರು" ಎಂದಾಗ, "ಮನೆ ಮಾತು ವಠಾರಕ್ಕೆ ತರಾಕಾಯ್ತದಾ? ಯಾರ್ಬಂದಾರು? ಗಂಡ ಎಂಡ್ರ ಕತೆ ಅನ್ನಾಕ್ತಾರಷ್ಟೆ. ನಾನೇನಾರಾ ವಂದ್ಮಾತಾಡಿದ್ರೆ ಮನೆಬಿಟ್ಟೋಗೂಂತ ವೊರ್‍ಗೆ ತಳ್ಳಿ ಬಾಗ್ಲಿಕ್ಕತಾನೆ ಅಷ್ಟೇಯಾ. ರಾತ್ರಿಯೆಲ್ಲಾ ಬೀದೀಲ್ಬಿದ್ದು ಸಾಯಕ್ಕಾದ್ದಾ" ಎಂದಾಗ ಅವಳ ಬಗ್ಗೆ ಎಷ್ಟೇ ಕನಿಕರವಿದ್ದರೂ 'ನಮ್ಮನೇಲಿ ಬಂದಿರು' ಅನ್ನಕ್ಕಾಗತ್ಯೇ? 'ಅವರವರ ತಲೆಗೆ ಅವರವರದೇ ಕೈ', 'ಅವರವರ ಸಂಸಾರದ ತಾಪತ್ರಯ ಅವರವರದ್ದೇ' ಎಂದು ನೊಂದುಕೊಂಡು ಸುಮ್ಮನಾದದ್ದಿದೆ. ಆಮೇಲೆ ಹಾಗೆ ಗಮನಕ್ಕೆ ಬಂದಾಗಲೆಲ್ಲಾ ನೋವು ನಿವಾರಕ ಗುಳಿಗೆಯನ್ನೋ, ನಂಜುಹಾರಕ ಮುಲಾಮನ್ನೋ ಕೊಡುತ್ತಾ ಒಂದೆರೆಡು ಒಳ್ಳೆಯ ಮಾತಾಡುವ ಅಭ್ಯಾಸ ರೂಢಿಸಿಕೊಂಡಿದ್ದೇನೆ.

ಇಂತಹ ನಮ್ಮ ಪದ್ಮನ ಗಂಡ ಸಿದ್ದರಾಜು ಮೊದಲು ಎಲ್ಲೋ ಡ್ರೈವರ್ ಕೆಲಸ ಮಾಡುತ್ತಿದ್ದವನು ಇತ್ತೀಚೆಗೆ 'ಮಾಲೀಕರೇನೋ ಅಂದರು' ಎಂದು ಕೆಲಸ ಬಿಟ್ಟು ಸ್ವಂತ ಆಟೋ ಇಟ್ಟುಕೊಂಡು ಓಡಿಸುತ್ತಿದ್ದಾನೆ. ಆಗೀಗ ನಮಗೆ ಅವಶ್ಯಕತೆಯಿದ್ದಾಗ ನಮ್ಮ ಕಾರಿನ ಚಾಲಕನಾಗಿಯೋ, ಇಲ್ಲವೇ ತನ್ನ ಆಟೋವನ್ನೇ ತೆಗೆದುಕೊಂಡೋ ಬರುತ್ತಾನೆ. ಬಲು ಮಾತುಗಾರ. ನಮ್ಮೊಂದಿಗೆ ತುಂಬಾ ಗೌರವದಿಂದಲೇ ವ್ಯವಹರಿಸುತ್ತಾನೆ. ಇಂಥವನು ಪದ್ಮನ್ನ ಆ ಪರಿ ಗೋಳು ಹೊಯ್ಕೊಳ್ತಾನಲ್ಲ ಎಂದು ಅಚ್ಚರಿಪಡುವಂತೆಯೇ ಇರುತ್ತಾನೆ. ವಾಹನ ಹತ್ತಿದಾಗಿನಿಂದಲೂ ಏನೇನೋ ಕತೆಗಳನ್ನು ಹೇಳುತ್ತಲೇ ಇರುತ್ತಾನೆ.

ಇಂಥದೇ ಒಂದು ದಿನ ತನ್ನ ಹೆಂಡತಿ, ಮಕ್ಕಳ ಬಗ್ಗೆಯೂ ಹೇಳುತ್ತಿದ್ದ. "ಎಣ್ಣು ಮಕ್ಳಿಬ್ರೂ ಮುತ್ನಂತೋರು. ಎಲ್ಲಾ ಕೆಲ್ಸದಾಗೂ ಪಸ್ಟು. ನಂಪದ್ಮ ಅಸ್ಟು ಸಂದಾಗಿ ಸಾಕವ್ಳೆ. ಅವ್ಳೇನು ಕಡ್ಮೆ ಕಷ್ಟಪಟ್ಟವ್ಳಾ? ಅವ್ಳಪ್ಪ ಇನ್ನೊಂದು ಎಂಡ್ರನ್ ತಂದ್ನಾ. ಚಿಗವ್ವನ್ ಕೈಲಿ ಪಡ್ಬಾರದ ಪಾಡು ಪಟ್ಟವ್ಳೆ. ಅಂಗಂದ್ರೂ ಚಿಗವ್ವ, ಅವ್ಳ ಮಗ, ಮಗ್ಳು ಅಂದ್ರೆ ವದ್ದಾಡ್ತಾಳೆ. ಬಲೇ ಪಿರೂತಿ ಅವ್ರ ಕಂಡ್ರೆ. ಏನು ವಸದು ಕಂಡ್ರೂ ನಮ್ಮ ಚಿಗವ್ವಗೆ, ನನ್ ತಂಗಿಗೆ, ಅವ್ಳ ಮಕ್ಳಿಗೆ, ನನ್ ತಮ್ಮಗೆ, ಅವ್ನ ಎಡ್ತೀಗೆ ಅಂತ ತಗಂಡೋಗಿ ತಗಂಡೋಗಿ ಕೊಡ್ತಲೇ ಇರ್‍ತಾಳೆ. ಅದೇ ಪ್ರೀತಿ ಅವ್ರು ತೋರ್‍ಸಾಕಿಲ್ವಲ್ಲಾಂತ ನಂಗೆ ಶಾನೆ ನೋವು. ಅವ್ಳು ಒಂದ್ಸಲಕ್ಕೂ ಅಂಗನ್ಕಳದೇ ಇಲ್ಲ. ಏನೋ ಕಣಕ್ಕಾ, ವಟ್ನಾಗೆ ಅವ್ಳು ನನ್ ಎಡ್ತಿಯಾಗಿ ಸಿಕ್ಕಿದ್ದು ನನ್ನ ಪುಣ್ಯೇವು. ನಮ್ನ ಅಷ್ಟು ಸಂದಾಗಿ ನೋಡ್ಕತಾಳೆ ಎಂದ. 'ಅಬ್ಬಾ! ಇವ್ನು ಶುದ್ಧ ರಾಕ್ಷಸ ಅಂದುಕೊಂಡಿದ್ದೆ. ಇವನ ಮನಸ್ನಲ್ಲೂ ಪದ್ಮನ ಬಗ್ಗೆ ಇಷ್ಟೊಂದು ಅನುರಾಗ, ಅನುಕಂಪವಿದೆಯಲ್ಲ!' ಎಂದು ಖುಷಿಯಾಯಿತು.

ಮರುದಿನ ಮಾಮೂಲಿನಂತೆ ಕೆಲಸಕ್ಕೆ ಬಂದ ಪದ್ಮನ್ನ, "ನೋಡು ಪದ್ಮ, ನಿನ್ನೆ ನಿನ್ಗಂಡ 'ಪದ್ಮನಂತ ಎಡ್ತಿ ಸಿಕ್ಕದ್ದು ನನ್ ಪುಣ್ಯೇವು' ಅಂದ. ನಿನ್ನ ಬಗ್ಗೆ ಎಷ್ಟೊಂದು ಪ್ರೀತಿ, ಅನುಕಂಪ ತೋರಿಸ್ದ. ಅವ್ನೂ ಮನುಷ್ಯಾನೇ ಅಲ್ವಾ ಅನ್ನಿಸ್ತು. ನಂಗೆ ತುಂಬಾ ಖುಷಿಯಾಯ್ತು. ನಿನ್ನ, ಮಕ್ಳ ಬಗ್ಗೆ ತುಂಬಾ ಒಳ್ಳೊಳ್ಳೇ ಮಾತಾಡ್ದ" ಅಂದೆ ಸಂತೋಷದಿಂದ. "ಅಯ್ಯೋ ಅಕ್ಕಾ, ಗಾಣಗಿತ್ತಿ ಅಯ್ಯೋಂದ್ರೆ ನೆತ್ತಿ ತಂಪಾದದ? ನಾನು ಒಳ್ಳೇಳು ಅನ್ದೇ ಏನ್ಮಾಡ್ತಾನೆ. ಬಾಯ್ಮುಚ್ಕಂಡು ವದೆ ತಿನ್ನಾಕಿಲ್ವಾ; ಕೇಳ್ದಾಗೆಲ್ಲಾ ಕುಡ್ಯಕ್ಕೆ ಕಾಸು ಕೊಡಾಕಿಲ್ವಾ. ಕೊಡ್ದಿದ್ರೆ ಬಡ್ದಾದ್ರೂ ಕಿತ್ಕಾತಾನೇಳಿ. ಮನೆ ವಿಸ್ಯ ಬೀದೀಗ್ ಬರ್‍ದಂಗೆ ತಗ್ಗಿಬಗ್ಗಿ ಇದೀನಲ್ವಾ. ನಾನು ಅವ್ನಿಗೆ ಸಿಕ್ಕಿದ್ದು ಅವ್ನ ಪುಣ್ಯೇವು ಅಂದ್ರೆ, ನಂಗೆ ಅವ್ನು ಸಿಕ್ಕಿದ್ದು ನನ್ನ ಗಾಚಾರವಲ್ವಾ?! ಅವ್ನ ಪ್ರೀತಿ ಮಾತೂ ಬೇಡ, ಮೈ ಮುರ್‍ಯೋ ವದೆಗ್ಳೂ ಬೇಡ. ಎಂಗೋ ಈ ಜನ್ಮ ನೀಸಿಬಿಟ್ರೆ ಸಾಕಾಗದೆ" ಎನ್ನುತ್ತಾ ಗುಡಿಸಲು ಪೊರಕೆ ತೆಗೆದುಕೊಂಡಾಗ 'ಅದೂ ನಿಜವೇ' ಅನ್ನಿಸಿ ಮನ ಖಿನ್ನವಾಯಿತು.

***

ಮಲೆನಾಡಿನ ಸತ್ಯಘಟನೆಯೊಂದರ ಚಿತ್ರಣ

ಹಿರಿದ ಕತ್ತಿ

– ನಾಗರತ್ನ ಸಾಲಗಾಮೆ

ಹಾಲುಗೆನ್ನೆಯ ಹಸಿಯ ಅರಿಸಿನದ ಹೊಸ ಬಣ್ಣ
ಬಿಗಿದ ತಾಳಿಯ ಕೊರಳ ಹಾರ, ಸೀರೆಯ ಭಾರ
ಕಟ್ಟಳೆಯ ನಾಚಿಕೆಯು. ತಲೆ ಬಾಗಿ ಹುಡುಗುತನ.
ನಾಚುತಲೆ ನಕ್ಕಿದ್ದು, ನಕ್ಕು ಮೈ ಅರಳಿದ್ದು
ಊರಿಗದುವೆ ಹಬ್ಬ ಒಂದು ವಾರದ ಕಬ್ಬ

ಹರಕೆಯನ್ನೊಪ್ಪಿಸಲು ಜೊತೆಗೂಡಿ ಬಂಧುಗಳು
ತುಂಬು ಹೊಳೆಯಲಿ ಒಲೆದು ದೋಣಿ ಪಯಣದ ದಾರಿ
ಕನಸು ಕಟ್ಟುವ ವಯಸೇ?
ಮುಚ್ಚಿಟ್ಟುಕೊಂಡ ದುಂಡನೆಯ ನುಣುಪು ಕಲ್ಲು.
ಬುತ್ತಿಗಾಗುವುದೆಂದು ತಂದ ಉಪ್ಪಿನ ಕಾಯಿ.

ನುಗ್ಗಿತೋ ಕಳ್ಳಹೊಳೆ ತೋಲ ತಪ್ಪಿಸಿ ನಾವೆ
ರೂಹುಗೊಳ್ಳದ ಮುನ್ನ ಕೊಚ್ಚಿಹೋದ ಕನಸು.
ಕಣ್ಣು ಬಿಡಲಾಗದೊಲು ಸಿಡಿದ ಉಪ್ಪಿನ ಕಾಯಿ
ಚೀತ್ಕಾರ! ಛೀಕಾರ! ಶಾಪದ ಪ್ರತಾಪ.
ತಣ್ಣಗಾದಾಗೆಲ್ಲ ಬಣ್ಣ ಕರಗಿತ್ತು.
ಸುಣ್ಣ ಸುಡುತಿತ್ತು.

ಕೆಟ್ಟ ಕಾಲಿನ ಹುಡುಗಿ
ಮುಟ್ಟಿ ಆದರಿಸುವರೇ?
ಸಂಪ್ರದಾಯದ ಮಂದಿ. ಕಣ್ಣು ಕಟ್ಟಿದ ಹುಚ್ಚು ಕುದುರೆ.
ಹುಟ್ಟು ಕೊಟ್ಟಿದ್ದನ್ನು
ಕಿತ್ತೆಸೆಯೆ ಹೆತ್ತವರ ಕರುಳಿಗೆ ಧಗಧಗಿಪ ಕೊಳ್ಳಿ
ಬಾಲೆಗೋ ಜೀವಂತ ತೊಗಲ ಸುಲಿತ.

ನೆನಪಿಗುಳಿದದ್ದೇನು ಮುಳ್ಳು ಕಂಟಿಗೆ
ಸಿಕ್ಕ ಪಟ್ಟೆಯಂಚಿನ ಪಂಚೆ. ಜರಿಯ ಶಲ್ಯ.

... ೨ ...

.

- ೨ -

ನಡೆಯಿತೆಲ್ಲ ಶ್ರಾದ್ಧ. ಕ್ರಮಬದ್ಧ.
ಕೆಂಪು ಸೀರೆಯ ಜೊತೆಗೆ ಹುಗಿದಿಟ್ಟ ಕನಸುಗಳು
ತಲೆತುಂಬ ಹೊದ್ದದ್ದು ಕಣ್ಣೀರ ಸೆರಗು.
ಬಿಸಿಯುಸಿರ ಕಾವಿಗೆ ಉದ್ದವಾಯಿತು ರಸ್ತೆ
ಬೆಂಕಿಗೊಡ್ಡಿದ ಕಬ್ಬಿಣದ ಪಟ್ಟಿ.

ತೇರುಗಳು ಉರುಳಿದವು. ಸಂಭ್ರಮವ ಕೆದರಿದವು
ವೇದ ಮಂತ್ರದ ಘೋಷ. ಪಂಚಾಮೃತ ಸ್ನಾನ

ಇಲ್ಲಿವಳ ಕಣ್ಣೀರ ಸತತ ಅಭಿಷೇಕ.
ಸಾವು ತಹ ಬಿಡುಗಡೆಗೆ
ಜಪಿಸುತಿರೆ ಎಡೆಬಿಡದೆ ತಾರಕದ ಮಂತ್ರ
ಮೂಲೆಯಲ್ಲಿನ ಪರಕೆ. ಬೇಕಾಗಿ ಬೇಡಾಗಿ
ಅರೆಯುತಿರೆ ಬೇಯುತಿದೆ ಎಳೆಯ ಜೀವ.
ಚಿಗುರು ಕರ ಗಡುಸಾಯ್ತು. ಕಲ್ಲಾಯ್ತು ಹೂವ ಹೃದಯ.
ಗೋಡೆ ಗೋಡೆಗೆ ಬಡಿವ ಕಣ್ಣು ಕಿತ್ತ ಹಕ್ಕಿ
ಕಟ್ಟಿದ್ದ ಸೆರೆಯೊಳಗೆ ಸುಟ್ಟ ಗಾಯದ ಮರಿಯು
ತೂತು ಪಾತ್ರೆಯ ನೀರ ರೆಕ್ಕೆ ಸೀಳಿದ ಮೀನು.
ರೋಮಾಂಚ ಕಾಣದಲೆ ನಡುಗಿ ಬೆದರಿತು ಮೈಯಿ
ನಲ್ಲನಾಗದವ ಗಂಡನಾಗಿಯೇ ಹೋಗಿ ಸೆಳೆದೊಯ್ದುಬಿಟ್ಟ

* *

ಅಲ್ಲತ್ತ ಬಂಡೆಗಪ್ಪಳಿಸುತ್ತ ನೆನಪು ಹಾರಿಸಿ ವರನ
ಸ್ಮೃತಿ ಕಳೆದು ಕೊಚ್ಚಿತ್ತು ಪೂರ.
ಅದಾವುದೊ ಅಜ್ಞಾತ ತೀರ.
ಕರಗಿ ಎತ್ತಿದ ಸಾಧು. ಎಲ್ಲವನು ಮರೆತವಗೆ
ಹೆಸರಿಟ್ಟು ಸಾಕಿದ್ದ ಹತ್ತಾರು ವರುಷ ವರುಷ.

ಇಲ್ಲಿವಳ ಕಣ್ಣೀರೇ ಘನವಾಗಿ ಶಿಲೆಯಾಗಿ ಕಾಲಿನಡಿ
ಸಿಲುಕಿತೆನೆ ಹೊರಳಿತ್ತು ಉರುಳಿಸುತಲವನ ಮತ್ತೆ ಮತ್ತೆ
ಉರುಳುತಲೆ ಹೊರಳಿತ್ತು ಶೋಭನದ ಸಿಹಿ ನೆನಪು
ಮಾಲೆ ಸೂಡಿದ ವಧುವ ಕಪ್ಪು ರೆಪ್ಪೆಯ ಹೊಳಪು.

ಬೆರಗಾಗಿ ಊರ ಜನ ಸುತ್ತ ನೆರೆದುದು ಸಂತೆ.
ಬೆಂದವಳ ಎದೆ ಕೋಡಿಗಾವ ಕಟ್ಟು?
ಜವನ ಬಾಯಿಂದೆಳೆದು ತಂದ ಸತಿ ಸಾವಿತ್ರಿ
ಕೊಂಡಾಡಿದರು ಅತ್ತೆ ಮಾವ.

... ೩ ...

– ೩ –

ಕಿತ್ತ ಮಂಗಳವನ್ನು ಮುತ್ತಿಟ್ಟು ಪೂಜಿಸುತ
ಕೇಳಿದೆಯಾ ತಂದೆ ಎನ್ನಯಾ ಮೊರೆ ಕಡೆಗೂ.
ನಿನ್ನ ಕರುಣೆಗೆ ದೇವ ಕೊಡಲೇನ ಬಳಿ ಇಲ್ಲ.
ಎದೆಯ ಕಂಬನಿಯದುವೆ
ಅಭಿಷೇಕ ಜಲ, ಮಂತ್ರ ಪುಷ್ಪ,
ಅಲಂಕಾರ, ನೈವೇದ್ಯ,
ಕೃತಜ್ಞತೆಯ ಧೂಪ ದೀಪ.

ಕಣ್ಣೆದಿರು ಕುಲದೈವ
ಒಳಗೆ ಅಚ್ಟೊತ್ತಿರದ ಆರಾಧ್ಯ ಮೂರ್ತಿ.
ಕಳೆದ ತಾಸಿನ ಲೆಕ್ಕ
ಇಟ್ಟವರು ಯಾರು?


ಕೂಡಿತ್ತು ಧರ್ಮ ಸಭೆ: ಮುಖಕಳೆದ ಮೇಲ್ಮೈದೆ
ಹತ್ತಾರು ವರುಷಗಳು ಶ್ರಾದ್ಧ ಮಾಡಿಸಿಕೊಂಡ
ಮೇಲೇನು ಉಳಿದದ್ದು?
ಯಾವ ಸಂಬಂಧ? ಪ್ರೇತ ರೂಪನು ನೀನು
ವೈಧವ್ಯ ನೀಗಲೇನು? ಬಂದ ದಾರಿಗೆ ಮರಳು
ತಂದೆ ತಾಯಿಗಳಿಲ್ಲ. ಸತಿ ಬಂಧು ಬಳಗ.

ಬೇಡಿದರು ಕರುಳಿರಿಯುವೊಲು.
ಕಣ್ಣುಗಳು ನೆತ್ತರನೆ ಸುರಿವವೊಲು,
ಕರುಳ ಕೊಯ್ದಿಟ್ಟರೂ, ತೊಗಲ ಸುಲಿದಿಟ್ಟರೂ
ಕುರುಡು ಧರ್ಮದ ಕತ್ತಿ ತುಂಡರಿಸಿತಿಬ್ಬರನು
ಇವನೊಳಗೆ ಬರದಂತೆ. ಹೊರಗವಳು ಹೋಗದಂತೆ
ಜಡಿದುಬಿಟ್ಟರು ಕದವ, ಕುಲಧರ್ಮ ರಕ್ಷಕರು.

***

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 234



ಅಧ್ಯಕ್ಷೀಯ ಅನಿಸಿಕೆಗಳು

– ಜಿ.ವಿ. ಅರುಣ

234ನೇ ನೋಡಿಯೋ ಸಾಹಿತ್ಯ ದಾಸೋಹದ ಎಲ್ಲ ಪ್ರಸ್ತುತಿಗಳನ್ನು ಓದಿ, ಕೇಳಿ ನನಗೆ ಸಂತೋಷವಾಗಿದೆ. ಅವುಗಳ ಬಗ್ಗೆ ನನ್ನ ವಿಶ್ಲೇಷಣೆಗಳನ್ನು ಈ ಕೆಳಗೆ ನಿಮ್ಮ ಅವಗಾಹನೆಗೆ ನೀಡುತ್ತಿದ್ದೇನೆ.

ಈ ನೋಡಿಯೋ ಸಾಹಿತ್ಯ ದಾಸೋಹದ ಅಧ್ಯಕ್ಷನಾಗಿ ನಾನೊಂದು ಹೊಸ ಪರಿಕಲ್ಪನೆಗೆ ಕೈ ಹಾಕಿದೆ. ನನಗೆ ಮೊದಲು ಬಂದ ಅನೇಕ ಲೇಖನಗಳನ್ನು ಒಮ್ಮೆ ಓದಿದೆ. ಓದುಗನಾಗಿ ಆಗ ನನಗೆ ಬಂದ ಕೆಲವು ಪ್ರಶ್ನೆಗಳನ್ನು ಹಾಗೂ ವ್ಯಾಕರಣ, ಕಾಗುಣಿತ, ವಿರಾಮ ಚಿಹ್ನೆಗಳ ದೋಷ ಇರಬಹುದು ಎಂದು ಗುರುತಿಸಿದ್ದನ್ನು ಆಯಾ ಲೇಖಕರ ಗಮನಕ್ಕೆ ತಂದೆ. ಸಹೃದಯರಾದ ಅವರು (ಒಬ್ಬರನ್ನು ಬಿಟ್ಟು) ಅವುಗಳನ್ನು ಗಮನಿಸಿ ತಮ್ಮ ಬರಹವನ್ನು ಮತ್ತೊಮ್ಮೆ ತಿದ್ದಿ ನನಗೆ ಕಳುಹಿಸಿದರು. ಆ ಎಲ್ಲ ಲೇಖನಗಳು ಉತ್ತಮ ಮಟ್ಟದಲ್ಲಿ ಪ್ರಸ್ತುತಿಗೊಂಡವು ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ಅವರಿಗೆಲ್ಲ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ನನ್ನ ಈ ಪರಿಕಲ್ಪನೆಯು ಉತ್ತಮ ಫಲ ನೀಡಿತು ಎಂಬ ತೃಪ್ತಿ ನನಗೂ ಇದೆ. ಶ್ರೀಮತಿ ರತ್ನಾ ಮೂರ್ತಿ ಅವರು ಮೊದಲು ನನಗೆ ಅವರ ಕವನವನ್ನು ಕಳುಹಿಸಿದ್ದರು. ಆದರೆ ಅದನ್ನು ಪ್ರಸ್ತುತಿ ಮಾಡಲು ಅವರಿಗೆ ಸಾಧ್ಯವಾಗಿರಲಿಲ್ಲ. ಆ ಒಳ್ಳೆಯ ಕವನದ ಪ್ರಾಮುಖ್ಯತೆಯನ್ನು ಉಳಿದವರ ಗಮನಕ್ಕೆ ತರಲು, ನನ್ನ ಅನಿಸಿಕೆಯನ್ನು ಇಲ್ಲಿ ಸೇರಿಸಿದ್ದೇನೆ.

ಶ್ರೀ ಭಗವಾನ್ ಹಾಗೂ ಶ್ರೀಮತಿ ಸುಜಾತ ಅವರ ಪ್ರಸ್ತುತಿಗಳನ್ನು ನಾನು ಪರಿಶೀಲಿಸಲಾಗಲಿಲ್ಲ ಹಾಗಾಗಿ ಅವು ನನ್ನ ವಿಶ್ಲೇಷಣೆಯಲ್ಲಿ ಸೇರಿಲ್ಲ.

ನಮ್ಮ ಲೇಖನಗಳನ್ನು ಓದಿ ನೋಡಿ, ಸರಿಪಡಿಸಿ, ಅತ್ಯಾಕರ್ಷಕವಾದ ಪಿಡಿಎಫ್ ಪುಸ್ತಕವನ್ನಾಗಿ ಸಂಪಾದಿಸಿಕೊಡುವವರು ಶ್ರೀ ಶೃಂಗೇಶ್ವರ ಶರ್ಮ. ಅವರೊಡನೆ ಇದರ ಬಗ್ಗೆ ಹಲವು ಬಾರಿ ಮಾತನಾಡಿದ್ದೇನೆ. ಅವರು ಬೇಜಾರಿನಿಂದ ಪ್ರತಿಬಾರಿಯೂ ಎದುರಿಸಬೇಕಾದ ತೊಂದರೆ ಏನು ಗೊತ್ತೇ? ನಾವು ನಮ್ಮ ಲೇಖನಗಳಲ್ಲಿರುವ ವ್ಯಾಕರಣದ ತಪ್ಪುಗಳನ್ನು, ಕಾಗುಣಿತ ದೋಷಗಳನ್ನು ತಿದ್ದದೆ, ವಿರಾಮ ಚಿಹ್ನೆಗಳನ್ನು ಸೇರಿಸದೆ ಅವರಿಗೆ ಕಳುಹಿಸುವುದು. ಶ್ರೀ ಶರ್ಮರು ಆ ಲೇಖಕರು ತಮ್ಮ ಲೇಖನದಲ್ಲಿ ಬಿಟ್ಟಿರಬಹುದಾದ ತಪ್ಪುಗಳನ್ನು ತಾವೇ ತಿದ್ದಿ, ಒಳ್ಳೆಯ ಪಿಡಿಎಫ್ ಪುಸ್ತಕವನ್ನು ನಮಗೆ ತಯಾರಿಸಿ ಕೊಡುತ್ತಿದ್ದಾರೆ. ಅವರ ಮೇಲೆ ಇಂಥ ತಪ್ಪುಗಳನ್ನು ಹೇರಿ, ಸರಿಪಡಿಸುವ ಕಾಯಕವನ್ನು ನಾವು ಅವರಿಗೆ ನೀಡುವುದು ಅಕ್ಷಮ್ಯ ಅಪರಾಧ. ನಾನು ಪರಿಶೀಲಿಸಿದ ಲೇಖನಗಳಲ್ಲಿ ಕೆಲವನ್ನು ಬಿಟ್ಟು ಉಳಿದ ಎಲ್ಲ ಲೇಖನಗಳಲ್ಲೂ ಒಂದಾದರೂ ಒಂದು ಈ ತಪ್ಪುಗಳು ಇದ್ದವು.

ನನಗೆ ನಿಮ್ಮೆಲ್ಲರ ಲೇಖನಗಳು ಅತ್ಯುತ್ತಮವಾಗಿರಬೇಕು ಎಂಬ ಇಷ್ಟವಿದೆ. ಲೇಖಕರೇ, ನಿಮ್ಮ ಲೇಖನಗಳಲ್ಲಿ ವ್ಯಾಕರಣ, ಕಾಗುಣಿತಗಳನ್ನು ನೀವೇ ತಿದ್ದಿ ಹಾಗೂ ವಿರಾಮ ಚಿಹ್ನೆಗಳನ್ನು ಸರಿಯಾಗಿ ಹಾಕುವುದನ್ನು ನೀವೇ ಕಡ್ಡಾಯಗೊಳಿಸಿಕೊಳ್ಳಿ.

ಇಲ್ಲಿ ಪ್ರಸ್ತುತವಾಗುವ ಲೇಖನಗಳ ಮಟ್ಟ ಹೆಚ್ಚಾಗಲು, ಅತ್ಯುತ್ತಮವಾಗಲು ಬೇಕಾದ ಕೆಲವು ಕ್ರಮಗಳನ್ನು ನಮ್ಮ ಸಂಚಾಲಕರು ಕೈಗೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಅದರ ಅಂತರ್ಗತವಾಗಿ ನಮ್ಮ ಸಸಕಸ ಸಂಚಾಲಕರು ಮೇಲೆ ಹೇಳಿರುವ ವಿಚಾರದ ಬಗ್ಗೆ ಅರ್ಧ ದಿನದ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲು ಯೋಜಿಸಬಹುದು. ಅದಕ್ಕೆ ಸೂಕ್ತ ಮಾರ್ಗದರ್ಶನ ಮಾಡಬಹುದಾದ ಸಂಪನ್ಮೂಲ ವ್ಯಕ್ತಿಗಳು ನಮ್ಮಲ್ಲೇ ಇದ್ದಾರೆ. ಅದರಿಂದ ನಮ್ಮೆಲ್ಲರಿಗೂ ಬಹಳ ಉಪಯೋಗವಾಗುತ್ತದೆ.

ಇದರ ಜೊತೆಗೆ, ನೋಡಿಯೋ ಕಾರ್ಯಕ್ರಮದ ಪ್ರಸ್ತುತಿಗೆ ಇಪ್ಪತ್ತೈದು ದಿನಗಳ ಮೊದಲೇ ಆಹ್ವಾನ ನೀಡಿದರೆ, ಸಂತೆಯ ಹೊತ್ತಿಗೆ ಮೂರು ಮೊಳ ನೇಯುವುದು ತಪ್ಪಬಹುದು ಎಂದು ನನ್ನ ಭಾವನೆ.

ಇಂದಿನ ಪ್ರಸ್ತುತಿಯಲ್ಲಿ ಒಂದು ವಿಶೇಷ ಘಟನೆ ನಡೆದಿದೆ. ಇಬ್ಬರು ನಮ್ಮ ಸಹವರ್ತಿಗಳು ಮೊದಲ ಬಾರಿಗೆ ನೋಡಿಯೋ ಕಾರ್ಯಕ್ರಮದಲ್ಲಿ ತಮ್ಮ ಪ್ರಸ್ತುತಿಗಳನ್ನು ಇಂದು ಸಾದರಪಡಿಸಿದ್ದಾರೆ. ಹಿರಿಯರಾದ ಶ್ರೀಮತಿ ಲೀಲಾ ವಾಸುದೇವ್ ಅವರು ಮಕ್ಕಳ ಕವನಗಳನ್ನು ಹಾಗೂ ಹಿರಿಯ ಲೇಖಕಿ ಶ್ರೀಮತಿ ಗಾಯತ್ರಿ ಮೂರ್ತಿಯವರು ಒಂದು ಲೇಖನವನ್ನು ಪ್ರಸ್ತುತಿ ಮಾಡಿದ್ದಾರೆ. ಅವರಿಬ್ಬರಿಗೂ ಶುಭವನ್ನು ಹಾರೈಸುತ್ತೇನೆ ಮತ್ತು ಇದೇ ರೀತಿ ಮುಂದಿನ ನೋಡಿಯೋ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಎಂದು ಕೋರುತ್ತೇನೆ.

ಶ್ರೀ ಜಿ.ವಿ. ಅರುಣ

ಮೆಕ್ಯಾನಿಕಲ್ ಇಂಜಿನಿಯರಿಂಗ್ ಹಾಗೂ ಎಂ.ಬಿಎ ಪದವೀಧರರು. ಮಿನಿ ನವರತ್ನ ಉದ್ದಿಮೆಯಾದ ಮೆಕಾನ್ ಲಿಮಿಟೆಡ್ ಕಂಪನಿಯಲ್ಲಿ ಉದ್ಯೋಗ. ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತಿ.

ರಾಷ್ಟ್ರೀಯ ಮಹತ್ವದ ಕಬ್ಬಿಣ ಮತ್ತು ಉಕ್ಕು, ತೈಲ ಮತ್ತು ನೈಸರ್ಗಿಕ ಅನಿಲ, ರಕ್ಷಣಾ ಕ್ಷೇತ್ರ, ಮೂಲ ಸೌಕರ್ಯಾಭಿವೃದ್ಧಿ ಸೇರಿದಂತೆ ಅನೇಕ ಪ್ರಮುಖ ವೈವಿಧ್ಯಮಯ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಣೆ. ಹಲವು ಪ್ರಖ್ಯಾತ ಸಿಎಸ್‌ಐಆರ್ ಪ್ರಯೋಗಶಾಲೆಗಳು, ಇಂದಿರಾಗಾಂಧಿ ಅಣುವಿಜ್ಞಾನ ಸಂಶೋಧನಾ ಕೇಂದ್ರ, ಕಲ್ಪಾಕಂ, ಕೊಚ್ಚಿ ಪೋರ್ಟ್ ಟ್ರಸ್ಟ್ ಮುಂತಾದ ಸಂಸ್ಥೆಗಳ ಗುಣಮಟ್ಟ ವ್ಯವಸ್ಥೆಯ ಸ್ಥಾಪನೆಗೆ ಪ್ರಧಾನ ಸಲಹೆಗಾರರಾಗಿ, ಅನೇಕ ಬೃಹತ್ ಕಬ್ಬಿಣ ಮತ್ತು ಉಕ್ಕು ಉತ್ಪಾದನಾ ಸಂಸ್ಥೆಗಳ ಹೊಸ ಯೋಜನೆಗಳಿಗೆ ಮುಖ್ಯ ಯೋಜನಾ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ ಅನುಭವ. ಅವುಗಳಿಗೆ ಸಾಲ ನೀಡಿದ ಬ್ಯಾಂಕುಗಳ ಒಕ್ಕೂಟಕ್ಕೆ ಯೋಜನಾ ಪ್ರಗತಿಯ ಸ್ವತಂತ್ರ ವರದಿಗಾರರಾಗಿ ಕಾರ್ಯನಿರ್ವಹಣೆ. ಕಾರ್ಯನಿಮಿತ್ತ ಹಲವು ರಾಷ್ಟ್ರಗಳಿಗೆ ಭೇಟಿ.

ಸಾಹಿತ್ಯ ಕ್ಷೇತ್ರ: ಹಲವು ಕನ್ನಡ ದಿನಪತ್ರಿಕೆಗಳು, ನಿಯತಕಾಲಿಕಗಳು, ವಿಶೇಷಾಂಕಗಳಲ್ಲಿ ಇವರ ಸಣ್ಣ ಕತೆ, ಪ್ರಬಂಧ, ವೈಜ್ಞಾನಿಕ ಲೇಖನ, ಕವಿತೆ, ಮಕ್ಕಳ ಕತೆ ಮತ್ತು ಹಾಸ್ಯ ಲೇಖನಗಳು ಸದಾ ಪ್ರಕಟ. ಆಕಾಶವಾಣಿ, ಬೆಂಗಳೂರು ಕೇಂದ್ರದಿಂದ ಲೋಹಶಾಸ್ತ್ರಕ್ಕೆ ಸಂಬಂಧಿಸಿದ ಭಾಷಣಗಳ ಪ್ರಸಾರ. ಇದುವರೆಗೆ ಆರು ಪುಸ್ತಕಗಳ ಪ್ರಕಟಣೆ. ತಳುಕಿನ ವೆಂಕಣ್ಣಯ್ಯ ಸುಬ್ರಹ್ಮಣ್ಯ ಸ್ಮಾರಕ ಸಾಹಿತ್ಯ ಪ್ರಶಸ್ತಿ ಹಾಗೂ ಇನ್ನಿತರ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಸಮಾಜ ಸೇವೆ: ಸಾಂಸ್ಕೃತಿಕ ಹಾಗೂ ಸಮಾಜ ಸೇವಾ ಸಂಸ್ಥೆಗಳ ನಿರ್ವಹಣೆಯಲ್ಲೂ ಗುರುತಿಸಿಕೊಂಡಿರುವ ಇವರು, ಪ್ರಸಕ್ತ ಸಂವಾದ ಟ್ರಸ್ಟ್, ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂ, ಅನಕೃ ಪ್ರತಿಷ್ಠಾನ ಹಾಗೂ ಇಂಡಿಯನ್ ಫೌಂಡ್ರಿ ಅಸೋಸಿಯೇಷನ್ ಇವುಗಳ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ.

ನನಗೆ ಬಂದ ಲೇಖನಗಳ ಬಗ್ಗೆ ಒಂದಷ್ಟು ಅಂಕಿ ಅಂಶಗಳನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ನೋಡಿಯೋ ಕಾರ್ಯಕ್ರಮಕ್ಕಾಗಿ ನನಗೆ ಬಂದ ಲೇಖನಗಳಲ್ಲಿ ನಾನು ಸುಮಾರು 16 ಸಾವಿರಕ್ಕೂ ಹೆಚ್ಚು ಪದಗಳನ್ನು ಓದಿದ್ದೇನೆ. ಅಲ್ಲದೆ ಸುಮಾರು ಶೇಕಡ 40ರಷ್ಟು ಪ್ರಸ್ತುತಿಗಳನ್ನು ತಿದ್ದಿ ಕಳುಹಿಸಿದ ಅನಂತರ ಎರಡನೆಯ ಬಾರಿ ಓದಿದ್ದೇನೆ. ಅಂದರೆ 22.5 ಸಾವಿರಕ್ಕೂ ಹೆಚ್ಚು ಪದಗಳು!

ಇದು ಪ್ರತಿ ಬಾರಿಯೂ ಅಧ್ಯಕ್ಷರಾದವರು ಮಾಡುವ ಕರ್ತವ್ಯ. ಲೇಖನಗಳನ್ನು ಬರೆಯುವವರು ಇದನ್ನು ಗಮನದಲ್ಲಿಟ್ಟುಕೊಂಡು ಸಂಪೂರ್ಣವಾಗಿ ಸಿದ್ಧವಾದ ಒಳ್ಳೆಯ ಲೇಖನಗಳನ್ನು ಅಧ್ಯಕ್ಷರಿಗೆ ಕಳುಹಿಸಬೇಕು ಎಂದು ನಾನು ಕೋರುತ್ತೇನೆ.

ನನಗೆ ಬಂದ ಲೇಖನಗಳಲ್ಲಿ ಶೇಕಡಾವಾರು ವರ್ಗೀಕರಣ ಹೀಗಿದೆ:

ಪ್ರಬಂಧ, ಲಲಿತ ಪ್ರಬಂಧಗಳು : 56%
ಕವಿತೆಗಳು : 20%
ಸಣ್ಣ ಕಥೆಗಳು : 8%
ನೆನಪುಗಳು : 8%
ಪುಸ್ತಕ ಪರಿಚಯ : 4%
ಪ್ರವಾಸ ಕಥನ : 4%

ನನ್ನ ವಿಶ್ಲೇಷಣೆಯನ್ನು ನನಗೆ ಲೇಖನಗಳು ಬಂದ ಸರದಿಯಲ್ಲಿ ನೀಡಿದ್ದೇನೆ.

1. ಶ್ರೀ ವಿಠ್ಠಲ ಇಜೇರಿ ಅವರ ಕಥೆ – 'ಕಥೆ ಕೇಳಿದುದರ ಫಲ ಮತ್ತು ಕಥೆ ಹೇಳಿದುದರ ಫಲ'

ಶ್ರೀ ವಿಠ್ಠಲ ಇಜೇರಿ ಅವರ 'ಕಥೆ ಕೇಳಿದುದರ ಫಲ ಮತ್ತು ಕಥೆ ಹೇಳಿದುದರ ಫಲ' ಲೇಖನವು ಎರಡು ಕಥೆಗಳನ್ನು ಹೆಣೆದು ಮಾಡಿದ ಒಂದು ಲೇಖನ. ಜನಪದ ಛಾಯೆ ಇರುವ ಈ ಕಥೆಗಳಲ್ಲಿ ಕಥೆ ಕೇಳಿದವರಿಗೂ ಹೇಳಿದವರಿಗೂ ಕೊನೆಗೆ ಒಳ್ಳೆಯದೇ ಆಗುತ್ತದೆ. ಇದು ಕುಮಾರವ್ಯಾಸ ಭಾರತದಲ್ಲಿ ಮೊದಲು ಬರುವ ಫಲಶ್ರುತಿಯನ್ನು– "ವೇದಪಾರಾಯಣದ ಫಲ... ಒಂದಕ್ಕರವ ಕೇಳ್ದರಿಗೆ" ಎನ್ನುವುದನ್ನು ನೆನಪಿಸಿತು. ಈ ಒಳ್ಳೆಯ ಲೇಖನಕ್ಕೆ ವಿಠ್ಠಲ ಇಜೇರಿ ಅವರಿಗೆ ಅಭಿನಂದನೆಗಳು.

2. ಶ್ರೀಮತಿ ಗೌರಿ ಭಟ್ಟ ಅವರ ಪ್ರಬಂಧ – 'ಮಂಜನ ನೆನಪು'

ತಮ್ಮ ಮಗ ಚಿಕ್ಕವನಿದ್ದಾಗ ಅವನೊಡನೆ ಆಡುತ್ತಿದ್ದ ಅಷ್ಟೇ ಚಿಕ್ಕ ಹುಡುಗ ಮಂಜನ ನೆನಪಿನ ಚಿತ್ರ ಈ ಲೇಖನದಲ್ಲಿದೆ ಬಡ ಕುಟುಂಬದ ಮಂಜ ತನ್ನ ಮಗನ ಜೊತೆ ಆಡದಂತೆ ಅವನ ತಾಯಿ ತನ್ನ ಮನೆಯ ಕೆಲಸಕ್ಕೆ ಬಾರದಂತೆ ತಡೆಯುವ ಅಕ್ಕಪಕ್ಕದ ಮನೆಯವರ ನಡೆವಳಿಕೆ ಬಡವರ ಮಕ್ಕಳು ಜೊತೆ ನಮ್ಮ ಮಕ್ಕಳು ಆಡಬಾರದೇ ಎಂಬ ಪ್ರಶ್ನೆಯನ್ನು ನಮ್ಮ ಮುಂದೆ ಎತ್ತಿಡುತ್ತದೆ. ನಿಮ್ಮ ಉತ್ತರ ಏನಿರಬಹುದು?

ಇಂದು ಪ್ರಬಂಧ ಲೇಖನಗಳನ್ನು ಪ್ರಸ್ತುತಿ ಮಾಡಿರುವ ಎಲ್ಲರ ಗಮನಕ್ಕೂ ಒಂದು ವಿಚಾರವನ್ನು ತರಲು ಬಯಸುತ್ತೇನೆ: ಇಂಥ ಲೇಖನಗಳನ್ನು ಉತ್ತಮ ಪುರುಷದಲ್ಲಿ (ನಾನು) ಬರೆಯುವುದಕ್ಕಿಂತ ಪ್ರಥಮ ಪುರುಷದಲ್ಲಿ (ಅವರು) ಬರೆಯಲು ಪ್ರಯತ್ನಿಸಿ. ಆಗ ಲೇಖಕ ಹೊರಗಿನಿಂದ ನೋಡುವುದನ್ನು ಚಿತ್ರ ಮಾಡುವುದು ಸಾಧ್ಯವಾಗುತ್ತದೆ. ಹಾಗೂ ಓದುಗ ಅದನ್ನು ಕಲ್ಪಿಸಿಕೊಳ್ಳಲು ಸುಲಭವಾಗುತ್ತದೆ. ಕೆಟ್ಟತನ, ಒಳ್ಳೆಯತನ ಇವುಗಳನ್ನು ತೋರಿಸುವ ಸಂದರ್ಭದಲ್ಲಿ ಪ್ರಥಮ ಪುರುಷದ ಬಳಕೆ ಹೆಚ್ಚು ಸೂಕ್ತವಾಗುತ್ತದೆ. ಆಗ ಆತ್ಮಕಥೆಯ ಜಾಗದಲ್ಲಿ ಚರಿತ್ರೆಯ ನಿರ್ಮಾಣವಾಗುತ್ತದೆ. ಉತ್ತಮ ಪುರುಷದಲ್ಲಿ

ಬರೆಯುವುದು ಸುಲಭ; ಆದರೆ ಪ್ರಥಮ ಪುರುಷದಲ್ಲಿ ಬರೆದರೆ ಬೆಳೆಯುವುದು ಸುಲಭ! ನಾನು ಕೂಡ ಮೊದಲು ಅದರ ಒಬ್ಬ ಬಲಿಪಶುವಾಗಿದ್ದೆ. ಪ್ರಬಂಧ ಬರೆಯುವುದರಲ್ಲಿ ಗೌರಿ ಭಟ್ಟ ಅವರು ಪಳಗುತ್ತಿರುವುದರ ಸೂಚನೆ ಈ ಲೇಖನದಲ್ಲಿದೆ.

3. ಶ್ರೀ ಭ. ರಾ. ವಿಜಯಕುಮಾರ್ ಅವರ ಕವನ – 'ನೆರಳಿನಾಟ'

ಪರದೆಯ ಹಿಂದಿನ ಬೆಳಕಿಗೆ ಕೈ ಬೆರಳುಗಳನ್ನು ಆಡಿಸಿ ಮುಂದಿನ ಪರದೆಯ ಮೇಲೆ ನೆರಳಿನ ಚಿತ್ರಗಳನ್ನು ಮೂಡಿಸಿ ಮನರಂಜಿಸುವ ನೆರಳಿನಾಟ – ಶಾಡೋ ಪ್ಲೇ ಬಗ್ಗೆ ಶ್ರೀ ಭ.ರಾ.ವಿಜಯಕುಮಾರ್ ಅವರು ಸರಳ ಸುಂದರ ಕವನ ರಚಿಸಿದ್ದಾರೆ. ಕೊನೆಯ ಚರಣದಲ್ಲಿ ಬೆಳಕನ್ನು ಜ್ಞಾನದ ಬೆಳಕಿಗೆ ಹೋಲಿಸಿ ಒಳ್ಳೆಯ ತಿರುವನ್ನು ನೀಡಿದ್ದಾರೆ. ಒಳ್ಳೆಯ ಕವನಕ್ಕೆ ಭರಾವಿ ಅವರಿಗೆ ವಂದನೆಗಳು, ಸರ್, ತಾವು ಲೇಖನಗಳನ್ನು ಬರೆದು ನಮ್ಮ ಸಂತೋಷವನ್ನು ಹೆಚ್ಚಿಸಿ ಎಂದು ಕೇಳಿಕೊಳ್ಳುತ್ತೇನೆ.

4. ಶ್ರೀಮತಿ ಟಿ.ಆರ್. ಉಷಾರಾಣಿ ಅವರ ಲಲಿತ ಪ್ರಬಂಧ – 'ಸಾತಜ್ಜಿಯ ಮೆಟ್ರೋ ಪ್ರಯಾಣ'

ಈ ಲೇಖನದಲ್ಲಿ ಉಷಾರಾಣಿಯವರು ಸಾತಜ್ಜಿಯ ಜೊತೆಗೆ ನಮಗೆ ಒಳ್ಳೆಯ ಮೆಟ್ರೋ ಪ್ರಯಾಣವನ್ನು ಮಾಡಿಸಿದ್ದಾರೆ. ಗಟ್ಟಿಗಿತ್ತಿ ಸಾತಜ್ಜಿ ಈ ನಗೆಲೇಖನದಲ್ಲಿ ವಿಜೃಂಭಿಸಿದ್ದಾರೆ. ಆಕೆ ಅಮೆರಿಕಾಗೆ ಹೋಗಿದ್ದು ತಿಳಿದ ಮೇಲೆ, ಅಲ್ಲೇನಾಯಿತು ಎಂದು ತಿಳಿಯುವ ಕುತೂಹಲ ನಿಮ್ಮಷ್ಟೇ ನನಗೂ ಇದೆ. ಟಿ. ಸುನಂದಮ್ಮ ಅವರ ನಗೆಲೇಖನಗಳನ್ನು ನೆನಪಿಗೆ ತಂದ ಉಷಾರಾಣಿ ಅವರಿಗೆ ಶುಭ ಹಾರೈಕೆಗಳು.

5. ಶ್ರೀಮತಿ ಲೀಲ ವಾಸುದೇವ್ ಅವರ ಎರಡು ಕವನಗಳು – 'ಗುಲ್ಮೊಹರ್' ಮತ್ತು 'ತಾಯಿ'

ಶ್ರೀಮತಿ ಲೀಲ ವಾಸುದೇವ್ ಅವರು ಪ್ರಸ್ತುತಿಪಡಿಸಿದ್ದು ಎರಡು ಮಕ್ಕಳ ಪದ್ಯಗಳನ್ನು. ಮೊದಲನೆಯದು 'ಗುಲ್ಮೊಹರ್'. 'ಗುಲ್ಲೋ ಗುಲ್ಲು ಅರಳಿಸಿತು ಗುಲ್ಮಹಾರ್' ಎಂದು ಪ್ರಾರಂಭವಾಗುವ ಅವರ ಪದ್ಯವು ಮಕ್ಕಳಿಗೆ ಇಷ್ಟವಾಗುತ್ತದೆ; ಅವರ ಎರಡನೆಯ ಪದ್ಯ 'ತಾಯಿ' ನಮಗೂ ಇಷ್ಟವಾಗುತ್ತದೆ. 'ಇದೇ ರೀತಿ ನೀವು ನೋಡಿಯೋ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಿ' ಎಂದು ಹೇಳುತ್ತಾ ಒಳ್ಳೆಯ ಮಕ್ಕಳ ಕವನಗಳಿಗೆ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ.

6. ಶ್ರೀ ಗಣಪತಿ ಹೆಗಡೆ ಅವರ ಪ್ರಬಂಧ – 'ರಗಳೆ'

ಶ್ರೀ ಗಣಪತಿ ಹೆಗಡೆ ಅವರು ಇಂದು ಪ್ರಮುಖ ಕಾವ್ಯ ಪ್ರಕಾರವಾದ ರಗಳೆಯ ಬಗ್ಗೆ ಚೆನ್ನಾಗಿ ತಿಳಿಸಿಕೊಟ್ಟರು. ನಾನು ಚಿಕ್ಕವನಿದ್ದಾಗ 'ಎಷ್ಟು ರಗಳೆ ಮಾಡ್ತೀಯೋ' ಎಂದು ಆಗಾಗ ಮಾತು ಕೇಳಬೇಕಾಗಿತ್ತು. ಆಗ ರಗಳೆ ಮಾತ್ರಗಣದ ಗುಂಪಿಗೆ ಸೇರಿದ್ದು; ಮಂದಾನಿಲ, ಲಲಿತ, ಉತ್ಸವ ಎಂಬ ರಗಳೆಗಳಿವೆ. ಕುವೆಂಪು ಅವರದ್ದು ಮಹಾಛಂದಸ್ಸು ಎಂಬ ರಗಳೆ – ಮುಂತಾದ ವಿವರಗಳು ಗೊತ್ತಿರಲಿಲ್ಲ. ಇಲ್ಲದಿದ್ದರೆ ನಾನು ಆಗಲೇ ಮಹಾಛಂದಸ್ಸಿನ ರಗಳೆಯನ್ನೇ ಮಾಡಿ ಬಿಡುತ್ತಿದ್ದೇನೋ! ಅವಕಾಶ ವಂಚಿತನಾಗಿ ಹೋದೆ! ಅಂದಿನ ನನ್ನ ರಗಳೆಗೆ ಇಂದು ಹೆಮ್ಮೆಪಡುವಂತೆ ಮಾಡಿದ ಗಣಪತಿ ಹೆಗಡೆಯವರಿಗೆ ಅಭಿವಂದನೆಗಳು.

7. ಶ್ರೀಮತಿ ಮಾಧುರಿಕೃಷ್ಣ ಅವರ ಲೇಖನ – 'ದೇವರು'

ಶ್ರೀಮತಿ ಮಾಧುರಿಕೃಷ್ಣ ಅವರು ತಮ್ಮ 'ವ್ಯೂಹದಲ್ಲಿ ಬಂಧಿ' ಲೇಖನಮಾಲೆಯ ಎರಡನೆಯ ಲೇಖನ 'ದೇವರು' ಪ್ರಸ್ತುತಪಡಿಸಿದರು. ಮಾಧುರಿಕೃಷ್ಣ ಅವರ ಲೇಖನದಷ್ಟೇ ಅವರ ಓದಿನ ಬನಿ ನಮಗೆ ಇಷ್ಟವಾಗುತ್ತದೆ. ಎಷ್ಟಾದರೂ ಅವರು ಯಕ್ಷಗಾನ ತಾಳಮದ್ದಲೆಗಳ ಊರಿನ ಮಧ್ಯದಿಂದ ಉದ್ಭವಿಸಿದವರು. ಇದ್ದಕ್ಕಿದ್ದಂತೆ ಉದ್ಯಾನದಲ್ಲಿ ಪ್ರತ್ಯಕ್ಷನಾದ ಅವನು "ಅಂತರ್ಯದಲ್ಲಿ ಕೋಪತಾಪಗಳು ಇರುವುದು ಒಳ್ಳೆಯದಲ್ಲ...", "ಎಲ್ಲರೊಡನೆ ಬೆರೆಯುತ್ತಾ, ಎಲ್ಲವನ್ನೂ ಸಹಜವಾಗಿ ತೆಗೆದುಕೊಳ್ಳುತ್ತಾ, ತಪ್ಪುಗಳಿಂದ ಕಲಿಯುತ್ತಾ ಬದುಕಿದರೆ ಮಾತ್ರ ಎಲ್ಲವೂ ಶುದ್ಧ..." ಎಂದು ಮಾತಿನ ಮಧ್ಯೆ ಹೇಳುವುದು

ಅರ್ಜುನನಿಗೆ ಶ್ರೀಕೃಷ್ಣನ ಭಗವದ್ಗೀತೆಯ ಬೋಧನೆಯನ್ನು ನೆನಪಿಸಿತು. ಆನಂತರ ಆತ ಇದ್ದಕ್ಕಿದ್ದಂತೆ ಅಂತರ್ಧಾನವಾಗಿ ಬಿಟ್ಟಿರುತ್ತಾನೆ. ಅವನು ಯಾರು ಎಂದು ನೇರವಾಗಿ ಹೇಳದೆ ಕೊನೆಗೆ ದೇವಸ್ಥಾನದಲ್ಲಿ ಆರತಿ ಸ್ವೀಕರಿಸುವುದನ್ನು ತಿಳಿಸುತ್ತಾರೆ. ‘ವಿಚಾರಗಳನ್ನು ಪರೋಕ್ಷವಾಗಿ, ಸೂಚನೆಗಳ ಮೂಲಕ ಹೇಗೆ ಹೇಳಬಹುದು’ ಎನ್ನುವುದಕ್ಕೆ, ಇದನ್ನು ಓದುವ ಇತರ ಲೇಖಕರಿಗೆ ಒಂದು ಒಳ್ಳೆಯ ನಿದರ್ಶನ ನೀಡುವ ಲೇಖನ ಇದು.

8. ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರ ನಗೆ ಲೇಖನ – 'ಕಾಲು ಕೈಕೊಟ್ಟಾಗ'

ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರು 'ಕಾಲು ಕೈಕೊಟ್ಟಾಗ' ಎಂಬ ನಗೆ ಲೇಖನವನ್ನು ಇದು ಧಾರಾವಾಹಿ ಎಂದು ಪ್ರಾರಂಭಿಸಿ, ಬಾಳೆ ಚಿಪ್ಪು ಮೊದಲಾದವುಗಳ ನಾಮಸ್ಮರಣೆ ಮಾಡುತ್ತಾರೆ. ಇದ್ದಕ್ಕಿದ್ದಂತೆ ಮಂಡಿ ಚಿಪ್ಪಿನ ಬಗ್ಗೆ ಹೇಳಿ ನಮ್ಮಲ್ಲಿ ಅಚ್ಚರಿಯನ್ನು ಉಂಟುಮಾಡಿಬಿಡುತ್ತಾರೆ. “ಈ ಗಂಟು ನೋವಿಗೆ ಕುಂಟುವುದೇ ಪರಿಹಾರ” ಎಂದು ಹೇಳಿ ಇದು ಯಾಕೆ ಧಾರಾವಾಹಿ ಎಂದು ನಮ್ಮ ಅರಿವಿಗೆ ತರುತ್ತಾರೆ. ನಮ್ಮನ್ನು ಮತ್ತಷ್ಟು ಗೊಂದಲಕ್ಕೆ ತಳ್ಳಿಬಿಡುತ್ತಾರೆ.

ನಾಗರತ್ನ ಮೇಡಂ, ನಾವೆಲ್ಲ ಒಕ್ಕೊರಲಿಂದ ಹೇಳುತ್ತೇವೆ, ನಮಗೆ ನಿಮ್ಮ ಈ ಧಾರಾವಾಹಿ ಬೇಡವೇ ಬೇಡ. ಅದು ಈ ಕಿರು ಲೇಖನದಲ್ಲೇ ಸುಖಾಂತವನ್ನು ಕಾಣಲಿ ಎಂದು ಹಾರೈಸುತ್ತೇವೆ. ನಿಮ್ಮ ಜಪಾನಿ ಗೈಡಿಗೆ ಮದುವೆ ಮಾಡಿಸುವತ್ತ ಮನಸ್ಸು ಮಾಡಿ

9. ಶ್ರೀಮತಿ ಶಾಂತಿವಾಸು ಅವರ ಕವನ – 'ನಾನೂ ರಾಧೆಯಾದೆ'

ಹಲವು ಬಾರಿ ನನಗೆ ಶ್ರೀಮತಿ ಶಾಂತಿವಾಸು ಅವರ ಕವಿತೆಗಳು ಅನುಭಾವಿ ಚಿಂತನೆಗಳಂತೆ ಕಂಡುಬಂದಿವೆ, ನಾನೂ ರಾಧೆಯಾದೆ ಎಂದು ಹೇಳುತ್ತಲೇ ರಾಧೆಯಿಂದ ಹೊರಗೆ ನಿಂತು ‘ಅಂದಿದ್ದ, ಇಂದಿಲ್ಲ ಮುಂದೆ ಇರುವುದಿಲ್ಲ ಅನ್ನಲಾರೆ...’ ಎಂದು ಕವನಿಸುತ್ತಾರೆ. ಕೃಷ್ಣನ ಹೆಸರು ಹೇಳದೆ ‘ನನ್ನೊಂದಿಗುಳಿದು ಆತ್ಮವನ್ನು ಸಂಧಿಸಿದಾಗ’ ಎನ್ನುವಲ್ಲಿ, ತನ್ನೊಳಗೇ ‘ಅವನು’ ಇರುವುದನ್ನು ಸೂಚಿಸಿ, ಆ ಆತ್ಮವನ್ನು ಸಂಧಿಸಿದಾಗ ತನ್ನ ನಲಿವು, ಕಣ್ಣೀರು ಎಲ್ಲವನ್ನು ಅಲ್ಲೇ ಬಿಟ್ಟು “ನಾನೂ ರಾಧೆಯಾಗಿದ್ದೆ...” ಎಂದು ಅದ್ವೈತಿಯಾಗಿ ಬಿಡುತ್ತಾರೆ; ‘ಅವನನ್ನು’ ಅರಿತ ರಾಧೆಯಾಗಿ ಬಿಡುತ್ತಾರೆ.

10. ಶ್ರೀ ಕೆ.ಎನ್. ಮಹಾಬಲ ಅವರ ಲೇಖನ – 'ಕಾವ್ಯ ಶೋಧಕ: ಆದರ್ಶ ಪರಿಚಾರಕ'

ಶ್ರೀ ಕೆ.ಎನ್. ಮಹಾಬಲ ಅವರು ತಮ್ಮ 'ಕಾವ್ಯ ಶೋಧಕ: ಆದರ್ಶ ಪರಿಚಾರಕ' ಲೇಖನದಲ್ಲಿ ಇತ್ತೀಚಿಗೆ ನಮ್ಮನ್ನು ಅಗಲಿದ ‘ಬೇಂದ್ರೆ ಕೃಷ್ಣಪ್ಪ’ ಅವರ ಸಂಪೂರ್ಣ ಪರಿಚಯವನ್ನು ಕಣ್ಣಿಗೆ ಕಟ್ಟುವಂತೆ ಮಾಡಿಕೊಟ್ಟಿದ್ದಾರೆ. ಕೃಷ್ಣಪ್ಪ ಅವರ ಆಪ್ತ ವಲಯದಲ್ಲಿದ್ದ ಮಹಾಬಲ ಅವರಿಗೆ, ಅವರ ಮೇಲಿದ್ದ ವಿಶ್ವಾಸ ಗೌರವಗಳಿಗೆ ಸಕಾರಣಗಳು ಈ ಲೇಖನದಲ್ಲಿ ನಮಗೆ ವ್ಯಕ್ತವಾಗುತ್ತದೆ. ಜೊತೆಗೆ ಅವರ ಸಾಹಿತ್ಯ ಅಧ್ಯಯನ ಹಾಗೂ ಸಾಹಿತ್ಯ ಪರಿಚಾರಿಕೆ ಇವುಗಳು ನಮಗೆ ಚೆನ್ನಾಗಿ ಮನದಟ್ಟಾಗುತ್ತದೆ. ಆ ವ್ಯಕ್ತಿಯ ಮೇಲಿನ ಗೌರವವು ಹೆಚ್ಚಾಗುತ್ತದೆ.

11. ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರ ಲೇಖನ – 'ಸೀತಾರಾಮು ಮತ್ತು ಅನ್ನಪೂರ್ಣ – ನೆನಪಿನಲ್ಲಿ'

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ಬರೆದಿರುವುದು ನಮ್ಮಿಂದ ಇತ್ತೀಚೆಗೆ ದೂರವಾದ ಅನ್ನಪೂರ್ಣ ಅವರನ್ನು ನೆನಪಿಸಿಕೊಳ್ಳುವ ಲೇಖನ. ತಮಗೆ ಹತ್ತಿರವಾಗಿದ್ದ ಆ ದಂಪತಿಯ ಐದು ದಶಕಗಳಿಗೂ ಹೆಚ್ಚಿನ ಒಳನೋಟವನ್ನು, ಸಂಸಾರಗಳ ಕಷ್ಟ ಸುಖಗಳನ್ನು, ನೋವು ನಲಿವುಗಳನ್ನು ಆತ್ಮೀಯ ನೆಲೆಯಲ್ಲಿ ಇಲ್ಲಿ ದಾಖಲಿಸಿದ್ದಾರೆ. ಹಾಗಾಗಿ ಅಲ್ಲಲ್ಲಿ ನೋವಿನ ಛಾಯೆಯನ್ನು ನಾವು ಗುರುತಿಸಬಹುದು. ಈ ಲೇಖನದಿಂದ ನಮ್ಮ ಈ ವೇದಿಕೆಯ ಒಂದು ಭಾಗವಾಗಿದ್ದ ಸೀತಾರಾಮು ಹಾಗೂ ಅನ್ನಪೂರ್ಣ ಅವರ ಧೀಮಂತ ವ್ಯಕ್ತಿತ್ವ ನಮ್ಮ ಮನದಲ್ಲಿ ಚಿರಸ್ಥಾಯಿಯಾಗುತ್ತದೆ.

12. ಶ್ರೀಮತಿ ಸ್ನೇಹ ಶಶಿಧರ ಅವರ ಲೇಖನ – 'ಊಟ-ಪ್ರಸಾದ'

ಶ್ರೀಮತಿ ಸ್ನೇಹ ಶಶಿಧರ ಅವರ 'ಊಟ-ಪ್ರಸಾದ' ಒಂದು ಚಿಕ್ಕ ಚೊಕ್ಕ ಲೇಖನ. ಇದು ಒಂದು ಉತ್ತಮ ಪ್ರಬಂಧವಾಗ ಬಹುದಾದ ಎಲ್ಲಾ ಅಂಶಗಳನ್ನೂ ಒಳಗೊಂಡಿದೆ. ಊಟವಾಗಲಿ ಪ್ರಸಾದವಾಗಲಿ ನಾವು ಗುಳುಂ ಮಾಡುವುದಂತೂ ನಿಜ. ಹಬ್ಬದ ಊಟದ ಬಗ್ಗೆ ಚೆನ್ನಾಗಿ ದಾಖಲಿಸಿ, ಪ್ರಸಾದದ ಬಗ್ಗೆ ಮಾತ್ರ ದೇವಸ್ಥಾನದಲ್ಲಿ ಕೊಡುವಷ್ಟೇ ಗಾತ್ರಕ್ಕೆ ಕುಗ್ಗಿಸಿಬಿಟ್ಟಿದ್ದಾರೆ ಎನ್ನಿಸಿತು. ಪ್ರಸಾದವು ಚೆನ್ನಾಗಿದೆ ಎಂದು ಎರಡನೇ ಬಾರಿ ಸರತಿಯಲ್ಲಿ ಬಂದು ಸ್ವೀಕರಿಸುವಂತೆ ಇನ್ನಷ್ಟು ವಿಚಾರಗಳನ್ನು ಸೇರಿಸಿ. ಹಾಗೇ ಊಟ-ಪ್ರಸಾದ ಇವುಗಳ ಹೋಲಿಕೆ, ಸಾಧಕ ಬಾಧಕಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಸೇರಿಸಬಹುದು.

ಎಲ್ಲ ಲೇಖಕರಿಗೂ ಒಂದು ಸಲಹೆ. ನೋಡಿಯೋ ವೇದಿಕೆಯಲ್ಲಿ ಆರು ನಿಮಿಷಗಳ ಮಿತಿ ಎಂದು ನಿಮ್ಮ ಲೇಖನವನ್ನು ಚಿಕ್ಕದ್ದನ್ನಾಗಿ ಮಾಡಬೇಡಿ. ಪೂರ್ಣಪ್ರಮಾಣದಲ್ಲಿ ಲೇಖನವನ್ನು ಬರೆದು, ದಾಸೋಹದಲ್ಲಿ ಓದುವಾಗ ಕಡಿಮೆ ಮಾಡಿ. ನಂತರ ನಮಗೆ ಓದಲು ಪೂರ್ಣ ಲೇಖನವನ್ನೇ ಹಾಕಿ.

13. ಶ್ರೀಮತಿ ಟಿ.ಎಸ್.ಶ್ರವಣಕುಮಾರಿ ಅವರ ಪ್ರಸ್ತುತಿ – 'ಪುಣ್ಯೇವೋ... ಗಾಚಾರವೋ...'

ಶ್ರೀಮತಿ ಟಿ.ಎಸ್.ಶ್ರವಣಕುಮಾರಿ ಅವರ 'ಪುಣ್ಯೇವೋ... ಗಾಚಾರವೋ...' ಎನ್ನುವುದು ಕೂಡ ಗೌರಿ ಭಟ್ಟ ಅವರ ಪ್ರಬಂಧದ ಸಂವಾದಿಯಂತೆ ನನಗೆ ಭಾಸವಾಯಿತು. ಈ ಕಥೆಯಲ್ಲಿ ಬರುವ ಮನೆಗೆಲಸದ ಪದ್ಮಳ ಬಗ್ಗೆ ಎಷ್ಟೇ ಕನಿಕರವಿದ್ದರೂ 'ನಮ್ಮನೆಯಲ್ಲಿ ಬಂದಿರು ಅನ್ನಕ್ಕಾಗತ್ಯೇ?' ಅನ್ನುವ ಪ್ರಶ್ನೆ ಇದಕ್ಕೆ ಕಾರಣ. ಪದ್ಮ ಹೇಳುವ 'ನಾನು ಅವನಿಗೆ ಸಿಕ್ಕಿರುವುದು ಅವನ ಪುಣ್ಯವಾದ್ರೆ, ಅವನಿಗೆ ನಾನು ಸಿಕ್ಕಿರುವುದು ನನ್ನ ಗಾಚಾರ ಅಲ್ಲವೇ?' ಎನ್ನುವುದು, ಅದರಿಂದ ಮೂಡುವ ಖಿನ್ನತೆ ಈ ಲೇಖನಕ್ಕೆ ತಾರ್ಕಿಕ ಅಂತ್ಯವನ್ನು ತಂದಿದೆ.

ಲೇಖಕಿಯಾಗಿ ಕಥೆಯ ಒಳಗೆ ತೂರದೆ, ಹೊರಗಿನಿಂದ ನೋಡಿದ ಘಟನೆಗಳನ್ನು ಬರೆದಿರುವ ರೀತಿ ಚೆನ್ನಾಗಿದೆ; ಇದು ಅನುಕರಣೀಯ. ಹೊಸದಾಗಿ ಬರೆಯಲು ಆರಂಭಿಸಿರುವ ಲೇಖಕರೆಲ್ಲರೂ ಇದನ್ನು ಒಮ್ಮೆ ಗಮನಿಸಬೇಕು.

14. ಶ್ರೀಮತಿ ಎಲ್.ಗಿರಿಜಾ ರಾಜ್ ಅವರ ಕಿರುಗತೆ – 'ದಯೆಯೇ ಧರ್ಮದ ಮೂಲವಯ್ಯಾ!'

ಶ್ರೀಮತಿ ಎಲ್.ಗಿರಿಜಾ ರಾಜ್ ಅವರ 'ದಯೆಯೇ ಧರ್ಮದ ಮೂಲವಯ್ಯಾ!' ಕಿರುಗತೆಯು ಓದುಗರನ್ನು ಕೊನೆಯವರೆಗೂ ಹಿಡಿದಿಟ್ಟುಕೊಂಡು ಓದಿಸಿಕೊಂಡು ಹೋಗುತ್ತದೆ. ಪಳಗಿದ ಕೈಯಿಂದ ಬಂದ ಈ ಬರಹದಲ್ಲಿ ಸಂದರ್ಭಕ್ಕೆ ಸೂಕ್ತ ಪದಗಳ ಬಳಕೆ ಮುದವನ್ನು ನೀಡುತ್ತದೆ.

15. ಶ್ರೀಮತಿ ಮಾನಸ ಕೆ.ಕೆ. ಅವರ ಪ್ರಬಂಧ – 'ಮೊಬೈಲ್ ಪ್ರಪಂಚ'

ಶ್ರೀಮತಿ ಮಾನಸ ಕೆ.ಕೆ. ಅವರ ಪ್ರಬಂಧ 'ಮೊಬೈಲ್ ಪ್ರಪಂಚ', ಬಹಳ ಅವಸರದಲ್ಲಿ ಬರೆದ ಲೇಖನದಂತೆ ನನಗೆ ಕಂಡುಬಂದಿತು. ಈ ಪುಟ್ಟ ಲೇಖನದಲ್ಲಿ 'ಮೊಬೈಲ್, ಮೆಟ್ರೋ ಪ್ರಯಾಣ ಹಾಗೂ ಹೆಂಗಸರು-ಹೆಣ್ಣುಮಕ್ಕಳು' ಈ ಮೂರು ವಿಚಾರಗಳ ಬಗ್ಗೆ ಸೇರಿಸಿದ್ದಾರೆ. ಈ ಮೂರರ ಬಗ್ಗೆಯೂ ಒಂದೊಂದು ಬೇರೆಯೇ ಪ್ರಬಂಧವನ್ನು ಬರೆಯಬಹುದು.

ಈ ಲೇಖನದ ಬಗ್ಗೆ ಉಳಿದ ವಿಚಾರಗಳನ್ನು ಅವರಿಗೆ ನೇರವಾಗಿ ತಿಳಿಸಿದ್ದೇನೆ. ಅವನ್ನು ಗಮನಿಸಿ ಇನ್ನೂ ಒಳ್ಳೆಯ ಲೇಖನಗಳನ್ನು ಬರೆಯುವ ಶಕ್ತಿ ಅವರಿಗಿದೆ.

16. ಶ್ರೀ ಗುರುರಾಜ ಶಾಸ್ತ್ರಿ ಅವರ ಪ್ರಬಂಧ – 'ಅಮೆರಿಕಾ ವೀಸಾ – ನಾನು ಕಲಿತಂತೆ'

ಶ್ರೀ ಗುರುರಾಜ ಶಾಸ್ತ್ರಿ ಅವರು ಅಮೇರಿಕಾ ಪ್ರವಾಸಕ್ಕೆ ತಮಗೆ ವೀಸಾ ಸಿಕ್ಕಿದ ಬಗ್ಗೆ ಒಂದು ಒಳ್ಳೆಯ ಪ್ರಬಂಧವನ್ನು ಲಲಿತ ಶೈಲಿಯಲ್ಲಿ ಬರೆದಿದ್ದಾರೆ. ಈಚೆಗೆ ಪ್ರಬಂಧಗಳನ್ನು ಬರೆಯುವುದರಲ್ಲಿ ಉತ್ತಮ ಪ್ರತಿಭೆಯನ್ನು ತೋರುತ್ತಿರುವ ಗುರುರಾಜ

ಶಾಸ್ತ್ರಿಗಳು ಈ ಲಲಿತ ಪ್ರಬಂಧದಲ್ಲಿ ಅಮೆರಿಕ ವೀಸಾ ಪಡೆಯಲು ಇತರರಿಗೆ ಸಹಾಯಕವಾಗುವಂತೆ ಒಂದು ಟ್ಯುಟೋರಿಯಲ್ ಕೂಡ ನೀಡಿಬಿಟ್ಟಿದ್ದಾರೆ.

ಹೀಗೆಯೇ ಅವರ "ಅಮೇರಿಕಾದಿಂದ ಮಿತ್ರರಿಗೆ" ಮಾಲಿಕೆಯಲ್ಲಿ ಪ್ರವಾಸಕಥನ ಹಾಗೂ ಅಲ್ಲಿ ತೆಗೆದ ಚಿತ್ರಗಳನ್ನು ದಿನಕ್ಕೊಂದರಂತೆ ಕಳುಹಿಸುವ ಏರ್ಪಾಟು ಮಾಡಿಕೊಳ್ಳಲಿ.

17. ಶ್ರೀಮತಿ ಗಾಯತ್ರಿ ಮೂರ್ತಿ ಅವರ ಲೇಖನ – 'ತಿರುಗು ಬಾಣ'

ಶ್ರೀಮತಿ ಗಾಯತ್ರಿ ಮೂರ್ತಿ ಅವರ ಲೇಖನ 'ತಿರುಗು ಬಾಣ'ವನ್ನು ಓದಲು ಪ್ರಾರಂಭಿಸಿದಾಗ ಇದೊಂದು ಕಥೆ ಇರಬಹುದು ಎನ್ನಿಸಿತು. ಆದರೆ ಇದೊಂದು ಪ್ರಬಂಧ. ಇದರಲ್ಲಿ ಮದುವೆಯಾಗಬೇಕಾಗಿರುವ ಹುಡುಗಿಯೊಬ್ಬಳ ಮದುವೆಗೆ ಮುಂಚಿನ ಅರ್ಥವಿಲ್ಲದ ಬೇಡಿಕೆಗಳ ಬಗ್ಗೆ ತಿಳಿಸಿದ್ದಾರೆ. 'ನಿನ್ನ ಅಪ್ಪ ಅಮ್ಮ ನಮ್ಮ ಮನೆಗೆ ಬರಬಾರದು; ನನ್ನ ಅಪ್ಪ ಅಮ್ಮ ನಮ್ಮ ಜೊತೆಯೇ ಇರುತ್ತಾರೆ' ಮುಂತಾದ ಯೋಚನೆಗಳಿಗೆ ಕಾರಣ ಏನಿರಬಹುದು? ಒಬ್ಬಳೇ ಮಗಳ ತಂದೆತಾಯಿಯರ ಮುಂದಿನ ಬಾಳಿನ ಅನಿಶ್ಚಿತತೆಯೇ? ಹೆಣ್ಣು ಮಕ್ಕಳ ಸ್ವಾರ್ಥವೇ? ಇತರರ ಸಂಬಂಧಗಳಿಗೆ ತೋರುವ ಅಸಡ್ಡೆಯೇ? ಮಕ್ಕಳು ಚಿಕ್ಕವರಿದ್ದಾಗ ಸರಿಯಾದ ಸಂಸ್ಕಾರ ನೀಡದ ಕಾರಣವೇ? ಈ ಲೇಖನದಲ್ಲಿ ಇವುಗಳ ಬಗ್ಗೆ ಬೆಳಕು ಚೆಲ್ಲುವ ಸಾಲುಗಳನ್ನು ಲೇಖಕರು ಸೇರಿಸಬಹುದು.

ಸ್ಪಷ್ಟವಾದ ನಿರೂಪಣೆ, ಸರಳ ಭಾಷೆಗಳ ಈ ಲೇಖನಕ್ಕೆ ಗಾಯತ್ರಿ ಮೂರ್ತಿಯವರಿಗೆ ಅಭಿನಂದನೆಗಳು. ನಿಮ್ಮ ಮುಂದಿನ ಲೇಖನಗಳಿಂದ ನೋಡಿಯೋ ಸಾಹಿತ್ಯ ದಾಸೋಹ ಹಾಗೂ ಸಸಕಸ ವೇದಿಕೆಗಳು ಸಂಪನ್ನವಾಗಲಿ ಎಂದು ಹಾರೈಸುತ್ತೇನೆ.

18. ಶ್ರೀಮತಿ ಶೀಲಾ ಅರಕಲಗೂಡು ಅವರ ಲೇಖನ – 'ಮೊಗೆದಷ್ಟೂ ವಿನೋದ' ಕೃತಿ ಪರಿಚಯ

ಶ್ರೀಮತಿ ಶೀಲಾ ಅರಕಲಗೂಡು ಅವರ ಲೇಖನ 'ಮೊಗೆದಷ್ಟೂ ವಿನೋದ' ಎಂಬ ಕೃತಿಯ 'ಪರಿಚಯವಲ್ಲದ ಪರಿಚಯ'. ಶೀಲಾ ಅವರು ನಮ್ಮ ವೇದಿಕೆಯ ಭಯೋತ್ಪಾದಕಿಯಾಗಿ ಹೊರಹಮ್ಮಿದ್ದಾರೆ ಎಂದು ಘೋಷಿಸಲು ನನಗೆ ಸಂತಸವಾಗುತ್ತಿದೆ. 'ಏನೋ ಕವನ ಗೀಚುತ್ತೇನೆ' ಎನ್ನುತ್ತಾ ಕವನಿಸಿ ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ಕವಯಿತ್ರಿಯಾಗಿಹೋದರು. 'ಏನೋ ಬರೀತೀನಿ' ಅಂತ ಪ್ರಬಂಧ, ಸಣ್ಣ ಕಥೆಗಳನ್ನು ಚೆನ್ನಾಗಿ ಬರೆದು ಅದನ್ನು ಬರೆಯುವವರು ನಡಗುವಂತೆ ಮಾಡಿದ್ದರು. ನನ್ನಂಥವರು ಆಗೊಂದು ಈಗೊಂದು ಪುಸ್ತಕ ಪರಿಚಯ ಮಾಡಿಕೊಡುತ್ತಾ ಉಸಿರಾಡುತ್ತಿದ್ದರೆ, ಈಗ ಅದರಲ್ಲೂ ತಮ್ಮ ಸ್ಥಾನವನ್ನು ಭದ್ರ ಮಾಡಿಕೊಳ್ಳಲು ಇಂದಿನ ಪುಸ್ತಕ ಪರಿಚಯ ಲೇಖನವನ್ನು ಓದಿದ್ದಾರೆ. ಇನ್ನು ಇವರು ಭಯೋತ್ಪಾದಕಿ ಅಲ್ಲದೆ ಇನ್ನೇನು?!

ಇವರು ಇಂದು ಪರಿಚಯ ಮಾಡಿ ಕೊಟ್ಟಿರುವುದು Pun ಜಾಬಿನ Punಡಿತ ರಾಮನಾಥ ಅವರ ಹೊಸ ಪುಸ್ತಕದ ಬಗ್ಗೆ ಅವರ ಈ ಪರಿಚಯವನ್ನು ಕೇಳಿ, ಓದಿ ಅನೇಕರು ಆ ಪುಸ್ತಕವನ್ನು ಕೊಳ್ಳಲು ಖಂಡಿತ ಓಡುತ್ತಾರೆ. ಇಂಥ ಪುಸ್ತಕದ ಪರಿಚಯಕ್ಕೆ ಬೇಕಾದ ಸೂಕ್ತ ಮಾದರಿಯನ್ನು ಅವರು ಇಲ್ಲಿ ಅಳವಡಿಸಿಕೊಂಡಿದ್ದಾರೆ.

19. ಶ್ರೀಮತಿ ಜಿ.ವಿ.ನಿರ್ಮಲ ಅವರ ಪ್ರವಾಸ ಕಥನ– 'ಪಾಟನ್ ಮತ್ತು ಮೊಢೇರಾ ಪ್ರವಾಸದ ನೆನಪುಗಳು'

ನಮ್ಮ ನಿರ್ಮಲ ಅವರು ವಿಜ್ಞಾನದ, ವಿಜ್ಞಾನಿಗಳ ಮೇಲೆ ಬೆಳಕು ಚೆಲ್ಲುವ ಬರಹಗಳನ್ನು ಮಾತ್ರ ಬರೆಯುವುದಿಲ್ಲ. ಆಕೆ ಪ್ರವಾಸ ಪ್ರಿಯೆ! ತಾವು ಹೋದ ಪ್ರದೇಶಗಳಲ್ಲಿ ಅವರು ನೋಡಬೇಕಾದ್ದನ್ನು ವಿಜ್ಞಾನಿಯ ಕಣ್ಣಿನಿಂದ ನೋಡಿರುತ್ತಾರೆ. ಹಾಗಾಗಿ ಅವರ ಪ್ರವಾಸ ಲೇಖನಗಳು ಚಿನ್ನದ ಚೌಕಟ್ಟನ್ನು ಹೊಂದಿರುತ್ತವೆ. ಅವರು ಪ್ರವಾಸ ಹೋಗಿದ್ದರಿಂದ ಇಂಥ ಲೇಖನಗಳನ್ನು ಬರೆಯುತ್ತಾರೋ ಅಥವಾ ಪ್ರವಾಸ ಲೇಖನಗಳನ್ನು ಬರೆಯಲು ಪ್ರವಾಸ ಹೋಗುತ್ತಾರೋ ಮುಂದಿನ ಬಾರಿ ಭೇಟಿಯಾದಾಗ

ವಿಚಾರಿಸುತ್ತೇನೆ. ಅಷ್ಟರಲ್ಲಿ ಇನ್ನೊಂದು ಪ್ರವಾಸ ಮಾಡಿ, ಲೇಖನವನ್ನು ಬರೆದುಬಿಡಿ. ಗುಜರಾತಿನ ಎರಡು ವಿಶ್ವ ಪಾರಂಪರಿಕ ತಾಣದ ಬಗ್ಗೆ ವಿವರಣೆಯನ್ನು ಈ ಲೇಖನದಲ್ಲಿ ನೀಡಿದ್ದಾರೆ.

20. ಶ್ರೀಮತಿ ಸಿಂಧೂ ಹರಿಥಸ್ ಅವರ ಸಣ್ಣ ಕಥೆ – 'ಗ್ರಹಣ'

ಈ ಸಣ್ಣ ಕಥೆಯೂ ಕುತೂಹಲದಿಂದ ಓದಿಸಿಕೊಳ್ಳುತ್ತದೆ. ಹೀಗೆ ಕಥೆ ಬರೆಯುತ್ತಾ, ಹೊಸ ವಿಚಾರಗಳತ್ತ ಸಿಂಧೂ ಅವರು ತಮ್ಮ ಗಮನವನ್ನು ಹರಿಸುತ್ತಿರುವುದು ಸಂತೋಷದ ವಿಚಾರ. ಈ ಕಥೆಗೆ 'ಗ್ರಹಣ'ದ ಬದಲು 'ಗ್ರಹಣ ಬಿಟ್ಟಿತು' ಎನ್ನುವ ಶೀರ್ಷಿಕೆ ಸೂಕ್ತವಾಗುವುದೇನೋ. ಕಥೆಯಲ್ಲಿ ಅಲ್ಲಲ್ಲಿ ಸನ್ನಿವೇಶದ, ಸ್ಥಳದ, ವ್ಯಕ್ತಿಯ ಮನಸ್ಥಿತಿಯ ಬಗ್ಗೆ ಸೂಕ್ತ ವಿವರಗಳನ್ನು ಸೇರಿಸುವುದಕ್ಕೆ ಅವಕಾಶಗಳಿವೆ. ಅದರ ಬಗ್ಗೆ ಗಮನ ಕೊಟ್ಟು ಪ್ರಯತ್ನಿಸಿ. ಶುಭವಾಗಲಿ.

21. ಶ್ರೀಮತಿ ರೇಣುಕಾ ದೇಸಾಯಿ ಅವರ ಲೇಖನ – 'ಪುಣ್ಯ ಶ್ಲೋಕ – ಅಹಲ್ಯಾ ದೇವಿ ಹೋಳ್ಕರ್'

ಶ್ರೀಮತಿ ರೇಣುಕಾ ದೇಸಾಯಿ ಅವರು ಅನೇಕ ಕಡೆಗಳಿಂದ ಮಾಹಿತಿಯನ್ನು ಸಂಗ್ರಹಿಸಿ ದೀರ್ಘ ಲೇಖನವನ್ನು ಬರೆದಿದ್ದಾರೆ. ಇದು ಚಾರಿತ್ರಿಕ ವಿಚಾರಗಳಿರುವ ಲೇಖನ, 'ಅಹಲ್ಯಾಬಾಯಿ ಹೋಳ್ಕರ್'. ಇದು ಪ್ರಸಕ್ತ ಶಕೆ 1750ರ ಸರಿಸುಮಾರಿನಲ್ಲಿ ನಡೆದ ಘಟನೆಗಳನ್ನು ನಮಗೆ ತಿಳಿಸುವ ಲೇಖನ. ನಾನು ಈ ಲೇಖನವನ್ನು ಓದಿ ಕೇಳಿದ ಅನೇಕ ಪ್ರಶ್ನೆಗಳನ್ನು ಗಮನಿಸಿ ಅವರು ಅದನ್ನು ತಿದ್ದಿ ಕಳುಹಿಸಿದ್ದರು.

ಪ್ರಬಂಧವನ್ನು ಬರೆಯುವಾಗ ಓದುಗರ ಆಸಕ್ತಿಯನ್ನು ಹಿಡಿದಿರುವ ಪ್ರಯತ್ನ ಮೊದಲನೆಯ ಪ್ಯಾರಾದಲ್ಲಿ ಮೊದಲಾಗಬೇಕು. ಚಾರಿತ್ರಿಕ ವಿಚಾರಗಳನ್ನು ಬರೆಯುವಾಗಂತೂ ಅದು ಅತಿ ಮುಖ್ಯವಾಗುತ್ತದೆ. ಉದಾಹರಣೆಗೆ: ಹಿಂದೆ ಕಾಶಿ ಕ್ಷೇತ್ರವು ಅವಧ್ ನವಾಬನ ಆಡಳಿತದಲ್ಲಿತ್ತು. ಹಾಗೂ ಆತ ದೆಹಲಿಯ ಸುಲ್ತಾನರ ಅಧೀನವಾಗಿದ್ದ. 'ಹೀಗೆ ಮೊಘಲ್ ಸಂಸ್ಥಾನದ ಆಡಳಿತದ ಅಡಿಯಲ್ಲಿದ್ದ ಕಾಶಿ ವಿಶ್ವನಾಥ ಮಂದಿರವನ್ನು, ಅಲ್ಲಿಂದ ಒಂದು ಸಾವಿರ ಕಿಲೋಮೀಟರ್ ದೂರದ ಇಂದೋರಿನಲ್ಲಿದ್ದ ರಾಣಿ ಅಹಲ್ಯಾಬಾಯಿಯು ತನ್ನ ವರ್ಚಸ್ಸನ್ನು ಉಪಯೋಗಿಸಿ, ಸ್ವಂತ ಹಣದಿಂದ ಪುನರುಜ್ಜೀವನಗೊಳಿಸಿದಳು' ಎಂಬುದು ಆ ರಾಣಿಯ ಬಗ್ಗೆ ಬರೆಯುವಾಗ ಅತಿ ಮುಖ್ಯವಾದ ವಿಚಾರವಾಗುತ್ತದೆ. ಆದರೆ ಈ ವಿಚಾರವು ಲೇಖನದ ಕೊನೆಯಲ್ಲಿ 'ಕಾಶಿ ಕ್ಷೇತ್ರವನ್ನು ನಮ್ಮ ಪೀಳಿಗೆಗೆ ದೊರಕುವಂತೆ ಮಾಡಿದ ಮಹಾಮಹಿಮಳು' ಎಂಬ ವಾಕ್ಯದಲ್ಲಿ ದೊರಕುತ್ತದೆ. ಅದನ್ನು ಹೇಗೆ ಸಾಧಿಸಿದಳು ಎಂಬ ಬಗ್ಗೆ ಯಾವುದೇ ವಿವರಗಳು ಇಲ್ಲಿ ಇಲ್ಲ. ಆದ್ದರಿಂದ ಓದುಗರಿಗೆ ಇದೊಂದು ಸಾಮಾನ್ಯ ರಾಣಿಯ ವಿಚಾರವನ್ನು ಕುರಿತ ಲೇಖನವಾಗುತ್ತದೆ. ಅವಳ ಬಗ್ಗೆ ನಾವು ತಿಳಿಯಬೇಕಾದ ಅತಿ ಮುಖ್ಯ ವಿಚಾರ ಮರೆಯಾಗಿಬಿಡುತ್ತದೆ.

ಇದನ್ನು ಬಿಟ್ಟರೆ ಆಕೆಯ ಬಗ್ಗೆ ಇರುವ ವಿವರಗಳು ಇತರ ಅನೇಕ ಒಳ್ಳೆಯ ರಾಜ ಅಥವಾ ರಾಣಿಯರು ಮಾಡಿದ ಕಾರ್ಯಗಳಿಗಿಂತ ಭಿನ್ನವಾಗಿಲ್ಲ. "ಕೆರೆಯಂ ಕಟ್ಟಿಸಿದ, ಬಾವಿಯಂ ಸಮೆಸಿದ..." ಇತ್ಯಾದಿ. ಆಕೆ ಬ್ರಿಟಿಷರೊಡನೆ, ಪೋರ್ಚುಗೀಸರೊಡನೆ ಅಥವಾ ಮೊಘಲರೊಡನೆ ಯಾವ ಯುದ್ಧವನ್ನೂ ಮಾಡಿ ಹೋರಾಡಲಿಲ್ಲ. ಹಾಗಾಗಿ ನಮ್ಮ ಕಿತ್ತೂರು ರಾಣಿ ಚೆನ್ನಮ್ಮ, ಮೆಣಸಿನ ರಾಣಿ ಚೆನ್ನಭೈರಾದೇವಿ ಅವರ ಮಟ್ಟಕ್ಕಂತೂ ಈ ಮರಾಠಾ ರಾಣಿ ಬರುವುದೇ ಇಲ್ಲ. ಈ ಮಾತುಗಳನ್ನು ಹೇಳಲು ಕಾರಣ 'ಅಹಲ್ಯಾಬಾಯಿಯ ವಿಚಾರ ನಮ್ಮ ಕನ್ನಡದ ಪಠ್ಯಪುಸ್ತಕಗಳಲ್ಲಿ ಸೇರಬೇಕು' ಎಂದು ಪತ್ರಿಕಾ ವರದಿಯಲ್ಲಿ ನೋಡಿದ್ದು. ಮರಾಠಿ ಭಾಷೆಯಲ್ಲಿ ನಮ್ಮ ಕನ್ನಡದ ರಾಣಿಯರ ಬಗ್ಗೆ ಪಾಠಗಳು ಇರುತ್ತವೆಯೋ?

ಚಾರಿತ್ರಿಕ ಲೇಖನಗಳಲ್ಲಿ ವ್ಯಕ್ತಿಯನ್ನು ಅತಿರಂಜಿತವಾಗಿ ವೈಭವೀಕರಿಸದೆ, ಅವರು ಮಾಡಿದ ಘನ ಕಾರ್ಯವನ್ನು ಜನರ ಮನಸ್ಸಿಗೆ ತರುವಂತಹ ಕೆಲಸ ಮಾಡಬೇಕು. ಆಗ ಅದು ಅತ್ಯುತ್ತಮವಾದ ಲೇಖನವಾಗುತ್ತದೆ. ಇಂಥ ಲೇಖನದಲ್ಲಿ ನಾವು ನೀಡಿರುವ ಮಾಹಿತಿಯನ್ನು ಸಂಗ್ರಹಿಸಿದ ಮೂಲಗಳ ದಾಖಲೆಯನ್ನು ಕೊನೆಯಲ್ಲಿ ನೀಡುವುದು ಚಾರಿತ್ರಿಕ ಪ್ರಬಂಧದ ಒಂದು ಕ್ರಮ.

ಈ ನನ್ನ ವಿಶ್ಲೇಷಣೆಯನ್ನು ಇಂದಿನ ಎಲ್ಲ ಪ್ರಬಂಧಕಾರರು ಗಮನಿಸಬೇಕು. ರೇಣುಕಾ ಅವರ ಲೇಖನವೂ ಇತರ ಹಲವು ಲೇಖನಗಳಿಗಿಂತ ಭಾಷೆಯಲ್ಲಿ, ವ್ಯಾಕರಣದಲ್ಲಿ, ವಿರಾಮ ಚಿಹ್ನೆಗಳನ್ನು ಬಳಸುವುದರಲ್ಲಿ ಉತ್ತಮವಾಗಿತ್ತು ಎಂದು ಹೇಳ ಬಯಸುತ್ತೇನೆ. ಪ್ರಬಂಧಗಳ ರಚನೆಯಲ್ಲಿ ಆಕೆ ಮುನ್ನಡಿಯಿಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಚಾರಿತ್ರಿಕ ಲೇಖನಕ್ಕೆ ನಾನು ರೇಣುಕಾ ದೇಸಾಯಿ ಅವರನ್ನು ಅಭಿನಂದಿಸುತ್ತೇನೆ. (ಈ ಕಾರ್ಯಕ್ರಮವಾದ ಮೇಲೆ ನಡೆದ ನಮ್ಮ ಹಲವು ಮಾತುಕತೆಗಳ ಅನಂತರ, ಹಠ ಬಿಡದ ತ್ರಿವಿಕ್ರಮನಂತೆ, ಮೂರು ಬಾರಿ ಲೇಖನವನ್ನು ತಿದ್ದಿದ ರೇಣುಕಾ ಅವರ ಛಲಕ್ಕೆ ನಾನು ಬೆರಗಾಗಿದ್ದೇನೆ)

22. ಶ್ರೀಮತಿ ನಾಗರತ್ನ ಸಾಲಗಾಮೆ – 'ಹಿರಿದ ಕತ್ತಿ'

ಶ್ರೀಮತಿ ರತ್ನಾ ಮೂರ್ತಿ (ನಾಗರತ್ನ ಸಾಲಗಾಮೆ) ಅವರು 'ಹಿರಿದ ಕತ್ತಿ' ಎಂಬ ಒಂದು ಒಳ್ಳೆಯ ಕಥನಕವನವನ್ನು ಪ್ರಸ್ತುತಪಡಿಸಿದ್ದಾರೆ. ಅರಿಸಿನದ ಬಣ್ಣ, ತಾಳಿಯ ಕೊರಳ ಹಾರ, ನಾಚಿಕೆ ಇವೆಲ್ಲವೂ ಇದ್ದ ಆ ವಧು ಇನ್ನೂ ಬಾಲಿಕೆ. ಅವಳ "ಹುಡುಗುತನ" ಎನ್ನುತ್ತಲೇ ಕವನದಲ್ಲಿ ಮದುವೆ ಎಂಬುದು ಅವಳಿಗೆ ಬೊಂಬೆಯಾಟದಂತೆ ಇತ್ತು ಎಂಬುದನ್ನು ಸೂಕ್ಷ್ಮವಾಗಿ ಕವನದ ಮೊದಲು ತೋರಿಸಿದ್ದಾರೆ. ಅನಂತರ ನಡೆದ ಘಟನೆಗಳನ್ನು ಎಳೆ ಎಳೆಯಾಗಿ ಬಿಡಿಸಿದ್ದಾರೆ. ಇದು ಕೇಳುಗರ ಮನವನ್ನು ಆರ್ದ್ರ ಮಾಡುವ ಕವನ. ಕವನದ ಕಥೆಯನ್ನು ಕೇಳಿದವರಿಗೆ "ಸಂಪ್ರದಾಯದ ಮಂದಿ. ಕಣ್ಣು ಕಟ್ಟಿದ ಹುಚ್ಚು ಕುದುರೆ" ಎಂಬುದು ಚೆನ್ನಾಗಿ ಅರ್ಥವಾಗುತ್ತದೆ.

ಈ ಕವನವನ್ನು ಓದಿದ ತಕ್ಷಣ ನನಗೆ ದ. ರಾ. ಬೇಂದ್ರೆ ಅವರ 'ಪುಟ್ಟ ವಿಧವೆ" ಎಂಬ ಕವನ ನೆನಪಾಯಿತು. ಈ ಕವನದಲ್ಲಿ ಆ ಕೂಸಿಗೆ ಮದುವೆಯಾಗಿ, ಮೈನೆರೆದ ವರ್ಷದಲ್ಲೇ ಮಗುವಾಗಿ, ಹತ್ತು ದಿನಗಳ ಅಂತರದಲ್ಲಿ ಗಂಡ ಮತ್ತು ಮಗುವನ್ನು ಕಳೆದುಕೊಂಡ ಕಥೆಯಿದೆ. ಆಗ ಅವಳ –

ತಲೆಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು;
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ.
ಆದರಯ್ಯೋ ಪಾಪ! ಆಕೆಯಿನ್ನೂ ಮಗುವು
ಸಿಂಗಾರವಿರದೆ? ಆ ಮಾತೆ ಬೇರೆ.

ಇದು ರತ್ನ ಅವರ ಕವನದಲ್ಲಿ ಇನ್ನೂ ಗಾಢವಾಗಿ ಹೀಗೆ ಬಂದಿದೆ:

ಕೆಂಪು ಸೀರೆಯ ಜೊತೆಗೆ ಹುಗಿದಿಟ್ಟ ಕನಸುಗಳು
ತಲೆತುಂಬ ಹೊದ್ದದ್ದು ಕಣ್ಣೀರ ಸೆರಗು.

ಎರಡು ಕವನಗಳಲ್ಲೂ ನಲಿದಾಡಿಕೊಂಡು ಇರಬೇಕಾಗಿದ್ದ ಆ ಸುಂದರ ಹುಡುಗಿಯರು ಹೂಬತ್ತಿ ಹೊಸೆಯುತ್ತ, ಪುರಾಣ – ಪ್ರವಚನ ಕೇಳುತ್ತಾ ಇರುವ ಸಾಲುಗಳು ಮನವನ್ನು ತಟ್ಟುತ್ತದೆ. ಆದರೆ ಬೇಂದ್ರೆಯವರ ಕವನದಲ್ಲಿ ಕೊನೆಗೆ ಆಗುವುದು:

ಕುರುಡುಧರ್ಮಕ್ಕೆ ಸ್ಮಾರಕವು ನಿಂತಂತಾಕೆ
ಮೈಮರೆತು ನಿಂತಾಗ್ಗೆ ಗೂಗೆ ಹಾಡಿತ್ತು
ಮುದ್ರೆಯೊತ್ತುವ ಕಣ್ಣು ಮೋರೆ ನೋಡಿತ್ತೊಮ್ಮೆ
ಜಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು!

ಬೇಂದ್ರೆಯವರ ಕವನದಲ್ಲಿ ಆ ಪುಟ್ಟ ವಿಧವೆಗೆ ಆದ ಗತಿ ಮನಸ್ಸನ್ನು ಕಲಕುತ್ತದೆ.
ಆದರೆ ರತ್ನ ಅವರ ಈ ಕಥನ ಕವನದಲ್ಲಿ ಅದು ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ಧರ್ಮದ ಹೆಸರಿನಲ್ಲಿ ಸುಂದರ ಸಾಮಾನ್ಯ ಬದುಕು ಸಾಧ್ಯವೇ ಇಲ್ಲವೇ ಎನಿಸಿಬಿಡುತ್ತದೆ. ಇದು ಉತ್ತರ ಭಾರತದಲ್ಲಿ ಪ್ರಚಲಿತವಿರುವ ಕಾನೂನುಬಾಹಿರ ಕಾಪ್ ಪಂಚಾಯತಿಗೆ ಏನು ಕಡಿಮೆ ಇಲ್ಲ.

ಪ್ರಶ್ನೆಗಳ ತರಂಗವನ್ನು ನಮ್ಮ ಮನದಲ್ಲಿ ಎಬ್ಬಿಸುವ ಈ ಕಥನ ಕವನಕ್ಕೆ ಶ್ರೀಮತಿ ರತ್ನ ಮೂರ್ತಿಯವರಿಗೆ ಅಭಿನಂದನೆಗಳು. ನಮ್ಮ ವೇದಿಕೆಯಲ್ಲಿ ಈ ರೀತಿಯ ಕಥನ ಕವನಗಳನ್ನು ಬರೆಯುವ ಶಕ್ತಕವಿ ಎಂದರೆ ರತ್ನ ಮೂರ್ತಿಯವರೊಬ್ಬರೇ. ಅವರ ಲೇಖನಿಯಿಂದ ಇಂತಹ ಅನೇಕ ಕಥನ ಕವನಗಳು ಬರಲಿ ಎಂದು ನಾನು ಹಾರೈಸುತ್ತೇನೆ.

ಉಪಸಂಹಾರ: ಈ ನನ್ನ ವಿಶ್ಲೇಷಣೆಯಿಂದ ಹಲವರ ಮನಸ್ಸಿಗೆ ಬೇಜಾರಾಗಬಹುದು ಎಂದು ನಾನು ತಿಳಿದಿದ್ದೆ. 'ಗುಡ್ಡಿ ಗುಡ್ಡಿ' ಮಾತುಗಳನ್ನು ಹೇಳಿ ಒಳ್ಳೆಯವನಾಗುವುದಕ್ಕಿಂತ, ನನ್ನ ವೇದಿಕೆಯ ಸದಸ್ಯರು ಇನ್ನಷ್ಟು ಒಳ್ಳೆಯ ಬರಹಗಾರರಾಗಲಿ ಎನ್ನುವ ದೃಷ್ಟಿ ಒಳ್ಳೆಯದು ಎಂದು ನನ್ನ ಮನಸ್ಸು ಹೇಳಿತು. ಅದರ ಮಾತನ್ನು ಕೇಳಿದೆ!

ಆಶ್ಚರ್ಯದ ವಿಷಯವೆಂದರೆ ನಾನು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಒಪ್ಪಿ, ಅನೇಕ ಲೇಖಕರು ನನಗೆ ಕರೆ ಮಾಡಿಯೋ ನೇರವಾಗಿ ಸಂದೇಶವನ್ನು ಕಳಿಸಿಯೋ ಅವನ್ನು ಸಂತೋಷದಿಂದ ಸ್ವೀಕರಿಸಿರುವುದಾಗಿ ತಿಳಿಸಿದರು. ಈ ಲೇಖಕರು ಲೇಖನ ಕಲೆಯನ್ನು ಹೀಗೇ ರೂಢಿಸಿಕೊಂಡರೆ ಅವರ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗುವುದರಲ್ಲಿ ಸಂಶಯವೇ ಇಲ್ಲ. ಹಾಗಾದಾಗ ಅವರಷ್ಟೇ ನಾನೂ ಸಂತೋಷಪಟ್ಟಿರುತ್ತೇನೆ.

ಈ ಎಲ್ಲ ಲೇಖಕರಿಗೂ ಶುಭವಾಗಲಿ.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 234 ನಡೆದ ದಿನಾಂಕ: 08 ಫೆಬ್ರವರಿ 2025
ಸಂಚಿಕೆಯ ಬಿಡುಗಡೆ ದಿನಾಂಕ: 22 ಮಾರ್ಚ್ 2025 – ಶನಿವಾರ

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)